॥ಶ್ರೀ॥

ಶ್ರೀಸ್ಕಂದಪುರಾಣಾಂತರ್ಗತ

ಆಷಾಢಮಾಸ ಮಹಾತ್ಮೆ

(ಮೂಲ ಹಾಗೂ ಕನ್ನಡಾನುವಾದ)

ಅನುವಾದಕ

ಆ. ರಾ. ಪಂಚಮುಖಿ

ವಿದ್ಯಾರತ್ನ ರಾ. ಸ್ವಾ. ಪಂಚಮುಖಿ ಜನ್ಮಶತಮಾನೋತ್ಸವ ಪ್ರಕಟಣೆ-೧೯

ಪ್ರಕಾಶಕರು

ಗುರುಸಾರ್ವಭೌಮ

ಶ್ರೀರಾಘವೇಂದ್ರತೀರ್ಥ ಪ್ರತಿಷ್ಠಾನಂ

ಧಾರವಾಡ-೫೮೦ ೦೦೭.

ಪ್ರಾಪ್ತಿಸ್ಥಳ : ಆ. ರಾ. ಪಂಚಮುಖಿ
ಪವಮಾನ ಸದನ,
ಧಾರವಾಡ - 580 007

ಪ್ರಥಮ ಮುದ್ರಣ : 1992

ಪರಿಷ್ಕೃತ ಮುದ್ರಣ : 2002

ಪ್ರತಿಗಳು : 1,000

ಬೆಲೆ : 50/-

ಅಕ್ಷರಜೋಡಣೆ : ವಾದಿರಾಜ ಗ್ರಾಫಿಕ್ಸ್,
ಬೆಳಗಾವಿ.
☎ (0831) 430480

ಮುದ್ರಕರು : ಸರಸ್ವತಿ ಆಫ್‌ಸೆಟ್ ಪ್ರಿಂಟರ್ಸ್,
ಶಿವಾಜಿ ರೋಡ,
ಧಾರವಾಡ-1

ಪ್ರಥಮ ಮುದ್ರಣಕ್ಕೆ ಮುನ್ನುಡಿ

ಈಶ್ವರನು ತನ್ನ ಮಗನಾದ ಸ್ಕಂದನಿಗೆ ತಿಳಿಸಿದ ಈ ಆಷಾಢಮಾಸ ಮಹಾತ್ಮೆಯ ಸ್ಕಂದಪುರಾಣದಿಂದ ಉದ್ಧೃತವಾಗಿದೆ. ಈ ಮಾಸ ಮಹಾತ್ಮೆಯಲ್ಲಿ ೪ ಅಧ್ಯಾಯಗಳಿ ಪ್ರತಿಯೊಂದು ಅಧ್ಯಾಯದಲ್ಲಿಯೂ ತಾಪೀ ನದಿಯ ಸ್ನಾನದ ಮಹತ್ವವ ವರ್ಣಿಸಲಾಗಿದೆ. ಆಷಾಢಮಾಸದಲ್ಲಿ ಪ್ರತಿದಿನ ಪ್ರಾತಃಕಾಲದಲ್ಲಿ ತಾಪೀನದಿಯ ಸ್ನಾನ ಮಾಡುವುದರಿಂದ ಆಯುರಾರೋಗ್ಯ ಐಶ್ವರ್ಯಾದಿಗಳು ವರ್ಧಿಸುವವಲ್ಲದ ಸಕಲ ಪಾಪಗಳೂ ನಾಶವಾಗುವವು. ತಾಪೀನದಿಯು ಇರುವಲ್ಲಿ ಹೋಗಿ ಸ್ನಾ ಮಾಡುವದಾಗದಿದ್ದರೂ ಎಲ್ಲಿದ್ದಲ್ಲಿಯೇ ಲಭ್ಯವಾಗಿರುವ ಶುದ್ಧ ಜಲದ ತಾಪೀನದಿಯನ್ನು ಆವಾಹಿಸಿ ಸ್ನಾನಮಾಡಿದರೂ ಪೂರ್ವೋಕ್ತ ಫಲಗಳುಂಟು.

ಸ್ಕಂದಪುರಾಣಾಂತರ್ಗತ 'ಆಷಾಢಮಾಸ ಮಹಾತ್ಮೆ'ಯ ಪುರಾತನ ಮುದ್ರಿ ಪ್ರತಿಯೊಂದನ್ನು ಸಂಶೋಧನೆ ಮತ್ತು ಅನುವಾದಕ್ಕಾಗಿ ಕೊಟ್ಟಿರುವ ಬೆಂಗಳೂರಿ ವಿದ್ವಾನ್ ಶ್ರೀ. ಎಸ್. ವಿ. ಭೀಮಭಟ್ಟರ ಉಪಕಾರವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇ ಮೂಲ ಶ್ಲೋಕಗಳನ್ನು ಕನ್ನಡ ಲಿಪಿಯಲ್ಲಿ ಮತ್ತು ಕೆಳಗೆ ಅನುವಾದವನ್ನು ಕನ್ನಡದ ಕೊಡಲಾಗಿದೆ.

ಈ ಕೃತಿಯಿಂದ ಅಸ್ಮದ್ಗುರ್ವಾಂತರ್ಗತ ಶ್ರೀಮದ್ರಾಘವೇಂದ್ರತೀರ್ಥಗುರ್ವಾಂತರ್ಗ ಪಂಚಮುಖ ಪ್ರಾಣೇಶಾಭಿನ್ನ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮಿ ವೆಂಕಟೇಶ್ವರನು ಪ್ರೀತನಾಗಲಿ ಎಂದು ಪ್ರಾರ್ಥಿಸುತ್ತೇನೆ.

-ಆ. ರಾ. ಪಂಚಮುಖಿ

ಪರಿವಿಡಿ

ಆಷಾಢಮಾಸದ ವಿಶೇಷ ಧರ್ಮಗಳು

ಚಾತುರ್ಮಾಸ್ಯ ವ್ರತಸಂಕಲ್ಪ ಮತ್ತು ವಿಷ್ಣುಶಯನೋತ್ಸವ

ಆಷಾಢ ಶುಕ್ಲಪಕ್ಷ ಏಕಾದಶೀದಿನದಲ್ಲಿ ಗುರುಗಳಿಂದ ತಪ್ತಮುದ್ರಾಧಾರಣ ಮಾಡಿಸಿಕೊಂಡು ದೇವರಿಗೆ ವಿಶೇಷಪೂಜೆಯನ್ನು ಮಾಡಬೇಕು.

ಸುಪ್ತೇ ತ್ವಯಿ ಜಗನ್ನಾಥೇ ಜಗತ್ಸುಪ್ತಂ ಭವೇದಿದಮ್ ।
ವಿಬುದ್ಧೇ ತ್ವಯಿ ಬುಧ್ಯೇತ ತತ್ಸರ್ವಂ ಸಚರಾಚರಮ್ ॥

ಎಂಬ ಮಂತ್ರದಿಂದ ಪ್ರಾರ್ಥಿಸಿ, ಕೈಜೋಡಿಸಿಕೊಂಡು

ಚತುರೋ ವಾರ್ಷಿಕಾನ್ಮಾಸಾನ್ ದೇವಸ್ಯೋತ್ಥಾಪನಾವಧಿ ।
ಶ್ರಾವಣೇ ವರ್ಜಯೇ ಶಾಕಂ ದಧಿ ಭಾದ್ರಪದೇ ತಥಾ ॥

ದುಗ್ಧಮಾಶ್ವಯುಜೇ ಮಾಸಿ ಕಾರ್ತಿಕೇ ದ್ವಿದಲಂ ತಥಾ ।
ಇಮಂ ಕರಿಷ್ಯೇ ನಿಯಮಂ ನಿರ್ವಿಘ್ನಂ ಕುರು ಮೇಽಚ್ಯುತ ॥

ಇದಂ ವ್ರತಂ ಮಯಾ ದೇವ ಗೃಹೀತಂ ಪುರತಸ್ತವ ।
ನಿರ್ವಿಘ್ನಂ ಸಿದ್ಧಿಮಾಯಾತು ಪ್ರಸಾದಾತ್ ತೇ ರಮಾಪತೇ ॥

ಗೃಹೀತೇಽಸ್ಮಿನ ವ್ರತೇ ದೇವ ಪಂಚತ್ವಂ ಯದಿ ಮೇ ಭವೇತ್ ।
ತದಾ ಭವತು ಸಂಪೂರ್ಣಂ ಪ್ರಸಾದಾತ್ ತೇ ಜನಾರ್ದನ ॥

ಎಂಬ ಮಂತ್ರವನ್ನು ಪಠಿಸುತ್ತಾ ಶಂಖದಿಂದ ದೇವರಿಗೆ ಅರ್ಘ್ಯವನ್ನು ಕೊಡಬೇಕು. ಹೀಗೆ ಚಾತುರ್ಮಾಸ್ಯ ವ್ರತಸಂಕಲ್ಪವನ್ನು ಮಾಡಿ, ಮಂಚದಲ್ಲಿ ವಿಷ್ಣುವಿನ ಪ್ರತಿಮೆಯನ್ನು ಮಲಗಿಸಿ ವಿಶೇಷಪೂಜೆಯನ್ನು ಮಾಡಿ, "ಸುಪ್ತೇ ತ್ವಯೀ ಜಗನ್ನಾಥೇ" ಎಂಬ ಹಿಂದೆ ಹೇಳಿದ ಮಂತ್ರದಿಂದ ಪ್ರಾರ್ಥಿಸಿ ರಾತ್ರಿಯಲ್ಲಿ ಜಾಗರಣೆಮಾಡಿ ದ್ವಾದಶೀ ದಿನದಲ್ಲಿ ಪುನಃ ಪೂಜಿಸಿ ಪಾರಣೆ ಮಾಡಿ ತ್ರಯೋದಶೀ ದಿನದಲ್ಲಿ ವಾದ್ಯಾದಿಗಳಿಂದ ಸೇವಿಸಬೇಕು. ಈ ತ್ರಿದಿನಾತ್ಮಕವಾದ ಉತ್ಸವವು ವಿಷ್ಣುಶಯನೋತ್ಸವವೆನಿಸುತ್ತದೆ.

ಶಾಕವ್ರತ

ಈ ತಿಂಗಳಿನ ಶುದ್ಧದ್ವಾದಶಿಯಿಂದ ಶ್ರಾವಣಶುದ್ಧ ದಶಮೀವರೆಗೆ ಶಾಕವ್ರತ (ತರಕಾರಿಯನ್ನು ಸ್ವೀಕರಿಸದೇ ಇರುವುದು) ವನ್ನು ಮಾಡಬೇಕು.

ಆಷಾಢ ಶು. ಪೂರ್ಣಿಮಾ

ಈ ದಿನದಲ್ಲಿ ಯತಿಗಳು ವ್ಯಾಸಪೂಜಾ ಮಾಡಿ ಕ್ಷೌರವನ್ನು ಮಾಡಿಸಿಕೊಂಡು ಈ ದಿನದಲ್ಲಾಗಲೀ ಶ್ರೀಮಠದ ಸಂಪ್ರದಾಯಪ್ರಾಪ್ತವಾದ ದಿನಾಂತರದಲ್ಲಾಗಲೀ

ಚಾತುರ್ಮಾಸ್ಯಸಂಕಲ್ಪವನ್ನು ಮಾಡಬೇಕು. ಆಗ ಶ್ರೀ ವೇದವ್ಯಾಸದೇವರ ಮತ್ತು ಭಾಷ್ಯಕಾರಾದಿಗಳ ಪೂಜೆಯನ್ನು ಮಾಡಿ ಮಹಾಜನಗಳ ಮಧ್ಯದಲ್ಲಿ

ಅಹಂ ತಾವನ್ನಿವತ್ಸ್ಯಾಮಿ ಸರ್ವಭೂತಹಿತಾಯ ವೈ ।
ಪ್ರಾಯೇಣ ಪ್ರಾವೃಷಿ ಪ್ರಾಣಿಸಂಕುಲಂ ವರ್ತ್ಮ ದೃಶ್ಯತೇ ॥
ಅತಸ್ತೇಷಾಮಹಿಂಸಾರ್ಥಂ ಪಕ್ಷಾನ್ವೈ ಶ್ರುತಿಸಂಶ್ರಯಾನ್ ।
ಸ್ಥಾಸ್ಯಾಮಶ್ಚತುರೋ ಮಾಸಾನತ್ರೈವಾಸತಿ ಬಾಧಕೇ ॥

ಎಂದು ಹೇಳಬೇಕು. ಆಗ ಗೃಹಸ್ಥರು-

ನಿವಸಂತು ಸುಖೇನಾತ್ರ ಗಮಿಷ್ಯಾಮಃ ಕೃತಾರ್ಥತಾಮ್ ।
ಯಥಾಶಕ್ತಿ ಚ ಶುಶ್ರೂಷಾಂ ಕರಿಷ್ಯಾಮೋ ವಯಂ ಮುದಾ ॥

ಎಂದು ಪ್ರಾರ್ಥಿಸಬೇಕು.

ಅಶೂನ್ಯಶಯನವ್ರತ

ಈ ದಿನ ಚಂದ್ರೋದಯ ಕಾಲದಲ್ಲಿ ಲಕ್ಷ್ಮೀನಾರಾಯಣನ ಪ್ರತಿಮೆಯನ್ನು ಹಾಸಿಗೆಯಲ್ಲಿಟ್ಟು ಪೂಜಿಸಿ-

ಪತ್ನೀ ಭರ್ತುರ್ವಿಯೋಗಂ ಚ ಭರ್ತಾ ಭಾರ್ಯಾಸಮುದ್ಭವಂ ।
ನಾಪ್ನುವಂತಿ ಯಥಾ ದುಃಖಂ ದಾಂಪತ್ಯಾನಿ ತಥಾ ಕುರು ॥

ಎಂಬ ಮಂತ್ರದಿಂದ ಪ್ರಾರ್ಥಿಸಿ ಚಂದ್ರನಿಗೆ ಅರ್ಘ್ಯವನ್ನು ಕೊಟ್ಟು ರಾತ್ರಿಯಲ್ಲಿ ಭೋಜನವನ್ನು ಮಾಡಬೇಕು. ಈ ದಿನದಲ್ಲಿ ಆರಂಭಿಸಿ ಮುಂದೆ ಶ್ರಾವಣ, ಭಾದ್ರಪದ, ಆಶ್ವಿನ ಮಾಸಗಳ ಕೃಷ್ಣಪಕ್ಷ ದ್ವಿತೀಯಾ ದಿನಗಳಲ್ಲಿ ಹೀಗೆಯೇ ಪೂಜಿಸಿ ಕೊನೆಗೆ ಪ್ರತಿಮೆಯನ್ನು ಹಾಸಿಗೆಯೊಡನೆ ಬ್ರಾಹ್ಮಣರಿಗೆ ದಾನಮಾಡಬೇಕು. ಇದರಿಂದ ದಾಂಪತ್ಯಸುಖವು ಏಳುಜನ್ಮಗಳವರೆಗೆ ಅಖಂಡವಾಗಿರುತ್ತದೆ.

ದಕ್ಷಿಣಾಯನ ಪರ್ವಕಾಲ - ಸ್ನಾನ, ದಾನ, ಜಪ ಮಾಡಿ ತರ್ಪಣಗಳನ್ನು ಕೊಡಬೇಕು. ದಕ್ಷಿಣಾಯಣದಲ್ಲಿ ಭೈರವ ದುರ್ಗಾ ನರಸಿಂಹ ವರಾಹ ತ್ರಿವಿಕ್ರಮ ಮುಂತಾದ ಉಗ್ರದೇವತೆಗಳ ಪ್ರತಿಷ್ಠೆಯನ್ನು ಮಾಡಬಹುದು. ಗೃಹಪ್ರವೇಶ, ಸೌಮ್ಯದೇವತಾ ಪ್ರತಿಷ್ಠಾ, ವಿವಾಹ, ಉಪನಯನ, ಚೌಲ ಮುಂತಾದ ಶುಭಕಾರ್ಯಗಳನ್ನು ಮಾಡಬಾರದು. ಈ ದಿನದಲ್ಲಿ ಘೃತದಾನ, ಧೇನುದಾನ ಮುಂತಾದ ದಾನಗಳನ್ನು ಯಥಾಶಕ್ತಿ ಮಾಡಬೇಕು. ಪಿತೃಗಳಿಗೆ ತಿಲತರ್ಪಣವನ್ನು ಕೊಡಬೇಕು.

●●●

॥ ಶ್ರೀ ಗುರುಭ್ಯೋ ನಮಃ ॥ ಹರಿಃ ಓಂ ॥

ಶ್ರೀಸ್ಕಂದಪುರಾಣಾಂತರ್ಗತ

ಆಷಾಢಮಾಸ ಮಹಾತ್ಮ್ಯೆ

೧ನೆಯ ಅಧ್ಯಾಯ

ತಾಪ್ಯಾಷಾಢ ಸ್ನಾನಮಹಿಮೆ

❋

॥ ಶ್ರೀ ಗಣೇಶಾಯ ನಮಃ ॥ ಶ್ರೀ ಕೃಷ್ಣಾಯ ನಮಃ ॥

ಸ್ಕಂದ ಉವಾಚ-

ಸಂತಿ ತಾಪೀತಟೇ ಯಾನಿ ತೀರ್ಥಾನ್ಯತ್ರ ಮಹಾನ್ತ್ಯಪಿ ।
ಶ್ರುತಾನಿ ತಾನಿ ಸರ್ವಾಣಿ ಸರ್ವಪಾಪಹರಾಣಿ ಚ ॥೧॥

ಅಧುನಾ ಶ್ರೋತುಮಿಚ್ಛಾಮಿ ಯದಾಷಾಢೇ ಫಲಂ ಲಭೇತ್ ।
ತಾಪಸಾಂ ಸ್ನಾನಕರ್ತೃಣಾಂ ಮತಾನಿ ನಿಖಿಲಂ ವದ ॥೨॥

ಆಷಾಢಸ್ನಾನಮಹಿಮಾ ಕಸ್ಮಾದತ್ರ ವಿಶಿಷ್ಯತೇ ।
ಅನ್ಯಾಸು ಸುರಸಿಂಧೂಷು ಸ್ನಾನಂ ಗರ್ಹ್ಯಂ ತತೋ ಕಿಲ ॥೩॥

ರಜಸ್ವಲಾ ಭವೇಯುಸ್ತಾ ವರ್ಷಾಸು ಋಷಯೋಽವದನ್ ।
ನ ಸ್ನಾಯಾತ್ತತ್ರ ತಾವಚ್ಚ ಯಾವತ್ ಪ್ರಾವೃಡ್ ವ್ರಜೇದಿತಿ ॥೪॥

ಸ್ಕಂದನು ತನ್ನ ತಂದೆಯಾದ ಈಶ್ವರನನ್ನು ಕುರಿತು-ಭೋ ತಾತಪಾದರೇ! ತಾಪೀನದಿಯ ದಂಡೆಯ ಮೇಲೆ ಎಷ್ಟು ಮಹಾ ತೀರ್ಥಗಳಿವೆಯೋ ಅವೆಲ್ಲವೂ ಮನುಷ್ಯರ ಸಕಲ ಪಾಪಗಳನ್ನು ಕಳೆಯುವವು ಎಂಬುದನ್ನು ಕೇಳಿದೆನು ॥೧॥ ಈಗ ಆಷಾಢ ಮಾಸದಲ್ಲಿ ಪ್ರಾತಃಸ್ನಾನ ಮಾಡುವ ತಾಪಸರಿಗೆ ಯಾವ ಫಲವು ಲಭಿಸುವುದು ಎಂಬುದನ್ನು ತಿಳಿಯಬಯಸಿದ್ದೇನೆ. ಅದೆಲ್ಲವನ್ನೂ ವಿಸ್ತಾರವಾಗಿ ನಿರೂಪಿಸಿರಿ ॥೨॥ ಆಷಾಢಮಾಸದಲ್ಲಿ ಈ ತಾಪೀನದಿಯಲ್ಲಿ ಮಾಡುವ ಪ್ರಾತಃಸ್ನಾನಕ್ಕೆ ಅದೇಕೆ ಅಷ್ಟು ಮಹತ್ವ ಬಂದಿರುವದು? ಎಲ್ಲ ನದಿಗಳು (ನದೀ ಅಭಿಮಾನಿ ದೇವತೆಗಳು) ಮಳೆಗಾಲದಲ್ಲಿ ರಜಸ್ವಲಾ ಆಗಿರುವ ಕಾರಣದಿಂದ ಮಳೆಗಾಲವಿರುವವರೆಗೆ ಆ ನದಿಗಳಲ್ಲಿ ಸ್ನಾನ ಮಾಡಬಾರದು ಎಂದು ಜ್ಞಾನಿಗಳು ಹೇಳುತ್ತಾರಷ್ಟೆ! ॥೩॥೪॥ ಈ

ಏವಂ ಮೇ ಸಂಶಯಂ ತಾತ ಛೇತ್ತುಮರ್ಹಸ್ಯಶೇಷತಃ ।
ನಿಷಿದ್ಧೇಷು ಪ್ರವೃತ್ತಾಯಾ ಸ ಕಥಂ ಸಂಶಯೋ ಮಹಾನ್ ॥೫॥

ಈಶ್ವರ ಉವಾಚ-

ಮಹಾಪ್ರಭಾವಾ ಗಂಗಾದ್ಯಾ ಮಹಾನದ್ಯೋ ಯತಃ ಸ್ಮೃತಾಃ ।
ಸ್ವಪ್ರಭಾವಸ್ಯ ಸಾಮರ್ಥ್ಯಾದ್ದೋಷೋ ರಜಕೃತಃ ಸ್ಮೃತಃ ॥೬॥

ಶ್ರುಣು ವತ್ಸ ತ್ವಯಾ ಪೃಷ್ಟಂ ಸರ್ವಂ ತತ್ಕಥಯಾಮಿ ತೇ ।
ರಜಸ್ವಲಾತ್ವದೋಷೋಽಸ್ತಿ ನದೀಷ್ವನ್ಯಾಸ್ವಸಂಶಯಃ ॥೭॥

ಮಹಾನದೀಷು ನ ಪುನರೇಷ ದೋಷಃ ಕಥಂಚನ ।
ಕ್ಷುದ್ರಸ್ತು ಬತ ದೋಷೋಽಯಂ ನಿಶ್ಚಿತಂ ಸಮುದಾಹೃತಃ ॥೮॥

ಶ್ರೇಷ್ಠಾ ಮಹಾನದೀ ತಾಪೀ ಸೂರ್ಯಪುತ್ರೀ ಗುಣಾಧಿಕಾ ।
ಪುಣ್ಯೋದಕಾ ಪಾಪಹಂತ್ರೀ ರಜೋದೋಷಃ ಕಥಂತ್ವಿಹ ॥೯॥

ಕೃತಾದೌ ಶುಚಿಮಾಸೇ ತು ಜನ್ಮೈತಸ್ಯಾ ಯತೋಽಭವತ್ ।
ಜನ್ಮಮಾಸೇ ತತಃ ಸ್ನಾನಂ ತಸ್ಯಾಃ ಪಾಪನಿಷೂದನಮ್ ॥೧೦॥

ವಿಷಯದಲ್ಲಿ ನನಗೆ ಬಂದಿರುವ ಸಂಶಯವನ್ನು ಸಂಪೂರ್ಣವಾಗಿ ಪರಿಹರಿಸಬೇಕು. ನಿಷಿದ್ಧವಾದ ಕರ್ಮಗಳಲ್ಲಿ (ಅಂದರೆ ಆಷಾಢಮಾಸದಲ್ಲಿ ತಾಪೀನದಿಯಲ್ಲಿ ಸ್ನಾನ ಮಾಡುವ ಕರ್ಮ ಇತ್ಯಾದಿ) ಅದೆಂತು ಪ್ರವೃತ್ತಿಯನ್ನು ಮಾಡಬೇಕು? ಈಗ ನನಗೆ ಬಹು ದೊಡ್ಡ ಸಂದೇಹ ಬಂದಿದೆ ಎಂದು ಮುಂತಾಗಿ ವಿಜ್ಞಾಪಿಸಲು ॥೫॥ ಈಶ್ವರನು ಹೇಳುತ್ತಾನೆ- 'ಹೇ ವತ್ಸಾ, ಗಂಗಾದಿ ಮಹಾನದಿಗಳೇನಿವೆಯೋ ಅವು ಮಹಾಪ್ರಭಾವಶಾಲಿಗಳಾಗಿವೆ. ಸ್ವಪ್ರಭಾವ ಸಾಮರ್ಥ್ಯದಿಂದ ಅವುಗಳಿಗೆ ರಜಕೃತವಾದ ದೋಷವುಂಟಾಗದು. ॥೬॥ ವತ್ಸಾ, ನೀನು ಕೇಳಿದ ಎಲ್ಲ ಪ್ರಶ್ನೆಗಳಿಗೆ ಉತ್ತರಿಸುವೆನು ಕೇಳು. ಇತರ ಎಲ್ಲ ನದಿಗಳಲ್ಲಿ ರಜಸ್ವಲಾ ನಿಮಿತ್ತವಾದ ದೋಷವಿದ್ದರೂ ॥೭॥ ಮಹಾನದಿಗಳಲ್ಲಿ ಮಾತ್ರ ಈ ದೋಷವು ಎಷ್ಟೂ ಇರುವುದಿಲ್ಲ. ಇದು ನಿಶ್ಚಿತವಾಗಿಯೂ ಅತಿಕ್ಷುದ್ರವಾದ ದೋಷವಾಗಿದೆ. ॥೮॥ ಮಹಾನದಿಯಾದ ತಾಪಿಯು ಸೂರ್ಯನ ಮಗಳಾಗಿದ್ದು ಸರ್ವ ಗುಣಸಂಪನ್ನಳೂ ಶ್ರೇಷ್ಠಳೂ ಆಗಿದ್ದಾಳೆ. ಪುಣ್ಯಪ್ರದವಾದ ಜಲವುಳ್ಳ ತಾಪೀನದಿಯು ಸರ್ವರ ಪಾಪಗಳನ್ನು ಕಳೆಯುವಾಗ ಅವಳಿಗೆ ಅದೆಂತು ರಜೋದೋಷವು ಬರುವದು? ॥೯॥ ಕೃತಯುಗದ ಆದಿಯಲ್ಲಿ ಇವಳ ಜನ್ಮವು ಆಷಾಢಮಾಸದಲ್ಲಿ ಆದಪ್ರಯುಕ್ತ ಆ ಮಾಸದಲ್ಲಿ ತಾಪೀನದಿಯಲ್ಲಿ ಸ್ನಾನ ಮಾಡುವುದರಿಂದ ಪಾಪನಾಶವಾಗುವದು. ॥೧೦॥ ಹಿಂದಕ್ಕೆ ಆಧಿಕ್ಯದ ವಿಷಯದಲ್ಲಿ

ಕಿಲಾಭೂದ್ದೇವಸರಿತಃ ಸ್ಪರ್ಧಾ ಸೂರ್ಯಜಯಾ ಸಹ ।
ಪವಿತ್ರಾ ಗುಣತಸ್ತಾಪೀ ಗಂಗಾಯಾ ಅಧಿಕಾಽಭವತ್ ॥೧೧॥

ಬ್ರಹ್ಮಹಾ ಬ್ರಾಹ್ಮಣಃ ಕಶ್ಚಿತ್ ಜ್ಞಾತ್ವಾ ಗಂಗಾಂ ಸಮಾಗತಃ ।
ವಿವರ್ಣಃ ಶುಷ್ಕವದನಶ್ಚಾಂಡಾಲಸಮರೂಪಧೃಕ್ ॥೧೨॥

ಶ್ರುತ್ವಾ ತಪತ್ಯಾ ಮಾಹಾತ್ಮ್ಯಂ ಸ ತು ತಾಪೀಂ ಸಮಾಗತಃ ।
ತ್ರಿದಿನಸ್ನಾನಮಾತ್ರೇಣ ತಸ್ಯ ಚಾಂಡಾಲತಾ ಗತಾ ॥೧೩॥

ತತಃ ಸರ್ವೈಸ್ತು ಮುನಿಭಿಸ್ತಪತ್ಯೇವ ಸಮಾಶ್ರಿತಾ ।
ಜಹ್ನುಕನ್ಯಾಂ ಪರಿತ್ಯಜ್ಯ ಸ್ತುವದ್ಭಿಃ ಸೂರ್ಯಜಾಂ ಮುಹುಃ ॥೧೪॥

ತತೋ ಗಂಗಾ ಜಗಾಮಾಶು ಪಿತಾಮಹನಿವೇಶನಮ್ ।
ರುದತೀ ಗದ್ಗದಂ ದೀನಾ ವಿವರ್ಣಾ ವಿಕೃತಾಕೃತಿಃ ॥೧೫॥

ತತಃ ಸ್ವಯಂಭುವಾ ಪೃಷ್ಟಾ ಕಸ್ಮಾದ್ದೀನಾಸಿ ಜಾಹ್ನವಿ ।
ಕಥಂ ರೋದಿಷಿ ಚೈವಂ ತ್ವಮೇತತ್ಕಸ್ಮಾತ್ತ್ವಯಿ ಸ್ಥಿತಮ್ ॥೧೬॥

ತಾಪೀನದಿಯೊಂದಿಗೆ ದೇವನದಿಯಾದ ಗಂಗೆಯ ಸ್ಪರ್ಧೆಯು ಏರ್ಪಟ್ಟಾಗ, ಗುಣಗಳಿಂದ ಅಧಿಕವಾದ ಪವಿತ್ರ ತಾಪೀನದಿಯು ಗಂಗೆಗಿಂತಲೂ ಶ್ರೇಷ್ಠವಾಗಿರುವಳೆಂದು ನಿರ್ಣಯವಾಗಿದ್ದಿತು. ॥೧೧॥ ಹಿಂದಕ್ಕೆ ಒಮ್ಮೆ ಬ್ರಹ್ಮಹತ್ಯೆ ಮಾಡಿ ಕಳೆಗುಂದಿದ, ಬಾಯಿ ಒಣಗಿದ, ಚಾಂಡಾಲನಂತೆ ಕಾಣುವ ಒಬ್ಬ ಬ್ರಾಹ್ಮಣನು, ಗಂಗೆಯು ತನ್ನ ಪಾಪವನ್ನು ಕಳೆಯುವಳೆಂದು ತಿಳಿದು ಗಂಗಾಸ್ನಾನಕ್ಕೆ ಬಂದನು. ॥೧೨॥ ಅಲ್ಲಿರುವಾಗ ಗಂಗೆಗಿಂತಲೂ ತಾಪೀನದಿಯ ಮಹಾತ್ಮೆಯು ಅಧಿಕವಾಗಿರುವುದನ್ನು ಕೇಳಿ ತಿಳಿದು ಗಂಗೆಯಲ್ಲಿ ಸ್ನಾನ ಮಾಡದೇ ಆ ಬ್ರಾಹ್ಮಣನು ತಾಪೀನದೀ ಸ್ನಾನಕ್ಕೆಂದು ತಾಪೀನದಿಗೆ ಹೊರಟು ಹೋದನು. ಅಲ್ಲಿ ಮೂರುದಿನ ನದೀಸ್ನಾನ ಮಾಡುವ ಮಾತ್ರದಿಂದ ಅವನ ಚಾಂಡಾಲತ್ವವೂ, ಬ್ರಹ್ಮಹತ್ಯೆಯ ದೋಷವೂ ನಾಶವಾಗಿ ಹೋದವು. ॥೧೩॥ ಅಂದಿನಿಂದ ಮುನಿಗಳೆಲ್ಲರೂ ಜಹ್ನುವಿನ ಮಗಳಾದ ಗಂಗೆಯಲ್ಲಿ ಸ್ನಾನ ಮಾಡುವದನ್ನು ಬಿಟ್ಟು ಸೂರ್ಯಪುತ್ರಿಯಾದ ತಾಪಿಯನ್ನು ಸ್ತುತಿಸುತ್ತ ತಾಪೀನದಿಯನ್ನೇ ಆಶ್ರಯಿಸತೊಡಗಿದರು. ॥೧೪॥ ಇದೆಲ್ಲವನ್ನು ನೋಡಿದ ಗಂಗೆಯು ಕಾಂತಿಹೀನಳಾಗಿ, ವಿಕೃತವಾದ ಆಕಾರವುಳ್ಳವಳಾಗಿ ಗದ್ಗದ ಶೋಕಮಾಡುತ್ತ ದೀನವದನಳಾಗಿ ಪಿತಾಮಹನಾದ ಚತುರ್ಮುಖ ಬ್ರಹ್ಮನಿದ್ದಲ್ಲಿ ಧಾವಿಸಿ ಬಂದು ದುಃಖಿಸತೊಡಗಿದಳು. ॥೧೫॥ ಆಗ ಬ್ರಹ್ಮನು- 'ಹೇ ಜಾಹ್ನವಿ, ಅದೇಕೆ ಹೀಗೆ ದೀನಳಾಗಿರುವಿ? ಏತಕ್ಕಾಗಿ ಅಳುತ್ತಿರುವಿ?' ಇದೆಲ್ಲದಕ್ಕೂ ಅದೇನು ಕಾರಣ? ಎಂದು

ಗಂಗೋವಾಚ-

ತಾತ ತಾಪೀನದೀ ನಾಮ ಸೂರ್ಯಪುತ್ರೀಹ ವಿಶ್ರುತಾ ।
ತಯಾ ಸರ್ವಾಃ ಸ್ರವಂತ್ಯೋ ಹಿ ಜಿತಾಃ ಪಾವಿತ್ರ್ಯಗರ್ವಿತಾಃ ॥೧೭॥

ತಸ್ಯಾಸ್ತು ಸ್ನಾನಮಾತ್ರೇಣ ಪಾಪಿಷ್ಠಾ ಅಪಿ ಮಾನವಾಃ ।
ಕರ್ಮಬಂಧಾನ್ಪರಿತ್ಯಜ್ಯ ಗಚ್ಛಂತಿ ಪರಮಂ ಪದಮ್ ॥೧೮॥

ಏವಂವಿಧಃ ಪ್ರಭಾವೋಽತ್ರ ಕಸ್ಯಾಃ ಸಿಂಧೋರ್ನ ದೃಶ್ಯತೇ ।
ಯಾದೃಶಃ ಸವಿತುಃ ಪುತ್ರ್ಯಾಃ ತಸ್ಯಾಶ್ಚೈವ ಸ್ವಭಾವತಃ ॥೧೯॥

ನಿರ್ಜಲೋ ಯನ್ಮಯಿ ಸ್ನಾತೋ ಮಾನವಃ ಸ್ವರ್ಗಮಾಪ್ನುಯಾತ್ ।
ಮೋಕ್ಷ್ಯಂತೇ ರವಿಜಾಸ್ನಾನಾತ್ ಹೃಷ್ಟಾ ಮತ್ತೋಽಧಿಕಾಮಯಾ ॥೨೦॥

ಪೂರ್ವಸ್ನಾನಾ ಮದರ್ಥಾಕಾ ಕಾಪಿ ಸ್ರೋತಸ್ವಿನೀ ನ ಚ ।
ಸರ್ವಾಸಾಮಪಿ ಮಾನಾರ್ಹಾ ತ್ವತ್ಪ್ರಸಾದಾತ್ಪಿತಾಮಹ ॥೨೧॥

ಅದ್ಯ ಮೇ ಯನ್ಮಹತ್ವಂ ತತ್ತಯಾ ಸರ್ವಂ ಪರಾಹತಮ್ ।
ಸರ್ವಾಸಾಮಪಿ ಸಿಂಧೂನಾಂ ಭೂಯಸೀಂ ಮಾನ್ಯತಾಮಗಾಮ್ ॥೨೨॥

ವಿಚಾರಿಸಲು ॥೧೬॥ ಗಂಗೆಯು ಹೇಳಿದಳು- "ಹೇ ತಾತ! ಸೂರ್ಯಪುತ್ರಿಯಾದ ತಾಪೀ ಎಂಬ ಹೆಸರಿನ ನದಿಯು ಭೋಲೋಕದಲ್ಲಿ ಬಹಳ ಪ್ರಸಿದ್ಧಳಾಗಿ ಬಿಟ್ಟಿದ್ದಾಳೆ. ಅವಳು ಪಾವಿತ್ರ್ಯದಿಂದ ಗರ್ವಿತರಾಗಿದ್ದ ಇತರ ಎಲ್ಲ ನದಿಗಳನ್ನು ಗೆದ್ದು ಬಿಟ್ಟಿರುವಳು. ॥೧೭॥ ತಾಪೀನದಿಯ ಸ್ನಾನಮಾತ್ರದಿಂದ ಪಾಪಿಷ್ಠರಾದ ಮಾನವರೆಲ್ಲ ಕರ್ಮ ಬಂಧನಗಳನ್ನು ಕಳೆದುಕೊಂಡು ಪರಮಪದವನ್ನು ಹೊಂದುತ್ತಲಿದ್ದಾರೆ. ॥೧೮॥ ಇಂಥ ಮಹಿಮೆಯು ಭೋಲೋಕದಲ್ಲಿಯ ಇನ್ನಾವ ನದಿಗೂ ಇರುವದಿಲ್ಲ. ಸೂರ್ಯಪುತ್ರಿಯ ಈ ತೆರನಾದ ಪ್ರಭಾವವು ಸ್ವಾಭಾವಿಕವಾಗಿದ್ದು ವರ್ಣನಾತೀತವಾಗಿದೆ. ॥೧೯॥ ನನ್ನ ಜಲದಲ್ಲಿ ಸ್ನಾನ ಮಾಡುವ ಮಾನವನು ಕೇವಲ ಸ್ವರ್ಗಲೋಕವನ್ನು ಪಡೆದರೆ ರವಿಪುತ್ರಿಯಾದ ತಾಪೀನದಿಯ ಜಲದಲ್ಲಿ ಸ್ನಾನ ಮಾಡುವವರು ಮೋಕ್ಷವನ್ನು ಪಡೆದು ಅಧಿಕವಾದ ಫಲಪ್ರಾಪ್ತಿಯಿಂದ ಅಧಿಕವಾಗಿ ಹೃಷ್ಟರಾಗಿ ಇರುವರು. ॥೨೦॥ ಇದುವರೆಗೆ ಜನರು ನನ್ನ ಜಲದಲ್ಲಿ ಮೊದಲು ಸ್ನಾನ ಮಾಡುವದನ್ನು ಬಿಟ್ಟು ಇತರ ನದೀಜಲದಲ್ಲಿ ಸ್ನಾನ ಮಾಡುತ್ತಿರಲಿಲ್ಲ. ಹೇ ಪಿತಾಮಹಾ! ನಿನ್ನ ಅನುಗ್ರಹದಿಂದ ಇದುವರೆಗೆ ನಾನು ಎಲ್ಲ ನದಿಗಳಿಗೂ ಮಾನ್ಯಳಾಗಿದ್ದೆನು. ॥೨೧॥ ಆದರೆ ಈಗ ಮಾತ್ರ ನೀನು ನನ್ನ ಎಲ್ಲ ಮಹತ್ವವನ್ನು ಕಳೆದುಬಿಟ್ಟಿರುವಿ. ಇದುವರೆಗೆ ಎಲ್ಲ ನದಿಗಳೊಳಗೆ ಬಹು ಗೌರವದಿಂದ

ಸ್ಥಾಪಿತಾಹಂ ತ್ವಯಾ ತಾತ ನದೀನಾಂ ಜ್ಯೇಷ್ಠತಾಪದೇ ।
ಸಾ ತ್ವನ್ಯಥಾಕೃತಿಶ್ಚಕ್ರೇ ತಪತ್ಯಾ ಸುತಯಾ ರವೇಃ ॥೨೩॥

ಸ್ವಪರಾಭವತೋ ದುಃಖಂ ನ ತಥಾ ಭಗವನ್ನಿಹ ।
ತ್ವತ್‌ಸೃಷ್ಟಸ್ತು ಯಥಾ ಬ್ರಹನ್ನನ್ಯಥಾಕರಣಾತ್ಕಿಲ ॥೨೪॥

ಗಂಗಾಯಾಸ್ತದ್ವಚಃ ಶ್ರುತ್ವಾ ಬ್ರಹ್ಮಾ ಕೋಪವಶಂ ಯಯೌ ।
ಆಹೂಯ ನಾರದಂ ಪ್ರಾಹ ಮಾಹಾತ್ಮ್ಯಂ ಹಿ ಯತಸ್ತ್ವಯಾ ॥೨೫॥

ನಿರ್ಮಾಹಾತ್ಮ್ಯಾ ಯಥಾ ತಾಪೀ ಲೋಕೇ ಭವತಿ ನಾರದ ।
ತಥಾ ತ್ವಯಾ ವಿಧಾತವ್ಯಂ ನಾತ್ರ ಕಾರ್ಯಾ ವಿಚಾರಣಾ ॥೨೬॥

ತತೋ ಜಹಾರ ಸ ಮುನಿಸ್ತಾಪೀಮಾಹಾತ್ಮ್ಯಮಾದೃತಃ ।
ಯದ್ಗೀತಂ ಮುನಿಭಿಃ ಸರ್ವಮನುಭೂತಮನೇಕದಾ ॥೨೭॥

ತಸ್ಯಾಪಹಾರಪಾಪಾಚ್ಚ ಸೋಽಜ್ಞಾನೋ ನಾರದೋಽಭವತ್ ।
ಆಚಖ್ಯೌ ಬ್ರಹ್ಮಣೇ ಗತ್ವಾ ಮಾಹಾತ್ಮ್ಯಂ ತದ್‌ಹೃತಂ ಮಯಾ ॥೨೮॥

ಸ್ವಸ್ಯ ಚಾಜ್ಞಾನತಾ ಜಾತಾ ಮಾಹಾತ್ಮ್ಯಹರಣಾತ್ತತಃ ।
ಕಿಂ ಕರೋಮೀತಿ ಕಥಯ ಮಮಾಜ್ಞಾನಂ ಕಥಂ ಪ್ರಭೋ ॥೨೯॥

ಇದ್ದೆನು. ॥೨೨॥ ಎಲ್ಲ ನದಿಗಳಲ್ಲಿ ನೀನೇ ನನ್ನನ್ನು ಅಗ್ರಸ್ಥಾನದಲ್ಲಿ ಇಟ್ಟಿದ್ದಿ. ಇಂಥ ನನ್ನನ್ನು ರವಿಪುತ್ರಿಯಾದ ಆ ತಾಪಿಯು ಸ್ಥಾನಭ್ರಷ್ಟಳನ್ನಾಗಿ ಮಾಡಿರುವಳು. ॥೨೩॥ ನಿನ್ನ ಸೃಷ್ಟಿಯನ್ನು ಅನ್ಯಥಾಕಾರ ಮಾಡುವುದರಿಂದ ಉಂಟಾದ ಈ ಆತ್ಮಪರಾಭವದಿಂದ ನನಗಾಗಿರುವ ದುಃಖವು ಅಸಹನೀಯವಾಗಿದೆ'' ॥೨೪॥ ಗಂಗಾದೇವಿಯ ಈ ಮಾತುಗಳನ್ನು ಕೇಳಿ ಚತುರ್ಮುಖ ಬ್ರಹ್ಮನು ಕುಪಿತನಾಗಿ ನಾರದರನ್ನು ಕರೆದು ಅವರಿಗೆ ಗಂಗಾದೇವಿಯ ಮಹಾತ್ಮೆಯನ್ನು ಹೇಳಿದವಲ್ಲದೇ ॥೨೫॥ 'ಹೇ ನಾರದಾ! ತಾಪಿಯ ಮಹಾತ್ಮೆಯು ಉಳಿಯದಂತೆ ಮಾಡು' ಎಂದು ಆದೇಶಿಸಿದನು. ॥೨೬॥ ತಂದೆಯ ಆಜ್ಞಾನುಸಾರವಾಗಿ ನಾರದರು ತಾಪಿಯ ಮಹಾತ್ಮೆಯನ್ನು ಅಪಹರಿಸಿದರು. ಅದುವರೆಗೆ ಅನೇಕ ಮುನಿಗಳಿಂದ ಗಾನ ಮಾಡಲ್ಪಟ್ಟ ಮತ್ತು ಅನೇಕರಿಂದ ಅನೇಕ ರೀತಿ ಅನುಭವಿಸಲ್ಪಟ್ಟ ತಾಪೀ ಮಹಾತ್ಮೆಯ ॥೨೭॥ ಈ ಅಪಹಾರದಿಂದ ಬಂದ ಪಾಪದಿಂದ ನಾರದರ ಜ್ಞಾನವೆಲ್ಲ ಹೊರಟು ಹೋಯಿತು. ಆಗ ನಾರದರು ಚತುರ್ಮುಖ ಬ್ರಹ್ಮನಿದ್ದಲ್ಲಿ ಧಾವಿಸಿ ಬಂದು- ಹೇ ಪ್ರಭೋ! ನಿನ್ನ ಆಜ್ಞಾನುಸಾರವಾಗಿ ತಾಪೀ ಮಹಾತ್ಮೆಯನ್ನು ಅಪಹರಿಸಿದೆನು. ॥೨೮॥ ಅವಳ ಮಾಹಾತ್ಮ್ಯಹರಣದಿಂದ ಈಗ ನನ್ನ ಜ್ಞಾನವೆಲ್ಲ ಲೋಪವಾಗಿ ನನ್ನಲ್ಲಿ ಅಜ್ಞಾನವು ತುಂಬಿದೆ. ಹೇ ಪ್ರಭೋ, ಈಗ ನಾನು

ಅಜ್ಞಾನಾನ್ಮರಣಂ ಶ್ಲಾಘ್ಯಂ ಪುರುಷಸ್ಯ ಜಗದ್ಗುರೋ ।
ಉಪಾರ್ಜಯಂತಿ ಪಾಪಾನಿ ಸಜ್ಞಾನಾ ನ ಶ್ರುತಂ ಕಿಲ ॥೩೦॥

ಕಿಂ ಕರೋತಿ ಕುಲೇ ಜನ್ಮ ಕಿಂ ಕರೋತಿ ಕುಲೇ ಧನಮ್ ।
ಯದ್ಯಜ್ಞಾನಂ ಭವೇತ್ಪುಂಸಸ್ತೇನ ಸರ್ವಂ ವಿನಶ್ಯತಿ ॥೩೧॥

ಅಜ್ಞಾನಯುಕ್ತಪುರುಷೋ ದಿವಸೇ ದಿವಸೇ ಕಿಲ ।
ಅಜ್ಞಾನಾದ್ದುಃಖಮಶ್ನಾತಿ ದೇಶೇ ಕಾಲೇ ನ ಮುಚ್ಯತೇ ॥೩೨॥

ನಿರ್ಧನೋಽಪಿ ವರಂ ಜ್ಞಾನೀ ಕುಲಹೀನೋಽಪಿ ಮಾನವಃ ।
ಜ್ಞಾನೀ ಸರ್ವಮವಾಪ್ನೋತಿ ಲಬ್ಧಮಜ್ಞಾನತೋ ವ್ರಜೇತ್ ॥೩೩॥

ಬ್ರಹ್ಮನ್ ಮಯಾ ಕಿಂ ಕೃತಂ ಸ್ಯಾತ್ಪಾಪಂ ಯನ್ಮಯಿ ಸಾಂಪ್ರತಮ್ ।
ಉಪಾಯಃ ಕೋಽಸ್ತಿ ದೇವೇಶ ಯೇನಾಜ್ಞಾನಂ ವ್ರಜೇನ್ಮಮ ॥೩೪॥

ತತಃ ಪ್ರಜಾಪತಿಸ್ತಾಪೀಂ ಶರಣಂ ಗಚ್ಛ ನಾರದ ।
ಯೇನ ಸೂರ್ಯಸುತಾ ದೇವೀ ಪರಿತೋಷಂ ವ್ರಜೇದ್ ದ್ರುತಮ್ ॥೩೫॥

ಏನು ಮಾಡಲಿ? ನನ್ನ ಅಜ್ಞಾನವು ಅದೆಂತು ಹೊರಟು ಹೋದೀತು? ॥೨೯॥ ಹೇ ಜಗದ್ಗುರೋ! ಪುರುಷನಿಗೆ ಇಂಥ ಅಜ್ಞಾನವು ಇರುವದಕ್ಕಿಂತಲೂ ಮರಣವೇ ಲೇಸು. ಏಕೆಂದರೆ ಅಜ್ಞಾನಿಗಳು ಪಾಪಗಳನ್ನು ಕಟ್ಟಿಕೊಳ್ಳುವರು! ಆದರೆ ಜ್ಞಾನಿಗಳು ಪಾಪಗಳನ್ನು ಕಟ್ಟಿಕೊಳ್ಳುವುದಿಲ್ಲ. ॥೩೦॥ ಅಜ್ಞಾನಿಯಾದ ಪುರುಷನಿಗೆ ಸತ್ಕುಲದಲ್ಲಿಯ ಜನ್ಮದಿಂದಾಗಲೀ, ಧನದಿಂದಾಗಲೀ ಏನು ಪ್ರಯೋಜನವಿದೆ? ಇಂಥ ಅಜ್ಞಾನಿಯಿಂದ ಕುಲ ಧನ ಎಲ್ಲವೂ ನಾಶವಾಗಿ ಹೋಗುವವು. ॥೩೧॥ ಅಜ್ಞಾನಿಯಾದ ಪುರುಷನು ದಿನದಿನವೂ ತನ್ನ ಅಜ್ಞಾನದಿಂದ ದುಃಖವನ್ನು ಅನುಭವಿಸುವನು. ಅವನು ಯಾವ ದೇಶದಲ್ಲಿದ್ದರೂ ಮತ್ತು ಯಾವ ಕಾಲದಲ್ಲಿದ್ದರೂ ಆ ದುಃಖದಿಂದ ಮುಕ್ತನಾಗುವದಿಲ್ಲ. ॥೩೨॥ ಜ್ಞಾನಿಯಾದವನು ನಿರ್ಧನಿಯಾಗಿದ್ದರೂ ಮತ್ತು ಸತ್ಕುಲ ಪ್ರಸೂತನಾಗಿರದಿದ್ದರೂ ಕೂಡ ಶ್ರೇಷ್ಠನೆಂದು ಪರಿಗಣಿಸಲ್ಪಡುತ್ತಾನೆ. ಅವನು ಸರ್ವಸುಖವನ್ನು ಪಡೆಯುವನು. ಅಜ್ಞಾನದಿಂದ ಬಂದ ದುಃಖವೆಲ್ಲ ಜ್ಞಾನಪ್ರಾಪ್ತಿಯಿಂದ ಕೂಡಲೇ ನಾಶವಾಗುವದು. ॥೩೩॥ ಭೋ ಬ್ರಹ್ಮನ್! ಈ ಅಜ್ಞಾನವು ನನ್ನಲ್ಲಿ ಸೇರುವುದಕ್ಕೆ ನಾನೇನು ಪಾಪವನ್ನು ಮಾಡಿದ್ದೆನು? ಈ ಅಜ್ಞಾನವು ನನ್ನಿಂದ ದೂರವಾಗುವದಕ್ಕೋಸ್ಕರ ಉಪಾಯವೇನಾದರೂ ಇದ್ದರೆ ದಯಮಾಡಿ ತಿಳಿಸುವವನಾಗು ಎಂದು ಪ್ರಾರ್ಥಿಸಲು ॥೩೪॥ ಚತುರ್ಮುಖ ಬ್ರಹ್ಮನು ನಾರದರಿಗೆ ಹೇಳಿದನು- 'ಹೇ ನಾರದಾ! ನೀನು ಈಗ ಕೂಡಲೇ ತಾಪೀನದಿಗೆ ಶರಣು ಹೋಗು. ಇದರಿಂದ ಸೂರ್ಯಪುತ್ರಿಯಾದ ತಾಪಿಯು ಕೂಡಲೇ ಸಂತುಷ್ಟಳಾಗುವಳು. ॥೩೫॥

ಮಹಾಪ್ರಭಾವಸ್ತ್ವಂ ತಾಪೀ ಪ್ರಭಾವಃ ಕೇನ ಹನ್ಯತೇ ।
ತ್ವದ್ಯೋಗೇನೈವ ಸರ್ವಾಸಾಂ ನವೀನಾಮಧಿಕಾಽಭವತ್ ॥೩೬॥

ಕಿರಣೈಸ್ತಸ್ಯ ಸೂರ್ಯಸ್ಯ ದುಹಿತೇತಿ ಪ್ರಸಿದ್ಧತಾಮ್ ।
ಪಾದೈಃ ಸ್ಪೃಷ್ಟಾನಿ ಯಸ್ಮಾತ್ತ್ವಂ ಯಾನಿ ತೀರ್ಥಾನಿ ಯೋಗ್ಯತಾಮ್ ॥೩೭॥

ತಸ್ಯ ತ್ವಂ ದುಹಿತಾ ನಾಮ ತ್ವಯಾ ಚಿತ್ರಂ ಕಿಮುಚ್ಯತೇ ।
ಸ್ಪೃಷ್ಟ್ವಾ ತ್ವಯಾ ಪಿತುಃ ಪಾದೈರನ್ಯಾಸಾಂ ಸರಿತಾಂ ಕಿಲ ॥೩೮॥

ಜಲಾನಿ ಯಾಂತಿ ಪಾವಿತ್ರ್ಯಂ ತ್ವಯಾ ಕಿಂಚ ನಿಗದ್ಯತೇ ।
ಜಗತ್ತಮೋಪಹಾರತ್ವಂ ವ್ರತಂ ಯಸ್ಯ ನಿರಂತರಮ್ ॥೩೯॥

ತತ್ಪುತ್ರೀಸ್ನಾನಕರ್ತೄಣಾಂ ಮೋಹಂ ಹಂತಿ ಕಿಮದ್ಭುತಮ್ ।
ಇತಿ ಪ್ರಶಂಸಿತಾ ತಾಪೀ ಬ್ರಹ್ಮಣಾ ಹರ್ಷಿತಾಽಭವತ್ ॥೪೦॥

ತತ್ರಾಗತ್ಯ ತತೋ ವಾಕ್ಯಂ ಬ್ರಹ್ಮಾಣಮಿದಬ್ರವೀತ್ ।
ತಾಪ್ಯುವಾಚ-
ಪಿತಾಮಹ ಕಿಮರ್ಥಂ ತ್ವಂ ಪ್ರಶಂಸಸಿ ನಿಗದ್ಯತಾಮ್ ॥೪೧॥

ನೀನಾದರೋ ಮಹಾಪ್ರಭಾವಶಾಲಿಯಾಗಿರುವಿ. ಆದರೂ ಹೇ ಮಹಾರಾಯಾ! ಆ ತಾಪೀನದಿಯ ಪ್ರಭಾವವನ್ನು ಅಪಹರಿಸಲು ಅದಾರು ಸಮರ್ಥರಾದಾರು? ಆ ತಾಪಿಯು ತನ್ನ ಸ್ವಂತ ಬಲದಿಂದ ಸಕಲ ನದಿಗಳಲ್ಲಿ ಶ್ರೇಷ್ಠಳಾಗಿದ್ದಾಳೆ. ಇದುವರೆಗಿನ ನಿನ್ನ ವ್ಯಾಪಾರದಿಂದ ಆ ತಾಪಿಯು ಸರ್ವನದಿಗಳಲ್ಲಿ ಶ್ರೇಷ್ಠಳೆಂಬುದು ಸಿದ್ಧವಾಯಿತು. ॥೩೬॥ ಆ ಸೂರ್ಯದೇವನ ಕಿರಣಗಳ ಸ್ಪರ್ಶದಿಂದ ಅವಳು ಸೂರ್ಯಪುತ್ರಿಯೆಂದು ಪ್ರಸಿದ್ಧಳಾಗಿದ್ದಾಳೆ. ಹೇ ಮಹಾತ್ಮಳಾದ ತಾಪಿಯೇ, ಯಾವ ಸೂರ್ಯನ ಕಿರಣಗಳಿಂದ ಸ್ಪರ್ಶಿಸಲ್ಪಟ್ಟ ನೀನು ಮತ್ತು ಇತರ ಸಕಲ ತೀರ್ಥಗಳು ತಮ್ಮ ತಮ್ಮ ಯೋಗ್ಯತೆಯಂತೆ ಮಹಾತ್ಮೆಯನ್ನು ಹೊಂದಿರುವವೋ ॥೩೭॥ ಅಂಥ ಸೂರ್ಯದೇವನ ಪುತ್ರಿಯಾಗಿರುವ ನಿನಗೆ ಅದಾವುದು ಆಶ್ಚರ್ಯಕರವಾಗಿದೆ? (ಅಸಾಧ್ಯವಾಗಿದೆ?). ನಿನ್ನ ತಂದೆಯಾದ ಸೂರ್ಯನ ಕಿರಣಗಳ ಸ್ಪರ್ಶ ಮಾತ್ರದಿಂದ ಎಲ್ಲ ನದಿಗಳ ॥೩೮॥ ಜಲವು ಪಾವಿತ್ರ್ಯವನ್ನು ಹೊಂದುವದು. ಇಂಥ ಸೂರ್ಯನ ಪುತ್ರಿಯಾದ ನಿನ್ನ ಮಹಿಮೆಯನ್ನು ಎಷ್ಟೆಂದು ವರ್ಣಿಸಲು ಸಾಧ್ಯ! ಜಗತ್ತಿನ ತಮಸ್ಸನ್ನು ಕಳೆಯುವದೇ ಯಾವ ಸೂರ್ಯನ ನಿತ್ಯದ ಕಾರ್ಯವಾಗಿರುವದೋ ॥೩೯॥ ಅಂಥ ಸೂರ್ಯದೇವನ ಪುತ್ರಿಯಾದ ನೀನು ನಿನ್ನ ಜಲದಲ್ಲಿ ಸ್ನಾನಮಾಡುವವರ ಅಜ್ಞಾನವನ್ನು ಕಳೆಯುವುದೇನಾಶ್ಚರ್ಯ! ಈ ಪ್ರಕಾರವಾಗಿ ಬ್ರಹ್ಮದೇವನಿಂದ ಪ್ರಶಂಸಿಲ್ಪಟ್ಟ ತಾಪಿಯು ಹರ್ಷಭರಿತಳಾಗಿ ॥೪೦॥ ಚತುರ್ಮುಖ ಬ್ರಹ್ಮನಿರುವಲ್ಲಿ ಬಂದು- "ಹೇ ಪಿತಾಮಹಾ,

ಪ್ರಶಂಸಾ ಮತ್ಪ್ರತಿಷ್ಠಾ ವೋ ಜಾತೇಯಂ ಪರಮೇಶ್ವರ ।
ಧನ್ಯಾಹಂ ತ್ರಿಜಗತ್ಪೂಜ್ಯಾ ತ್ವಯಾಹಂ ಚ ಪ್ರಶಂಸಿತಾ ॥೪೨॥

ಬ್ರಹ್ಮೋವಾಚ-

ನದೀಜ್ಯೇಷ್ಠಾ ಚ ತಪತಿ ಮಯಾ ಗಂಗಾ ಪುರಾ ಕೃತಾ ।
ತ್ವನ್ಮಹಿಮ್ನಾ ಪರಾಭೂತಾ ನದೀಯಂ ದೀನತಾಮಗಾತ್ ॥೪೩॥

ಆಗತಾ ಮತ್ಸಮೀಪೇ ತು ನಾರದೇನಾಪಹಾರಿತಮ್ ।
ಮಹಿಮಾನಂ ತವ ಗುರುಂ ತತೋಽಸ್ಯಾಜ್ಞಾನಮಾವ್ರಜತ್ ॥೪೪॥

ಅನುಗೃಹ್ಣೀಷ್ವ ಮದ್ವಾಕ್ಯಾನ್ನಾರದಂ ಮುನಿಸತ್ತಮಮ್ ।
ಗಂಗಾಯಾ ಮಹಿಮಾನಂ ಚ ಏತದ್ಯಾಚೇ ಮಹಾನದಿ ॥೪೫॥

ತಪತ್ಯುವಾಚ-

ತ್ವತ್ಪ್ರಾರ್ಥನಾಂ ಕಥಂ ವಂಧ್ಯಾಂ ಪ್ರಾಣಾ ಯಾವತ್ಕರೋಮ್ಯಹಮ್ ।
ಪುನಃ ಪ್ರಾಣೈರ್ಗತೇ ಶ್ರೇಷ್ಠಂ ನ ಪುನರ್ಮಾನಖಂಡನಮ್ ॥೪೬॥

ನೀನು ನನ್ನನ್ನು ಇಷ್ಟೊಂದು ಸ್ತುತಿಸುವ ಕಾರಣವೇನು? ॥೪೧॥ ಹೇ ಪರಮೇಶ್ವರಾ! ಇದೆಲ್ಲ ನನ್ನ ಪ್ರಶಂಸೆ ಮತ್ತು ಪ್ರತಿಷ್ಠೆಯಾಯಿತು. ಪಿತಾಮಹನಾದ ನಿನ್ನಿಂದ ಈ ಪ್ರಕಾರ ಪ್ರಶಂಶಿಸಲ್ಪಟ್ಟ ನಾನಿಂದು ಧನ್ಯಳಾದೆನು ಮತ್ತು ತ್ರಿಲೋಕಪೂಜ್ಯಳಾದೆನು' ಎಂದು ಮುಂತಾಗಿ ಅನ್ನಲು ॥೪೨॥ ಬ್ರಹ್ಮದೇವನು ಹೇಳುತ್ತಾನೆ- ಹೇ ತಾಪೀ ! ಹಿಂದಕ್ಕೆ ನಾನು ಗಂಗಾನದಿಯನ್ನು ಸರ್ವಶ್ರೇಷ್ಠ ನದಿಯೆಂದು ವ್ಯವಸ್ಥೆ ಮಾಡಿದ್ದೆನು. ಆದರೆ ಇಂದು ನಿನ್ನ ಮಹಿಮೆಯಿಂದ ಈ ಗಂಗಾ ನದಿಯು ಪರಾಭೂತಳಾಗಿ ದೀನಳಾಗಿ ಬಿಟ್ಟಿದ್ದಾಳೆ. ॥೪೩॥ ಅವಳು ನನ್ನ ಸನಿಹಕ್ಕೆ ಬಂದು ಎಲ್ಲವನ್ನೂ ನಿವೇದಿಸಿದಾಗ ನನ್ನ ಆಜ್ಞಾನುಸಾರವಾಗಿ ನಾರದನು ನಿನ್ನ ಮಹಾ ಮಹಿಮೆಯನ್ನು ಅಪಹರಿಸುವ ಸಾಹಸವನ್ನು ಮಾಡಿದನು. ಆದರೆ ಅದು ಸಾಧ್ಯವಾಗದೇ ಅವನನ್ನೇ ಅಜ್ಞಾನವು ಆವರಿಸಿಬಿಟ್ಟಿದೆ. ॥೪೪॥ ಹೇ ತಾಪೀ! ನನ್ನ ಮಾತನ್ನು ಕೇಳಿ ಈ ನಾರದಮುನಿಯನ್ನು ಅನುಗ್ರಹಿಸು. ಮತ್ತು ಹೇ ಮಹಾನದಿ ತಾಪಿಯೇ, ಗಂಗಾನದಿಯ ಮಹಿಮೆಯು ಮತ್ತೆ ಭೂಲೋಕದಲ್ಲಿ ನಡೆಯುವಂತೆ ಮಾಡು. ॥೪೫॥ ಬ್ರಹ್ಮದೇವರ ಈ ಮಾತುಗಳನ್ನು ಕೇಳಿದ ತಾಪಿಯು ಹೇಳಿದಳು- ಹೇ ಬ್ರಹ್ಮನ್! ನನ್ನ ಪ್ರಾಣ ಇರುವವರೆಗೆ ನಿನ್ನ ಮಾತುಗಳನ್ನು ಮೀರಲು ಸಾಧ್ಯವೇ! ಪ್ರಾಣ ಹೋದರೆ ಮತ್ತೆ ಬರಬಹುದು. ಆದರೆ ಮಾನಖಂಡನವು ಹಾಗಲ್ಲ. ॥೪೬॥ ಲೋಕದಲ್ಲಿ ಜೀವವು (ದೇಹವು) ನಶ್ವರವಾಗಿದೆ.

ಪ್ರಾಣಾ ಹಿ ನಶ್ವರಾ ಲೋಕೇ ಮಹಿಮಾ ತು ಅವಿನಶ್ವರಃ ।
ನಾರದಸ್ಯ ಪುನರ್ಜ್ಞಾನಂ ಮತ್ಪ್ರಸಾದಾದ್ಭವಿಷ್ಯತಿ ॥೪೭

ವಿಚಾರ್ಯ ಚ ತತೋ ಬ್ರಹ್ಮನ್ನವಸ್ಥಾಸಮಯಾಯ ಚ ।
ಬ್ರಹ್ಮೋವಾಚ-
ತಾಪಿ ಯೋ ಮಹಿಮಾ ಲೋಕೇ ಸರ್ವದಾ ತೇಽಭವತ್ಪುರಾ ॥೪೮

ಅಸಂಶಯಂ ಸ ತಾಪೀಯಃ ತವಾಷಾಢೇ ಭವಿಷ್ಯತಿ ।
ಯಂ ಯಂ ಕಾಮಂ ವಿಚಿಂತ್ಯೇಹ ಆಷಾಢೇ ಯನ್ನಿಮಜ್ಜನಮ್ ॥೪೯

ಕರಿಷ್ಯಂತಿ ಹಿ ತೇಷಾಂ ಚ ಸರ್ವಕಾಮೋ ಭವಿಷ್ಯತಿ ।
ಸ್ವರ್ಗಾರ್ಥೀ ಪ್ರಾಪ್ನುಯಾತ್ ಸ್ವರ್ಗಂ ಮೋಕ್ಷಾರ್ಥೀ ಮೋಕ್ಷ-
ಮಾಪ್ನುಯಾತ್ ॥೫೦

ಅನ್ಯದ್ಯದ್ದುರ್ಲಭಂ ಲೋಕೇ ತದಾಷಾಢೇ ಭವಿಷ್ಯತಿ ।
ಗಂಗಾಪಿ ಸರಿತಾಂ ಮಧ್ಯೇ ಜ್ಯೇಷ್ಠತ್ವಂ ಲಕ್ಷ್ಯತೇ ಪುನಃ ॥೫೧

ಅನ್ಯಾಶ್ಚ ಸರಿತಃ ಸರ್ವಾಸ್ತಥಾ ಸ್ವಮಹಿಮೋತ್ಕಟಾಃ ।
ಭವಂತು ತ್ರಿಜಗತ್‌ಶ್ರೇಷ್ಠಾಃ ಪೂರ್ವಮೇವ ಪ್ರಸಾದಿತಾಃ ॥೫೨

ಆದರೆ ಮಹಿಮೆಯು (ಕೀರ್ತಿ) ಶಾಶ್ವತವಾಗಿ ಉಳಿಯುವುದು. ನನ್ನ ಅನುಗ್ರಹದಿಂ ನಾರದರಿಗೆ ಪುನಃ ಜ್ಞಾನವು ಬರುವಂತಾಗುವದು. ॥೪೭॥ ಅನಂತರ ತಾಪಿಯು ವಿಚಾ ಮಾಡಿ 'ಹೇ ಬ್ರಹ್ಮನ್ ನನ್ನ ಮೇಲೆ ಅನುಗ್ರಹ ಮಾಡು' ಎಂದು ಪ್ರಾರ್ಥಿಸ ಬ್ರಹ್ಮದೇವನು ಹೇಳುತ್ತಾನೆ- ಹೇ ತಾಪೀ! ಯಾವ ನಿನ್ನ ಮಹಾಮಹಿಮೆಯ ಲೋಕದಲ್ಲಿ ಸದಾಕಾಲವೂ ಇರುತ್ತಿದ್ದಿತೋ ॥೪೮॥ ಅದೆಲ್ಲವೂ ಇನ್ನು ಮುಂದೆ ನಿನ್ನ ಆಷಾಢಮಾಸದಲ್ಲಿ ಪೂರ್ಣವಾಗಿರುವದು. ಯಾರ್ಯಾರು ಮನದಲ್ಲಿ ಏನೇನ ಬಯಸುವರೋ ಅದೆಲ್ಲವೂ ಆಷಾಢಮಾಸದಲ್ಲಿ ನಿನ್ನ ಜಲದಲ್ಲಿ ಸ್ನಾನಮಾಡು ಮಾತ್ರದಿಂದ ॥೪೯॥ ಸಿದ್ಧಿಸುವದು. ಸ್ವರ್ಗಾರ್ಥಿಯು ಸ್ವರ್ಗವನ್ನೂ ಮೋಕ್ಷಾರ್ಥಿಯ ಮೋಕ್ಷವನ್ನೂ ಪಡೆಯುವರು. ॥೫೦॥ ಲೋಕದಲ್ಲಿ ಯಾವ್ಯಾವುದ ದುರ್ಲಭವಾಗಿರುವದೋ ಅದೆಲ್ಲವೂ ಆಷಾಢಮಾಸದಲ್ಲಿ ಸುಲಭ ಸಾಧ್ಯವಾಗುವದು ಗಂಗಾನದಿಯೂ ಇನ್ನು ಮುಂದೆ ಪುನಃ ಮೊದಲಿನಂತೆಯೇ ಎಲ್ಲ ನದಿಗಳ ಶ್ರೇಷ್ಠವೆಂದು ಪರಿಗಣಿಸಲ್ಪಡುವಳು. ॥೫೧॥ ಉಳಿದೆಲ್ಲ ನದಿಗಳೂ ತಮ್ಮ ತವ ಮಹಿಮೆಗಳಿಂದ ತ್ರಿಲೋಕಗಳಲ್ಲಿ ಪ್ರಸಿದ್ಧವಾಗಲಿ. ॥೫೨॥ ನಿಷ್ಕಲ್ಮಷವಾದ ಮನಸ್ಸಿ

ತಾಪ್ಯದುಷ್ಟಮನಾ ಸರ್ವಮನುಮೇನೇ ವಿಧೇರ್ವಚಃ ।
ತದಾರಭ್ಯ ಶುಚೌ ಸ್ನಾನಂ ತಪತ್ಯಾಂ ಪಾಪನಾಶನಮ್ ॥೫೩॥

ಬ್ರಹ್ಮಣೋ ವರದಾನಾಚ್ಚ ಸಮೀಹಿತಫಲಪ್ರದಮ್ ।
ಸೂರ್ಯಜಾಯಾಂ ಶುಚೌ ಸ್ನಾನಂ ದೇವಾನಾಮಪಿ ದುರ್ಲಭಮ್ ॥೫೪॥

ಕಿಂ ಪುನರ್ಮಾನವಾನಾಂ ಚ ವಿನಾ ಭಾಗ್ಯಾನ್ನ ಲಭ್ಯತೇ ।
ಏಷಾಂ ಚ ಸ್ನಾನಕರ್ತ್ರೂಣಾಂ ಪಾಪಿನಾಮಪಿ ನಾಕದಮ್ ॥೫೫॥

ಯೇನ ಚೀರ್ಣೇನ ಮನುಜಾಃ ಸರ್ವಪಾಪವಿವರ್ಜಿತಾಃ ।
ವಿಮಾನವರಮಾರೂಢಾ ಅಪ್ಸರೋಗಣಸೇವಿತಾಃ ॥೫೬॥

ಅಂತೇ ತು ಮೋಕ್ಷಂ ಸಂಪ್ರಾಪ್ತಾಃ ಪೂಜ್ಯಂತೇ ತ್ರಿದಶೈರಪಿ ।
ಸ್ವರ್ಗದಂ ಭೋಗದಂ ಚೈವ ಮುಕ್ತಿದಂ ಮುಕ್ತಿಮಿಚ್ಛತಾಮ್ ॥೫೭॥

ಆಷಾಢಸ್ನಾನತೋ ನಾಸ್ತಿ ಪರಂ ಪಾಪಸ್ಯ ಭೇಷಜಮ್ ।
ನರಕಸ್ಥಾ ದಿವಂ ಯಾಂತಿ ಸ್ವರ್ಗಸ್ಥಾ ಮೋಕ್ಷಗಾಮಿನಃ ॥೫೮॥

ತಾಪಿಯೂ ಕೂಡ ಬ್ರಹ್ಮದೇವನ ಈ ಎಲ್ಲ ಮಾತುಗಳನ್ನು ಅನುಮೋದಿಸಿದಳು. ಅಂದಿನಿಂದ ಆಷಾಢಮಾಸದಲ್ಲಿ ತಾಪೀನದಿಯ ಸ್ನಾನವು ಪಾಪನಾಶಕವಾಯಿತು. ॥೫೩॥ ಚತುರ್ಮುಖ ಬ್ರಹ್ಮದೇವನು ಈ ಪ್ರಕಾರ ವರಪ್ರದಾನ ಮಾಡಿದ್ದರಿಂದ ಆಷಾಢಮಾಸ ಬಂದಾಗ ತಾಪೀ ನದಿಯಲ್ಲಿ ಮಾಡುವ ಸ್ನಾನವು ಸಕಲ ಇಷ್ಟಾರ್ಥಗಳನ್ನು ಕೊಡುವಂಥದಾಯಿತು. ಈ ತಾಪೀಸ್ನಾನವು ದೇವತೆಗಳಿಗೇ ದುರ್ಲಭವಾಗಿರುವಾಗ ॥೫೪॥ ಮನುಷ್ಯರಿಗೆ ಸುಲಭವಾಗಿ ದೊರಕೀತೇ? ಪೂರ್ವಸುಕೃತವಿಲ್ಲದೇ ಈ ನದಿಯ ಸ್ನಾನವು ಸುಲಭವಾಗಿ ದೊರಕಲಾರದು. ತಾಪೀ ಸ್ನಾನವನ್ನು ಮಾಡುವವರು ಆ ಪೂರ್ವದಲ್ಲಿ ಪಾಪಕರ್ಮಗಳನ್ನು ಮಾಡಿದ್ದರೂ ಅವುಗಳಿಂದ ಮುಕ್ತರಾಗಿ ಅಪ್ಸರಗಣಗಳಿಂದ ಸೇವಿತರಾಗಿ ದಿವ್ಯವಾದ ವಿಮಾನಾರೂಢರಾಗಿ ಸ್ವರ್ಗಲೋಕವನ್ನು ಹೊಂದುವರು. ॥೫೫॥೫೬॥ ಮುಂದೆ ಕ್ರಮವಾಗಿ ಮೋಕ್ಷವನ್ನೂ ಹೊಂದಿ ದೇವತೆಗಳಿಗೆ ಪೂಜ್ಯರಾಗುವರು. ಈ ಪ್ರಕಾರವಾಗಿ ಸ್ವರ್ಗವನ್ನೂ, ಸ್ವರ್ಗದಲ್ಲಿ ವಿವಿಧ ಭೋಗಗಳನ್ನೂ ಕೊಟ್ಟು, ಮುಕ್ತಿಯನ್ನು ಬಯಸುವವರಿಗೆ ಮುಕ್ತಿಯನ್ನೂ ಕೊಡಲು ಸಮರ್ಥವಾದ ॥೫೭॥ ಆಷಾಢಸ್ನಾನಕ್ಕಿಂತ ಅಧಿಕವಾದ ಮತ್ತು ಪಾಪನಾಶಕವಾದ ಬೇರೊಂದು ಔಷಧಿಯು ಬೇರೆಲ್ಲಿಯೂ ಕಾಣಸಿಗಲಾರದು. ಆಷಾಢಮಾಸದಲ್ಲಿ ಪ್ರಾತಃಕಾಲ ತಾಪೀ ಮೊದಲಾದ ನದೀತೀರ್ಥಗಳಲ್ಲಿ ಯಾವನು ಸ್ನಾನ ಮಾಡುವನೋ ಅವನ ಪಿತೃಗಳು ಸಂತುಷ್ಟರಾಗಿ ನರಕದಲ್ಲಿದ್ದರೆ ಅಲ್ಲಿಂದ ಬಿಡುಗಡೆ ಹೊಂದಿ

ಪಿತರಸ್ತಸ್ಯ ಸಂತುಷ್ಟಾ ಆಷಾಢೇ ಸ್ನಾತಿ ಯೋ ನರಃ ।
ಮಾಘಸ್ನಾನಾದ್ದಶಗುಣಂ ಆಷಾಢಸ್ನಾನಜಂ ಫಲಮ್ ||೫೯||

ದಂಭೇನಾಪಿ ಕೃತಂ ಯೈಸ್ತು ತೇಽಪಿ ಸ್ವರ್ಗಮಿತೋ ಗತಾಃ ।
ಧರ್ಮಾಕುಲಿತದೇಹೋಽಪಿ ಯಃ ಸ್ನಾತಿ ತಪತೀಜಲೇ ||೬೦||

ಆಷಾಢೇ ಪುರುಷಸ್ತಸ್ಯ ಮಾಘಸ್ನಾನಫಲಂ ಲಭೇತ್ ।
ಅಸ್ತಿ ಕಶ್ಚಿದ್ವಣಿಕ್ಪೂರ್ವಂ ಸರ್ವಧರ್ಮಬಹಿಷ್ಕೃತಃ ||೬೧||

ಜನಧರ್ಮಪರೋ ನಿತ್ಯಂ ವೇದವಾದಪರಾಂಗ್ಮುಖಃ ।
ಪಿತೃಪಿತಾಮಹಾದ್ಯಾಸ್ತು ತಸ್ಯ ಮೂಕತ್ವಮಾಗತಾಃ ||೬೨||

ಪಾಖಂಡಾನ್ನಿಹಿತಾಚಾರಾನ್ಮಹತ್ಕಷ್ಟಮುಪಾಗತಾಃ ।
ಕದಾಚಿದಥ ವಾಣಿಜ್ಯೇ ನಿರ್ಗತೇ ಲಾಭಕಾರಣಾತ್ ||೬೩||

ವಿಕ್ರೇಯವಸ್ತು ನೀತಂ ಚ ಸ್ವಾರ್ಥೇನ ಮಹತಾ ಯುತಃ ।
ಸ ಸ್ವಾರ್ಥಸಂಯುತಸ್ತಾಪೀಂ ಶುಚೌ ಪ್ರಾಪ್ತೋ ಮಹಾಜಲಮ್ ||೬೪||

ತಸ್ಮಾದ್ಭಯೇನೋತ್ತರತೋ ವಿಪರ್ಯೇತಿ ಸ್ಮ ತತ್ತದಾ ।
ವಸ್ತು ತಾಪಿಜಲೇ ಮಗ್ನಂ ವಣಿಗ್ಗ್ಲೋಽಭವತ್ತದಾ ||೬೫||

ಸ್ವರ್ಗಲೋಕಕ್ಕೆ ಹೋಗುವರು. ಸ್ವರ್ಗದಲ್ಲಿದ್ದರೆ ಆ ಪಿತೃಗಳು ಮೋಕ್ಷವನ್ನು ಹೊಂದುವರು. ಆಷಾಢಸ್ನಾನದಿಂದ ಮಾಘಸ್ನಾನಕ್ಕಿಂತಲೂ ಹತ್ತು ಪಟ್ಟು ಅಧಿಕವಾದ ಪುಣ್ಯಫಲವು ಪ್ರಾಪ್ತವಾಗುವದು. ||೫೮||೫೯|| ದಂಭದಿಂದ ಸ್ನಾನಮಾಡಿದವರೂ ಕೂಡ ಮರಣಾನಂತರ ಸ್ವರ್ಗವನ್ನೇ ಪಡೆಯುವರು. ಧರ್ಮಭ್ರಷ್ಟನಾದ ಯಾವ ಪುರುಷನು ಆಷಾಢದಲ್ಲಿ ತಾಪೀ ಸ್ನಾನವನ್ನು ಮಾಡುವನೋ ||೬೦|| ಅವನು ಮಾಘಸ್ನಾನದ ಫಲವನ್ನೇ ಪಡೆಯುವನು. ಹಿಂದಕ್ಕೆ ಸರ್ವಧರ್ಮಭ್ರಷ್ಟನಾದ ಒಬ್ಬ ವ್ಯಾಪಾರಿ ಇದ್ದನು. ||೬೧|| ನಿತ್ಯದಲ್ಲೂ ಜನಧರ್ಮಪರನಾಗಿದ್ದ ಅವನು ವೇದವಾದಗಳಿಂದ ವಿಮುಖನಾಗಿದ್ದನು. ಇದರಿಂದ ಮೃತರಾಗಿದ್ದ ಅವನ ಪಿತೃಗಳು ಮತ್ತು ಪಿತಾಮಹರೆಲ್ಲರೂ ಮೂಕರಾದರು. ||೬೨|| ಈತನು ಪಾಖಂಡಿಗಳಿಗೆ ಮಾಡುವ ವಿಹಿತವಾದ ಆಚಾರಗಳಿಂದ ಅವರಿಗೆಲ್ಲ ಮಹಾಕಷ್ಟವು ಪ್ರಾಪ್ತವಾಯಿತು. ಒಮ್ಮೆ ಆ ವ್ಯಾಪಾರಿಯು ಅಧಿಕವಾದ ದ್ರವ್ಯಾರ್ಜನೆಗೆಂದು ತನ್ನೊಂದಿಗೆ ||೬೩|| ಅನೇಕ ವಸ್ತುಗಳನ್ನು ಮಾರಾಟಕ್ಕೆ ತೆಗೆದುಕೊಂಡವನಾಗಿ ವ್ಯಾಪಾರಕ್ಕೆ ಊರಿನಿಂದ ಹೊರಹೊರಟನು. ಮಹಾಸ್ವಾರ್ಥಿಯಾದ ಅವನು ಸಂಚರಿಸುತ್ತ ಆಷಾಢಮಾಸಕ್ಕೆ ಸರಿಯಾಗಿ ತಾಪೀನದಿ ಇರುವಲ್ಲಿ ಬಂದು ಸೇರಿದನು. ||೬೪|| ನದಿಯನ್ನು

ಉನ್ಮಜ್ಯ ಚ ತತಃ ಶೀಘ್ರಂ ಉಡುಪೇ ಚಾವಲಂಬಿತಃ ।
ತಟತಾಪರಯಾಚ್ಚೈವ ನಿರ್ಗತಶ್ಚ ವಣಿಗ್ಬಲಾತ್ ॥೬೬॥

ತಸ್ಯ ದೇಹಾತ್ ಚ್ಯುತಂ ವಾರಿ ಪೀತ್ವಾ ಮೂಕಾಸ್ತು ಪೂರ್ವಜಾಃ ।
ತಾಪೀಜಲಪ್ರಭಾವೇನ ಮೂಕತ್ವಂ ವಿಜಹುಃ ಕ್ಷಣಾತ್ ॥೬೭॥

ದೃಷ್ಟ್ವಾರೋ ವಣಿಜಂ ತಂ ತು ಸ್ತುವಂತಶ್ಚ ಪುನಃ ಪುನಃ ।
ವತ್ಸ ಧನ್ಯಾ ವಯಂ ಯೇಷಾಂ ತ್ವಂ ಸತ್ಪುತ್ರೋಽಭವತ್ಕಿಲ ॥೬೮॥

ಯೇನ ಕಷ್ಟಾನ್ಮೂಕಭಾವಂ ತ್ಯಜಾಮೋ ಹೇಲಯಾ ವಯಮ್ ।
ಇತಿ ತೇಷಾಂ ವಚಃ ಶ್ರುತ್ವಾ ದೃಷ್ಟ್ವಾಕ್ಷೈರ್ವಣಿಜಾಕೃತೀನ್ ॥೬೯॥

ಪಪ್ರಚ್ಛ ವಿಷಯಾವಿಷ್ಟೋ ಭೀತಸ್ತದ್ದರ್ಶನಾದ್ವಣಿಕ್ ।
ಕೇ ಯೂಯಃ ಕಥಮತ್ರಸ್ಥಾ ಮೂಕತ್ವಾನ್ಮೋಚಿತಾಃ ಕಥಮ್ ॥೭೦॥

ಆಖ್ಯಾತವ್ಯಂ ಚ ಮೇ ಸರ್ವಂ ವಿಸ್ಮಯೋಽಯಂ ಮಹಾನ್ ಹೃದಿ ।
ಏವಂ ತೇ ವಚನಂ ಶ್ರುತ್ವಾ ವಯಂ ತು ತವ ಪೂರ್ವಜಾಃ ॥೭೧॥

ದಾಟುತ್ತಿರುವಾಗ (ಸೇತುವೆ ಮೇಲಿನಿಂದ) ಭಯದಿಂದ ಕಾಲು ಜಾರಿ ಅವನು ನದಿಯಲ್ಲಿ ಬಿದ್ದು ಬಿಟ್ಟನು. ಜೊತೆಗೆ ತಂದ ಸಾಮಾನುಗಳೆಲ್ಲ ನದಿಯಲ್ಲಿ ಮುಳುಗಿ ಹೋದವು. ವ್ಯಾಪಾರಿಯೂ ನದಿಯಲ್ಲಿ ಮುಳುಗಿ ಮುಳುಗಿ ಏಳುತ್ತಿರುವಾಗ ॥೬೫॥ ಅಲ್ಲಿಯೇ ಸಾಗುತ್ತಲಿದ್ದ ಒಂದು ಡೋಣಿಯನ್ನು ಆಶ್ರಯಿಸಿ ತಾಪೀ ನದಿಯಿಂದ, ಹೇಗೋ ಪಾರಾಗಿ ತೀರಕ್ಕೆ ಬಂದು ಸೇರಿದನು. ॥೬೬॥ ಆಗ ಅವನ ದೇಹದಿಂದ ಬೀಳುತ್ತಿರುವ ತಾಪೀ ನದಿಯ ನೀರನ್ನು ಕುಡಿದು ಆ ವ್ಯಾಪಾರಿಯ ಮೂಕರಾಗಿದ್ದ ಪಿತೃಗಳೆಲ್ಲರೂ ಆ ನೀರಿನ ಪ್ರಭಾವದಿಂದ ತಮ್ಮ ಮೂಕತ್ವವನ್ನು ಆ ಕ್ಷಣದಲ್ಲೇ ಕಳೆದುಕೊಂಡರು. ॥೬೭॥ ಸಂತುಷ್ಟರಾದ ಪಿತೃಗಳೆಲ್ಲ ವ್ಯಾಪಾರಿಯನ್ನು ಕಂಡು ಅವನನ್ನು ಪುನಃ ಪುನಃ ಸ್ತುತಿಸುತ್ತ 'ಹೇ ವತ್ಸಾ! ನಿನ್ನಂಥ ಸತ್ಪುತ್ರನನ್ನು ಪಡೆದ ನಾವೆಲ್ಲ ಧನ್ಯರು. ॥೬೮॥ ಬಹು ಕಷ್ಟದಿಂದ ಇದುವರೆಗೆ ಮೂಕರಾಗಿದ್ದ ನಾವು ಈಗ ಮೂಕತ್ವದಿಂದ ಮುಕ್ತರಾಗಿದ್ದೇವೆ' ಎಂದು ಹೇಳತೊಡಗಿದರು. ಪಿತೃಗಳ ಈ ಮಾತುಗಳನ್ನು ಕೇಳಿದ ಅವನು ಆಶ್ಚರ್ಯದಿಂದ ಅವರನ್ನು ನೋಡುತ್ತ ॥೬೯॥ ಅವರೆಲ್ಲರ ದರ್ಶನದಿಂದ ಭೀತನಾಗಿ 'ಭೋ, ತಾವೆಲ್ಲರೂ ಯಾರು? ಇಲ್ಲಿ ಏಕೆ ಇರುವಿರಿ? ಮೂಕತ್ವದಿಂದ ಹೇಗೆ ಮುಕ್ತರಾದಿರಿ? ॥೭೦॥ ಇದೆಲ್ಲವನ್ನು ನನಗೆ ತಿಳಿಸುವವರಾಗಿರಿ. ಇದೆಲ್ಲವನ್ನು ಕೇಳಿ, ನೋಡಿ ನನಗೆ ಮಹದಾಶ್ಚರ್ಯವಾಗಿದೆ' ಎಂದು ವಿಜ್ಞಾಪಿಸಿದನು. ಆಗ ಅವನ ಈ ಮಾತುಗಳನ್ನು ಕೇಳಿದ ಪಿತೃಗಳು 'ಹೇ ವತ್ಸಾ! ನಾವೆಲ್ಲ ನಿನ್ನ ಪೂರ್ವಜರು. ॥೭೧॥

ವೇದಮಾರ್ಗಪರಿತ್ಯಾಗಾನ್ಮೂಕಾ ಪ್ರೇತತ್ವಮಾಗತಾಃ ।
ಅಸ್ಯಾಮಕಾಮಾತ್ ಸ್ನಾತಸ್ಯ ಪೀತ್ವಾ ತೇ ದೇಹನಿಃಸೃತಮ್ ॥೭೨॥

ವಿತೃಷ್ಣಾ ಗತಪಾಪಾಶ್ಚ ತ್ವತ್ಪ್ರಸಾದಾಚ್ಚ ವಾಂಗ್ಮನಃ ।
ತಾಪೀಜಲಪ್ರಭಾವೋಽಯಂ ಶ್ರುತೋ ಜಾತಶ್ಚ ಸಾಂಪ್ರತಮ್ ॥೭೩॥

ಯತ್ತೀರೇ ಜಲಪಾನೇನ ಪ್ರಾಪ್ಯತೇ ಪರಮಾ ಗತಿಃ ।
ದುರ್ಗತೇರ್ಭೇಷಜಂ ನಾಸ್ತಿ ಶುಚೌ ಸ್ನಾನಮೃತೇ ಭುವಿ ॥೭೪॥

ವೇದಮಾರ್ಗಾತ್ಪರೋ ಮಾರ್ಗೋ ನಾಭೂಚ್ಚ ನ ಭವಿಷ್ಯತಿ ।
ಯನ್ನಾಶ್ರಿತ್ಯ ನರಾಶ್ಚೈವ ದುರ್ಗತಿಂ ಯಾಂತಿ ಕರ್ಹಿಚಿತ್ ॥೭೫॥

ಯೇಷಾಮಂತೇ ಶ್ರುತಿಪ್ರೋಕ್ತಾ ವೃಷೋತ್ಸರ್ಗಾದಿಕಕ್ರಿಯಾಃ ।
ಕ್ರಿಯಂತೇ ದಾರುಣಾಸ್ತೇಷಾಂ ದುರ್ಗತಿಶ್ಚ ಕಥಂ ಭವೇತ್ ॥೭೬॥

ತ ಏವ ಶೋಚ್ಯಾ ಜಗತಿ ನೈವೇಷಾಂ ವೈದಿಕಾಃ ಕ್ರಿಯಾಃ ।
ಯಸ್ಯೈತಾನಿ ನ ದತ್ತಾನಿ ಪ್ರೇತಶ್ರಾದ್ಧಾನಿ ಷೋಡಶ ॥೭೭॥

ನೀನು ವೇದಮಾರ್ಗವನ್ನು ಬಿಟ್ಟದ್ದರಿಂದ ನಾವು ಮೂಕರಾದೆವು ಮತ್ತು ಪ್ರೇತತ್ವವನ್ನು ಹೊಂದಿದೆವು. ಇಂದು ನೀನು ಯಾವ ಪೂರ್ವವಿಚಾರವಿಲ್ಲದೇ ಈ ತಾಪೀ ನದಿಯಲ್ಲಿ ಬಿದ್ದು ಸ್ನಾನ ಮಾಡುವಂತಾಗಿ ನಿನ್ನ ದೇಹದಿಂದ ಸೋರುತ್ತಿದ್ದ ನದೀಜಲವನ್ನು ಕುಡಿದ ನಾವು ॥೭೨॥ ನೀರಡಿಕೆಯನ್ನು ಕಳೆದುಕೊಂಡೆವು. ಪಾಪಗಳಿಂದ ಮುಕ್ತರಾದೆವು. ನಿನ್ನ ಪುಣ್ಯದಿಂದ ನಾವೆಲ್ಲ ಮೂಕತ್ವವನ್ನೂ ಕಳೆದುಕೊಂಡೆವು. ಇದುವರೆಗೆ ತಾಪೀಜಲದ ಮಹಿಮೆಯನ್ನು ಕೇಳುತ್ತಲಿದ್ದೆವು. ಇಂದು ಅದು ಪ್ರತ್ಯಕ್ಷಗೋಚರವಾಗಿದೆ. ॥೭೩॥ ಯಾವ ನದಿಯ ದಂಡೆಯ ಮೇಲೆ ಕುಳಿತು ಆ ನದೀಜಲವನ್ನು ಪಾನ ಮಾಡುವ ಮಾತ್ರದಿಂದ ಪರಮ ಗತಿಯು ಪ್ರಾಪ್ತವಾಗುವದೋ ಅಂಥ ನದಿಯಲ್ಲಿ ಆಷಾಢ ಸ್ನಾನ ಮಾಡುವದನ್ನು ಬಿಟ್ಟರೆ ದುರ್ಗತಿಯಿಂದ ಪಾರಾಗುವ ಬೇರಾವ ಉಪಾಯವೂ ಲೋಕದಲ್ಲಿ ಇರಲಾರದು. ॥೭೪॥ ವೇದಮಾರ್ಗಕ್ಕಿಂತ ಶ್ರೇಷ್ಠವಾದ ಬೇರಾವ ಮಾರ್ಗವೂ ಈ ಹಿಂದೆ ಇರಲಿಲ್ಲ, ಈಗ ಇರುವದಿಲ್ಲ ಮತ್ತು ಇನ್ನು ಮುಂದೆಯೂ ಇರಲಾರದು. ಇಂಥ ಶ್ರೇಷ್ಠವಾದ ಮಾರ್ಗವನ್ನು ಆಶ್ರಯಿಸದಿದ್ದ ನರರು ನಿಶ್ಚಯವಾಗಿ ದುರ್ಗತಿಯನ್ನು ಹೊಂದುವರು. ॥೭೫॥ ಮರಣಾನಂತರ ಯಾರಿಗೋಸ್ಕರ ವೇದೋಕ್ತವಾದ ಔರ್ಧ್ವದೈಹಿಕ ಕ್ರಿಯೆಗಳು ಮಾಡಲ್ಪಡುವವೋ ಅಂಥವರಿಗೆ ದುರ್ಗತಿಯಾಗುವದುಂಟೇ! ॥೭೬॥ ಯಾರಿಗೆ ವೈದಿಕ ಕ್ರಿಯೆಗಳು ಮಾಡಲ್ಪಡುವದಿಲ್ಲವೋ ಅವರು ದುಃಖಕ್ಕೆ ಈಡಾಗುವರು. ಯಾರನ್ನು ಉದ್ದೇಶಿಸಿ

ಪ್ರೇತತ್ವಂ ನಿಶ್ಚಲಂ ತಸ್ಯ ಶ್ರಾದ್ಧೈರನ್ಯೈಃ ಕೃತೈಸ್ತು ಕಿಮ್ ।
ಏಕಾದಶಾಹೇ ಸಂಪ್ರಾಪ್ತೇ ಯಸ್ಯ ಚೋತ್ಸೃಜ್ಯತೇ ವೃಷಃ ॥೭೮॥

ಪ್ರೇತತ್ವಂ ನೈವ ತಸ್ಯಾಸ್ತಿ ಪುಣ್ಯಾನ್ ಲೋಕಾನವಾಪ್ನುಯಾತ್ ।
ಯೇ ಚ ಶ್ರುತಿಕ್ರಿಯಾವಾಪ್ತಾ ಪಾಖಂಡಂ ಧರ್ಮಮಾಶ್ರಿತಾಃ ॥೭೯॥

ಪರಾಂಙ್ಮುಖಾ ವಿಷ್ಣುಭಕ್ತ್ಯಾ ತೇ ನರಾ ದೇವದಂಡಿನಃ ।
ವೇದಕ್ರಿಯಾಂ ವಿನಾ ನಾಸ್ತಿ ಲೋಕೇ ಹ್ಯಸ್ಮಿನ್ಪರತ್ರ ಚ ॥೮೦॥

ಸೌಖ್ಯಂ ತಸ್ಮಾತ್ಸದಾ ಸೇವ್ಯಂ ವೇದಕರ್ಮನರೋತ್ತಮೈಃ ।
ತಸ್ಮಾತ್ತಾತ ತ್ವಯಾ ತ್ಯಾಜ್ಯಾ ವೇದಧರ್ಮೋ ನ ಕರ್ಹಿಚಿತ್ ॥೮೧॥

ಯಮಾಶ್ರಿತ್ಯ ನರಶ್ರೇಷ್ಠ ಲಭತೇ ಪರಮಾಂ ಗತಿಮ್ ।
ಜೀವದ್ಭಿರ್ಬಹುಧಾ ವಾದಾ ಕ್ರಿಯಂತೇऽತ್ರ ಯದೃಚ್ಛಯಾ ॥೮೨॥

ಮೃತಾಸ್ತು ಯಮದೂತಾನಾಂ ಹಸ್ತಸ್ಥತ್ವೇನ ದುಷ್ಕರಾಃ ।
ನಿಮಗ್ನಂ ತತ್ರ ಯದ್ವಸ್ತು ತತ್ರ ಶೋಕಂ ಚ ಮಾ ಕೃಥಾಃ ॥೮೩॥

ವೇದೋಕ್ತವಾದ ಹದಿನಾರು ಪ್ರೇತಶ್ರಾದ್ಧಗಳು ಮಾಡಲ್ಪಡುವುದಿಲ್ಲವೋ ॥೭೭॥ ಅಂಥವರು ನಿಶ್ಚಿತವಾಗಿ ಪ್ರೇತತ್ವವನ್ನು ಹೊಂದುವರು. ಇಂಥ ಪ್ರೇತಶ್ರಾದ್ಧಗಳನ್ನು ಮಾಡದೇ, ಉಳಿದ ಶ್ರಾದ್ಧಗಳನ್ನು ಮಾಡುವದರಿಂದೇನು ಪ್ರಯೋಜನ? ಮರಣಾನಂತರ ಹನ್ನೊಂದನೆಯ ದಿನ ವೃಷೋತ್ಸರ್ಜನೆ ಆದರೆ ಮಾತ್ರ ॥೭೮॥ ಮೃತನಿಗೆ ಪ್ರೇತತ್ವವೆಂಬುದು ಬಾರದೇ ಅವನು ಪುಣ್ಯಲೋಕಗಳನ್ನು ಹೊಂದುವನು. ವೇದೋಕ್ತ ಧರ್ಮಗಳನ್ನು ಬಿಟ್ಟು ಯಾರು ವೇದಬಾಹಿರವಾದ ನಾಸ್ತಿಕ್ಯ ಧರ್ಮಗಳನ್ನು ಆಶ್ರಯಿಸುವರೋ ಹಾಗೂ ॥೭೯॥ ವಿಷ್ಣುಭಕ್ತಿಯಿಂದ ಪರಾಂಙ್ಮುಖರಾಗಿರುವರೋ ಅವರು ದೇವತೆಗಳಿಂದ ದಂಡಿಸಲ್ಪಡುತ್ತಾರೆ. ವೇದೋಕ್ತಕರ್ಮಗಳನ್ನು ಬಿಟ್ಟು ಇನ್ನಾವುದೂ ಈ ಲೋಕದಲ್ಲಾಗಲೀ ಪರಲೋಕದಲ್ಲಾಗಲೀ ॥೮೦॥ ಸೌಖ್ಯಪ್ರದ-ವಾಗುವದಿಲ್ಲವಾದ್ದರಿಂದ ಮನುಷ್ಯೋತ್ತಮರು ಸದಾ ವೇದಕರ್ಮಗಳನ್ನೇ ಆಚರಿಸಬೇಕು. ಆದ್ದರಿಂದ ಹೇ ವತ್ಸಾ ! ನೀನೆಂದಿಗೂ ವೇದಧರ್ಮಗಳನ್ನು ಬಿಡಕೂಡದು. ॥೮೧॥ ಈ ಧರ್ಮಗಳನ್ನು ಆಶ್ರಯಿಸುವುದರಿಂದ ಪರಮಲೋಕವು ಪ್ರಾಪ್ತವಾಗುವದು. ಲೋಕದಲ್ಲಿಯ ಜನರು ಮನಬಂದಂತೆ ಅನೇಕ ರೀತಿಯಿಂದ ಹೇಳುತ್ತಾರೆ ॥೮೨॥ ಮೃತರಾದವರು ಯಮದೂತರ ಅಧೀನರಾಗುವದರಿಂದ ಸ್ವತಂತ್ರವಾಗಿ ಏನನ್ನೂ ಮಾಡಲು ಸಮರ್ಥರಾಗುವದಿಲ್ಲ. ಅಪ್ಪಾ ! ನದಿಯಲ್ಲಿ ನಿನ್ನ ಯಾವ ವಸ್ತುಗಳು ಮುಳುಗಿ ಹೋಗಿರುವವೋ ಅವುಗಳನ್ನು ಕುರಿತು ಚಿಂತಿಸಬೇಡ ॥೮೩॥ ಏಕೆಂದರೆ

ಸಂಪದೋ ವಿಪದಶ್ಚಾಪಿ ದೈವಾಯತ್ತಾ ಯತಃ ಸ್ಮೃತಾಃ ।
ಯದಕಸ್ಮಾದ್ಭವೇಯುಸ್ತಾ ವಿಶಂತ್ಯಸ್ತಂ ವಿಚಿಂತಿತಾಃ ॥೮೪॥

ತಸ್ಮಾದ್ಧರ್ಮಶ್ಚ ಶೋಕಶ್ಚ ನ ಕಾರ್ಯಸ್ತತ್ಸಮುದ್ಭವಃ ।
ಅತ್ರ ಸ್ಥಿತ್ವಾ ಕುರು ಸ್ನಾನಂ ಪಂಚರಾತ್ರಮಥಾದೃತಃ ॥೮೫॥

ಆರಭ್ಯೈಕಾದಶೀಂ ಯಾವತ್ ಪೂರ್ಣಿಮಾಸೀಂ ಸಮಾಹಿತಃ ।
ತತ್ಪುಣ್ಯಂ ದೇಹಿ ನೋ ವತ್ಸ ಯೇನ ಮುಕ್ತಿಂ ಲಭಾಮಹೇ ॥೮೬॥

ಏವಂ ತವಾವಿಕಲ್ಮಾಷಂ ಭವಿತಾ ನಾತ್ರ ಸಂಶಯಃ ।
ಅಸ್ಮಾಕಂ ಪಶ್ಯತಾಮೇವ ಕಶ್ಚಿದ್ವಿಪ್ರಮಮೋಚಯತ್ ॥೮೭॥

ಆಷಾಢೇ ಪಂಚದಿವಸೈಃ ಸ್ನಾನಪುಣ್ಯೇನ ತತ್ಸುತಃ ।
ಪ್ರೇತಭಾವಾನ್ಮಹಾಘೋರಾನ್ಮುಚ್ಯಾಸ್ಯಾಸ್ತು (ಸ್ಯಾತ್ತು) ಮಹೋದರಾತ್ ॥೮೮॥

ತಾಪೀತಟಂ ತದಾರಭ್ಯ ಭಜಾಮೋ ದೂರತಃ ಸ್ಥಿತಮ್ ।
ಲಭಾಮಹೇ ನಾಪಸರ್ತುಂ ಅನ್ಯಾನಪಿ ಜಲಾಶಯಾನ್ ॥೮೯॥

ಸಂಪತ್ತುಗಳಾಗಲೀ, ವಿಪತ್ತುಗಳಾಗಲೀ ಎಲ್ಲವೂ ದೈವಾಧೀನವಾಗಿರುವವು ಅವು ಅಕಸ್ಮಾತ್ತಾಗಿ ಬರುವವು ಮತ್ತು ಎಷ್ಟೇ ಜೋಪಾನವಾಗಿ ಇಟ್ಟುಕೊಳ್ಳಬೇಕೆಂದರೂ ಅವು ಕಣ್ಣಿಗೆ ಕಾಣದಂತೆ ಹೊರಟು ಹೋಗುವವು. ॥೮೪॥ ಆದ್ದರಿಂದ ಸಂಪತ್ತು ಪ್ರಾಪ್ತವಾದಾಗ ಹರ್ಷವನ್ನೂ, ವಿಪತ್ತು ಪ್ರಾಪ್ತವಾದಾಗ ಶೋಕವನ್ನೂ ಅಥವಾ ಸಂಪತ್ತು ಹೋದಾಗ ಶೋಕವನ್ನೂ, ವಿಪತ್ತು ಕಳೆದಾಗ ಹರ್ಷವನ್ನೂ ಹೊಂದಕೂಡದು. ನೀನು ಇಲ್ಲಿಯೇ ಇದ್ದು ಐಯ್ದು ದಿನಗಳವರೆಗೆ ಪರಮಾದರದಿಂದ ಈ ನದಿಯಲ್ಲಿ ಸ್ನಾನ ಮಾಡುವವನಾಗು. ॥೮೫॥ ಹೇ ವತ್ಸಾ! ಏಕಾದಶಿಯಂದು ಪ್ರಾರಂಭಿಸಿ ಪೂರ್ಣಿಮಾ ಮುಗಿಯುವವರೆಗೆ ಐಯ್ದು ದಿನ ಪ್ರಾತಃಸ್ನಾನ ಮಾಡಿ, ಅದರಿಂದ ಬರುವ ಪುಣ್ಯವನ್ನು ನಮಗೆ ಸಮರ್ಪಿಸಿದೆಯಾದರೆ ಅದರಿಂದ ನಮಗೆ ಮುಕ್ತಿಯಾಗುವದು. ॥೮೬॥ ನೀನಾದರೂ ಕೂಡ ಸಕಲ ಪಾಪಗಳಿಂದ ನಿಶ್ಚಿತವಾಗಿ ಮುಕ್ತನಾಗುವಿ. ಹಿಂದಕ್ಕೆ ನಾವು ಕಣ್ಣಾರೆ ಕಂಡ ಒಂದು ವಿಚಿತ್ರವಾದ ಘಟನೆಯನ್ನು ತಿಳಿಸುವೆವು ಕೇಳು. ಒಮ್ಮೆ ನಾವು ನೋಡು ನೋಡುತ್ತಿರುವಂತೆಯೇ ಒಬ್ಬ ಬ್ರಾಹ್ಮಣಕುಮಾರನು ಆಷಾಢದಲ್ಲಿ ಈ ಐಯ್ದು ದಿನ ತಾಪೀ ನದಿಯಲ್ಲಿ ಸ್ನಾನ ಮಾಡಿ ಬಂದ ಪುಣ್ಯದಿಂದ ತನ್ನ ತಂದೆಯನ್ನು ಮಹಾಘೋರವಾದ ಪ್ರೇತದೇಹದಿಂದ ಮುಕ್ತಗೊಳಿಸಿದನು. ॥೮೭॥೮೮॥ ಇದನ್ನು ನೋಡಿದಾಗಿನಿಂದ ನಾವೆಲ್ಲರೂ ಅತಿ ದೂರದಲ್ಲಿದ್ದ ಈ ತಾಪೀನದಿಯ ದಡವನ್ನೇ ಆಶ್ರಯಿಸಿದ್ದೇವೆ. ಅಂದಿನಿಂದ ಬೇರೇ ಜಲಾಶಯಗಳಿಗೆ ಹೋಗಲು ಸಾಧ್ಯವಾಗುತ್ತಿಲ್ಲ.

ತಸ್ಮಾತ್ ತೃಷಾರ್ತಾಃ ಸರ್ವತ್ರ ಭ್ರಮಾಮಃ ಕೃತಪಾವಕಾಃ ।
ಇತಿ ತದ್ವಚನಂ ಶ್ರುತ್ವಾ ವಣಿಕ್ಪುನರಭಾಷತ ॥೯೦॥

ಕೋಽಯಂ ಭವದ್ಭಿಃ ಕಥಿತೋ ಬ್ರಾಹ್ಮಣಃ ಪ್ರೇತತಾಂ ಗತಃ ।
ಕೇನ ಕರ್ಮವಿಪಾಕೇನ ಸ ಘೋರಾಂ ಪ್ರೇತತಾಮಿಯಾತ್ ॥೯೧॥

ಕಥಂ ತತ್ರ ಸುತೇನಾತ್ರ ಮೋಚಿತಸ್ತನ್ನಿಗದ್ಯತಾಮ್ ।
ಏತಾಂ ಚಿಂತಾಪರಕಥಾಂ ಶ್ರೋತುಂ ಕೌತೂಹಲಂ ಮಮ ॥೯೨॥

ತಸ್ಯ ತದ್ವಚನಂ ಶ್ರುತ್ವಾ ಪ್ರೋಚುಸ್ತೇ ಪೂರ್ವಜಾಸ್ತತಃ ।
ಅಸ್ಮಾಕಂ ಕ್ಷಮತಾಂ ವತ್ಸ ಕ್ಷುತ್‌ತೃಷಾಪೀಡಿತಾತ್ಮನಾಮ್ ॥೯೩॥

ಮೂಕಾನಾಂ ಸೋಽಪಿ ವಿಪ್ರಶ್ಚ ಮಿಲಿತಶ್ಚ ಸುದುಃಖಿತಃ ।
ಸೂಚೀಮುಖೋ ಮಹಾನದ್ಭಃ ಕ್ಷುತ್‌ತೃಷಾವಿಹ್ವಲೈರ್ಭೃಶಮ್ ॥೯೪॥

ಅಸ್ಮಾಭಿಃ ಸಂಜ್ಞಯಾ ಪೃಷ್ಟೋ ಕಸ್ಯೇದಂ ಕರ್ಮಣಃ ಫಲಮ್ ।

ವಿಪ್ರ ಉವಾಚ-
ವಿಪ್ರೋ ಗುರ್ಜರ ದೇಶೀಯೋ ನಾಮ್ನಾ ವೇದಶ್ರವಾ ಅಹಮ್ ॥೯೫॥

॥೮೯॥ ಹೀಗಾಗಿ ಬಹುನೀರಡಿಸಿದವರಾಗಿ ನಾವೆಲ್ಲ ಇಲ್ಲಿಯೇ ಸಂಚರಿಸುತ್ತ ಕಾಲ ಕಳೆಯುತ್ತಲಿದ್ದೇವೆ. ಪಿತೃಗಳು ಇದುವರೆಗೆ ಹೇಳಿದ ಮಾತುಗಳನ್ನು ಕೇಳಿದ ವಣಿಕ್ಪುತ್ರನು ॥೯೦॥ "ನೀವು ಹೇಳಿದಂತೆ ಪ್ರೇತಜನ್ಮವನ್ನು ಹೊಂದಿದ ಆ ಬ್ರಾಹ್ಮಣನಾರು? ಯಾವ ಕರ್ಮ ಫಲವಾಗಿ ಅವನಿಗೆ ಆ ಘೋರವಾದ ಪ್ರೇತತ್ವವು ಬಂದಿತು? ॥೯೧॥ ಮತ್ತು ಮಗನು ತಂದೆಯನ್ನು ಪ್ರೇತಜನ್ಮದಿಂದ ಹೇಗೆ ಮುಕ್ತಗೊಳಿಸಿದನು? ಇದೆಲ್ಲವನ್ನು ನನಗೆ ತಿಳಿಸಿರಿ. ಈ ವಿಚಿತ್ರವಾದ ಘಟನೆಯನ್ನು ವಿಸ್ತಾರವಾಗಿ ತಿಳಿಯಬೇಕೆಂದು ಕುತೂಹಲವುಂಟಾಗಿದೆ" ಎಂದೆನಲು ॥೯೨॥ ಅವನ ಪಿತೃಗಳು ಹೇಳುತ್ತಾರೆ- ವತ್ಸಾ ಕೇಳು. ಹಿಂದಕ್ಕೆ ಹಸಿವೆ ನೀರಡಿಕೆಗಳಿಂದ ಬಹು ಬಳಲಿ ನಾವು ಮೂಕರಾಗಿ ಸಂಚರಿಸುತ್ತಿರುವಾಗ ॥೯೩॥ ಒಮ್ಮೆ ಅತಿ ದುಃಖಿತನಾದ ಸೂಚೀಮುಖನಾದ (ಸೂಜಿಯಂತೆ ಮುಖವುಳ್ಳ) ಆ ಬ್ರಾಹ್ಮಣನ ಭೇಟಿಯಾಯಿತು. ಹಸಿವೆ ನೀರಡಿಕೆಯಿಂದ ಪೀಡಿತರಾದ ನಾವು ॥೯೪॥ ಅವನನ್ನು ಕುರಿತು, ಯಾವ ಕರ್ಮವಿಪಾಕದಿಂದ ನಿನಗೆ ಇಂಥ ಅವಸ್ಥೆಯುಂಟಾಗಿದೆ ಎಂದು ಸನ್ನೆ ಮಾಡಿ ಪ್ರಶ್ನಿಸಿದೆವು. ಆಗ ಆ ಬ್ರಾಹ್ಮಣನು ಹೇಳಿದನು-ಭೋ, ನಾನು ಈ ಮೊದಲು ಗುರ್ಜರ ದೇಶದಲ್ಲಿ ವೇದಶ್ರವಾ ಎಂಬ ಹೆಸರಿನ ಬ್ರಾಹ್ಮಣನಾಗಿದ್ದೆನು. ॥೯೫॥ ಆಗ ನಾನು

ಮಿಥ್ಯಾವಾದೀ ಹ್ಯನಾಚಾರೀ ಅಸಂ ಲೋಭಪರಾಯಣಃ ।
ಮೂರ್ಖಾಃ ಕಿಂಚಿನ್ಮಂತ್ರವಾಗ್ಭಿಃ ಲೋಕಾನಾಮಗ್ರತಃ ಪುನಃ ॥೯೬॥

ಚತುರ್ವೇದೋಽಹಮಿತ್ಯೇವಮಾಹಿತಾಗ್ನಿರಥಾಽಬ್ರುವನ್ ।
ಲೋಭಾನ್ಮೋಹಾನ್ಮಯಾಽಕಾರಿ ನಿಷಿದ್ಧಾನ್ನಪ್ರತಿಗ್ರಹಃ ॥೯೭॥

ಅಭೋಜ್ಯಾನಾಂ ಗೃಹೇ ಭುಕ್ತಂ ದ್ರವ್ಯಲೋಭಾದನೇಕಧಾ ।
ಗೃಹೇಷು ರಜಕಾದೀನಾಂ ಪಿತೃದೇವಕ್ರಿಯಾಃ ಕೃತಾಃ ॥೯೮॥

ತದನ್ನೈಶ್ಚ ಕೃತಾ ವೃತ್ತಿಃ ತದಂತ್ಯೇಷ್ಟಿಷು ಯಾಜನಮ್ ।
ತಥಾ ಪ್ರತಿಗ್ರಹಾ ಘೋರಾ ಮಾಹಿಷ್ಯಾದ್ಯಾಃ ಕೃತಾ ಮಯಾ ॥೯೯॥

ತಥಾ ಶೂನ್ಯಾನಿ ವರ್ಷಾಣಿ ಗತಾನಿ ಪ್ರತಿಗೃಹ್ಣತಃ ।
ನ ದತ್ತಂ ನ ಹುತಂ ಕಿಂಚಿತ್ಪರ್ವಕಾಲೇ ಉಪಸ್ಥಿತೇ ॥೧೦೦॥

ನ ಪೂಜಿತಾ ಮಯಾ ವಿಪ್ರಾಃ ಕಾಲೇ ಶ್ರಾದ್ಧಂ ಕೃತಂ ನ ಚ ।
ಪ್ರಾಯಶ್ಚಿತ್ತಂ ನ ವ್ಯಧಾಯಿ ಕದಾಪಿ ಚ ಮಯಾ ತದಾ ॥೧೦೧॥

ಮಿಥ್ಯಾವಾದಿಯೂ, ದುರಾಚಾರಿಯೂ ಸದಾ ಆಶೆಬುರುಕನೂ ಆಗಿದ್ದೆನು. ಇಂಥ ನನ್ನನ್ನು ಕೆಲ ಮೂರ್ಖ ಜನರು ಎಲ್ಲರೆದುರಿಗೆ ॥೯೬॥ ಇವನು ಚತುರ್ವೇದಪಾರಂಗತನು, ಅಗ್ನಿಹೋತ್ರ ಇಟ್ಟವನು' ಎಂದು ಮುಂತಾಗಿ ಹೇಳಿ ಸ್ತೋತ್ರ ಮಾಡಿದರು. ಲೋಭದಿಂದಲೂ ಹಾಗೂ ಮೋಹದಿಂದಲೂ ನಾನು ನಿಷಿದ್ಧಾನ್ನವನ್ನು ದಾನವಾಗಿ ಸ್ವೀಕರಿಸಿದೆನು ॥೯೭॥ ಅಭೋಜ್ಯವಾದ ಪದಾರ್ಥಗಳನ್ನು ಮನೆಯಲ್ಲಿ ಸೇವಿಸಿದನು. ದ್ರವ್ಯದಾಶೆಯಿಂದ ಅನೇಕ ಸಲ ಅಗಸರ ಮನೆಗಳಿಗೂ ಹೋಗಿ ಅಲ್ಲಿ ಪಿತೃಕಾರ್ಯ ಹಾಗೂ ದೇವಕಾರ್ಯಗಳನ್ನು ಮಾಡಿಸಿದೆನು. ॥೯೮॥ ರಜಕರು ಕೊಟ್ಟ ಪದಾರ್ಥಗಳಿಂದ ಜೀವನ ಸಾಗಿಸಿದೆನು. ರಜಕರ ಮನೆಯಲ್ಲಿ ನಡೆದ ಅಂತ್ಯೇಷ್ಟಿಗಳಲ್ಲಿ ಹೋಮಗಳನ್ನು ಮಾಡಿಸಿದೆನು. ವ್ಯಭಿಚಾರಿಣಿ ಸ್ತ್ರೀಯರು ಕೊಟ್ಟ ಘೋರವಾದ ದಾನಗಳನ್ನೂ ಹಾಗೂ ಘೋರವಾದ ಎಮ್ಮೆ, ಕೋಣ ಮುಂತಾದವುಗಳನ್ನೂ ದಾನವಾಗಿ ಸ್ವೀಕರಿಸಿದೆನು. ॥೯೯॥ ಈ ರೀತಿ ದಾನ ಸ್ವೀಕರಿಸುವಲ್ಲೇ ಆಸಕ್ತನಾದ ನನ್ನ ಆಯುಷ್ಯವು ಕಳೆಯತೊಡಗಿತು. ಪರ್ವಕಾಲ ಬಂದಾಗ ಒಮ್ಮೆಯೂ ನಾನು ಸತ್ಪಾತ್ರರಲ್ಲಿ ದಾನ ಮಾಡಲಿಲ್ಲ ಹಾಗೂ ಒಂದಾದರೂ ಹೋಮವನ್ನು ಮಾಡಲಿಲ್ಲ. ॥೧೦೦॥ ಬ್ರಾಹ್ಮಣರನ್ನು ಎಂದಿಗೂ ಪೂಜಿಸಲಿಲ್ಲ. ಕಾಲಕ್ಕೆ ಸರಿಯಾಗಿ ಪಿತೃಶ್ರಾದ್ಧವನ್ನು ಮಾಡಲಿಲ್ಲ. ಇಷ್ಟಾದರೂ ನಾನೆಂದಿಗೂ ಪ್ರಾಯಶ್ಚಿತ್ತ ಕರ್ಮವನ್ನು ಮಾಡಿಕೊಳ್ಳಲಿಲ್ಲ.

ನೋಪಾರ್ಜಿತಂ ಧನಂ ಶುದ್ಧಮರ್ಜಿತಂ ಕುಪ್ರತಿಗ್ರಹೈಃ ।
ನಾತ್ಮಾನಂ ಶೋಧಯಾಮಾಸ ಪತಿತಂ ಪಾಪಕರ್ದಮಾತ್ ॥೧೦೨॥

ಕಾಲಾಂತರೇ ನಾರ್ಪಿತಂ ತದಯುಕ್ತೇನ ಮಯಾ ಪುನಃ ।
ದ್ವಿಗುಣೇ ತ್ರಿಗುಣೇ ಜಾತೇ ತಸ್ಮಿನ್ ವಿತ್ತೇಽತಿಹರ್ಷಿತಃ ॥೧೦೩॥

ನಾಜ್ಞಾಸಿಷಂ ಕಸ್ಯ ವಿತ್ತಂ ಪ್ರಾತರ್ಮೃತ್ಯುರ್ಭವಿಷ್ಯತಿ ।
ಯಾದೃಶಃ ಪುರುಷೋ ಲೋಕೇ ಮತಿರ್ಭವತಿ ತಾದೃಶೀ ॥೧೦೪॥

ಪೂರ್ವಾಪುಣ್ಯೇನ ಪಾಪಾನಾಂ ಮತಿಃ ಪಾಪೇ ಪ್ರವರ್ತತೇ ।
ಕಸ್ಯಾರ್ಥೇ ಕ್ರಿಯತೇ ಪಾಪಂ ನೈವ ಬುದ್ಧ್ಯಾ ನಿವರ್ತತೇ ॥೧೦೫॥

ಲುಬ್ಧಾನಾಮತಿಲೋಭೇಷು ಕಾಮಿಕಾಮ್ಯೇಷು ವಸ್ತುಷು ।
ನ ಹಿ ನಿವರ್ತತೇ ಬುದ್ಧಿರ್ನೈವ ಯಾವತ್ಸ ಜೀವತಿ ॥೧೦೬॥

ಪರಲೋಕಂ ತತಃ ಪ್ರಾಪ್ಯ ಭುಂಜಾನಃ ಪಾಪಕರ್ಮಣಾಮ್ ।
ಫಲಾನ್ಯನುತಪತ್ಯೇವ ನೇಹ ಜಾನಾತಿ ಜಾಯತೇ ॥೧೦೭॥

॥೧೦೧॥ ದುಷ್ಟದಾನಗಳಿಂದ ಸಂಗ್ರಹವಾದ ಧನವು ಶುದ್ಧವಾಗಿರುವದಿಲ್ಲವಷ್ಟೇ! ಪಾಪಸಮೂಹದಿಂದ ಪತಿತನಾದ ನನ್ನನ್ನು ಪ್ರಾಯಶ್ಚಿತ್ತದಿಂದ ಶುದ್ಧಗೊಳಿಸಿಕೊಳ್ಳಲಿಲ್ಲ. ॥೧೦೨॥ ವಿವೇಕ ಶೂನ್ಯನಾದ ನಾನು ಅರ್ಜಿತವಾದ ಧನವನ್ನು ಸಮಯೋಚಿತವಾಗಿ ದಾನವಾಗಿ ಕೊಡುವ ವಿಚಾರವನ್ನೂ ಮಾಡಲಿಲ್ಲ. ಸಂಗ್ರಹಿಸಲ್ಪಟ್ಟ ದ್ರವ್ಯವು ಎರಡು ಪಟ್ಟು, ಮೂರು ಪಟ್ಟು ಆಗುತ್ತ ವೃದ್ಧಿಯಾಗುತ್ತ ಹೋದಂತೆ ಅದರಲ್ಲೇ ಆಸಕ್ತನಾಗಿ ಅತಿ ಹರ್ಷಿತನಾದೆನು. ॥೧೦೩॥ ಅದು ಯಾರಿಂದ ಕೊಡಲ್ಪಟ್ಟ ದ್ರವ್ಯವೆಂಬುದನ್ನು ತಿಳಿಯದಾದೆನು. ಅಲ್ಪಕಾಲದಲ್ಲಿಯೇ ಮೃತ್ಯುವು ಸಮೀಪಿಸುತ್ತದೆ. ಲೋಕದಲ್ಲಿ ಪುರುಷನ ಸ್ವಭಾವಾನುಸಾರ ಅವನ ಬುದ್ಧಿಯ ಪ್ರವೃತ್ತಿಯಾಗುತ್ತದೆ. ॥೧೦೪॥ ಪಾಪಿ ಜನರಿಗೆ ಅವರು ಮಾಡಿದ ಪಾಪಕರ್ಮಾನುಸಾರವಾಗಿ ಪಾಪಕರ್ಮದಲ್ಲಿಯೇ ಪ್ರವೃತ್ತಿಯುಂಟಾಗುತ್ತದೆ. ಯಾವ ನಿಮಿತ್ತವಾಗಿ ಪಾಪವು ಘಟಿಸುತ್ತಿದೆಯೋ ಅದರಿಂದ ಬಿಡುಗಡೆ ಹೊಂದುವ ವಿಚಾರವೇ ಬರುವದಿಲ್ಲ. ॥೧೦೫॥ ಲುಬ್ಧರಿಗೆ ಅತಿಲೋಭಕರ್ಮಗಳಲ್ಲಿಯೂ ಕಾಮಿಗಳಿಗೆ ಕಾಮ್ಯವಸ್ತುಗಳಲ್ಲಿಯೂ ಆಸಕ್ತಿಯುಂಟಾಗಿ ಜೀವಿಸಿರುವವರೆಗೆ ಅಲ್ಲಿಂದ ದೂರವಾಗುವದು ಸಾಧ್ಯವೇ ಆಗುವದಿಲ್ಲ. ॥೧೦೬॥ ಇವರು ಮರಣಾನಂತರ ಪರಲೋಕವನ್ನು ಹೊಂದಿ, ಮಾಡಿದ ಪಾಪಕರ್ಮಗಳ ಫಲವನ್ನು ಅಲ್ಲಿ ಭೋಗಿಸುತ್ತ ದುಃಖಪಡುತ್ತಾರೆ. ಇಲ್ಲಿರುವಾಗ ಇದೊಂದನ್ನೂ ತಿಳಿಯದೇ ಪಾಪಕರ್ಮಗಳನ್ನು ಮಾಡುತ್ತಲೇ ಹೋಗುತ್ತಾರೆ. ॥೧೦೭॥ ಈ

ಇತ್ಥಂ ಜ್ಞಾನಂ ಯದಿ ಭವೇತ್ ಪ್ರಾಯಶ್ಚಿತ್ತೇ ಕೃತೇ ಪುನಃ ।
ಬಾಧತೇ ನೈವ ತತ್ಪಾಪಮೇವಮಾಹುಃ ಮನೀಷಿಣಃ ॥೧೦೮॥

ಬ್ರಹ್ಮಹತ್ಯಾದಿಪಾಪಾನಾಮತೋ ನಿಷ್ಕೃತಯಃ ಕೃತಾಃ ।
ಆತ್ಮನೀತ್ಯೈಸ್ತತಃ ಪುಂಭಿಃ ಜ್ಞಾತಾಜ್ಞಾತಸ್ಯ ವೈ ಮನಃ ॥೧೦೯॥

ಪ್ರಾಯಶ್ಚಿತ್ತಂ ಪ್ರಕರ್ತವ್ಯಂ ಪರತ್ರಾತ್ಮವಿಶುದ್ಧಯೇ ।
ನ ಕೃತಂ ಯನ್ಮಯಾ ಕಿಂಚಿನ್ಮೋಹಾವಿಷ್ಟೇನ ಚೇತಸಾ ॥೧೧೦॥

ಪಾಪೇನೋಪಾರ್ಜಿತಂ ವಿತ್ತಂ ಘಟಚ್ಛನ್ನಂ ಭವೇತ್ಪುನಃ ।
ತದರ್ಜನೇ ಯದ್ಭವತಿ ತತ್ಪಾಪಂ ಶಿರಸಿ ಸ್ಥಿತಮ್ ॥೧೧೧॥

ತತೋ ವಿಷಾದೋ ಯಜ್ಜಾತಃ ಸ ವಾಶಿಷ್ಯಾನ್ನ ಕೇವಲಮ್ ।
ತತೋ ಮೃತ್ಯುವಶಂ ಪ್ರಾಪ್ತೋ ಗೃಹೀತೋ ಯಮಕಿಂಕರೈಃ ॥೧೧೨॥

ಪರ್ಯಾಲೋಚ್ಯ ಯಮೇನಾಹಂ ಪ್ರಾಪಿತೋ ನರಕಾಂಬುಧೌ ।
ತತ್ರ ಮೇ ಪಾತ್ಯಮಾನಸ್ಯ ನಿರ್ದಯೈಃ ಯಮಕಿಂಕರೈಃ ॥೧೧೩॥

ಘಟಿಕಾಬ್ದಸಹಸ್ರಸ್ಯ ತುಲ್ಯಾ ಮೇ ಸಮಜಾಯತ ।
ಪಾತ್ಯಮಾನಸ್ಯ ಮೇ ಜಾತಾ ವರ್ಷಾಣಾಂ ಪಂಚವಿಂಶತಿಃ ॥೧೧೪॥

ವಿಷಯಗಳನ್ನು ಯಾವನು ತಿಳಿದಿರುವನೋ ಅವನು ತಾನು ಮಾಡಿದ ಪಾಪಕರ್ಮಗಳ ನಾಶಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಂಡರೆ ಅವನಿಗೆ ಪರತ್ರದಲ್ಲಿ ಯಾವ ಪಾಪವೂ ಬಾಧಿಸಲಾರದು ಎಂದು ಜ್ಞಾನಿಗಳು ಹೇಳುವರು. ॥೧೦೮॥ ಆದ್ದರಿಂದ ಬ್ರಹ್ಮಹತ್ಯಾದಿ ಪಾಪಗಳ ನಾಶಕ್ಕಾಗಿಯೂ ಪ್ರಾಯಶ್ಚಿತ್ತಗಳನ್ನು ಮಾಡಿಕೊಳ್ಳಬೇಕು. ಜ್ಞಾತಾಜ್ಞಾತ ಪಾಪಗಳ ನಾಶಕ್ಕಾಗಿಯೂ ಪ್ರಾಯಶ್ಚಿತ್ತವು ಕರ್ತವ್ಯವಾಗಿದೆ. ॥೧೦೯॥ ಈ ರೀತಿ ಆತ್ಮಶುದ್ಧಿಗಾಗಿ ಹೇಳಲ್ಪಟ್ಟ ಪ್ರಾಯಶ್ಚಿತ್ತವನ್ನು ಮೂಢನಾದ ನಾನು ಎಂದಿಗೂ ಮಾಡಿಕೊಳ್ಳಲಿಲ್ಲ. ॥೧೧೦॥ ಪಾಪಕರ್ಮಗಳಿಂದ ಸಂಪಾದಿಸಿದ ದ್ರವ್ಯವನ್ನು ಕೊಡದಲ್ಲಿ ತುಂಬಿ ನೆಲದೊಳಗೆ ಹೂಳಿಟ್ಟೆನು. ದ್ರವ್ಯಾರ್ಜನೆಯಲ್ಲಿ ಘಟಿಸಿದ ಪಾಪಗಳು ನನ್ನ ದೇಹದಲ್ಲಿ ತುಂಬಿ ತುಳುಕಿದವು. ॥೧೧೧॥ ಆಗ ಉಂಟಾದ ವಿಷಾದದಿಂದ ಏನು ಪ್ರಯೋಜನ? ಕೆಲದಿನಗಳಲ್ಲಿ ಮೃತ್ಯುವಶನಾದ ನನ್ನನ್ನು ಯಮಕಿಂಕರರು ಸೆಳೆದೊಯ್ದರು. ॥೧೧೨॥ ಯಮಲೋಕದಲ್ಲಿ ಯಮಧರ್ಮರಾಯನು ನನ್ನ ಪಾಪಕರ್ಮಗಳನ್ನು ಪರ್ಯಾಲೋಚಿಸಿ ನಿರ್ದಯರಾದ ತನ್ನ ದೂತರಿಂದ ನನ್ನನ್ನು ನರಕದಲ್ಲಿ ಒಗೆಸಿದನು. ॥೧೧೩॥ ನರಕದಲ್ಲಿದ್ದಾಗ ಒಂದು ಘಳಿಗೆ ಸಮಯವೆಂದರೆ ನನಗೆ ಒಂದು ಸಹಸ್ರ

ತತೋ ಜಿಗಮಿಷುರ್ದೃಷ್ಟ್ವಾ ಪ್ರಯಾಗಂ ತೀರ್ಥಮುತ್ತಮಮ್ ।
ಮಾಘಸ್ನಾನಂ ವಿಕುರ್ವಂತಂ ಮಹಾನದ್ಯಾಶ್ಚ ಸಂಗಮೇ ॥೧೧೫॥

ಮತ್ಪುತ್ರೋಽಪಿ ಯಯೌ ತೇನ ವೇಣೀಂ ಸಾರ್ಥೇನ ಸಂಗತಃ ।
ಮಾಘಸ್ನಾನಂ ತತ್ರ ಕೃತ್ವಾ ಪುಣ್ಯಂ ಮಹ್ಯಮಥಾದದಾತ್ ॥೧೧೬॥

ತಸ್ಯ ಪುಣ್ಯಪ್ರಭಾವೇನ ನರಕಾನ್ನಿರ್ಗತಃ ಪುನಃ ।
ಘೋರಂ ಪ್ರೇತತ್ವಮಾಪನ್ನೋ ಸೂಚ್ಯಾಸ್ಯಶ್ಚ ಮಹೋದರಃ ॥೧೧೭॥

ಜಲಾಶಯಃ ಸುಬಹುಶಃ ಸಂತಿ ಚಾಸ್ಯ ಪದೇ ಪದೇ ।
ಶುಚಿಃ ಶೀತೋದಕಾ ನದ್ಯಃ ಸರಾಂಸಿ ವಿವಿಧಾನಿ ಚ ॥೧೧೮॥

ತೃಷಾರ್ತಃ ಕ್ವಾಪಿ ನ ಲಭೇದೇಕಾಮಪ್ಯುದಕಾಂಜಲಿಮ್ ।
ವಿಪ್ರೋಚ್ಛಿಷ್ಟಾನಿ ಭೂತೇಭ್ಯೋ ಸಲಿಲಾನ್ನಾನಿ ಸರ್ವತಃ ॥೧೧೯॥

ಸಿಕ್ಥಮೇಕಂ ನ ಚಾಪ್ನೋತಿ ಕ್ಷುಧಾರ್ತಃ ಸರ್ವತೋಽಭವತ್ ।
ಕದಾಚಿದಪಿ ಕಿಂಚಿಚ್ಚ ಲಭೇನ್ನಂ ವಾ ಜಲಂ ಯದಿ ॥೧೨೦॥

ಸೂಚೀಮುಖಸ್ಯ ಹರತಃ ಪಿಬತೋ ನೋ ಮಹೋದರಮ್ ।
ಮಮ ಪೂರ್ಯೇತ ವರ್ಷಾಣಾಂ ಶತೇನಾಪಿ ಕಥಂಚನ ॥೧೨೧॥

ವರ್ಷ ಕಳೆದಂತೆ ಭಾಸವಾಗುತ್ತಿತ್ತು. ೨೫ ವರ್ಷಗಳ ವರೆಗೆ ನಾನು ನರಕದಲ್ಲಿ ಕಷ್ಟಗಳನ್ನು ಅನುಭವಿಸಿದೆನು. ॥೧೧೪॥ ಇತ್ತ ಭೂಲೋಕದಲ್ಲಿ ಜನಸಮೂಹವು ತೀರ್ಥರಾಜ ಪ್ರಯಾಗಕ್ಷೇತ್ರಕ್ಕೆ ಅಲ್ಲಿನ ಮಹಾನದಿಗಳ ಸಂಗಮದಲ್ಲಿ ಸ್ನಾನ ಮಾಡಲು ಹೋಗುತ್ತಿರುವುದನ್ನು ಕಂಡು ॥೧೧೫॥ ನನ್ನ ಮಗನೂ ಕೂಡ ಆ ಜನರೊಂದಿಗೆ ತ್ರಿವೇಣೀಸಂಗಮಕ್ಕೆ ಹೊರಟನು. ಆ ಸಂಗಮದಲ್ಲಿ ಮಾಘ ಸ್ನಾನವನ್ನು ಮಾಡಿ ಅದರಿಂದ ಬಂದ ಪುಣ್ಯವನ್ನು ನನಗೆ ಸಮರ್ಪಿಸಿದನು. ॥೧೧೬॥ ಆ ಪುಣ್ಯಪ್ರಭಾವದಿಂದ ನಾನು ನರಕದಿಂದ ಉದ್ಧೃತನಾಗಿ ಈಗ ಸೂಜೀಮುಖವುಳ್ಳ ಮತ್ತು ದೊಡ್ಡ ಹೊಟ್ಟೆಯುಳ್ಳ ಪ್ರೇತನಾಗಿ ಇಲ್ಲಿ ವಾಸವಾಗಿದ್ದೇನೆ. ॥೧೧೭॥ ಇಲ್ಲಿ ಹೆಜ್ಜೆ ಹೆಜ್ಜೆಗೆ ಅನೇಕ ಜಲಾಶಯಗಳಿವೆ. ತಂಪಾದ ನೀರಿನಿಂದ ಕೂಡಿದ ಅನೇಕ ಪವಿತ್ರವಾದ ನದಿಗಳೂ ಹಾಗೂ ರಮ್ಯವಾದ ವಿವಿಧ ಸರೋವರಗಳೂ ಶೋಭಿಸುತ್ತಿವೆ. ॥೧೧೮॥ ಇಂಥ ಸ್ಥಳದಲ್ಲಿದ್ದರೂ ನಾನು ನೀರಡಿಕೆಯಿಂದ ಬಳಲಿದ್ದೇನೆ. ನನಗೆ ಒಂದು ಬೊಗಸೆ ನೀರು ಕೂಡ ಕುಡಿಯಲು ಸಾಧ್ಯವಿಲ್ಲದಾಗಿದೆ. ಬ್ರಾಹ್ಮಣರ ಎಂಜಲು, ನೀರು, ಅನ್ನ ಎಲ್ಲವೂ ಪ್ರಾಣಿಗಳ ಪಾಲಾಗುತ್ತಿವೆ. ॥೧೧೯॥ ಹಸಿವೆಯಿಂದ ಬಳಲುತ್ತಿದ್ದರೂ ನನಗೆ ಒಂದು ತುತ್ತು ಅನ್ನವೂ ಸಿಗದಂತಾಗಿದೆ. ಎಂದಾದರೂ ಏನೋ ಒಂದು ಕಾರಣದಿಂದ

ಕ್ಷುತ್‌ತೃಷಾವ್ಯಾಪ್ತದೇಹೋಽಹಂ ನ ಸುಖಂ ಪ್ರಾಪ್ನುಯಾಂ ಕ್ಷಣಮ್ ।
ಪ್ರೇತತ್ವೇ ವರ್ತಮಾನಸ್ಯ ವರ್ಷದ್ವಾದಶಕಂ ಗತಮ್ ॥೧೨॥

ಇತಿ ವಃ ಕಥಿತಂ ಸರ್ವಂ ಮಯಾ ಪ್ರೇತತ್ವಕಾರಣಮ್ ।
ದಿಗಂಬರಾ ಮಯಾಶ್ಲಿಷ್ಟಾ ಅಸ್ಥಿಮಾತ್ರಂ ಶರೀರಕಾಃ ॥೧೩॥

ಮೂಕಾ ಮುಂಡಾಶ್ಚಲಂವೋಷ್ಠಾ ದಾರುಣಾಶ್ಚ ಭಯಾನಕಾಃ ।
ಇಮಾಮವಸ್ಥಾಂ ಸಂಪ್ರಾಪ್ತಾ ವಿಪಾಕಾತ್ಕಸ್ಯ ಕರ್ಮಣಃ ॥೧೪॥

ತನ್ಮೇ ನಿಗದ್ಯತಾಂ ಸರ್ವಂ ಮಮಾತ್ರಾಸ್ತಿ ಕುತೂಹಲಮ್ ।
ಇತಿ ತೇನ ದ್ವಿಜೇನೋಕ್ತಾ ಮೂಕವದ್ವಕ್ತುಮಕ್ಷಮಾಃ ॥೧೫॥

ಸಂಜ್ಞಯಾ ಜ್ಞಾಪಿತಂ ಸರ್ವಂ ಯತ್‌ಕೃತಂ ಪೂರ್ವಜನ್ಮನಿ ।
ಲಂಘನಂ ದೇವಮಾರ್ಗಸ್ಯ ಪಾಖಂಡಮನುವರ್ತನಮ್ ॥೧೬॥

ನ ಪಿಂಡದಾನಂ ನ ಸ್ನಾನಂ ನ ಪಿತೄಣಾಂ ಚ ತರ್ಪಣಮ್ ।
ನ ಪೂಜಾ ನ ಚ ಸತ್ಕಾರೋ ದ್ವಿಜಾನಾಂ ಚ ವಿಧಿಃ ಕ್ವಚಿತ್ ॥೧೭॥

ಕಿಂಚಿತ್ತು ಅನ್ನವಾಗಲೀ, ನೀರಾಗಲೀ ದೊರಕಿದರೂ ॥೧೦॥ ಈ ಸೂಚೀಮುಖದಿಂದ ಸೇವಿಸುತ್ತ ಹೋದರೆ ನನ್ನ ದೊಡ್ಡ ಹೊಟ್ಟೆಯು ಅಷ್ಟರಿಂದ ಅದೆಂತು ತುಂಬಲು ಸಾಧ್ಯ! ಹೀಗೆ ಒಂದು ನೂರು ವರ್ಷಗಳವರೆಗೆ ಸೇವಿಸುತ್ತ ಹೋದರೂ ಆ ನನ್ನ ದೊಡ್ಡದಾದ ಹೊಟ್ಟೆಯು ತುಂಬಲಾರದು. ॥೧೧॥ ಹಸಿವೆ ನೀರಡಿಕೆಗಳಿಂದ ಬಳಲುತ್ತಿರುವ ನನಗೆ ಒಂದು ಕ್ಷಣವೂ ಸುಖವಿಲ್ಲದಂತಾಗಿದೆ. ಈ ಪ್ರೇತದೇಹದಲ್ಲಿದ್ದು ಇಂದಿಗೆ ನನಗೆ ಹನ್ನೆರಡು ವರ್ಷಗಳಾದವು. ॥೧೨॥ ನನಗೆ ಪ್ರೇತತ್ವ ಬಂದಿರುವದಕ್ಕೆ ಕಾರಣವನ್ನು ಇದುವರೆಗೆ ನಿಮಗೆ ತಿಳಿಸಿದ್ದೇನೆ. ಇನ್ನು ಅಸ್ಥಿ ಮಾತ್ರ ಶರೀರವುಳ್ಳ, ದಿಗಂಬರನಾಗಿರುವ, ಮೂಕರಾಗಿರುವ, ನಡುಗುತ್ತಿರುವ ತಲೆಯುಳ್ಳ, ಭಯಾನಕರಾದ, ಕ್ರೂರರಾದ ನೀವು ಅದಾವ ಕರ್ಮದ ಫಲವಾಗಿ ಈ ಅವಸ್ಥೆಯನ್ನು ಹೊಂದಿರುವಿರಿ ಎಂಬುದನ್ನು ॥೧೩॥೧೪॥ ನನಗೆ ತಿಳಿಸುವಿರಾ ?- ಇದನ್ನೆಲ್ಲ ಕೇಳಲು ನನಗೆ ಕುತೂಹಲವುಂಟಾಗಿದೆ. ಈ ಪ್ರಕಾರವಾಗಿ ಪ್ರೇತಾವಸ್ಥೆಯಲ್ಲಿದ್ದ ಬ್ರಾಹ್ಮಣನು ಕೇಳಲು ನಾವೆಲ್ಲರೂ ಮೂಕರಾದ್ದರಿಂದ ಮಾತನಾಡಲು ಸಮರ್ಥರಾಗಲಿಲ್ಲ. ॥೧೫॥ ಆದರೂ ನಾವು ಪೂರ್ವಜನ್ಮದಲ್ಲಿ ಮಾಡಿದುದೆಲ್ಲವನ್ನೂ ಸಂಜ್ಞೆಯಿಂದ ತಿಳಿಸಿದೆವು. ದೇವಮಾರ್ಗವನ್ನು ಉಲ್ಲಂಘಿಸಿ ನಡೆದದ್ದು, ಪಾಖಂಡರಾಗಿದ್ದುದು, ॥೧೬॥ ಪಿಂಡಪ್ರದಾನ ಮಾಡದಿದ್ದುದು, ನದೀ ತೀರ್ಥಗಳಲ್ಲಿ ಸ್ನಾನ ಮಾಡದಿರುವದು ಮತ್ತು ಪಿತೃಗಳನ್ನು ಉದ್ದೇಶಿಸಿ ತರ್ಪಣ ಕೊಡದಿರುವದು, ದೇವಪೂಜೆ, ಬ್ರಾಹ್ಮಣರ ಸತ್ಕಾರಾದಿಗಳನ್ನು

ತೇಸ್ತೈತಾಂ ಕುದಶಾಂ ಪ್ರಾಪ್ತಾ ಕಲ್ಪಭೋಗ್ಯಾಂ ಸುದಾರುಣಾಮ್ ।
ಸಮಾನದುಃಖೈಃ ಸ್ವೈಃ ಕಾರ್ಯೈರ್ಮಿಥ ಏವಂ ಪ್ರಮಾದಿನಃ ॥೧೨೮॥

ಅನ್ವಗಚ್ಛಾಮ ತಂ ಸರ್ವೇಽಪ್ಯನ್ನಜನ್ಮಜಲಾರ್ಥಿನಃ ।
ಸಾರ್ಥೋ ಜಗಾಮ ತಪತೀಂ ವಯಂ ತು ದೂರತಃ ಸ್ಥಿತಾಃ ॥೧೨೯॥

ತಸ್ಯ ಸಾರ್ಥಸ್ಯ ಮಧ್ಯಸ್ಥೋ ದ್ವಿಜಪುತ್ರಃ ಸಮಾಯಯೌ ।
ತೇನ ತತ್ರ ಕೃತಂ ಸ್ನಾನಂ ಆಷಾಢೇ ತಪತೀಜಲೇ ॥೧೩೦॥

ಯಥಾವನ್ಮಾಸಮೇಕಂ ತು ತಸ್ಯಾಂತೇ ಭೋಜಿತಾ ದ್ವಿಜಾಃ ।
ತದನುಜ್ಞಾಮಿತಿ ಪ್ರಾಪ್ಯ ಸ್ನಾನಂ ಸಂಪೂರ್ಣಮಸ್ತು ತೇ ॥೧೩೧॥

ಕೃತಾಷಾಢಫಲಂ ಪಿತ್ರೇ ದದೌ ಬ್ರಾಹ್ಮಣಸನ್ನಿಧೌ ।
ಆಷಾಢಸ್ಯ ಫಲೇ ದತ್ತೇ ಪ್ರೇತದೇಹಂ ಚ ತತ್‌ಕ್ಷಣಾತ್ ॥೧೩೨॥

ತ್ಯಕ್ತ್ವಾಽಥ ದಿವ್ಯದೇಹೋಽಭೂತ್ ವಿಮಾನವರಮಾಸ್ಥಿತಃ ।
ಉವಾಚ ಪುತ್ರಂ ಮುದಿತೋ ವತ್ಸ ಸಾಧು ತ್ವಯಾ ಕೃತಮ್ ॥೧೩೩॥

ಮಾಡದಿರುವದು ಮುಂತಾದ ಪೂರ್ವ ಜನ್ಮದ ಕರ್ಮಗಳ ಫಲವಾಗಿಯೇ ಈಗ ಇಂಥ ಸುದಾರುಣವಾದ ದುರ್ದಶೆಯನ್ನು ಹೊಂದಿರುವೆವು. ಈ ರೀತಿ ನಮ್ಮ ನಮ್ಮ ದುಃಖಗಳನ್ನು ಪರಸ್ಪರ ತಿಳಿಸುತ್ತಿರುವಾಗ ॥೧೨೭॥೧೨೮॥ ಆ ಸೂಚೀಮುಖ ಬ್ರಾಹ್ಮಣನ ಕುಮಾರನು ತಾಪೀ ನದೀ ಸ್ನಾನಕ್ಕೆಂದು ಅಲ್ಲಿಗೆ ಬರಲು ಅವನನ್ನು ನಾವೆಲ್ಲರೂ ಹಿಂಬಾಲಿಸಿದೆವು. ನಾವು ಮಾತ್ರ ದೂರದಲ್ಲಿದ್ದು ಎಲ್ಲವನ್ನೂ ನೋಡುತ್ತ ನಿಂತುಕೊಂಡೆವು. ॥೧೨೯॥ ವೇದಶ್ರವಾ ಬ್ರಾಹ್ಮಣನ ಆ ಕುಮಾರನು ಆಷಾಢದಲ್ಲಿ ತಾಪೀ ನದಿಯಲ್ಲಿ ಒಂದು ತಿಂಗಳು ಪೂರ್ತಿ ಪ್ರಾತಃಸ್ನಾನ ಮಾಡಿ ॥೧೩೦॥ ಮಾಸಪೂರ್ತಿಯಾದ ನಂತರ ಬ್ರಾಹ್ಮಣರಿಗೆ ಭೋಜನ ಮಾಡಿಸಿದನು. 'ಅಯ್ಯಾ! ನೀನು ಮಾಡಿದ ಸ್ನಾನವು ಫಲಪ್ರದವಾಗಲಿ' ಎಂದು ಆ ಬ್ರಾಹ್ಮಣರಿಂದ ಆಶೀರ್ವಾದವನ್ನು ಪಡೆದು ॥೧೩೧॥ ಮಾಸಸ್ನಾನದಿಂದ ಬಂದ ಪುಣ್ಯಫಲವನ್ನು ಬ್ರಾಹ್ಮಣರ ಸಮ್ಮುಖದಲ್ಲಿ ತನ್ನ ತಂದೆಯಾದ ವೇದಶ್ರವನಿಗೆ ಸಮರ್ಪಿಸಿದನು. ಈ ರೀತಿ ಆಷಾಢಸ್ನಾನದ ಫಲವನ್ನು ಕೊಟ್ಟಾಕ್ಷಣವೇ ಪ್ರೇತ ದೇಹದಲ್ಲಿದ್ದ ಅವನ ತಂದೆಯು ॥೧೩೨॥ ಆ ದೇಹದಿಂದ ಮುಕ್ತನಾಗಿ ದಿವ್ಯದೇಹವನ್ನು ಹೊಂದಿದವನಾಗಿ ಶ್ರೇಷ್ಠವಾದ ದೇವಲೋಕದ ವಿಮಾನದಲ್ಲಿ ಕುಳಿತುಕೊಂಡು ತನ್ನ ಮಗನನ್ನು ಕುರಿತು ಸಂತೋಷದಿಂದ ಹೇಳಿದನು- ಅಯ್ಯಾ ವತ್ಸಾ! ನೀನು ಉತ್ತಮವಾದ ಕಾರ್ಯವನ್ನು ಮಾಡಿರುವಿ. ॥೧೩೩॥ ಈ ಮೊದಲು ನೀನು ನನ್ನನ್ನು ನನ್ನ ದುಷ್ಟಕರ್ಮಗಳಿಂದ ಪ್ರಾಪ್ತವಾಗಿದ್ದ

ನರಕಾದುದ್ಧೃತಃ ಪೂರ್ವಂ ದಾರುಣಾದ್ದುಷ್ಕರ್ಮಜಾತ್ ।
ಇದಾನೀಂ ಪ್ರೇತಭಾವಾತ್ತು ಮೋಚಿತೋ ದುಃಖಸಾಗರಾತ್ ॥೧೩೪॥

ತೇ ಧನ್ಯಾಃ ಪುಣ್ಯವಂತಶ್ಚ ತೈಶ್ಚ ಲೋಕದ್ವಯಂ ಜಿತಮ್ ।
ಭವಂತಿ ಯೇಷಾಂ ಸತ್ಪುತ್ರಾಃ ಪುಣ್ಯಕರ್ಮಪರಾಯಣಃ ॥೧೩೫॥

ಅದಾತಾರೋಽಪಿ ದಾತಾರಃ ಪಾಪಿನೋಽಪಿ ನ ಪಾಪಿನಃ ।
ವರಮೇಕಃ ಸುಪುತ್ರೋಽತ್ರ ಕುಪುತ್ರಾಣಾಂ ಶತೇನ ಕಿಮ್ ॥೧೩೬॥

ಪ್ರೀಣಾತಿ ಸ್ವಪಿತೄನ್ಯಸ್ತು ಸತತಂ ಪಿತೃಕರ್ಮಣಾ ।
ಸಫಲಂ ಜೀವಿತಂ ತಸ್ಯ ಧನ್ಯಾಸ್ತೇನೈವ ಪೂರ್ವಜಾಃ ॥೧೩೭॥

ತಸ್ಮಾತ್ ಪ್ರತಿದಿನಂ ದೇವಾಃ ಪಿತರೋ ಮನುಜಾಸ್ತಥಾ ।
ಋಷಯಶ್ಚೈವ ಭೂತಾನಿ ಸಮೀಹಂತಿ ಚ ಸತ್ಕೃತಿಮ್ ॥೧೩೮॥

ಏತಾನ್ಸತ್ಕೃತ್ಯ ಯೋ ಭುಂಕ್ತೇ ತಸ್ಮಾತ್ ಶ್ರೇಷ್ಠತರೋ ಹಿ ಕಃ ।
ಕೃತಾರ್ಥಾಃ ಪಿತರಸ್ತಸ್ಯ ತಥಾ ಮಾತಾಮಹಾ ಅಪಿ ॥೧೩೯॥

ಭಯಂಕರವಾದ ನರಕದಿಂದ ಉದ್ಧಾರ ಮಾಡಿರುವಿ. ಈಗ ದುಃಖಸಾಗರದಲ್ಲಿ ಕ್ಲೇಶಬಡುತ್ತಲಿದ್ದ ಈ ಪ್ರೇತದೇಹದಿಂದ ಉದ್ಧರಿಸಿರುವಿ. ॥೧೩೪॥ ಯಾರಿಗೆ ಪುಣ್ಯಕರ್ಮಗಳನ್ನು ಮಾಡುವ ಒಬ್ಬ ಸತ್ಪುತ್ರನಿರುವನೋ ಅವರೇ ಧನ್ಯರು, ಅವರೇ ಪುಣ್ಯವಂತರು ಮತ್ತು ಅವರೇ ಇಹಪರ ಲೋಕಗಳೆರಡನ್ನೂ ಜಯಿಸಿದವರಾಗುವರು. ॥೧೩೫॥ ಅಂಥ ಪುತ್ರನಿರುವುದರಿಂದ ಅವನ ಪಿತೃಗಳು ದಾನ ಮಾಡದಿದ್ದರೂ ದಾನಿಗಳಾಗುವರು. ಪಾಪಿಗಳಾಗಿದ್ದರೂ ಪಾಪಕರ್ಮಗಳಿಂದ ಮುಕ್ತರಾಗುವರು. ದುಷ್ಟರಾದ ನೂರಾರು ಮಕ್ಕಳಿರುವುದರಿಂದೇನು ಪ್ರಯೋಜನ. ಇಂಥ ಮಕ್ಕಳಿರುವುದಕ್ಕಿಂತಲೂ ಸದಾಚಾರಿಯಾದ ಒಬ್ಬ ಮಗನಿರುವದು ಶ್ರೇಷ್ಠವಾಗಿದೆ. ॥೧೩೬॥ ಪಿತೃಕರ್ಮಗಳಿಂದ ಯಾವನು ತನ್ನ ಪಿತೃಗಳನ್ನು ಸಂತೋಷಪಡಿಸುವನೋ ಅಂಥವನ ಜೀವನವೇ ಸಾರ್ಥಕ ಜೀವನವು. ಇಂಥ ಪುತ್ರನಿಂದಲೇ ಅವನ ಪೂರ್ವಜರು ಧನ್ಯರಾಗುವರು. ॥೧೩೭॥ ಆದ್ದರಿಂದಲೇ ಪ್ರತಿದಿನವೂ ದೇವತೆಗಳು, ಪಿತೃಗಳು, ಮನುಷ್ಯರು ಋಷಿಗಳು ಮತ್ತು ಸಕಲ ಭೂತಗಳು ಮನುಷ್ಯರಿಂದ ಸತ್ಕಾರ್ಯವನ್ನು ಅಪೇಕ್ಷಿಸುತ್ತಿರುತ್ತಾರೆ. ॥೧೩೮॥ ನಿತ್ಯವೂ ಇವರೆಲ್ಲರನ್ನು ಸತ್ಕರಿಸಿ ಯಾವನು ಅಂದಿನ ಭೋಜನ ಮಾಡುವನೋ ಅವನಿಗಿಂತಲೂ ಮಿಗಿಲಾದವರು ಯಾರಿರುವರು? ಅಂಥವನ ಪಿತೃಗಳು ಹಾಗೂ ಮಾತಾಮಹರು ಎಲ್ಲರೂ ಕೃತಾರ್ಥರೇ

ಕುಲೇ ತಸ್ಯ ತು ನ ಪ್ರೇತಾಸ್ತಸ್ಯ ಪುತ್ರಾಶ್ಚ ಪೌತ್ರಕಾಃ ।
ಧನಾನಿ ದೀರ್ಘಮಾಯುಶ್ಚ ನ ಶೋಕಶ್ಚಾಗದಾಸ್ತಥಾ ॥೧೪೦॥

ನ ಸಂತತೇಶ್ಚ ವಿಚ್ಛೇದೋ ಯಃ ಸದಾಚಾರವಾನ್ನರಃ ।
ಆಷಾಢಪಂಚದಿವಸಸ್ನಾನೇನ ಪ್ರೇತಭಾವತಃ ॥೧೪೧॥

ವಿಮುಕ್ತಃ ಶೇಷಪುಣ್ಯೇನ ವಿಷ್ಣುಲೋಕೋ ಮಮಾಕ್ಷಯಃ ।
ಇತ್ಯುಕ್ತ್ವಾ ಸ ನಿಜಂ ಪುತ್ರಮಸ್ಮಾಕಂ ಪಶ್ಯತಾಂ ತದಾ ॥೧೪೨॥

ವಿಮಾನವರಮಾರೂಢೋ ವೈಷ್ಣವಂ ಲೋಕಮವ್ರಜತ್ ।
ಸಾರ್ಧಂ ಗೃಹ್ಯ ಚ ತತ್ಪುತ್ರೋ ಉದ್ಧೃತ್ಯ ಪಿತರಂ ನಿಜಮ್ ॥೧೪೩॥

ಮುದಾ ಪರಮಯಾ ಯುಕ್ತೋ ಜಗಾಮ ಚ ಯಥಾಗತಃ ।
ವಯಂ ತತ್ರ ಸ್ಥಿತಾಸ್ತಾತ ನಿರಾಶಾಃ ಸ್ಮಃ ಸ್ವಮೋಚನೇ ॥೧೪೪॥

ಕೋಽತ್ರ ಮೋಚಯಿತಾಽನ್ಯೋಽಸ್ತಿ ಪ್ರೇತಭಾವಾತ್ಸುದಾರುಣಾತ್ ।
ತ್ವಂ ನಃ ಪುತ್ರೋಽಸಿ ಪುರಾ ಪಾಖಂಡಿವಚನೇ ಸ್ಥಿತಃ ॥೧೪೫॥

ಸೋ ದದಾಸಿ ಚ ಯತ್ಪುಣ್ಯಂ ಯೇನ ಮುಚ್ಯಾಮಹೇ ವಯಮ್ ।
ನರೈಃ ಪಾಖಂಡಿಭಿಃ ಪ್ರಸ್ಥೈರ್ದೀಯತೇ ಯತ್ತು ಕಿಂಚನ ॥೧೪೬॥

ಸರಿ. ॥೧೩೯॥ ಅಂಥವನ ಕುಲದಲ್ಲಿ ಯಾರೂ ಪ್ರೇತಜನ್ಮವನ್ನು ಹೊಂದುವುದಿಲ್ಲ. ಅವನ ಮಕ್ಕಳು ಮೊಮ್ಮಕ್ಕಳು ಎಲ್ಲರೂ ಧನಧಾನ್ಯ ಸಂಪತ್ತಿಯನ್ನೂ ದೀರ್ಘಾಯುಷ್ಯವನ್ನೂ ಹೊಂದಿ ಎಲ್ಲರೂ ನಿರೋಗಿಗಳಾಗಿದ್ದು ಸುಖದಿಂದ ಇರುವರು. ॥೧೪೦॥ ಯಾವನು ಸದಾಚಾರಿಯಾಗಿರುವನೋ ಅವನ ಸಂತತಿಯ ವಿಚ್ಛೇದವಾಗುವದಿಲ್ಲ. ನೀನು ಆಷಾಢಮಾಸದಲ್ಲಿ ಮಾಡಿದ ಕೊನೆಯ ಐಯ್ದು ದಿನಗಳ ಸ್ನಾನದಿಂದ ನಾನು ಪ್ರೇತದೇಹದಿಂದ ಮುಕ್ತನಾಗಿ ॥೧೪೧॥ ಉಳಿದ ಪುಣ್ಯಫಲದಿಂದ ಅಕ್ಷಯವಾದ ವಿಷ್ಣುಲೋಕವನ್ನು ಹೊಂದುತ್ತಲಿದ್ದೇನೆ, ಈ ರೀತಿಯಾಗಿ ಆ ವೇದಶ್ರವಾ ಬ್ರಾಹ್ಮಣನು ತನ್ನ ಮಗನನ್ನು ಮನಃಪೂರ್ವಕ ಆಶೀರ್ವದಿಸುತ್ತ ನಾವು ನೋಡು ನೋಡುತ್ತಿರುವಂತೆಯೇ ॥೧೪೨॥ ದಿವ್ಯವಾದ ವಿಮಾನದಲ್ಲಿ ಕುಳಿತು ವಿಷ್ಣುಲೋಕಕ್ಕೆ ಪ್ರಯಾಣ ಬೆಳೆಸಿದನು. ಅನಂತರ ಬ್ರಾಹ್ಮಣಕುಮಾರನು ಈ ರೀತಿ ತನ್ನ ಪಿತೃವನ್ನು ಉದ್ಧರಿಸಿ ॥೧೪೩॥ ಪರಮಾನಂದಭರಿತನಾಗಿ ಬಂದ ದಾರಿಯಿಂದ ಪುನಃ ತನ್ನ ಊರಿಗೆ ಹೊರಟು ಹೋದನು. ನಾವು ಮಾತ್ರ ನಮ್ಮ ಉದ್ಧಾರದ ಬಗ್ಗೆ ನಿರಾಶರಾಗಿ ಇಲ್ಲಿಯೇ ಉಳಿದುಕೊಂಡೆವು. ॥೧೪೪॥ ದಾರುಣವಾದ ಈ ಪ್ರೇತದೇಹದಿಂದ ನಮ್ಮನ್ನು ಅದಾರು ಉದ್ಧರಿಸುವರು? ಈ ಮೊದಲು ಪಾಖಂಡಿಯಾಗಿದ್ದ ನೀನು ನಮ್ಮ ವಂಶದಲ್ಲೇನೋ

ಕಸ್ಮಾದಪಿ ಪ್ರಸಂಗಾತ್ತತ್ ಪಿತೄಣಾಂ ನೋಪಸರ್ಪತಿ ।
ಸಾಂಪ್ರತಂ ತಪತೀನೀರೇ ಕುಲಂ ಸ್ನಾನೇನ ಪಾವಿತಮ್ ॥೧೪೭॥

ಆಷಾಢೇ ಯೋಗ್ಯತಾಂ ಪ್ರಾಪ್ತೋ ಹ್ಯನಿಚ್ಛನ್ನಪಿ ದೈವತಃ ।
ಸರ್ವಥಾ ಯದಸಂಭಾವ್ಯೋ ಯತ್ಪರಂ ಚ ಮನೋರಥಾತ್ ॥೧೪೮॥

ಅಕಸ್ಮಾಚ್ಚ ತದಾನೀಯ ವಿಧಿರ್ಘಟಯತಿ ಧ್ರುವಮ್ ।
ಕಸ್ತ್ವಂ ಜೈನಸಮಾಚಾರಃ ಕ್ವ ತಾಪೀ ಚ ಮಹಾನದೀ ॥೧೪೯॥

ಆಷಾಢಃ ಕ್ವ ಚ ತೇ ಸ್ನಾನಮನಿಚ್ಛೋರಪಿ ದೈವತಃ ।
ತಸ್ಮಾದ್ಭಾವಿಶುಭಂ ಚಾತ್ರ ನೂನಂ ಮನ್ಯಾಮಹೇಽಪ್ಯತಃ ॥೧೫೦॥

ಏತೇಷಾಂ ಸಮವಾಯೋಽಯಂ ದುಷ್ಕರಃ ಸಮಜಾಯತೇ ।
ಇತಿ ತೇಷಾಂ ವಚಃ ಶ್ರುತ್ವಾ ಸ ವಣಿಗ್ವಿಸ್ಮಯಾನ್ವಿತಃ ॥೧೫೧॥

ಜೈನಧರ್ಮಂ ಪರಿತ್ಯಜ್ಯ ಚಕ್ರೇ ಸ್ನಾನಂ ವಿಧಾನತಃ ।
ಏಕಾದಶೀಂ ಸಮಾರಭ್ಯ ಯಾವತ್ಪಂಚದಶೀ ಸಿತಾ ॥೧೫೨॥

ಹುಟ್ಟಿರುವಿ. ॥೧೪೫॥ ಆದರೆ ನಮ್ಮನ್ನು ಈ ದೇಹದಿಂದ ಉದ್ಧರಿಸುವಂತೆ ನೀನು ಯಾವ ಪುಣ್ಯವನ್ನೂ ಕೊಡಲು ಸಮರ್ಥನಾಗಿರುವದಿಲ್ಲ. ಏಕೆಂದರೆ ಪಾಖಂಡಿಗಳಾದವರು ಏನು ಕೊಟ್ಟರೂ ಅದು ॥೧೪೬॥ ಅವರ ಪಿತೃಗಳನ್ನು ಮುಟ್ಟುವದಿಲ್ಲ. ಆದರೆ ಇಂದು ನೀನು ತಾಪೀನದಿಯಲ್ಲಿ ಸ್ನಾನ ಮಾಡಿರುವುದರಿಂದ ನಿನ್ನ ಸಮಸ್ತ ಕುಲವೂ ಪವಿತ್ರ-ಗೊಳಿಸಲ್ಪಟ್ಟಿದೆ. ॥೧೪೭॥ ನೀನು ಬಯಸದಿದ್ದರೂ ಆಷಾಢದಲ್ಲಿ ದೈವಯೋಗದಿಂದ ಇಂದು ನೀನು ಪವಿತ್ರವಾದ ದೇಹವುಳ್ಳವನಾಗಿರುವಿ. ಯಾವುದು ಸರ್ವಥಾ ಅಸಂಭಾವ್ಯವಾಗಿರುವದೋ ಮತ್ತು ಯಾವುದು ಮನೋಬಯಕೆಗೆ ನಿಲುಕಲಾರದ್ದೋ ಅಂಥದನ್ನು ಕೂಡ ॥೧೪೮॥ ದೈವವು ನಿಶ್ಚಯವಾಗಿ ಘಟಿಸಿ ಕೊಡುತ್ತದೆ. ಜೈನ ಆಚಾರಗಳನ್ನು ಆಚರಿಸುತ್ತಿರುವ ನೀನೆಲ್ಲಿ ! ಮಹಾನದಿಯಾದ ತಾಪೀ ಎಲ್ಲಿ !! ॥೧೪೯॥ ಆಷಾಢ ಮಾಸವೆಲ್ಲಿ ! ಮತ್ತು ಈ ನದಿಯಲ್ಲಿ ನಿನ್ನ ಸ್ನಾನವೆಲ್ಲಿ ! ಆಹಾ ! ನೀನು ಏನೊಂದನ್ನೂ ಬಯಸಿರದಿದ್ದರೂ ದೈವಯೋಗದಿಂದ ಇದೆಲ್ಲವೂ ಘಟಿಸಿರುತ್ತದೆ. ಆದ್ದರಿಂದ ಇನ್ನು ಮುಂದಾದರೂ ನಮಗೆ ಮಂಗಲವಾಗುವದೆಂದು ನಾವು ಬಲವಾಗಿ ನಂಬಿ ಕುಳಿತಿದ್ದೇವೆ. ॥೧೫೦॥ ಅಯ್ಯಾ ವತ್ಸಾ ! ಇವೆಲ್ಲವುಗಳು (ಆಷಾಢಮಾಸ, ತಾಪೀನದೀ ಸ್ನಾನ) ಏಕಕಾಲಕ್ಕೆ ಕೂಡಿ ಬರುವದು ಬಹು ದುಷ್ಕರವಾದದ್ದು. ಹೀಗೆಲ್ಲ ತನ್ನ ಪೂರ್ವಜರು ಹೇಳುತ್ತಿರುವದನ್ನು ಕೇಳಿದ ಆ ವಣಿಕ್‌ಪುತ್ರನು ಅತ್ಯಂತ ವಿಸ್ಮಿತನಾದನು. ॥೧೫೧॥ ಆ ಕೂಡಲೇ ಜೈನ ಧರ್ಮವನ್ನು ಪರಿತ್ಯಜಿಸಿ ಏಕಾದಶಿಯಿಂದ

ಕೃತ್ವಾ ಶ್ರಾದ್ಧಂ ತು ವಿಧಿವತ್ ಪೌರ್ಣಮಾಸ್ಯಾಂ ಸಮಾಹಿತಃ ।
ತಾಪೀತಟೇ ದದೌ ಪುಣ್ಯಂ ಪೂರ್ವಜೇಭ್ಯೋ ಯಥಾವಿಧಿ ॥೧೫೩॥

ಆಷಾಢೇ ಪಂಚದಿವಸೈಃ ಸ್ನಾನೇನ ಯದುಪಾರ್ಜಿತಮ್ ॥೧೫೪॥

ಆಷಾಢಪಂಚದಿನಜಂ ಸ್ನಪನಸ್ಯ ಪುಣ್ಯಂ
ತೇ ಪ್ರಾಪ್ಯ ತತ್ರ ವಿಜಹುರ್ವಿಕೃತಂ ಶರೀರಮ್ ।
ಅರುಹ್ಯಮಾಶು ಮರುತಾಂ ರುಚಿರಂ ವಿಮಾನಂ ತೇ
ವಿಷ್ಣು ಲೋಕಮಗಮನ್ ಸ ಹಿ ಯತ್ರ ಪ್ರಾಪ್ತಃ ॥೧೫೫॥

ಉದ್ಧೃತ್ಯ ತಾನಥ ವಣಿಕ್ ಸ್ವಪಿತ್ರೂಂಸ್ತದಸ್ಮಾ
ದತ್ಯಂತಕಷ್ಟಜನ ಕಾಚ್ಚ ಪರೇತಭಾವಾತ್ ।
ಆಷಾಢಮಾಸತಪತೀಸ್ನಪನಪ್ರಭಾವಂ
ದೃಷ್ಟ್ವಾನುವರ್ಷಸವನಾಯ ಸಮುತ್ಸುಕೋಽಭೂತ್ ॥೧೫೬॥

ತೇನಾಷಾಢದಶಸ್ನಾನಂ ತ್ರಿಗುಣತ್ವೇಕಚೇತಸಾ ।
ತತ್ಪುಣ್ಯಾತ್ತತ್ಪದಾಂಪಾರೋಽಯಂ ಜಗತ್ಯಾಂ ನ ಶೋಚ್ಯತಿ ॥೧೫೭॥

ಹಿಡಿದು ಪೌರ್ಣಮೆಯವರೆಗೆ ತಾಪೀನದಿಯಲ್ಲಿ ವಿಧಿಪೂರ್ವಕ ಪ್ರಾತಃಸ್ನಾನವನ್ನು ಮಾಡಿದನು. ॥೧೫೨॥ ತನ್ನ ಪಿತೃಗಳನ್ನು ಉದ್ದೇಶಿಸಿ ವಿಧಿಪೂರ್ವಕ ಶ್ರಾದ್ಧಕರ್ಮಗಳನ್ನು ಮಾಡಿ ಪೌರ್ಣಮೆಯ ದಿನ ತಾಪೀನದಿಯ ದಂಡೆಯ ಮೇಲಿದ್ದು ತನ್ನ ಪಿತೃಗಳಿಗೆ ಸ್ನಾನಪುಣ್ಯವನ್ನು ಶ್ರದ್ಧೆಯಿಂದ ಸಮರ್ಪಿಸಿದನು. ॥೧೫೩॥ ಆಷಾಢಮಾಸದ ಕೊನೆಯ ಐಯ್ದು ದಿನಗಳ ಸ್ನಾನದಿಂದ ಸಂಪಾದಿಸಲ್ಪಟ್ಟ ಪುಣ್ಯವನ್ನು ವಣಿಕ್‌ಪುತ್ರನು ತನ್ನ ಪಿತೃಗಳಿಗೆ ಸಮರ್ಪಿಸಲು ಅದನ್ನು ಸ್ವೀಕರಿಸಿದ ಆ ಪಿತೃಗಳು ತಮ್ಮ ವಿಕೃತವಾದ ಪ್ರೇತದೇಹಗಳಿಂದ ಮುಕ್ತರಾಗಿ ॥೧೫೪॥ ಕೂಡಲೇ ಮನೋಹರವಾದ ದಿವ್ಯವಾದ ವಿಮಾನದಲ್ಲಿ ಕುಳಿತು ವೇದಶ್ರವ ಬ್ರಾಹ್ಮಣನು ಹೋಗಿದ್ದ ವಿಷ್ಣುಲೋಕವನ್ನೇ ಕುರಿತು ಹೋದರು. ॥೧೫೫॥ ಈ ಪ್ರಕಾರವಾಗಿ ಆ ವಣಿಕ್‌ಪುತ್ರನು ಅತ್ಯಂತ ಕಷ್ಟದಾಯಕವಾದ ಪ್ರೇತದೇಹಗಳಿಂದ ತನ್ನ ಪಿತೃಗಳನ್ನು ಉದ್ಧರಿಸಿ ಆಷಾಢ ಮಾಸದಲ್ಲಿ ತಾಪೀನದಿಯಲ್ಲಿ ಮಾಡುವ ಸ್ನಾನದ ಮಹಿಮೆಯನ್ನು ಕಣ್ಣಾರೆ ಕಂಡು ಮುಂದೆ ಯಜ್ಞಯಾಗಾದಿಗಳನ್ನು ಮಾಡುತ್ತ ಕಾಲ ಕಳೆದನು. ॥೧೫೬॥ ಆಷಾಢಮಾಸದಲ್ಲಿ ಪ್ರಾತಃಸ್ನಾನ ಮಾಡುವದರಿಂದ ಬರುವ ಪುಣ್ಯಪ್ರಭಾವದಿಂದ ಇಹದಲ್ಲಿಯೂ ಪರದಲ್ಲಿಯೂ ಸುಖವು ಪ್ರಾಪ್ತವಾಗುವದು. ॥೧೫೭॥ ಈ ವೃತ್ತಾಂತವನ್ನು ವರ್ಣಿಸಿದ ಈಶ್ವರನು ಹೇಳುತ್ತಾನೆ- ಅಯ್ಯಾ ಸ್ಕಂದನೇ! ಕೇಳು. ತಾಪೀನದಿಯಲ್ಲಿ ಆಷಾಢಮಾಸದಲ್ಲಿ ಮಾಡುವ ಸ್ನಾನದ ಮಹಿಮೆಯನ್ನು ನಿನಗೆ

ಈಶ್ವರ ಉವಾಚ-
ಮಾಹಾತ್ಮ್ಯಮೇತದುದಿತಂ ರವಿನಂದನಾಯ
ಆಷಾಢಮಾಸಸವನಸ್ಯ ಯಥಾತ್ರ ವೃತ್ತಮ್ ।
ಸ್ನಾನಸ್ಯ ಯಸ್ತ್ವವಿಕಲಂ ಫಲಮಿಚ್ಛತೀಹ
ಶ್ರೋತವ್ಯಮೇವ ಖಲು ತೇನ ಮಹಾಘಹಾರೀ ॥೧೫೮॥

ಇತಿ ತೇ ಕಥಿತಂ ಸರ್ವಂ ಯತ್ಪೃಷ್ಟಂ ತು ತ್ವಯಾ ಸುತ ।
ತಾಪ್ಯಾಷಾಢಫಲಂ ಸಮ್ಯಕ್ ಕಿಮನ್ಯತ್ ಶ್ರೋತುಮಿಚ್ಛಸಿ ॥೧೫೯॥

ಇತಿ ಶ್ರೀಸ್ಕಂದಪುರಾಣೇ ಶಿವಸ್ಕಂದಸಂವಾದೇ ತಾಪ್ಯಾಷಾಢ ಮಾಹಾತ್ಮ್ಯೇ ಪ್ರಥಮೋಽಧ್ಯಾಯಃ ॥೧॥

ತಿಳಿಸಿದ್ದೇನೆ. ಯಾವನು ತಾನು ಮಾಡುವ ಸ್ನಾನದ ಸಂಪೂರ್ಣವಾದ ಫಲವನ್ನು ಪಡೆಯಲು ಬಯಸುವನೋ ಅಂಥವನು ಮಹಾಪಾಪ ಪ್ರಣಾಶಕವಾದ ಈ ಸ್ನಾನಮಹಿಮೆಯನ್ನು ಶ್ರದ್ಧೆಯಿಂದ ಕೇಳಬೇಕು. ॥೧೫೮॥ ಅಯ್ಯಾ ಪುತ್ರನೇ, ನೀನು ಕೇಳಿದಂತೆ ಆಷಾಢಮಾಸದಲ್ಲಿ ತಾಪೀಸ್ನಾನದ ಮಹಿಮೆ ಮುಂತಾದ ವಿಷಯದ ಬಗ್ಗೆ ಇದುವರೆಗೆ ನಿನಗೆ ತಿಳಿಸಿದ್ದೇನೆ. ಇನ್ನೇನು ಕೇಳಬೇಕೆಂದಿರುವಿ ? ॥೧೫೯॥

ಇಲ್ಲಿಗೆ ಶ್ರೀಸ್ಕಂದಪುರಾಣದಲ್ಲಿ ಶಿವ-ಸ್ಕಂದರ ಸಂವಾದದಲ್ಲಿ ಪ್ರಕಟವಾದ ತಾಪ್ಯಾಷಾಢ ಮಹಾತ್ಮೆಯಲ್ಲಿ "ತಾಪ್ಯಾಷಾಢ ಸ್ನಾನ ಮಹಿಮೆ" ಎಂಬ ೧ನೆಯ ಅಧ್ಯಾಯವು ಸಮಾಪ್ತವಾಯಿತು. ॥

॥ ಶ್ರೀಕೃಷ್ಣಾರ್ಪಣಮಸ್ತು ॥

೨ನೆಯ ಅಧ್ಯಾಯ
ಸ್ನಾನವಿಧಿ, ಮಾಸವ್ರತ, ತಾಪೀಸ್ನಾನಮಹಿಮೆ

❋

ಸ್ಕಂದ ಉವಾಚ-

ಆಷಾಢಸ್ನಾನಜನಿತಂ ತ್ವಯಾ ಪ್ರೋಕ್ತಂ ಮಹತ್ ಫಲಮ್ ।
ಆಷಾಢೇ ತಪತೀಸ್ನಾನಂ ಸರ್ವಪಾಪಹರಂ ನೃಣಾಮ್ ॥೧॥

ಕೋ ವಿಧಿಸ್ತಸ್ಯ ಕಿಂ ಪುಣ್ಯಂ ಕೇ ತತ್ರ ನಿಯಮಾಃ ಸ್ಮೃತಾಃ ।
ತೇಷಾಂ ಕಿಂ ಕಿಂ ಫಲಂ ತನ್ಮೇ ಬ್ರೂಹಿ ಸರ್ವಮಶೇಷತಃ ॥೨॥

ಈಶ್ವರ ಉವಾಚ-

ಪ್ರಾತಃ ಕರೋತಿ ಯಃ ಸ್ನಾನಂ ಮಧ್ಯಾಹ್ನೇಽಪಿ ಯಥಾವಿಧಿ ।
ದ್ವಿಗುಣಂ ಫಲಮಾಪ್ನೋತಿ ತ್ರಿಸ್ನಾನಾತ್ತ್ರಿಗುಣಂ ಫಲಮ್ ॥೩॥

ಪಯೋಷ್ಣೀಸಂಗಮೇ ಸ್ನಾನಂ ದೇವಾನಾಮಪಿ ದುರ್ಲಭಮ್ ।
ತಸ್ಮಾಚ್ಚತುರ್ಗುಣಂ ಪುಣ್ಯಂ ಆಷಾಢಸ್ಯ ಪ್ರಕೀರ್ತಿತಮ್ ॥೪॥

ತಥೈವ ಬಿಂದುಮತ್ಯಾಶ್ಚ ಸಂಗಮೇಽಪಿ ನಿಗದ್ಯತೇ ।
ಮೂಲೇ ತಾಪ್ಯಾಂ ಕೃತೇ ಸ್ನಾನೇ ಸಂಶಯೋ ನಾತ್ರ ವಿದ್ಯತೇ ॥೫॥

ಸ್ಕಂದನು ತನ್ನ ತಂದೆಯಾದ ಈಶ್ವರನನ್ನು ಕುರಿತು- 'ಭೋ ತಾತಪಾದರೇ! ಆಷಾಢಮಾಸದಲ್ಲಿ ತಾಪೀಸ್ನಾನದಿಂದ ಬರುವ ಮಹಾಫಲದ ಬಗ್ಗೆ ತಾವು ಇದುವರೆಗೆ ತಿಳಿಸಿ ಅನುಗ್ರಹಿಸಿದ್ದೀರಿ. ಆಷಾಢದಲ್ಲಿ ತಾಪೀನದಿಯ ಸ್ನಾನವು ಮನುಷ್ಯರ ಸರ್ವ ಪಾಪಗಳನ್ನು ಕಳೆಯುವಂಥದಾಗಿದೆ. ॥೧॥ ಮಹಿಮೋಪೇತವಾದ ಇಂಥ ಸ್ನಾನದ ವಿಧಿ ಯಾವುದು? ಸ್ನಾನದಿಂದ ಬರುವ ಪುಣ್ಯವೆಂಥದು? ಮತ್ತು ಆಗ ಪಾಲಿಸಬೇಕಾದ ನಿಯಮಗಳಾವವು? ಒಂದೊಂದು ನಿಯಮಕ್ಕೆ ಇರುವ ಫಲವಾವುದು? ಇದೆಲ್ಲವನ್ನೂ ನನಗೆ ತಿಳಿಸಿರಿ' ಎಂದು ಪ್ರಾರ್ಥಿಸಲು ॥೨॥ ಈಶ್ವರನು ಹೇಳುತ್ತಾನೆ- 'ಸ್ಕಂದಕುಮಾರಾ ಕೇಳು, ಯಾವನು ವಿಧಿಪೂರ್ವಕವಾಗಿ ಪ್ರಾತಃಕಾಲ ಮತ್ತು ಮಧ್ಯಾಹ್ನದಲ್ಲಿ ಸ್ನಾನ ಮಾಡುವನೋ ಅವನಿಗೆ ಎರಡುಪಟ್ಟು ಫಲವು ಬರುವದು. ಮೂರು ಹೊತ್ತು ಸ್ನಾನ ಮಾಡಿದರೆ ಮೂರು ಪಟ್ಟು ಫಲವಿದೆ. ॥೩॥ ಪಯೋಷ್ಣಿ ಸಂಗಮದಲ್ಲಿ ಸ್ನಾನವು ದೇವತೆಗಳಿಗೂ ದುರ್ಲಭವಾಗಿದೆ. ಆದ್ದರಿಂದಲೇ ಈ ಸಂಗಮದಲ್ಲಿ ಸ್ನಾನ ಮಾಡುವದರಿಂದ ನಾಲ್ಕು ಪಟ್ಟು ಫಲವು ಪ್ರಾಪ್ತವಾಗುವದೆಂದು ಜ್ಞಾನಿಗಳು ಹೇಳುತ್ತಾರೆ. ॥೪॥ ಇದರಂತೆಯೇ ಬಿಂದುಮತಿಯ ಸಂಗಮದಲ್ಲಿ ಮತ್ತು ತಾಪೀನದಿಯ ಉಗಮಸ್ಥಾನದಲ್ಲಿ ಮಾಡುವ ಸ್ನಾನವೂ ನಾಲ್ಕುಪಟ್ಟು ಫಲದಾಯಕವಾಗಿದೆ. ॥೫॥

ಗೋಮತ್ಯಾಃ ಸಂಗಮೇ ವೈ ತತ್ಸರ್ವಂ ಪಾಪಹರಂ ಸ್ಮೃತಮ್ ।
ಸಂಗಮೇ ಯತ್ರ ಕುತ್ರಾಪಿ ದ್ವಿಗುಣಂ ಪುಣ್ಯಮುಚ್ಯತೇ ॥೬॥

ತಥೈವ ದ್ವಿಗುಣಂ ಪ್ರೋಕ್ತಂ ಸ್ನಾನಂ ಶಂಕರಸನ್ನಿಧೌ ।
ಸನ್ನಿಧಾಯಾಸ್ಯ ಲಿಂಗಸ್ಯ ಚತುರ್ಗುಣಮುದಾಹೃತಮ್ ॥೭॥

ಶಾಲಿಗ್ರಾಮಶಿಲೋಪೇತಂ ತಥೈವಾಸ್ಯ ಚತುರ್ಗುಣಮ್ ।
ಸ್ನಾನಂ ಕುರ್ವಂತಿ ಮೌನೇನ ಸ್ಥಿತ್ವಾ ಚೈಕಾಗ್ರಮಾನಸಃ ॥೮॥

ಆದಿತ್ಯಂ ಮನಸಾ ಧ್ಯಾತ್ವಾ ಮಾರ್ಜಯೇತ್ಪಂಚ ವಾರುಣೈಃ ।
ಋಗ್ಭಿಸ್ತದ್ದೇವತಾಭಿಶ್ಚ ಮಾರ್ಜಯಿತ್ವಾ ತತಃ ಪರಮ್ ॥೯॥

ಸೂರ್ಯಪುತ್ರಿ ನಮಸ್ತುಭ್ಯಂ ನಮ ಆಷಾಢಸಂಭವೇ ।
ತ್ವತ್ಪ್ರಸಾದೇನ ಸಂಪೂರ್ಣಮಾಷಾಢಸ್ನಾನಮಸ್ತು ಮೇ ॥೧೦॥

ಇತಿ ಪ್ರಾರ್ಥ್ಯ ನಮಸ್ಕೃತ್ಯ ತತಃ ಸ್ನಾಯಾಚ್ಚ ವಾಗ್ಯತಃ ।
ಸ್ನಾನಾಂತೇ ತರ್ಪಣಂ ಕುರ್ಯಾತ್ ಪಿತೄನುದ್ದಿಶ್ಯ ವೈ ತತಃ ॥೧೧॥

ಗೋಮತಿಯ ಸಂಗಮದಲ್ಲಿ ಸ್ನಾನ ಮಾಡಿದರೆ ಸರ್ವಪಾಪಗಳು ನಾಶವಾಗಿ ಹೋಗುವವು. ಈ ನದಿಯ ಯಾವುದೇ ಸಂಗಮ ಸ್ಥಳದಲ್ಲಿ ಸ್ನಾನ ಮಾಡಿದರೂ ಎರಡುಪಟ್ಟು ಫಲವಿದೆ. ॥೬॥ ಅದರಂತೆಯೇ ಶಂಕರನ ಸನ್ನಿಧಾನದಲ್ಲಿ ಮಾಡುವ ಸ್ನಾನಕ್ಕೆ ಎರಡು ಪಟ್ಟು ಫಲವಿದೆ. ಇನ್ನು ಈಶ್ವರನ ಲಿಂಗವನ್ನು ನದೀತೀರದಲ್ಲಿ ಸ್ಥಾಪಿಸಿ ಅದರ ಸನ್ನಿಧಿಯಲ್ಲಿ ಮಾಡುವ ಸ್ನಾನದಿಂದ ಮತ್ತು ॥೭॥ ಶಾಲಿಗ್ರಾಮ ಶಿಲೆಯ ಸನ್ನಿಧಿಯಲ್ಲಿ ಮಾಡುವ ಸ್ನಾನದಿಂದ ನಾಲ್ಕು ಪಟ್ಟು ಫಲವು ಬರುವದು. ಏಕಾಗ್ರ ಮನಸ್ಸಿನಿಂದ ಮೌನಿಯಾಗಿದ್ದು ಸ್ನಾನ ಮಾಡಬೇಕು. ॥೮॥ ಮನದಲ್ಲಿ ಆದಿತ್ಯನನ್ನು ಧ್ಯಾನಿಸುತ್ತ ವಾರುಣ ಸೂಕ್ತದ ಐಯ್ದು ಋಕ್ಕುಗಳನ್ನು ಪಠಿಸುತ್ತ ಆ ಸೂಕ್ತದ ದೇವತೆಗಳನ್ನು ಸ್ಮರಿಸುತ್ತ ಜಲದಿಂದ ಮಾರ್ಜನ ಮಾಡಿಕೊಳ್ಳಬೇಕು. ॥೯॥ ಹೇ ಸೂರ್ಯಪುತ್ರಿಯೇ, ಆಷಾಢಮಾಸದಲ್ಲಿ ಪ್ರಾದುರ್ಭವಿಸಿದ ತಾಪಿಯೇ ! ನಿನಗೆ ನಮಸ್ಕರಿಸುತ್ತೇನೆ. ನಿನ್ನ ಅನುಗ್ರಹದಿಂದ ಆಷಾಢಮಾಸದಲ್ಲಿ ಮಾಡುವ ನನ್ನ ಸ್ನಾನವು ನಿರ್ವಿಘ್ನವಾಗಿ ಸಾಗಿ ಪೂರ್ಣಫಲವನ್ನು ಕೊಡುವಂಥದಾಗಲಿ. ॥೧೦॥ ಈ ರೀತಿ ಪ್ರಾರ್ಥಿಸಿ ನದಿಗೆ ನಮಸ್ಕರಿಸಿ ನಂತರ ಮೌನದಿಂದ ಸ್ನಾನ ಮಾಡಬೇಕು. ಸ್ನಾನಾನಂತರ ತನ್ನ ಪಿತೃಗಳನ್ನು ಉದ್ದೇಶಿಸಿ ತರ್ಪಣಗಳನ್ನು ಕೊಡಬೇಕು. ॥೧೧॥ ನಂತರ ಸೂರ್ಯನನ್ನು ಧ್ಯಾನಿಸುತ್ತ ಸೂರ್ಯೋಪಸ್ಥಾನವನ್ನು ಮಾಡಬೇಕು. ಸಂಕಲ್ಪಪೂರ್ವಕ ಸ್ನಾನ ಮಾಡಿದ ಮೇಲೆ

ತತೋ ರವೇರುಪಸ್ಥಾನಂ ಕುರ್ಯಾತ್ತದ್ಗತಮಾನಸಃ ।
ವಿಭ್ರಾಡ್ಬೃಹಚ್ಛಿವಸಂಕಲ್ಪಂ ಸೂಕ್ತಂ ವೈ ಪುರುಷಸಂಜ್ಞಕಮ್ ॥೧೨॥

ಮಂಡಲಂ ಬ್ರಾಹ್ಮಣಂ ತತ್ರ ನಿರ್ಗತ್ಯ ಚ ತತೋ ಬಹಿಃ ।
ಏವಂ ಸ್ನಾನವಿಧಿಂ ಕೃತ್ವಾ ದೇವತಾನಾಂ ಚ ಪೂಜನಮ್ ॥೧೩॥

ಹೋಮದಾನಂ ಯಥಾಶಕ್ತಿ ತತಃ ಕುರ್ಯಾದ್ವಿಚಕ್ಷಣಃ ।
ಏವಂ ಪ್ರತಿದಿನಂ ಕರ್ಮ ಮಾಸಂ ಯಾವತ್ಸಮಾಹಿತಃ ॥೧೪॥

ಯದ್ಯತ್ಕರೋತಿ ಭಕ್ತ್ಯಾತ್ರ ಅಕ್ಷಯ್ಯಂ ಸಫಲಂ ಭವೇತ್ ।
ಸರ್ವಪಾಪಹರಂ ಸ್ನಾನಂ ಯತ್ರ ತತ್ರ ಪ್ರಕೀರ್ತಿತಮ್ ॥೧೫॥

ಆಷಾಢೇ ಕುರುತೇ ಯಸ್ತು ಸೂರ್ಯಪುತ್ರ್ಯಾಃ ಪ್ರದಕ್ಷಿಣಾಮ್ ।
ಯೋಜನೆ ಯೋಜನೇ ಸ್ನಾನಂ ಕುರ್ವನ್ನೇಕಾಗ್ರಮಾನಸಃ ॥೧೬॥

ಪ್ರವಾಹಮೂಲಮಾರಭ್ಯ ಯಾವಚ್ಚ ಸರಿತಾಂಪತಿಃ ।
ವಿಮುಕ್ತಃ ಕರ್ಮಬಂಧೇಭ್ಯಃ ಕೈವಲ್ಯಂ ಸೋಽಧಿಗಚ್ಛತಿ ॥೧೭॥

ಬ್ರಹ್ಮಚರ್ಯೇಣ ಕುರುತೇ ಯೋಽಪಿ ಯಾವತ್ ಪ್ರದಕ್ಷಿಣಾಮ್ ।
ಸ ಬ್ರಹ್ಮಲೋಕಮಾಪ್ನೋತಿ ದುರ್ಲಭಂ ಮನುಜೈರಪಿ ॥೧೮॥

ಪುರುಷಸೂಕ್ತವನ್ನು ಪಠಿಸುತ್ತ ॥೧೨॥ ನದೀ ನೀರಿನಿಂದ ಹೊರಗೆ ಬರಬೇಕು. ಈ ಪ್ರಕಾರವಾಗಿರುವ ಸ್ನಾನವಿಧಿಯನ್ನು ಮುಗಿಸಿ ನಂತರ ದೇವಪೂಜೆ ಹಾಗೂ ಹೋಮಗಳನ್ನು ಮಾಡಿ ॥೧೩॥ ನಂತರ ಯಥಾಶಕ್ತಿ ದಾನಗಳನ್ನು ಕೊಡಬೇಕು. ಆಷಾಢಮಾಸದಲ್ಲಿ ಪ್ರತಿದಿನವೂ ಇಷ್ಟು ಕರ್ಮಗಳನ್ನು ತಪ್ಪದೇ ಮಾಡಬೇಕು. ॥೧೪॥ ಯಾವಾವುದನ್ನು ಭಕ್ತಿಯಿಂದ ಮಾಡುವನೋ ಅದು ಅಕ್ಷಯವಾದ ಫಲದಾಯಕವಾಗುವದು. ಆಷಾಢದಲ್ಲಿ ತಾಪೀಸ್ನಾನವು ಎಲ್ಲಿ ಮಾಡಲ್ಪಟ್ಟರೂ ಅದು ಸರ್ವಪಾಪಗಳನ್ನು ಕಳೆಯುವಂಥದಾಗಿರುವದು. ॥೧೫॥ ಈ ಆಷಾಢಮಾಸದಲ್ಲಿ ತಾಪೀನದಿಗೆ ಪ್ರದಕ್ಷಿಣಾಪೂರ್ವಕ ತಿರುಗುತ್ತ ನದೀಪ್ರವಾಹದ ಉಗಮಸ್ಥಳದಿಂದ ಪ್ರಾರಂಭಿಸಿ ಸಮುದ್ರವನ್ನು ಸೇರುವವರೆಗೆ ಒಂದೊಂದು ಯೋಜನ ನಡೆಯುವದಾದ ಮೇಲೆ ಏಕಾಗ್ರ ಮನಸ್ಸಿನಿಂದ ನದಿಯಲ್ಲಿ ಸ್ನಾನ ಮಾಡಿದರೆ ಅದರಿಂದ ಕರ್ಮಬಂಧನದಿಂದ ಮುಕ್ತಿಯಾಗಿ ಕೈವಲ್ಯ ಪ್ರಾಪ್ತಿಯಾಗುವದು. ॥೧೬॥೧೭॥ ಈ ಪ್ರಕಾರ ಪ್ರದಕ್ಷಿಣೆ ಹಾಗೂ ಸ್ನಾನಗಳನ್ನು ಬ್ರಹ್ಮಚರ್ಯ ವ್ರತದಿಂದ ಮಾಡಿದರೆ ಸಾಮಾನ್ಯ ಮಾನವರಿಗೂ ದುರ್ಲಭವಾದ ಬ್ರಹ್ಮಲೋಕದ ಪ್ರಾಪ್ತಿಯಾಗುವದು. ॥೧೮॥ ಒಂದೊಂದು ಯೋಜನ ನಡೆಯುವದಾದ ಮೇಲೆ ನದೀಸ್ನಾನ

ಯೋಜನೇ ಯೋಜನೇ ಸ್ನಾನಂ ಶುಚೌ ಗೋದಾನಪುಣ್ಯದಮ್ ।
ಸಮಗ್ರಫಲದಂ ಪ್ರೋಕ್ತಂ ಅಶಕ್ತಸ್ಯೋಷ್ಣವಾರಿಣಾ ॥೧೯॥

ಸ್ನಾನಾರ್ಧಫಲದಂ ಕಂಠಸ್ನಾನಂ ಸದ್ಭಿರ್ನಿಗದ್ಯತೇ ।
ಪಾದಸ್ಯ ಪಾದಫಲದಂ ಪಾದಾರ್ಧಸ್ಯಾಭಿಷೇಚನಮ್ ॥೨೦॥

ವೇದವೇದಾಂಗವಿದ್ಭಿಶ್ಚ ಮುನಿಭಿಃ ಪರಿಕೀರ್ತಿತಮ್ ।
ಸ್ನಾನಾನ್ಯೇತಾನ್ಯಶಕ್ತಸ್ಯ ಕೀರ್ತ್ಯಂತೇ ತ್ವನುಕಲ್ಪನಮ್ ॥೨೧॥

ಅನ್ಯದೇಶಸ್ಥಿತೋ ಯಸ್ತು ಪುಮಾನ್ ಮೃಲ್ಲಿಪ್ತವಿಗ್ರಹಃ ।
ಕುರ್ವನ್ನನ್ಯಜಲೈಃ ಸ್ನಾನಂ ಸ ಪಾದಫಲಮಶ್ನುತೇ ॥೨೨॥

ಏಕಭಕ್ತೇನ ಯಃ ಸ್ನಾಯಾತ್ಸ ಸ್ವರ್ಗಾತ್ಚ್ಯವತೇ ನ ತು ।
ಅಯಾಚಿತೇನ ತತ್ಪುಣ್ಯಂ ಸಪಾದಂ ಜಾಯತೇ ಪುನಃ ॥೨೩॥

ನಕ್ತಭೋಜೀ ನರಃ ಸ್ನಾತ್ವಾ ಬ್ರಹ್ಮಲೋಕೇ ಮಹೀಯತೇ ।
ಉಪವಾಸೀ ಸ್ನಾನಕರ್ತಾ ಪುನರ್ನೈವ ಪ್ರಜಾಯತೇ ॥೨೪॥

ಮಾಡುವದರಿಂದ ಗೋದಾನ ಮಾಡಿದಷ್ಟು ಪುಣ್ಯವು ಲಭಿಸುವದು. ಇನ್ನು ಅಶಕ್ತರಾದವರು ಬಿಸಿನೀರಿನಿಂದ ಸ್ನಾನ ಮಾಡಿದರೂ ಅವರಿಗೆ ಸಮಗ್ರ ಪುಣ್ಯಫಲವು ದೊರಕುವದು. ॥೧೯॥ ಅವಗಾಹನ ಸ್ನಾನ ಮಾಡದೇ ಕಂಠಸ್ನಾನ ಮಾಡಿದರೆ ಅರ್ಧಫಲವು ಬರುವದೆಂದು ಜ್ಞಾನಿಗಳು ಹೇಳುತ್ತಾರೆ. ಪಾದಸ್ನಾನದಿಂದ ಪಾದಫಲವು ಬರುವದು. ॥೨೦॥ ಈ ರೀತಿ ವಿವಿಧ ಪ್ರಕಾರದ ಸ್ನಾನಗಳಿಂದ ಬರುವ ಫಲವನ್ನು ವೇದವೇದಾಂಗಗಳನ್ನು ಬಲ್ಲ ಮುನಿಗಳು ತಮ್ಮ ಜ್ಞಾನಚಕ್ಷುಸ್ಸಿನಿಂದ ತಿಳಿದು ಪ್ರಕಟಪಡಿಸಿದ್ದಾರೆ. ಕಂಠಸ್ನಾನಾದಿಗಳು ಅಶಕ್ತರಿಗೆ ಮಾತ್ರ ಹೇಳಲ್ಪಟ್ಟವುಗಳಾಗಿವೆ. ॥೨೧॥ ಇನ್ನು ತಾಪೀ ತೀರದಿಂದ ದೂರದಲ್ಲಿರುವ ಪುರುಷನು ಮೈಗೆ ಮೃದ್ ಲೇಪಿಸಿಕೊಂಡು ಅಲ್ಲಿರುವ ಇತರ ಜಲಾಶಯದಲ್ಲಿ ಸ್ನಾನ ಮಾಡಿದರೆ ಪಾದಫಲವನ್ನು ಪಡೆಯುವನು. ॥೨೨॥ ಏಕಭಕ್ತದಿಂದ ಅಂದರೆ ದಿವಸಕ್ಕೆ ಒಂದು ಸಲ ಮಾತ್ರ ಮಧ್ಯಾಹ್ನದಲ್ಲಿ ಊಟ ಮಾಡುತ್ತ ಪ್ರತಿದಿನ ಸ್ನಾನ ಮಾಡುವದರಿಂದ ಸ್ವರ್ಗಲೋಕದಿಂದ ಚ್ಯುತಿಯಾಗುವದಿಲ್ಲ. ಇನ್ನು ಅಯಾಚಿತ ವೃತ್ತಿಯಿಂದ ಇದ್ದು ಸ್ನಾನ ಮಾಡಿದರೆ ಇದರ ಪಾದದಷ್ಟು ಪುಣ್ಯವು ಲಭಿಸುವದು. ॥೨೩॥ ಆಷಾಢಮಾಸದಲ್ಲಿ ಪ್ರತಿದಿನ ಪ್ರಾತಃಸ್ನಾನಾಹ್ನಿಕಗಳನ್ನು ಮಾಡಿ ರಾತ್ರಿ ಒಪ್ಪತ್ತು ಮಾತ್ರ ಊಟ ಮಾಡುವವನು (ನಕ್ತಭೋಜೀ) ಮರಣಾನಂತರ ಬ್ರಹ್ಮಲೋಕವನ್ನು ಹೊಂದುವನು. ಇನ್ನು ಯಾವನು ಪ್ರತಿನಿತ್ಯ ಸ್ನಾನಮಾಡಿ ಉಪವಾಸದಿಂದಲೇ ಇರುವನೋ ಅಂಥವನಿಗೆ ಪುನರ್ಜನ್ಮವೆಂಬುದು ಬರಲಾರದು. ॥೨೪॥ ಪ್ರತಿದಿನ ಸ್ನಾನಾಹ್ನಿಕ ಪೂಜಾದಿಗಳನ್ನು

ಫಲಭೋಜೀ ನರಃ ಸ್ನಾತ್ವಾ ಸೌತ್ರಾಮ್ಣೋ ಲೋಕಮಾಪ್ನುಯಾತ್ ।
ಪಯೋವ್ರತೇನ ಯಃ ಸ್ನಾತಿ ಸ್ವರ್ಗಲೋಕೇ ವಸೇಚ್ಚಿರಮ್ ॥೨೫॥

ಸ್ನಾನಂ ಕುರ್ವನ್ನೇಕಭೋಜೀ ಶಕ್ರಸ್ಯಾಪಿ ಸಲೋಕತಾಮ್ ।
ಧಾತ್ರೀಫಲೈಸ್ತಿಲೈರ್ವಾಪಿ ಸ್ನಾನಾತ್ ಸ್ವರ್ಗೇ ಮಹೀಯತೇ ॥೨೬॥

ಉಷ್ಣೋದಕಂ ಪರಿತ್ಯಜ್ಯ ಸ್ನಾನಂ ಕುರ್ಯಾತ್ಸಮಾಹಿತಃ ।
ವಾರುಣಂ ಲೋಕಮಾಸಾದ್ಯ ತತ್ರ ಭೋಗಾನ್ಸಮಶ್ನುತೇ ॥೨೭॥

ತೈಲಾಭ್ಯಂಗಂ ವರ್ಜಯಿತ್ವಾ ರೂಪವಾನ್ ಜಾಯತೇ ದಿವಿ ।
ಚಂದನಂ ತು ಪರಿತ್ಯಜ್ಯ ಚಂದ್ರಸ್ಯೈತಿ ಸಲೋಕತಾಮ್ ॥೨೮॥

ಪುಷ್ಪವರ್ಜೀ ನರೋ ಯಸ್ತು ನಂದನೇ ಭೋಗಭಾಗ್ಭವೇತ್ ।
ತತೋ ಮಹೀಂ ತು ನ ಪುನರಾಗಚ್ಛೇದ್ದೇವಮಧ್ಯತಃ ॥೨೯॥

ಕುರ್ವನ್ನಾಷಾಢಸವನಂ ನಖಲೋಮಧರೋ ಭವೇತ್ ।
ಸ್ವರ್ಗೇ ಕ್ರೀಡತ್ಯಪ್ಸರೋಭಿರ್ಯಾವದಾಭೂತಸಂಪ್ಲವಮ್ ॥೩೦॥

ಮುಗಿಸಿ ಹಣ್ಣುಗಳನ್ನು ಮಾತ್ರ ತಿನ್ನುವವನು ಸೌತ್ರಾಮಲೋಕವನ್ನು ಹೊಂದುವನು. ಸ್ನಾನಮಾಡಿ ಪಯೋವ್ರತದಿಂದ ಇರುವ ಪುರುಷನು ಬಹುಕಾಲದವರೆಗೆ ಸ್ವರ್ಗಲೋಕದಲ್ಲಿ ಸುಖದಿಂದ ಇರುವನು. ॥೨೫॥ ಪ್ರತಿದಿನ ಪ್ರಾತಃಸ್ನಾನ ಮಾಡುವದಲ್ಲದೇ ಏಕಭುಕ್ತಿಯಿಂದ ಇರುವವನೂ ಇಂದ್ರನ ಲೋಕವಾದ ಸ್ವರ್ಗವನ್ನು ಹೊಂದುವನು. ಧಾತ್ರೀಫಲ (ನೆಲ್ಲೀಕಾಯಿ) ಅಥವಾ ಎಳ್ಳು ಹಚ್ಚಿಕೊಂಡು ಸ್ನಾನ ಮಾಡಿದರೆ ಸ್ವರ್ಗಪ್ರಾಪ್ತಿಯಾಗುವದು. ॥೨೬॥ ಬಿಸಿನೀರನ್ನು ಬಿಟ್ಟು ತಣ್ಣೀರಿನಲ್ಲಿ ಸ್ನಾನ ಮಾಡಿದರೆ ವಾರುಣಲೋಕವನ್ನು ಹೊಂದಿ ಅಲ್ಲಿ ವಿವಿಧ ಭೋಗಗಳನ್ನು ಪಡೆದು ಸುಖದಿಂದ ಇರುವನು. ॥೨೭॥ ಈ ಮಾಸದಲ್ಲಿ ತೈಲಾಭ್ಯಂಗವನ್ನು ಮಾಡದಿದ್ದವನು ಮರಣಾನಂತರ ಸ್ವರ್ಗಲೋಕದಲ್ಲಿ ಬಹು ಸುರೂಪಿಯಾಗಿ ಇರುವನು. ಚಂದನವನ್ನು ಬಿಟ್ಟವನು ಚಂದ್ರಲೋಕವನ್ನು ಹೊಂದುವನು. ॥೨೮॥ ಹೂವುಗಳನ್ನು ಬಿಟ್ಟವನು ನಂದನವನದಲ್ಲಿದ್ದು ವಿವಿಧ ಭೋಗಗಳನ್ನು ಭೋಗಿಸುವನು ಮತ್ತು ಅಲ್ಲಿರುವ ದೇವತೆಗಳನ್ನು ಬಿಟ್ಟು ಅವನೆಂದಿಗೂ ಭೂ ಲೋಕಕ್ಕೆ ಮತ್ತೆ ಬರುವದಿಲ್ಲ. ॥೨೯॥ ಆಷಾಢ ಸ್ನಾನವನ್ನು ಮಾಡುವವನು ಉಗುರು ಕೂದಲುಗಳನ್ನು ಕತ್ತರಿಸಿಕೊಳ್ಳಬಾರದು. ಇಂಥವನು ಮರಣಾನಂತರ ಸ್ವರ್ಗದಲ್ಲಿದ್ದು ಪ್ರಲಯಕಾಲದವರೆಗೆ ಅಪ್ಸರ ಗಣಗಳಿಂದ ಕೂಡಿಕೊಂಡು ಅವರೊಂದಿಗೆ ಕ್ರೀಡಿಸುತ್ತಲಿರುವನು. ॥೩೦॥ ಏಕಾಂತದಲ್ಲಿ ಭೋಜನ

ಏಕಾಂತಭೋಜೀ ತು ನರೋ ಮುನಿಲೋಕಂ ಸಮಶ್ನುತೇ ।
ಗೋಧೂಮಾನ್ವರ್ಜಯಿತ್ವಾ ತು ಭೋಗವಾನ್ ದಿವಿ ಜಾಯತೇ ॥೩೦॥

ಯಃ ಫಲಂ ವರ್ಜಯಿತ್ವಾ ತು ದೇವೋ ವೈಮಾನಿಕೋ ಭವೇತ್ ।
ಮದ್ಯವರ್ಜೀ ರವೇರ್ಲೋಕಂ ಮಧುವರ್ಜೀ ಚ ಗಚ್ಛತಿ ॥೩೨॥

ಪರಾನ್ನಂ ವರ್ಜಯೇದ್ಯಸ್ತು ಸ ಯಾತಿ ಪರಮಾಂ ಗತಿಮ್ ।
ಭೂಮಿಶಾಯೀ ನರೋ ಯಸ್ತು ಶಕ್ರಲೋಕಂ ಸ ಗಚ್ಛತಿ ॥೩೩॥

ಬ್ರಹ್ಮಚರ್ಯೇಣ ಯೋ ಮರ್ತ್ಯೋ ಆಷಾಢೇ ಸ್ನಾನಮಾಚರೇತ್ ।
ಅಪ್ಸರೋಲೋಕಮಾಸಾದ್ಯ ಭುಂಕ್ತೇ ಭೋಗಾನ್ಮನೋರಮಾನ್ ॥೩೪॥

ವಾಂಛಿತಾನ್ ಲಭತೇ ಕಾಮಾನ್ನರಸ್ತಾಂಬೂಲವರ್ಜನಾತ್ ।
ಗಂಧರ್ವಲೋಕಮಾಪ್ನೋತಿ ನರೋ ಗಂಧಾನ್ ವಿವರ್ಜಯೇತ್ ॥೩೫॥

ಶಾಕಾಹಾರೇಣ ಯೋ ಮಾಸಂ ಆಷಾಢಸವನಂ ಚರೇತ್ ।
ಆತಿಥ್ಯಂ ದೇವತಾಭ್ಯಶ್ಚ ಲಭತೇ ಮಾನಪೂರ್ವಕಮ್ ॥೩೬॥

ಮಾಡುವವನು ಮುನಿಲೋಕವನ್ನು ಪಡೆಯುವನು. ಗೋದಿಯನ್ನು ಅಂದರೆ ಗೋದೀಹಿಟ್ಟಿನ ಪದಾರ್ಥಗಳನ್ನು ವರ್ಜಿಸಿದವನು ಮುಂದೆ ಸ್ವರ್ಗಲೋಕದಲ್ಲಿ ವಿವಿಧ ಭೋಗಗಳನ್ನು ಪಡೆಯುವನು. ॥೩೦॥ ಫಲಗಳನ್ನು ವರ್ಜಿಸಿದವನು ದೇವತೆಗಳ ವೈಮಾನಿಕನಾಗುವನು. ಮದ್ಯವನ್ನು ಬಿಟ್ಟವನು ಹಾಗೂ ಮಧುವನ್ನು ಬಿಟ್ಟವನು ರವಿಲೋಕವನ್ನು ಹೊಂದುವನು. ॥೩೨॥ ಈ ಆಷಾಢಮಾಸದಲ್ಲಿ ಪರಾನ್ನವನ್ನು ಬಿಟ್ಟವನಂತೂ ಪರಮಗತಿಯನ್ನು ಹೊಂದುವನು. ಭೂಶಾಯಿಯಾಗಿರುವವನು ಇಂದ್ರಲೋಕವನ್ನು ಪಡೆಯುವನು. ॥೩೩॥ ಅಷಾಢಮಾಸ ಪೂರ್ತಿ ಬ್ರಹ್ಮಚರ್ಯದಿಂದಿದ್ದು ಯಾವನು ನಿತ್ಯ ಪ್ರಾತಃಸ್ನಾನ ಮಾಡುವನೋ ಅವನು ಮುಂದೆ ಅಪ್ಸರಾಲೋಕವನ್ನು ಹೊಂದಿ ಅಲ್ಲಿ ಮನೋಹರವಾದ ವಿವಿಧ ಭೋಗಗಳನ್ನು ಹೊಂದುವನು. ॥೩೪॥ ತಾಂಬೂಲವನ್ನು ಬಿಟ್ಟವನು ತಾನು ಬಯಸಿದ ಕಾಮನೆಗಳನ್ನೆಲ್ಲ ಪಡೆಯುವನು. ಗಂಧವನ್ನು ಬಿಟ್ಟವನು ಮುಂದೆ ಗಂಧರ್ವಲೋಕವನ್ನು ಹೊಂದುವನು. ॥೩೫॥ ಕೇವಲ ಶಾಕಾಹಾರಗಳನ್ನು ಸ್ವೀಕರಿಸಿ ಯಾವನು ಆಷಾಢಮಾಸದಲ್ಲಿ ಸ್ನಾನವ್ರತವನ್ನು ಆಚರಿಸುವನೋ ಅವನು ಮರಣಾನಂತರ ದೇವತೆಗಳಿಂದ ಸಮ್ಮಾನಪೂರ್ವಕವಾದ ಅತಿಥ್ಯವನ್ನು ಪಡೆಯುವನು. ॥೩೬॥ ತ್ರಿಕಾಲದಲ್ಲಿ ಸೂರ್ಯನಿಗೆ ಮೂರು ಅರ್ಘ್ಯಗಳನ್ನು ಕೊಟ್ಟು ವಿಷ್ಣುವನ್ನಾಗಲೀ ಅಥವಾ

ಫಲಭೋಜೀ ನರಃ ಸ್ನಾತ್ವಾ ಸೌತ್ರಾಮ್ಣೋ ಲೋಕಮಾಪ್ನುಯಾತ್ ।
ಪಯೋವ್ರತೇನ ಯಃ ಸ್ನಾತಿ ಸ್ವರ್ಗಲೋಕೇ ವಸೇಚ್ಚಿರಮ್ ॥೨೫॥

ಸ್ನಾನಂ ಕುರ್ವನ್ನೇಕಭೋಜೀ ಶಕ್ರಸ್ಯಾಪಿ ಸಲೋಕತಾಮ್ ।
ಧಾತ್ರೀಫಲೈಸ್ತಿಲೈರ್ವಾಪಿ ಸ್ನಾನಾತ್ ಸ್ವರ್ಗೇ ಮಹೀಯತೇ ॥೨೬॥

ಉಷ್ಣೋದಕಂ ಪರಿತ್ಯಜ್ಯ ಸ್ನಾನಂ ಕುರ್ಯಾತ್ಸಮಾಹಿತಃ ।
ವಾರುಣಂ ಲೋಕಮಾಸಾದ್ಯ ತತ್ರ ಭೋಗಾನ್ಸಮಶ್ನುತೇ ॥೨೭॥

ತೈಲಾಭ್ಯಂಗಂ ವರ್ಜಯಿತ್ವಾ ರೂಪವಾನ್ ಜಾಯತೇ ದಿವಿ ।
ಚಂದನಂ ತು ಪರಿತ್ಯಜ್ಯ ಚಂದ್ರಸ್ಯೈತಿ ಸಲೋಕತಾಮ್ ॥೨೮॥

ಪುಷ್ಪವರ್ಜೀ ನರೋ ಯಸ್ತು ನಂದನೇ ಭೋಗಭಾಗ್ಭವೇತ್ ।
ತತೋ ಮಹೀಂ ತು ನ ಪುನರಾಗಚ್ಛೇದ್ದೇವಮಧ್ಯತಃ ॥೨೯॥

ಕುರ್ವನ್ನಾಷಾಢಸವನಂ ನಖಲೋಮಧರೋ ಭವೇತ್ ।
ಸ್ವರ್ಗೇ ಕ್ರೀಡತ್ಯಪ್ಸರೋಭಿರ್ಯಾವದಾಭೂತಸಂಪ್ಲವಮ್ ॥೩೦॥

ಮುಗಿಸಿ ಹಣ್ಣುಗಳನ್ನು ಮಾತ್ರ ತಿನ್ನುವವನು ಸೌತ್ರಾಮಲೋಕವನ್ನು ಹೊಂದುವನು. ಸ್ನಾನಮಾಡಿ ಪಯೋವ್ರತದಿಂದ ಇರುವ ಪುರುಷನು ಬಹುಕಾಲದವರೆಗೆ ಸ್ವರ್ಗಲೋಕದಲ್ಲಿ ಸುಖದಿಂದ ಇರುವನು. ॥೨೫॥ ಪ್ರತಿದಿನ ಪ್ರಾತಃಸ್ನಾನ ಮಾಡುವದಲ್ಲದೇ ಏಕಭುಕ್ತಿಯಿಂದ ಇರುವವನೂ ಇಂದ್ರನ ಲೋಕವಾದ ಸ್ವರ್ಗವನ್ನು ಹೊಂದುವನು. ಧಾತ್ರೀಫಲ (ನೆಲ್ಲೀಕಾಯಿ) ಅಥವಾ ಎಳ್ಳು ಹಚ್ಚಿಕೊಂಡು ಸ್ನಾನ ಮಾಡಿದರೆ ಸ್ವರ್ಗಪ್ರಾಪ್ತಿಯಾಗುವದು. ॥೨೬॥ ಬಿಸಿನೀರನ್ನು ಬಿಟ್ಟು ತಣ್ಣೀರಿನಲ್ಲಿ ಸ್ನಾನ ಮಾಡಿದರೆ ವಾರುಣಲೋಕವನ್ನು ಹೊಂದಿ ಅಲ್ಲಿ ವಿವಿಧ ಭೋಗಗಳನ್ನು ಪಡೆದು ಸುಖದಿಂದ ಇರುವನು. ॥೨೭॥ ಈ ಮಾಸದಲ್ಲಿ ತೈಲಾಭ್ಯಂಗವನ್ನು ಮಾಡದಿದ್ದವನು ಮರಣಾನಂತರ ಸ್ವರ್ಗಲೋಕದಲ್ಲಿ ಬಹು ಸುರೂಪಿಯಾಗಿ ಇರುವನು. ಚಂದನವನ್ನು ಬಿಟ್ಟವನು ಚಂದ್ರಲೋಕವನ್ನು ಹೊಂದುವನು. ॥೨೮॥ ಹೂವುಗಳನ್ನು ಬಿಟ್ಟವನು ನಂದನವನದಲ್ಲಿದ್ದು ವಿವಿಧ ಭೋಗಗಳನ್ನು ಭೋಗಿಸುವನು ಮತ್ತು ಅಲ್ಲಿರುವ ದೇವತೆಗಳನ್ನು ಬಿಟ್ಟು ಅವನೆಂದಿಗೂ ಭೂ ಲೋಕಕ್ಕೆ ಮತ್ತೆ ಬರುವದಿಲ್ಲ. ॥೨೯॥ ಅಷಾಢ ಸ್ನಾನವನ್ನು ಮಾಡುವವನು ಉಗುರು ಕೂದಲುಗಳನ್ನು ಕತ್ತರಿಸಿಕೊಳ್ಳಬಾರದು. ಇಂಥವನು ಮರಣಾನಂತರ ಸ್ವರ್ಗದಲ್ಲಿದ್ದು ಪ್ರಲಯಕಾಲದವರೆಗೆ ಅಪ್ಸರ ಗಣಗಳಿಂದ ಕೂಡಿಕೊಂಡು ಅವರೊಂದಿಗೆ ಕ್ರೀಡಿಸುತ್ತಲಿರುವನು. ॥೩೦॥ ಏಕಾಂತದಲ್ಲಿ ಭೋಜನ

ಏಕಾಂತಭೋಜೀ ತು ನರೋ ಮುನಿಲೋಕಂ ಸಮಶ್ನುತೇ ।
ಗೋಧೂಮಾನ್ವರ್ಜಯಿತ್ವಾ ತು ಭೋಗವಾನ್ ದಿವಿ ಜಾಯತೇ ॥೩೧॥

ಯಃ ಫಲಂ ವರ್ಜಯಿತ್ವಾ ತು ದೇವೋ ವೈಮಾನಿಕೋ ಭವೇತ್ ।
ಮದ್ಯವರ್ಜೀ ರವೇರ್ಲೋಕಂ ಮಧುವರ್ಜೀ ಚ ಗಚ್ಛತಿ ॥೩೨॥

ಪರಾನ್ನಂ ವರ್ಜಯೇದ್ಯಸ್ತು ಸ ಯಾತಿ ಪರಮಾಂ ಗತಿಮ್ ।
ಭೂಮಿಶಾಯೀ ನರೋ ಯಸ್ತು ಶಕ್ರಲೋಕಂ ಸ ಗಚ್ಛತಿ ॥೩೩॥

ಬ್ರಹ್ಮಚರ್ಯೇಣ ಯೋ ಮರ್ತ್ಯೋ ಆಷಾಢೇ ಸ್ನಾನಮಾಚರೇತ್ ।
ಅಪ್ಸರೋಲೋಕಮಾಸಾದ್ಯ ಭುಂಕ್ತೇ ಭೋಗಾನ್ಮನೋರಮಾನ್ ॥೩೪॥

ವಾಂಛಿತಾನ್ ಲಭತೇ ಕಾಮಾನ್ನರಸ್ತಾಂಬೂಲವರ್ಜನಾತ್ ।
ಗಂಧರ್ವಲೋಕಮಾಪ್ನೋತಿ ನರೋ ಗಂಧಾನ್ ವಿವರ್ಜಯೇತ್ ॥೩೫॥

ಶಾಕಾಹಾರೇಣ ಯೋ ಮಾಸಂ ಆಷಾಢಸವನಂ ಚರೇತ್ ।
ಆತಿಥ್ಯಂ ದೇವತಾಭ್ಯಶ್ಚ ಲಭತೇ ಮಾನಪೂರ್ವಕಮ್ ॥೩೬॥

ಮಾಡುವವನು ಮುನಿಲೋಕವನ್ನು ಪಡೆಯುವನು. ಗೋದಿಯನ್ನು ಅಂದರೆ ಗೋದೀಹಿಟ್ಟಿನ ಪದಾರ್ಥಗಳನ್ನು ವರ್ಜಿಸಿದವನು ಮುಂದೆ ಸ್ವರ್ಗಲೋಕದಲ್ಲಿ ವಿವಿಧ ಭೋಗಗಳನ್ನು ಪಡೆಯುವನು. ॥೩೧॥ ಫಲಗಳನ್ನು ವರ್ಜಿಸಿದವನು ದೇವತೆಗಳ ವೈಮಾನಿಕನಾಗುವನು. ಮದ್ಯವನ್ನು ಬಿಟ್ಟವನು ಹಾಗೂ ಮಧುವನ್ನು ಬಿಟ್ಟವನು ರವಿಲೋಕವನ್ನು ಹೊಂದುವನು. ॥೩೨॥ ಈ ಆಷಾಢಮಾಸದಲ್ಲಿ ಪರಾನ್ನವನ್ನು ಬಿಟ್ಟವನಂತೂ ಪರಮಗತಿಯನ್ನು ಹೊಂದುವನು. ಭೂಶಾಯಿಯಾಗಿರುವವನು ಇಂದ್ರಲೋಕವನ್ನು ಪಡೆಯುವನು. ॥೩೩॥ ಆಷಾಢಮಾಸ ಪೂರ್ತಿ ಬ್ರಹ್ಮಚರ್ಯದಿಂದಿದ್ದು ಯಾವನು ನಿತ್ಯ ಪ್ರಾತಃಸ್ನಾನ ಮಾಡುವನೋ ಅವನು ಮುಂದೆ ಅಪ್ಸರಾಲೋಕವನ್ನು ಹೊಂದಿ ಅಲ್ಲಿ ಮನೋಹರವಾದ ವಿವಿಧ ಭೋಗಗಳನ್ನು ಹೊಂದುವನು. ॥೩೪॥ ತಾಂಬೂಲವನ್ನು ಬಿಟ್ಟವನು ತಾನು ಬಯಸಿದ ಕಾಮನೆಗಳನ್ನೆಲ್ಲ ಪಡೆಯುವನು. ಗಂಧವನ್ನು ಬಿಟ್ಟವನು ಮುಂದೆ ಗಂಧರ್ವಲೋಕವನ್ನು ಹೊಂದುವನು. ॥೩೫॥ ಕೇವಲ ಶಾಕಾಹಾರಗಳನ್ನು ಸ್ವೀಕರಿಸಿ ಯಾವನು ಆಷಾಢಮಾಸದಲ್ಲಿ ಸ್ನಾನವ್ರತವನ್ನು ಆಚರಿಸುವನೋ ಅವನು ಮರಣಾನಂತರ ದೇವತೆಗಳಿಂದ ಸಮ್ಮಾನಪೂರ್ವಕವಾದ ಅತಿಥ್ಯವನ್ನು ಪಡೆಯುವನು. ॥೩೬॥ ತ್ರಿಕಾಲದಲ್ಲಿ ಸೂರ್ಯನಿಗೆ ಮೂರು ಅರ್ಘ್ಯಗಳನ್ನು ಕೊಟ್ಟು ವಿಷ್ಣುವನ್ನಾಗಲೀ ಅಥವಾ

ತ್ರಿಕಾಲಂ ವಿಷ್ಣುಮಭ್ಯರ್ಚ್ಯ ಮಹೇಶಂ ವಾಪಿ ಭಕ್ತಿತಃ ।
ಸೂರ್ಯತ್ರಿಕಂ ಕಾರಯತಿ ಸ ತಲ್ಲೋಕಂ ಸಮಶ್ನುತೇ ॥೩೭॥

ಸ್ನಾತ್ವಾ ಪೂರ್ವಂ ಜಪೇದ್ದೇವ್ಯಾ ಮಾಸೇ ಪ್ರತಿದಿನಂ ದ್ವಿಜಃ ।
ಬ್ರಹ್ಮಹತ್ಯಾದಿಕೈಃ ಪಾಪೈರ್ಮುಚ್ಯತೇ ನಾತ್ರ ಸಂಶಯಃ ॥೩೮॥

ತಿಲಹೋಮಸಹಸ್ರಂ ವಾ ಪ್ರಾಣಾಯಾಮಾಂಸ್ತು ಷೋಡಶ ।
ಕುರ್ವನ್ ಪೂರ್ವವಿಧಾನೇನ ಸರ್ವಮಾಯಾತಿಗೋ ಭವೇತ್ ॥೩೯॥

ವಿಷ್ಣುಲೋಕಮವಾಪ್ನೋತಿ ಕಲ್ಪಂ ಯಾವಚ್ಚ ತಿಷ್ಠತಿ ।
ತತೋ ವಸುಮತೀಂ ಪ್ರಾಪ್ಯ ಸಾರ್ವಭೌಮೋ ಭವೇನ್ನರಃ ॥೪೦॥

ವಿಷ್ಣೋರ್ನಾಮಸಹಸ್ರಂ ತು ಜಪೀ ಯಾವಚ್ಚ ತಿಷ್ಠತಿ ।
ತಾವದ್ವಸುಮತೀಂ ಪ್ರಾಪ್ಯ ಜಪನ್ ತಲ್ಲೋಕಮಶ್ನುತೇ ॥೪೧॥

ಅಷ್ಟೋತ್ತರಶತಂ ನಾಮ್ನಾಂ ತಪತ್ಯಾಂ ವಾ ಜಪೇನ್ನರಃ ।
ಭಕ್ತ್ಯಾ ಪರಮಯಾ ಯುಕ್ತ ಏಕಚಿತ್ತೋ ದೃಢವ್ರತಃ ॥೪೨॥

ಸೂರ್ಯಲೋಕಂ ಸ ಲಭತೇ ವಾಸಂ ಯತ್ರ ರವೇಃ ಸುತಾ ।
ಪ್ರಾಣಾನ್ ವಿದಧತಾ ತಾಪ್ಯಾಂ ಯಥಾಶಕ್ತ್ಯಾ ದಿನೇ ದಿನೇ ॥೪೩॥

ಮಹೇಶನನ್ನಾಗಲೀ ಭಕ್ತಿಯಿಂದ ಪೂಜಿಸುವವನು ಅವರವರ ಲೋಕಗಳ ವಾಸವನ್ನು ಪಡೆಯುವನು. ॥೩೭॥ ಈ ಮಾಸದೊಳಗೆ ಪ್ರತಿದಿನ ಪ್ರಾತಃ ಕಾಲದಲ್ಲಿ ಸ್ನಾನಮಾಡಿ ಗಾಯತ್ರೀ ಮಂತ್ರವನ್ನು ಜಪಿಸುವ ದ್ವಿಜನು ನಿಶ್ಚಿತವಾಗಿ ಬ್ರಹ್ಮಹತ್ಯಾದಿ ಪಾಪಗಳಿಂದ ಮುಕ್ತನಾಗುವನು. ॥೩೮॥ ಪ್ರತಿದಿನವೂ ವಿಧಿಪೂರ್ವಕ ಒಂದು ಸಹಸ್ರ ತಿಲಹೋಮಗಳನ್ನು ಮಾಡುವ ಅಥವಾ ಹದಿನಾರು ಪ್ರಾಣಾಯಾಮಗಳನ್ನು ಮಾಡುವ ನರನು ಇಹಲೋಕದಲ್ಲಿ ತನ್ನ ಅಜ್ಞಾನವನ್ನೆಲ್ಲ ಕಳೆದುಕೊಂಡು ಸಕಲ ಭೋಗಗಳನ್ನು ಹೊಂದಿ ॥೩೯॥ ಮರಣಾನಂತರ ವಿಷ್ಣುಲೋಕವನ್ನು ಹೊಂದಿ ಆ ಕಲ್ಪಾಂತದವರೆಗೆ ಅಲ್ಲಿರುವನು. ಅನಂತರ ಪುನಃ ಭೂಮಿಯಲ್ಲಿ ಹುಟ್ಟಿ ಸಾರ್ವಭೌಮರಾಜನಾಗುವನು. ॥೪೦॥ ಯಾವನು ನಿತ್ಯವೂ ಪ್ರಾತಃಸ್ನಾನಾನಂತರ ವಿಷ್ಣು ಸಹಸ್ರನಾಮಗಳನ್ನು ಜಪಿಸುವನೋ ಅವನು ಅಷ್ಟು ವರ್ಷಗಳವರೆಗೆ ಭೂಮಂಡಲಾಧಿಪನಾಗಿ ಮುಂದೆ ವಿಷ್ಣುಲೋಕವನ್ನು ಹೊಂದುವನು. ॥೪೧॥ ತಾಪೀತೀರದಲ್ಲಿದ್ದು ಆಷಾಢಮಾಸದಲ್ಲಿ ನಿತ್ಯ ಸ್ನಾನಾನಂತರ ಪರಮಭಕ್ತಿಯಿಂದ ಏಕಾಗ್ರಚಿತ್ತನಾಗಿ ವಿಷ್ಣುವಿನ ಅಷ್ಟೋತ್ತರ ಶತನಾಮಗಳನ್ನು ಜಪಿಸುವವನು ॥೪೨॥ ಮರಣಾನಂತರ ತಾಪೀನದಿಯು ವಾಸಿಸುವ ಸೂರ್ಯಲೋಕವನ್ನು ಪಡೆಯುವನು. ಮೊದಲು ಪ್ರತಿ ದಿನ ಭಕ್ತಿಯಿಂದ

ಭಕ್ತ್ಯಾ ಸ್ನಾನಂ ವಿಧಾಯಾದೌ ಲಭತೇ ಪೂರ್ವವತ್ಫಲಮ್ ॥೪೪॥

ಸ್ನಾತ್ವಾ ಯಃ ಕುರುತೇ ದೀಪಂ ಮಾಸಮೇಕಂ ನಿರಂತರಮ್ ।
ಆಯತನೇ ತು ಲೋಕಾನಾಂ ತತ್ತಲ್ಲೋಕಮುಪೈತಿ ಚ ॥೪೫॥

ಜ್ಯೇಷ್ಠಪೂರ್ಣಿಮಾದಿ ಕೃತ್ವಾ ಯಾವದಾಷಾಢಪೂರ್ಣಿಮಾ ।
ತಾವತ್ ಸ್ನಾನಂ ಪ್ರಕುರ್ವೀತ ತಸ್ಯ ಪುಣ್ಯಂ ಮಹತ್ತರಮ್ ॥೪೬॥

ಯದ್ಯಾಷಾಢದ್ವಯಂ ವರ್ಷೇ ಕದಾಚಿದುಪಪದ್ಯತೇ ।
ತದಾ ದ್ವಿತೀಯೋ ಯೋ ಸ್ನಾತ್ವಾ ದ್ವಿಗುಣಂ ಫಲಮಾಪ್ನುಯಾತ್ ॥೪೭॥

ಆಷಾಢಸ್ನಾಯಿನೋ ವತ್ಸ ಶೃಣು ದಾನಫಲಂ ಮಹತ್ ।
ಯೇನ ದಾನೇನ ಪುರುಷೋ ಲಭತೇ ವಾಂಛಿತಂ ಫಲಮ್ ॥೪೮॥

ಧೇನುಂ ದದಾತಿ ವಿಪ್ರಾಯ ಪ್ರತ್ಯಹಂ ಯಃ ಪಯಸ್ವಿನೀಮ್ ।
ವಿಮುಕ್ತಃ ಪಾತಕೈಃ ಸರ್ವೈಃ ಸೂರ್ಯಲೋಕೇ ಸ ಪೂಜ್ಯತೇ ॥೪೯॥

ತಾಪೀನದಿಯಲ್ಲಿ ಸ್ನಾನಮಾಡಿ ಅನಂತರ ಯಥಾಶಕ್ತಿ ಪ್ರಾಣಾಯಾಮಗಳನ್ನು ಮಾಡುವ ನರನೂ ಕೂಡ ಸೂರ್ಯಲೋಕವನ್ನೇ ಹೊಂದುವನು. ॥೪೩॥೪೪॥ ನದೀಸ್ನಾನಾನಂತರ ಯಾವನು ಮಾಸಪೂರ್ತಿ ನಿರಂತರ ಒಂದು ದೀಪವನ್ನು ಹಚ್ಚುವನೋ ಅವನು ಸಕಲ ಲೋಕಗಳಿಗೆ ಆಶ್ರಯನಾದ ವಿಷ್ಣುವಿನಲ್ಲಿರುವ ಒಂದೊಂದು ಉತ್ತಮವಾದ ಲೋಕವನ್ನು ಹೊಂದುವನು. ॥೪೫॥ ಜ್ಯೇಷ್ಠ ಪೌರ್ಣಿಮೆಯಿಂದ ಪ್ರಾರಂಭಿಸಿ ಆಷಾಢ ಪೌರ್ಣಿಮೆಯವರೆಗೆ ನಿತ್ಯವೂ ಪ್ರಾತಃಕಾಲದಲ್ಲಿ ನದೀಸ್ನಾನವನ್ನು ಮಾಡಬೇಕು. ಇದರಿಂದ ಅಧಿಕವಾದ ಪುಣ್ಯವು ಪ್ರಾಪ್ತವಾಗುವದು. ॥೪೬॥ ಯಾವುದಾದರೂ ಒಂದು ವರ್ಷದಲ್ಲಿ ಎರಡು ಆಷಾಢಮಾಸಗಳು ಬಂದರೆ ಅಂದರೆ (ಅಧಿಕ ಆಷಾಢ ಮತ್ತು ನಿಜ ಆಷಾಢ) ಆಗ ನಿಜ ಆಷಾಢದಲ್ಲಿ ಪ್ರಾತಃಸ್ನಾನ ಮಾಡುವವನು ಎರಡುಪಟ್ಟು ಅಧಿಕವಾದ ಫಲವನ್ನು ಹೊಂದುವನು. ॥೪೭॥ ಹೇ ಸ್ಕಂದಕುಮಾರಾ, ವಿವಿಧ ದಾನಗಳನ್ನು ಕೊಡುತ್ತ ಆಷಾಢ ಸ್ನಾನ ವ್ರತವನ್ನು ಆಚರಿಸುವವರಿಗೆ ಬರುವ ಮಹಾಫಲದ ಬಗ್ಗೆ ತಿಳಿಸುವೆನು ಕೇಳು. ಈ ದಾನಗಳನ್ನು ಕೊಡುವದರಿಂದ ವ್ರತಿಯು ನಿಶ್ಚಿತವಾಗಿ ವಾಂಛಿತ ಫಲಗಳನ್ನು ಪಡೆಯುವನು. ॥೪೮॥ ಪ್ರತಿದಿನ ಯಾವನು ಸಾತ್ವಿಕನಾದ ಒಬ್ಬ ವಿಪ್ರನಿಗೆ ಹಾಲು ಕೊಡುವ ಒಂದು ಗೋವನ್ನು ದಾನವಾಗಿ ಕೊಡುವನೋ ಅವನು ಸಕಲ ಪಾತಕಗಳಿಂದ ಮುಕ್ತನಾಗಿ ಮರಣಾನಂತರ ಸೂರ್ಯಲೋಕವನ್ನು ಹೊಂದಿ ಅಲ್ಲಿ ದೇವತೆಗಳಿಂದ ಸತ್ಕರಿಸಲ್ಪಡುವನು. ॥೪೯॥ ಮತ್ತು ಅಲ್ಲಿ ಅವನು, ಆಕಾಶದಲ್ಲಿ ಸೂರ್ಯನು

ಯಾವತ್ತಪತಿ ಸೂರ್ಯಃ ಖೇ ತಾವತ್ಕಾಲಂ ಸ ತಿಷ್ಠತಿ ।
ಪಶ್ಚಾತ್ಸ ವಿಷ್ಣುಸಾಯುಜ್ಯಂ ದುರ್ಲಭಂ ಪ್ರತಿಪದ್ಯತೇ ॥೫೦॥

ಸ್ವಶಕ್ತ್ಯಾ ಮಾಸಪಕ್ಷೌ ತು ಪಕ್ಷಾರ್ಧಂ ವಾ ತದರ್ಧಕಮ್ ।
ದಾನಂ ದದಾತಿ ಯೋ ವಿಪ್ರಃ ಸೋಽಪಿ ತತ್ ಫಲವಾನ್ಭವೇತ್ ॥೫೧॥

ವಿತ್ತಶಾಠ್ಯಂ ಪ್ರಕುರ್ವಾಣೋ ದದದ್ವಾಪಿ ಜರದ್ಗವಮ್ ।
ಪುಣ್ಯಂ ಕಿಂಚಿನ್ನ ಲಭತೇ ನರಃ ಪ್ರತ್ಯುತ ಪಾಪಭಾಕ್ ॥೫೨॥

ಪ್ರತ್ಯಹಂ ಗಜದಾನಾಚ್ಚ ಶಕ್ರೋ ಭವತಿ ನಿಶ್ಚಿತಮ್ ।
ರಥದಾನಾತ್ ಮಹತ್ವಂ ಚ ಹಯದಾನಾತ್ತದುನ್ನತಾ ॥೫೩॥

ಗೋದಾನತೋ ದಶಗುಣಂ ಫಲಂ ತ್ವನಡುಹಂ ಸ್ಮೃತಮ್ ।
ಧುರ್ಯಾಣಾಂ ಬಲಯುಕ್ತಾನಾಂ ತರುಣಾನಾಂ ತರಸ್ವಿನಾಮ್ ॥೫೪॥

ಏವಂ ತು ಮಹಿಷೀದಾನಾತ್ ಪತಿರಪ್ಸರಸಾಂ ಭವೇತ್ ।
ಕಲ್ಪಮೇಕಂ ವಸೇತ್ತತ್ರ ಭುಂಕ್ತೇ ಭೋಗಾನ್ ಯಥೇಪ್ಸಿತಾನ್ ॥೫೫॥

ಪ್ರಕಾಶಿಸುವಷ್ಟು ಕಾಲದವರೆಗೆ ವಾಸವಾಗಿದ್ದು ಮುಂದೆ ದುರ್ಲಭವಾದ ವಿಷ್ಣುಸಾಯುಜ್ಯವನ್ನು ಹೊಂದುವನು. ॥೫೦॥ ಇನ್ನು ಆಷಾಢಮಾಸದಲ್ಲಿ ಪ್ರತಿದಿನವೂ ಗೋದಾನ ಕೊಡುವ ಶಕ್ತಿ ಇಲ್ಲದವನು ಹದಿನೈದು ದಿನಗಳವರೆಗಾಗಲೀ ಅಥವಾ ಏಳು ದಿನಗಳವರೆಗಾಗಲೀ ಗೋದಾನ ಕೊಟ್ಟರೂ ಅವನಾದರೂ ತಿಂಗಳು ಪೂರ್ತಿ ಗೋದಾನ ಕೊಡುವವನ ಫಲವನ್ನೇ ಪಡೆಯುವನು. ॥೫೧॥ ವಿತ್ತಶಾಠ್ಯವನ್ನು ಮಾಡುವವನಾಗಲೀ ಅಥವಾ ಮುದಿ ಆಕಳನ್ನು ದಾನ ಕೊಟ್ಟವನಾಗಲೀ ಎಳ್ಳಷ್ಟೂ ಪುಣ್ಯವನ್ನು ಪಡೆಯದೇ ಕೇವಲ ಪಾಪಭಾಗಿಯಾಗುವರು. ॥೫೨॥ ಇನ್ನು ಪ್ರತಿದಿನ ಒಂದೊಂದು ಆನೆಯನ್ನು ದಾನವಾಗಿ ಕೊಟ್ಟವನು ಮುಂದೆ ನಿಶ್ಚಿತವಾಗಿ ಇಂದ್ರಪದವಿಯನ್ನು ಪಡೆಯುವನು. ರಥದಾನದಿಂದ ಉನ್ನತವಾದ ಸ್ಥಾನವೂ, ಹಯದಾನದಿಂದ ಉನ್ನತತರವಾದ ಸ್ಥಾನವೂ ದೊರಕುವವು. ॥೫೩॥ ಗೋದಾನಕ್ಕಿಂತಲೂ ವೃಷಭ ದಾನವು ಹತ್ತುಪಟ್ಟು ಅಧಿಕವಾದ ಪುಣ್ಯಪ್ರದವಾಗಿದೆ. ಬಲಯುಕ್ತವಾದ, ವೇಗದಿಂದ ಓಡುವ, ನೊಗಕ್ಕೆ ಹೂಡಲು ಬರುವ ಹರೆಯದ ಎತ್ತುಗಳನ್ನು ದಾನವಾಗಿ ಕೊಡಬೇಕು. ॥೫೪॥ ಮಹಿಷೀ ದಾನದಿಂದ ಅಪ್ಸರೆಯರ ಅಧಿಪನಾಗಿ ಒಂದು ಕಲ್ಪದವರೆಗೆ ಅಪ್ಸರಾಲೋಕದಲ್ಲಿದ್ದು ಅಲ್ಲಿ ಯಥೇಪ್ಸಿತವಾದ ಭೋಗಗಳನ್ನು ಭೋಗಿಸುವನು. ॥೫೫॥ ಫಲವತ್ತಾದ ಭೂಮಿಯನ್ನು ಪ್ರತಿದಿನ

ವರ್ಷಾಶನಕ್ಷಮಾಂ ಭೂಮಿಂ ದ್ವಿಜಾಯ ಪ್ರತ್ಯಹಂ ದದತ್ ।
ಬ್ರಹ್ಮಲೋಕಂ ಸಮಾಸಾದ್ಯ ಕಲ್ಪಸ್ಥಾಯೀ ಭವೇನ್ನರಃ ॥೫೬॥

ಅನ್ವಹಂ ಯಃ ಸಹಸ್ರಾಣಾಂ ವಿಪ್ರಾಣಾಂ ಭೋಜಯೇನ್ನರಃ ।
ತಾಪೀತಟೇ ಕಾರಯತಿ ಸತ್ಯಲೋಕಂ ಸ ಗಚ್ಛತಿ ॥೫೭॥

ಕಲ್ಪಮೇಕಂ ಸ ತತ್ರಸ್ಥಃ ಪೂಜ್ಯತೇ ವಿವಿಧೈರಪಿ ।
ತತೋ ಮೋಕ್ಷಪದಂ ಯಾತಿ ಯತ್ಸುರೈರಪಿ ದುರ್ಲಭಮ್ ॥೫೮॥

ವಿತ್ತಶಾಠ್ಯಂ ಪರಿತ್ಯಜ್ಯ ಸ್ವಶಕ್ತ್ಯಾ ಯಸ್ತು ಭೋಜಯೇತ್ ।
ತತೋಽರ್ಧಂ ವಾ ತದರ್ಧಂ ವಾ ತತ್ರ ಷಷ್ಟಿಮಥಾಪಿ ವಾ ॥೫೯॥

ವಿಂಶತಿಂ ವಾ ಚತುರ್ಯುಕ್ತಾನಥ ದ್ವಾದಶ ಭೋಜಯೇತ್ ।
ತದೇವ ಫಲಮಾಪ್ನೋತಿ ತಥಾ ಏಕಂ ಚ ಭೋಜಯೇತ್ ॥೬೦॥

ವಸ್ತ್ರದಾನಾನ್ನರೋ ಯಾತಿ ಲೋಕಂ ಶ್ರೇಷ್ಠಂ ಪ್ರಜಾಪತೇಃ ।
ದುಕೂಲದಾನಶಕ್ತೋಽಪಿ ವಸ್ತ್ರಂ ಕಾರ್ಪಾಸಿಕಂ ದದತ್ ॥೬೧॥

ನ ತಸ್ಯ ಫಲಮಾಪ್ನೋತಿ ತಸ್ಯ ದಾನಂ ನಿರರ್ಥಕಮ್ ।
ತಾಂಬೂಲದಾನಾತ್ ಪುರುಷೋ ಭೋಗೈರ್ನ ಪರಿಹೀಯತೇ ॥೬೨॥

ಬ್ರಾಹ್ಮಣನಿಗೆ ದಾನ ಕೊಡುವ ಪುರುಷನು ಬ್ರಹ್ಮಲೋಕವನ್ನು ಹೊಂದಿ ಅಲ್ಲಿ ಕಲ್ಪಾಂತದವರೆಗೆ ಸುಖದಿಂದ ವಾಸ ಮಾಡುವನು. ॥೫೬॥ ತಾಪೀತಟದಲ್ಲಿ ನಿತ್ಯವೂ ಸಹಸ್ರ ಬ್ರಾಹ್ಮಣರಿಗೆ ಭೋಜನ ಮಾಡಿಸುವವನು ಮರಣಾನಂತರ ಸತ್ಯಲೋಕವನ್ನು ಪಡೆಯುವನು. ॥೫೭॥ ಅಲ್ಲಿ ಕಲ್ಪಾಂತದವರೆಗೆ ವಾಸವಾಗಿದ್ದು ಸಕಲರಿಂದ ಪೂಜಿಸಲ್ಪಡುವನು. ಕೊನೆಗೆ ಕಲ್ಪಾವಸಾನದಲ್ಲಿ ಸುರರಿಗೂ ದುರ್ಲಭವಾದ ಮೋಕ್ಷಪದವನ್ನು ಹೊಂದುವನು. ॥೫೮॥ ವಿತ್ತಶಾಠ್ಯವನ್ನು ಮಾಡದೇ ತನ್ನ ಶಕ್ತ್ಯನುಸಾರವಾಗಿ ೫೦೦ ಜನರಿಗಾಗಲೀ ಅಥವಾ ೨೫೦ ಜನರಿಗಾಗಲೀ ಅಥವಾ ೬೦ ಜನರಿಗಾಗಲೀ ॥೫೯॥ ಅಥವಾ ೨೪ ಜನರಿಗಾಗಲೀ ಅಥವಾ ಕೊನೆಯಪಕ್ಷ ೧೨ ಜನ ಬ್ರಾಹ್ಮಣರಿಗಾಗಲೀ ತಾಪೀತಟದಲ್ಲಿ ಭೋಜನ ಮಾಡಿಸಬೇಕು. ಇಷ್ಟೂ ಶಕ್ತಿ ಇಲ್ಲದವನು ಒಬ್ಬ ಬ್ರಾಹ್ಮಣನಿಗೆ ಭೋಜನ ಮಾಡಿಸಿದರೂ ಸಹಸ್ರ ಬ್ರಾಹ್ಮಣರಿಗೆ ಭೋಜನ ಮಾಡಿಸಿದಷ್ಟೇ ಫಲವನ್ನು ಪಡೆಯುವನು. ॥೬೦॥ ವಸ್ತ್ರದಾನ ಮಾಡಿದರೆ ಪ್ರಜಾಪತಿಯ ಉತ್ತಮವಾದ ಲೋಕವು ಲಭಿಸುವದು. ರೇಶ್ಮೆ ವಸ್ತ್ರಗಳನ್ನು ದಾನಕೊಡಲು ಸಾಮರ್ಥ್ಯವಿದ್ದಾಗಲೂ ಹತ್ತಿಯ ಬಟ್ಟೆಗಳನ್ನು ದಾನ ಕೊಟ್ಟರೆ ॥೬೧॥

ಫಲದಾನಾದ್ಭವೇತ್ಸಿದ್ಧಿಃ ಸಂತತಿಂ ಚಾಪ್ನುಯಾನ್ನರಃ ।
ಉಪಾನಹೌ ನರೋ ದತ್ವಾ ಪಾದಚಾರೀ ನ ಜಾಯತೇ ॥೯೩॥

ತಾಮ್ರಂ ಕಾಂಸ್ಯಮಾರಕೂಟಂ ಜಲಪಾತ್ರಂ ದದಾತಿ ಯಃ ।
ಪಾಯಸಂ ಯಾವಕಂ ದತ್ವಾ ದೇವೈಃ ಪೀಯೂಷಭಾಗ್ಭವೇತ್ ॥೯೪॥

ರೌಪ್ಯದಾನಾತ್ಕಲತ್ರಾಣಿ ಸುರೂಪಾಣಿ ಲಭೇತ್ತತಃ ।
ಗೋಧೂಮಶಾಲಿಮುದ್ರಾನಾಂ ತಥೈವ ಯವಮಾಷಯೋಃ ॥೯೫॥

ವ್ರೀಹೀಣಾಂ ಚ ತಿಲಾನಾಂ ಚ ಕ್ಷೇತ್ರಾಣಿ ಫಲವಂತಿ ಚ ।
ದದಾತಿ ಕಾಲೇ ಸಂಕಲ್ಪ್ಯ ತಸ್ಯ ಪುಣ್ಯಂ ನಿಬೋಧಯ ॥೯೬॥

ಯಾವಂತೋ ಹಿ ಕಣಾಸ್ತೇಷಾಂ ತತ್ತತ್ ದ್ವಿಗುಣಸಂಜ್ಞಯಾ ।
ವರ್ಷಾಣಿ ವಸತೇ ಸ್ವರ್ಗೇ ದೇವತಾತುಲ್ಯಭಾಗ್ಭವೇತ್ ॥೯೭॥

ಅನ್ಯೇಷಾಮಪಿ ಧಾನ್ಯಾನಾಂ ದತ್ವಾ ಕ್ಷೇತ್ರಾಣಿ ಮಾನವಃ ।
ತದ್ಬೀಜಸಂಖ್ಯಯಾ ಸ್ವರ್ಗೇ ವರ್ಷಾಣಿ ಸಹ ನಿರ್ಜರೈಃ ॥೯೮॥

ಆದರಿಂದ ಯಾವ ಫಲವೂ ಬಾರದು ಮತ್ತು ಕೊಟ್ಟ ದಾನವು ನಿರರ್ಥಕವಾಗುವದು. ತಾಂಬೂಲದಾನ ಕೊಡುವ ಪುರುಷನಿಗೆ ಯಾವ ಪ್ರಕಾರದಿಂದಲೂ ಭೋಗಗಳ ಕೊರತೆಯಾಗುವದಿಲ್ಲ. ॥೯೨॥ ಫಲದಾನದಿಂದ ಇಷ್ಟಸಿದ್ಧಿಯಾಗುವುದಲ್ಲದೇ ಸಂತತಿಯ ಅಭಿವೃದ್ಧಿಯಾಗುವದು. ಪಾದರಕ್ಷೆಗಳ ದಾನದಿಂದ ದಾನಿಯು ಪಾದಚಾರಿಯಾಗುವ ಪ್ರಸಂಗವು ಬರುವದಿಲ್ಲ. ॥೯೩॥ ನೀರು ಕುಡಿಯಲು ತಾಮ್ರದ ಅಥವಾ ಕಂಚಿನ ಪಾತ್ರೆಯ ತುಂಬ ಪಾಯಸವನ್ನು ಹಾಕಿ ದಾನ ಮಾಡುವದರಿಂದ ದೇವತೆಗಳು ಮುಂದೆ ಅಮೃತಪಾನ ಮಾಡಿಸುವರು. ॥೯೪॥ ರೌಪ್ಯದಾನದಿಂದ ಸುರೂಪಿಯಾದ ಹೆಂಡತಿಯು ದೊರೆಯುವಳು. ಹೇ ವತ್ಸಾ! ಗೋದಿ, ಭತ್ತ, ಹೆಸರು, ಜವೆಗೋದಿ, ಉದ್ದು ॥೯೫॥ ಮತ್ತು ತಿಲ ಇವುಗಳು ಫಲವತ್ತಾಗಿ ಬೆಳೆಯುವ ಹೊಲಗದ್ದೆಗಳನ್ನು ಯಾವನು ಸಂಕಲ್ಪಪೂರ್ವಕ ದಾನ ಮಾಡುವನೋ ಅವನ ಪುಣ್ಯವನ್ನು ತಿಳಿಸುವೆನು ಕೇಳು. ॥೯೬॥ ಈ ಧಾನ್ಯಗಳ ಕಣಗಳೆಷ್ಟಿವೆಯೋ ಅಷ್ಟು ಸಂಖ್ಯೆಯ ಎರಡುಪಟ್ಟು ವರ್ಷಗಳವರೆಗೆ ದಾನಿಯು ಸ್ವರ್ಗಲೋಕದಲ್ಲಿದ್ದು ಅಲ್ಲಿ ದೇವತಾ ಸದೃಶನಾಗಿ ವಿರಾಜಿಸುವನು. ॥೯೭॥ ಗೋದಿ ಮೊದಲಾದ ಧಾನ್ಯಗಳಲ್ಲದೇ ಇತರ ಧಾನ್ಯಗಳ ಸಂಖ್ಯೆಯಷ್ಟು ವರ್ಷಗಳವರೆಗೆ ಸ್ವರ್ಗ ಲೋಕದಲ್ಲಿದ್ದು ದೇವತೆಗಳಂತೆ ಶೋಭಿಸುತ್ತ ಅವರೊಂದಿಗೆ ॥೯೮॥ ಕ್ರೀಡಿಸುತ್ತ ಸ್ವಚ್ಛಂದವಾಗಿರುವನು. ಇನ್ನು ಯಾವನು ಗೃಹದಾನವನ್ನು ಮಾಡುವನೋ ಅವನ

ರಮಮಾಣೋ ಯಥಾಕಾಮಂ ವಾಸಾಯ ಪರಿಕಲ್ಪತೇ ।
ಗೃಹಂ ದದಾತಿ ಯಶ್ಚಾನ್ಯೋ ತಸ್ಯ ಪುಣ್ಯಫಲಂ ಶೃಣು ॥೬೯॥

ನಿತ್ಯೈಕಭೂಮಿಕಂ ವಾಪಿ ಕಾಷ್ಠಪಾಷಾಣನಿರ್ಮಿತಮ್ ।
ಚಿತ್ರಿತಂ ವರ್ಣಕೈಶ್ಚಿತ್ರೈಃ ಸರ್ವೋಪಸ್ಕರಸಂಯುತಮ್ ॥೭೦॥

ಸ ವಿಷ್ಣುಲೋಕಮಾಸಾದ್ಯ ಸ್ವರ್ಣರತ್ನಾದಿನಿರ್ಮಿತೇ ।
ಪ್ರಾಸಾದೇ ರಮತೇ ನಿತ್ಯಂ ಸರ್ವೋಪಸ್ಕರಸಂಯುತೇ ॥೭೧॥

ಸಹ ದಿವ್ಯಪುರಂಧ್ರೀಭಿಃ ಕಲ್ಪಂ ಯಾವನ್ಮುದಾನ್ವಿತಃ ।
ತಾವತ್ಕಾಲಂ ವಸೇತ್ ಬ್ರಹ್ಮಲೋಕಂ ಚ ಸ್ವೇಷ್ಟಕಾರ್ಯಕೃತ್ ॥೭೨॥

ಗೃಹಕಾಷ್ಠಾನಿ ವೈ ದತ್ವಾ ಶಕ್ರಲೋಕಂ ಪ್ರಯಾತಿ ಸಃ ।
ಯಾವತ್ಕಾಲಂ ಭವೇಚ್ಛೇಂದ್ರಸ್ತಾವತ್ಕಾಲಮವಸ್ಥಿತಿಃ ॥೭೩॥

ದಾತಾತ್ರ ಸೃಪ್ತಧಾನ್ಯಾನಾಂ ನಿಜವಿತ್ತಾನುಸಾರತಃ ।
ಖಾರಿದ್ರೋಣಾಢಕಪ್ರಸ್ಥಕುಡವಾನಾಂ ಚ ಸಂಖ್ಯಯಾ ॥೭೪॥

ಸ ಸ್ವರ್ಗಂ ನಿವಸೇದ್ಹೃಷ್ಟೋ ವರ್ಷಾಣಿ ಬೀಜಸಂಖ್ಯಯಾ ।
ಪೂಜ್ಯಮಾನಃ ಸುರೈರ್ನಿತ್ಯಂ ಭ್ರಮಮಾಣೋ ಯದೃಚ್ಛಯಾ ॥೭೫॥

ಪುಣ್ಯಫಲವನ್ನು ತಿಳಿಸುವೆನು ಕೇಳು. ॥೬೯॥ ಗಟ್ಟಿಯಾದ ತಳಪಾಯ (ಫೌಂಡೇಶನ್) ಇರುವ, ಬೆಲೆಬಾಳುವ ಕಟ್ಟಿಗೆ, ಕಲ್ಲುಗಳಿಂದ ನಿರ್ಮಿಸಲ್ಪಟ್ಟ; ಬಣ್ಣಗಳಿಂದ (ಪೇಂಟ್ಸ) ಅಲಂಕೃತವಾಗಿರುವ, ಸಕಲ ಉಪಕರಣಗಳಿಂದ ಯುಕ್ತವಾಗಿರುವ ಗೃಹವನ್ನು ದಾನ ಮಾಡಿದವನು ॥೭೦॥ ಮರಣಾನಂತರ ವಿಷ್ಣುಲೋಕವನ್ನು ಹೊಂದಿ ಅಲ್ಲಿ ಬಂಗಾರ, ರತ್ನಾದಿಗಳಿಂದ ನಿರ್ಮಿತವಾದ ಹಾಗೂ ಸಕಲ ಅನುಕೂಲತೆಗಳಿಂದ ಕೂಡಿದ ಅರಮನೆಯಲ್ಲಿ ಸುಖದಿಂದ ವಾಸಿಸುವನು ॥೭೧॥ ಸ್ವೇಷ್ಟ ಕಾರ್ಯಗಳನ್ನು ಮಾಡಿದವನು ಕಲ್ಪಾಂತದವರೆಗೆ ಬ್ರಹ್ಮಲೋಕದಲ್ಲಿದ್ದು ದೇವತಾಸ್ತ್ರೀಯರೊಂದಿಗೆ ಕ್ರೀಡಿಸುತ್ತ ಮುದದಿಂದ ಇರುವನು. ॥೭೨॥ ಮನೆ ಕಟ್ಟಲು ಬೇಕಾಗುವ ಕಟ್ಟಿಗೆಗಳನ್ನು ದಾನವಾಗಿ ಕೊಟ್ಟವನು ಇಂದ್ರನು ಇರುವವರೆಗೆ ಇಂದ್ರಲೋಕದಲ್ಲಿ ವಾಸಿಸುವನು. ॥೭೩॥ ತನ್ನ ಧನಶಕ್ತಿಯನ್ನು ಅನುಸರಿಸಿ ಒಂದು ಖಾರಿಯಾಗಲೀ, ಒಂದು ದ್ರೋಣವಾಗಲೀ, ಒಂದು ಅಢಕಿಯಾಗಲಿ, ಒಂದು ಪ್ರಸ್ಥವಾಗಲೀ ಅಥವಾ ಒಂದು ಪಾವು ಶೇರಾಗಲೀ, (೪ ಮುಷ್ಠಿ-ನಿಷ್ಟಿಕಾ, ೨ ನಿಷ್ಟಿಕಾ-ಅಷ್ಟಿಕಾ, ೨ ಅಷ್ಟಿಕಾ-ಕುಡವ, ೪ ಕುಡವ-ಪ್ರಸ್ಥ, ೪ ಪ್ರಸ್ಥ-ಅಢಕೀ, ೪ ಅಢಕೀ-ದ್ರೋಣ, ೨೦ ದ್ರೋಣ-ಖಾರೀ, ಇವೆಲ್ಲ ಕಾಳು ಅಳೆಯುವ ಮಾಪುಗಳು) ಯಾವುದೇ ಧಾನ್ಯವನ್ನು ದಾನ ಮಾಡಿದವನು ॥೭೪॥ ಆ

ಫಲದಾನಾದ್ಭವೇತ್ಸಿದ್ಧಿಃ ಸಂತತಿಂ ಚಾಪ್ನುಯಾನ್ನರಃ ।
ಉಪಾನಹೌ ನರೋ ದತ್ವಾ ಪಾದಚಾರೀ ನ ಜಾಯತೇ ॥೬೩॥

ತಾಮ್ರಂ ಕಾಂಸ್ಯಮಾರಕೂಟಂ ಜಲಪಾತ್ರಂ ದದಾತಿ ಯಃ ।
ಪಾಯಸಂ ಯಾವಕಂ ದತ್ವಾ ದೇವೈಃ ಪೀಯೂಷಭಾಗ್ಭವೇತ್ ॥೬೪॥

ರೌಪ್ಯದಾನಾತ್ಕಲತ್ರಾಣಿ ಸುರೂಪಾಣಿ ಲಭೇತ್ತತಃ ।
ಗೋಧೂಮಶಾಲಿಮುದ್ಗಾನಾಂ ತಥೈವ ಯವಮಾಷಯೋಃ ॥೬೫॥

ವ್ರೀಹೀಣಾಂ ಚ ತಿಲಾನಾಂ ಚ ಕ್ಷೇತ್ರಾಣಿ ಫಲವಂತಿ ಚ ।
ದದಾತಿ ಕಾಲೇ ಸಂಕಲ್ಪ್ಯ ತಸ್ಯ ಪುಣ್ಯಂ ನಿಬೋಧಯ ॥೬೬॥

ಯಾವಂತೋ ಹಿ ಕಣಾಸ್ತೇಷಾಂ ತತ್ತತ್ ದ್ವಿಗುಣಸಂಜ್ಞಯಾ ।
ವರ್ಷಾಣಿ ವಸತೇ ಸ್ವರ್ಗೇ ದೇವತಾತುಲ್ಯಭಾಗ್ಭವೇತ್ ॥೬೭॥

ಅನ್ಯೇಷಾಮಪಿ ಧಾನ್ಯಾನಾಂ ದತ್ವಾ ಕ್ಷೇತ್ರಾಣಿ ಮಾನವಃ ।
ತದ್ಬೀಜಸಂಖ್ಯಯಾ ಸ್ವರ್ಗೇ ವರ್ಷಾಣಿ ಸಹ ನಿರ್ಜರೈಃ ॥೬೮॥

ಅದರಿಂದ ಯಾವ ಫಲವೂ ಬಾರದು ಮತ್ತು ಕೊಟ್ಟ ದಾನವು ನಿರರ್ಥಕವಾಗುವದು. ತಾಂಬೂಲದಾನ ಕೊಡುವ ಪುರುಷನಿಗೆ ಯಾವ ಪ್ರಕಾರದಿಂದಲೂ ಭೋಗಗಳ ಕೊರತೆಯಾಗುವದಿಲ್ಲ. ॥೬೨॥ ಫಲದಾನದಿಂದ ಇಷ್ಟಸಿದ್ಧಿಯಾಗುವುದಲ್ಲದೇ ಸಂತತಿಯ ಅಭಿವೃದ್ಧಿಯಾಗುವದು. ಪಾದರಕ್ಷೆಗಳ ದಾನದಿಂದ ದಾನಿಯು ಪಾದಚಾರಿಯಾಗುವ ಪ್ರಸಂಗವು ಬರುವದಿಲ್ಲ. ॥೬೩॥ ನೀರು ಕುಡಿಯಲು ತಾಮ್ರದ ಅಥವಾ ಕಂಚಿನ ಪಾತ್ರೆಯ ತುಂಬ ಪಾಯಸವನ್ನು ಹಾಕಿ ದಾನ ಮಾಡುವದರಿಂದ ದೇವತೆಗಳು ಮುಂದೆ ಅಮೃತಪಾನ ಮಾಡಿಸುವರು. ॥೬೪॥ ರೌಪ್ಯದಾನದಿಂದ ಸುರೂಪಿಯಾದ ಹೆಂಡತಿಯು ದೊರೆಯುವಳು. ಹೇ ವತ್ಸಾ ! ಗೋದಿ, ಭತ್ತ, ಹೆಸರು, ಜವೆಗೋದಿ, ಉದ್ದು ॥೬೫॥ ಮತ್ತು ತಿಲ ಇವುಗಳು ಫಲವತ್ತಾಗಿ ಬೆಳೆಯುವ ಹೊಲಗದ್ದೆಗಳನ್ನು ಯಾವನು ಸಂಕಲ್ಪಪೂರ್ವಕ ದಾನ ಮಾಡುವನೋ ಅವನ ಪುಣ್ಯವನ್ನು ತಿಳಿಸುವೆನು ಕೇಳು. ॥೬೬॥ ಈ ಧಾನ್ಯಗಳ ಕಣಗಳೆಷ್ಟಿವೆಯೋ ಅಷ್ಟು ಸಂಖ್ಯೆಯ ಎರಡುಪಟ್ಟು ವರ್ಷಗಳವರೆಗೆ ದಾನಿಯು ಸ್ವರ್ಗಲೋಕದಲ್ಲಿದ್ದು ಅಲ್ಲಿ ದೇವತಾ ಸದೃಶನಾಗಿ ವಿರಾಜಿಸುವನು. ॥೬೭॥ ಗೋದಿ ಮೊದಲಾದ ಧಾನ್ಯಗಳಲ್ಲದೇ ಇತರ ಧಾನ್ಯಗಳ ಸಂಖ್ಯೆಯಷ್ಟು ವರ್ಷಗಳವರೆಗೆ ಸ್ವರ್ಗ ಲೋಕದಲ್ಲಿದ್ದು ದೇವತೆಗಳಂತೆ ಶೋಭಿಸುತ್ತ ಅವರೊಂದಿಗೆ ॥೬೮॥ ಕ್ರೀಡಿಸುತ್ತ ಸ್ವಚ್ಛಂದವಾಗಿರುವನು. ಇನ್ನು ಯಾವನು ಗೃಹದಾನವನ್ನು ಮಾಡುವನೋ ಅವನ

ರಮಮಾಣೋ ಯಥಾಕಾಮಂ ವಾಸಾಯ ಪರಿಕಲ್ಪತೇ ।
ಗೃಹಂ ದದಾತಿ ಯಶ್ಚಾನ್ಯೋ ತಸ್ಯ ಪುಣ್ಯಫಲಂ ಶೃಣು ॥೬೯॥

ನಿತ್ಯೈಕಭೂಮಿಕಂ ವಾಪಿ ಕಾಷ್ಠಪಾಷಾಣನಿರ್ಮಿತಮ್ ।
ಚಿತ್ರಿತಂ ವರ್ಣಕೈಶ್ಚಿತ್ರೈಃ ಸರ್ವೋಪಸ್ಕರಸಂಯುತಮ್ ॥೭೦॥

ಸ ವಿಷ್ಣುಲೋಕಮಾಸಾದ್ಯ ಸ್ವರ್ಣರತ್ನಾದಿನಿರ್ಮಿತೇ ।
ಪ್ರಾಸಾದೇ ರಮತೇ ನಿತ್ಯಂ ಸರ್ವೋಪಸ್ಕರಸಂಯುತೇ ॥೭೧॥

ಸಹ ದಿವ್ಯಪುರಂಧ್ರೀಭಿಃ ಕಲ್ಪಂ ಯಾವನ್ಮುದಾನ್ವಿತಃ ।
ತಾವತ್ಕಾಲಂ ವಸೇತ್ ಬ್ರಹ್ಮಲೋಕಂ ಚ ಸ್ವೇಷ್ಟಕಾರ್ಯಕೃತ್ ॥೭೨॥

ಗೃಹಕಾಷ್ಠಾನಿ ವೈ ದತ್ವಾ ಶಕ್ರಲೋಕಂ ಪ್ರಯಾತಿ ಸಃ ।
ಯಾವತ್ಕಾಲಂ ಭವೇಚ್ಚೇಂದ್ರಸ್ತಾವತ್ಕಾಲಮವಸ್ಥಿತಿಃ ॥೭೩॥

ದಾತಾತ್ರ ಸ್ವಪ್ನಧಾನ್ಯಾನಾಂ ನಿಜವಿತ್ತಾನುಸಾರತಃ ।
ಖಾರಿದ್ರೋಣಾಢಕಪ್ರಸ್ಥಕುಡವಾನಾಂ ಚ ಸಂಖ್ಯಯಾ ॥೭೪॥

ಸ ಸ್ವರ್ಗಂ ನಿವಸೇದ್ಹೃಷ್ಟೋ ವರ್ಷಾಣಿ ಬೀಜಸಂಖ್ಯಯಾ ।
ಪೂಜ್ಯಮಾನಃ ಸುರೈರ್ನಿತ್ಯಂ ಭ್ರಮಮಾಣೋ ಯದೃಚ್ಛಯಾ ॥೭೫॥

ಪುಣ್ಯಫಲವನ್ನು ತಿಳಿಸುವೆನು ಕೇಳು. ॥೬೯॥ ಗಟ್ಟಿಯಾದ ತಳಪಾಯ (ಫೌಂಡೇಶನ್) ಇರುವ, ಬೆಲೆಬಾಳುವ ಕಟ್ಟಿಗೆ, ಕಲ್ಲುಗಳಿಂದ ನಿರ್ಮಿಸಲ್ಪಟ್ಟ; ಬಣ್ಣಗಳಿಂದ (ಪೇಂಟ್ಸ) ಅಲಂಕೃತವಾಗಿರುವ, ಸಕಲ ಉಪಕರಣಗಳಿಂದ ಯುಕ್ತವಾಗಿರುವ ಗೃಹವನ್ನು ದಾನ ಮಾಡಿದವನು ॥೭೦॥ ಮರಣಾನಂತರ ವಿಷ್ಣುಲೋಕವನ್ನು ಹೊಂದಿ ಅಲ್ಲಿ ಬಂಗಾರ, ರತ್ನಾದಿಗಳಿಂದ ನಿರ್ಮಿತವಾದ ಹಾಗೂ ಸಕಲ ಅನುಕೂಲತೆಗಳಿಂದ ಕೂಡಿದ ಅರಮನೆಯಲ್ಲಿ ಸುಖದಿಂದ ವಾಸಿಸುವನು ॥೭೧॥ ಸ್ವೇಷ್ಟ ಕಾರ್ಯಗಳನ್ನು ಮಾಡಿದವನು ಕಲ್ಪಾಂತದವರೆಗೆ ಬ್ರಹ್ಮಲೋಕದಲ್ಲಿದ್ದು ದೇವತಾಸ್ತ್ರೀಯರೊಂದಿಗೆ ಕ್ರೀಡಿಸುತ್ತ ಮುದದಿಂದ ಇರುವನು. ॥೭೨॥ ಮನೆ ಕಟ್ಟಲು ಬೇಕಾಗುವ ಕಟ್ಟಿಗೆಗಳನ್ನು ದಾನವಾಗಿ ಕೊಟ್ಟವನು ಇಂದ್ರನು ಇರುವವರೆಗೆ ಇಂದ್ರಲೋಕದಲ್ಲಿ ವಾಸಿಸುವನು. ॥೭೩॥ ತನ್ನ ಧನಶಕ್ತಿಯನ್ನು ಅನುಸರಿಸಿ ಒಂದು ಖಾರಿಯಾಗಲೀ, ಒಂದು ದ್ರೋಣವಾಗಲೀ, ಒಂದು ಅಢಕಿಯಾಗಲಿ, ಒಂದು ಪ್ರಸ್ಥವಾಗಲೀ ಅಥವಾ ಒಂದು ಪಾವು ಶೇರಾಗಲೀ, (೪ ಮುಷ್ಠಿ-ನಿಷ್ಕಿಕಾ, ೨ ನಿಷ್ಕಿಕಾ-ಅಷ್ಟಿಕಾ, ೨ ಅಷ್ಟಿಕಾ-ಕುಡವ, ೪ ಕುಡವ-ಪ್ರಸ್ಥ, ೪ ಪ್ರಸ್ಥ-ಅಢಕೀ, ೪ ಅಢಕೀ-ದ್ರೋಣ, ೨೦ ದ್ರೋಣ-ಖಾರೀ, ಇವೆಲ್ಲ ಕಾಳು ಅಳೆಯುವ ಮಾಪುಗಳು) ಯಾವುದೇ ಧಾನ್ಯವನ್ನು ದಾನ ಮಾಡಿದವನು ॥೭೪॥ ಆ

ಸ್ವರ್ಗಲೋಕೇ ವಸೇತ್ಕಲ್ಪಂ ನಿಜಶಕ್ತ್ಯಾ ತಿಲಾನ್ ದದತ್ ।
ಗೋಧೂಮದಾತಾ ಕಲ್ಪಂ ತು ಸ್ವರ್ಗೇ ತಿಷ್ಠತಿ ಹರ್ಷಿತಃ ॥೨೬॥

ಸ್ವರ್ಗಾತ್ಪಾಪಭಯಂ ನೈವ ಪಾಪಂ ದಾತಾ ನ ವಿಂದತಿ ।
ದಾತಾ ಹಿ ತಂಡುಲಾನ್ಯಸ್ತು ಬ್ರಾಹ್ಮಣೇಭ್ಯಃ ಪ್ರಯಚ್ಛತಿ ॥೨೭॥

ಸ್ವರ್ಗೇ ಲೋಕೇ ಸಮಾಸಾದ್ಯ ಘೃತಕುಲ್ಯಾಪತಿರ್ಭವೇತ್ ।
ಘೃತಂ ದದಾತಿ ವಿಪ್ರೇಭ್ಯಃ ಸ್ನಾನಂ ಕುರ್ವನ್ ದಿನೇ ದಿನೇ ॥೨೮॥

ಸ್ವಶಕ್ತ್ಯಾ ಸ ಸುಧಾಹಾರೋ ದೇವತಾನಾಂ ಪ್ರಿಯೋ ಭವೇತ್ ।
ದುಗ್ಧಂ ವಾ ದಧಿ ವಾ ಯಸ್ತು ಬ್ರಾಹ್ಮಣೇಭ್ಯಃ ಪ್ರಯಚ್ಛತಿ ॥೨೯॥

ಅನ್ನದಾನೇನ ಲಭತೇ ಯದ್ಯದ್ವಾಂಛತಿ ಮಾನವಃ ।
ಅನ್ನಾತ್ಪರತರಂ ದಾನಂ ನ ಭೂತಂ ನ ಭವಿಷ್ಯತಿ ॥೩೦॥

ನರಃ ಪುಸ್ತಕದಾನೇನ ಜ್ಞಾನವಾನ್ನಿಶ್ಚಿತಂ ಭವೇತ್ ।
ವಿದ್ಯಾದಾನೇನ ಮೋಕ್ಷಂ ಚ ಲಭತೇ ನೈವ ಸಂಶಯಃ ॥೩೧॥

ಧಾನ್ಯದ ಕಾಳುಗಳ ಸಂಖ್ಯೆಯಷ್ಟು ವರ್ಷಗಳವರೆಗೆ ಸ್ವರ್ಗಲೋಕದಲ್ಲಿ ಸುರರಿಂದ ಸತ್ಕರಿಸಲ್ಪಡುತ್ತ ಸ್ವಚ್ಛಂದವಾಗಿ ಸಂಚರಿಸುತ್ತ ಸಂತೋಷದಿಂದ ಇರುವನು. ॥೨೫॥ ತನ್ನ ಶಕ್ತ್ಯನುಸಾರ ತಿಲದಾನ ಮಾಡುವವನು ಕಲ್ಪಾಂತದವರೆಗೆ ಸ್ವರ್ಗಲೋಕ ವಾಸವನ್ನು ಪಡೆಯುವನು. ಅದರಂತೆ ಗೋದಿಯನ್ನು ದಾನ ಮಾಡಿದವನೂ ಸ್ವರ್ಗಲೋಕದಲ್ಲಿ ಹರ್ಷದಿಂದ ಇರುವನು. ॥೨೬॥ ದಾನಿಗೆ ಪಾಪವು ಬರುವದಿಲ್ಲ ಹಾಗೂ ಸ್ವರ್ಗದಲ್ಲಿದ್ದಾಗ ಪಾಪದ ಭಯವಿರುವದಿಲ್ಲ. ಇನ್ನು ಬ್ರಾಹ್ಮಣರಿಗೆ ಅಕ್ಕಿಯನ್ನು ದಾನ ಮಾಡಿದವನು ॥೨೭॥ ಸ್ವರ್ಗಲೋಕವನ್ನು ಹೊಂದುವನು. ನಿತ್ಯ ಪ್ರಾತಃಸ್ನಾನ ಮಾಡಿ ಬ್ರಾಹ್ಮಣರಿಗೆ ಘೃತದಾನ ಮಾಡಿದವನು ॥೨೮॥ ಸ್ವರ್ಗಲೋಕದಲ್ಲಿ ತನ್ನ ಯೋಗ್ಯತಾನುಸಾರ ಅಮೃತಪಾನ ಮಾಡಿ ದೇವತೆಗಳಿಗೆ ಪ್ರಿಯನಾಗಿರುವನು. ಬ್ರಾಹ್ಮಣರಿಗೆ ಹಾಲು ಅಥವಾ ಮೊಸರನ್ನು ತನ್ನ ಶಕ್ತ್ಯಾನುಸಾರ ಕೊಟ್ಟರೆ ॥೨೯॥ ಅವನಾದರೂ ಮುಂದೆ ಅಮೃತಪಾನ ಮಾಡುವನು. ಅನ್ನದಾನದಿಂದ ಅಪೇಕ್ಷಿತವಾದುದೆಲ್ಲವನ್ನೂ ಪಡೆಯುವನು. ಅನ್ನದಾನಕ್ಕಿಂತ ಅಧಿಕವಾದ ದಾನವು ಈ ಹಿಂದೆ ಆಗಿರುವದಿಲ್ಲ ಹಾಗೂ ಇನ್ನು ಮುಂದೆ ಆಗುವದೂ ಇಲ್ಲ. ॥೩೦॥ ಪುಸ್ತಕ ದಾನ ಮಾಡುವ ನರನು ನಿಶ್ಚಿತವಾಗಿ ಒಳ್ಳೆಯ ಜ್ಞಾನವನ್ನು ಪಡೆಯುವನು. ಇನ್ನು ವಿದ್ಯಾದಾನ ಮಾಡಿದವನು ನಿಃಸಂದೇಹವಾಗಿ ಮೋಕ್ಷವನ್ನು ಪಡೆಯುವನು. ॥೩೧॥

ಯಸ್ಮಿನ್ಯಸ್ಮಿನ್ ಭವೇದಿಚ್ಛಾ ತತ್ತದ್ದದ್ಯಾತ್ ಪ್ರಯತ್ನತಃ ।
ಇಹ ಲೋಕೇ ಪರಸ್ಮಿನ್ವಾ ನಾನ್ಯಥಾ ಲಭತೇ ಕ್ವಚಿತ್ ॥೮೨॥

ಸ್ತ್ರಿಯೋ ದಾನಫಲಂ ಹ್ಯೇತತ್ ಭರ್ತೃಭಿಃ ಸಹ ಭುಂಜತೇ ।
ತತ್ತಲ್ಲೋಕಗತಾ ಸತ್ಯೋ ಭರ್ತೃಸಾಮೀಪ್ಯಮಾಪ್ನುಯುಃ ॥೮೩॥

ಯಸ್ಮಿನ್ವಯಸಿ ಕಾಲೇ ವಾ ಯಥಾದತ್ತಂ ಮಹಾತ್ಮಭಿಃ ।
ತಸ್ಮಿನ್ವಯಸಿ ಕಾಲೇ ಚ ತತ್ತಥೈವ ಚ ಲಭ್ಯತೇ ॥೮೪॥

ಪುಣ್ಯದೇಶೇ ಶುಭೇ ಕಾಲೇ ಶ್ರದ್ಧಯಾ ಪರಯಾ ತಥಾ ।
ಶುಭಂ ದ್ರವ್ಯಂ ಸುಪುತ್ರಾಯ ಯದ್ದತ್ತಂ ಹಿ ತದಕ್ಷಯಮ್ ॥೮೫॥

ಯದಂಗವಿಕಲಂ ದಾನಂ ಫಲತೀಹ ಚ ತತ್ತಥಾ ।
ತಸ್ಮಾದವಿಕಲಂ ದಾನಂ ದದ್ಯಾದ್ಬ್ರಾಹ್ಮಣತುಷ್ಟಯೇ ॥೮೬॥

ಅದತ್ತಸ್ಯ ಚ ವೃತ್ತಸ್ಯ ಫಲಂ ಪ್ರತ್ಯಕ್ಷಮೀಕ್ಷತೇ ।
ಏಕೇ ದರಿದ್ರಾ ದೃಶ್ಯಂತೇ ಧನವಂತಸ್ತಥಾಪರೇ ॥೮೭॥

ಯಾವ ಯಾವ ಪದಾರ್ಥಗಳಲ್ಲಿ ಇಚ್ಛೆ ಇರುವದೋ ಅವುಗಳನ್ನು ಸತ್ಪಾತ್ರದಲ್ಲಿ ದಾನ ಮಾಡುವದರಿಂದ ಇಹಲೋಕದಲ್ಲೂ, ಪರಲೋಕದಲ್ಲೂ ಕೇವಲ ಸುಖವನ್ನು ಹೊಂದುವನು. ॥೮೨॥ ಇದುವರೆಗೆ ತಿಳಿಸಿದಂತೆಯೇ ಸ್ತ್ರೀಯರೂ ದಾನ ಮಾಡಿದರೆ ಇಹದಲ್ಲಿ ಆ ದಾನಫಲವನ್ನು ತಮ್ಮ ತಮ್ಮ ಪತಿಗಳೊಂದಿಗೆ ಭೋಗಿಸುವರು. ಮತ್ತು ಆ ಪತಿವ್ರತಾ ಸ್ತ್ರೀಯರು ದಾನಕ್ಕನುಸಾರವಾಗಿ ಪಡೆಯುವ ಸ್ವರ್ಗಾದಿಲೋಕಗಳಲ್ಲಿ ತಮ್ಮ ತಮ್ಮ ಪತಿಗಳಿಂದ ಕೂಡಿಕೊಂಡು ಮುದದಿಂದ ಇರುವರು. ॥೮೩॥ ಮಹಾತ್ಮರು ತಮ್ಮ ಯಾವ ವಯಸ್ಸು ಅಥವಾ ಕಾಲದಲ್ಲಿ ಯಾವ ರೀತಿ ದಾನ ಮಾಡಿರುವರೋ ಅದಕ್ಕನುಸಾರವಾಗಿಯೇ ಆ ವಯಸ್ಸು ಅಥವಾ ಕಾಲದಲ್ಲಿ ಫಲವನ್ನು ಪಡೆಯುವರು ಅಥವಾ ಜನ್ಮಾಂತರದಲ್ಲಿ ಅದೇ ವಯಸ್ಸು ಅಥವಾ ಕಾಲದಲ್ಲಿ ಪೂರ್ವಜನ್ಮದ ದಾನಕ್ಕನುಸಾರವಾಗಿ ಫಲವನ್ನು ಪಡೆಯುವರು. ॥೮೪॥ ಪುಣ್ಯದೇಶದಲ್ಲಿ ಶುಭ ಕಾಲದಲ್ಲಿ ಪರಮ ಶ್ರದ್ಧೆಯಿಂದ ಸತ್ಪುತ್ರನಿಗೆ ಕೊಟ್ಟ ಶುಭದ್ರವ್ಯವು (ಲಂಚ ಮುಂತಾಗಿ ಅನ್ಯಾಯದಿಂದ ಸಂಪಾದಿಸದೇ ನ್ಯಾಯಮಾರ್ಗದಿಂದ ಸಂಪಾದಿಸಿದ್ದು ಶುಭದ್ರವ್ಯವು) ಅಕ್ಷಯವಾಗುವದು. ॥೮೫॥ ಅಂಗವಿಕಲವಾದ ದಾನದ ಫಲವೂ ನ್ಯೂನವಾಗುವದರಿಂದ ಬ್ರಾಹ್ಮಣರ ಸಂತುಷ್ಟಿಯಾಗುವಂತೆ ಅವಿಕಲವಾದ ದಾನವನ್ನು ಕೊಡಬೇಕು. ॥೮೬॥ ದಾನ ಮಾಡದಿದ್ದರೆ ಅದರ ಫಲವು ಪ್ರತ್ಯಕ್ಷದಲ್ಲೇ ತೋರುವದು.

ಸಮಾನಕುಲಜಾತಾಶ್ಚ ಸಮಾನಮತಯಸ್ತಥಾ ।
ತಥಾ ಸಮಾನಕರ್ಮಾಣಃ ಸಮಾನೇಂದ್ರಿಯವೃತ್ತಯಃ ॥೮೮॥

ಸಮದತ್ತವಿಭಾಗಾಶ್ಚ ಸಮಾನಕುಲಜಾ ಅಪಿ ।
ತಥಾಪಿ ಕೇಚಿದ್‌ದೃಶ್ಯಂತೇ ಧನವಂತಸ್ತಥಾಪರೇ ॥೮೯॥

ಸಧನಃ ಪಿತೃತಃ ಕಶ್ಚಿತ್ತಥಾ ಕಶ್ಚಿಚ್ಚ ನಿರ್ಧನಃ ।
ತಯೋರ್ವಿಪರ್ಯಯೋ ದೃಷ್ಟಃ ಕಾರಣಂ ದತ್ತಮೇವ ತತ್ ॥೯೦॥

ಸರ್ವೇಽಪಿ ಧನವಂತಃ ಸ್ಯುಃ ಅದತ್ತಂ ಯದಿ ಲಭ್ಯತೇ ।
ಪರಲೋಕೇ ಚ ಕಿಂಚಿಚ್ಚ ಶ್ರೂಯತೇ ದುರ್ಗತಿಃ ಕಿಲ ॥೯೧॥

ತಸ್ಮಾದಿಹೋಪಮನ್ವಿಷ್ಯನ್ ನಾದತ್ತಂ ಭುಜ್ಯತೇ ಕ್ವಚಿತ್ ।
ಏವಂ ನಿಶ್ಚಿತ್ಯ ದೇಹೀತಿ ನಿಜಶಕ್ತ್ಯಾನುಸಾರತಃ ॥೯೨॥

ಆಷಾಢೇ ತಪತೀಸ್ನಾನಾತ್ ಪಾಪಕರ್ಮಕ್ಷಯೋ ಭವೇತ್ ।
ನಾಭುಕ್ತಂ ಕ್ಷೀಯತೇ ಕರ್ಮ ಮಾನವೈರ್ಯದ್ಯದಾಕೃತಮ್ ॥೯೩॥

ಕೆಲವರು ದರಿದ್ರರಾಗಿದ್ದರೆ ಇನ್ನು ಕೆಲವರು ಧನವಂತರಾಗಿರುತ್ತಾರೆ. ॥೮೭॥ ಒಂದೇ ಕುಲದಲ್ಲಿ ಹುಟ್ಟಿದವರು, ಒಂದೇ ಸಿದ್ಧಾಂತವನ್ನು ಅನುಸರಿಸುವವರು, ಒಂದೇ ರೀತಿಯ ಕೆಲಸಗಳನ್ನು ಮಾಡುವವರು, ಒಂದೇ ಪ್ರಕಾರದ ಇಂದ್ರಿಯವೃತ್ತಿಗಳಿರುವವರು ॥೮೮॥ ಹಾಗೂ ಪಿತ್ರಾರ್ಜಿತ ಆಸ್ತಿಯಲ್ಲಿ ಸಮನಾಗಿ ಪಾಲನ್ನು ಪಡೆದವರು ಆಗಿದ್ದರೂ ಅವರಲ್ಲಿ ಕೆಲವರು ದರಿದ್ರರಾಗಿಯೂ ಇನ್ನು ಕೆಲವರು ಶ್ರೀಮಂತರಾಗಿಯೂ ಇರುವದು ಪ್ರತ್ಯಕ್ಷವಾಗಿ ಕಾಣುತ್ತಿದೆ. ॥೮೯॥ ಒಬ್ಬ ತಂದೆಯ ಮಕ್ಕಳಲ್ಲಿ ಕೆಲವರು ಧನವಂತರೂ ಇನ್ನು ಕೆಲವರು ನಿರ್ಧನರೂ ಆಗಿರುವದು ಕಂಡುಬಂದಿದೆ. ಈ ರೀತಿ ವ್ಯತ್ಯಾಸವಾಗಲು ಕಾರಣವನ್ನು ಈ ಮೊದಲೇ ತಿಳಿಸಿದ್ದೇನೆ. ॥೯೦॥ ದಾನ ಮಾಡದಿದ್ದರೂ ಫಲವು ಸಿಗುವದಾದರೆ ಎಲ್ಲರೂ ಧನವಂತರಾಗಲಿ. ಹಾಗಾಗುವದಿಲ್ಲ ಮತ್ತು ದಾನ ಕೊಡದವನಿಗೆ ಪರಲೋಕದಲ್ಲಿ ದುರ್ಗತಿಯಾಗುವದೆಂಬ ವಿಷಯವನ್ನು ಶಾಸ್ತ್ರದಿಂದ ಕೇಳುತ್ತೇವೆ. ॥೯೧॥ ಆದ್ದರಿಂದ ಇಹಲೋಕದಲ್ಲಿರುವಾಗ ದಾನ ಮಾಡದ ವಸ್ತುಗಳು ಯಾವ ಕಾಲದಲ್ಲಿಯೂ ದೊರೆಯಲಾರವು ಮತ್ತು ದಾನ ಮಾಡದೇ ಪರತ್ರದಲ್ಲಿಯೂ ಸುಖವಾಗಲಾರದು ಎಂಬುದನ್ನು ಪ್ರತಿಯೊಬ್ಬ ಮನುಷ್ಯನು ಚೆನ್ನಾಗಿ ಅರಿತುಕೊಂಡು ತನ್ನ ಶಕ್ತ್ಯಸುಸಾರ ದಾನ ಮಾಡಬೇಕು. ॥೯೨॥ ಆಷಾಢದಲ್ಲಿ ತಾಪೀನದಿಯಲ್ಲಿ ಪ್ರಾತಃಸ್ನಾನ ಮಾಡಿದರೆ ಪಾಪಕರ್ಮಗಳು ನಾಶವಾಗುವವು. ಮಾಡಿದ ಕರ್ಮಗಳ

ದೃಶ್ಯತೇ ಚೇಹ ಪಾಪಸ್ಯ ಫಲಂ ಪುಣ್ಯಸ್ಯ ಕರ್ಮಣಃ ।
ದುಃಖಾತ್ಮಕ ಪಾಪಫಲಂ ಪುಣ್ಯಸ್ಯ ತು ಸುಖಾತ್ಮಕಮ್ ॥೯೪॥

ಯಥೇಹ ಚ ತಥಾಮುತ್ರ ಪುರುಷಃ ಕರ್ಮಣೋ ವಶಾತ್ ।
ಸುಖದುಃಖಮವಾಪ್ನೋತಿ ತಸ್ಮಾತ್ಪಾಪಾತ್ಮಕಂ ತ್ಯಜೇತ್ ॥೯೫॥

ದೃಶ್ಯಂತೇ ಸುಖಿನಃ ಕೇಚಿದ್ಧನಪುತ್ರಯುತಾ ಜನಾಃ ।
ದೀರ್ಘಾಯುಷೋ ನೀರುಜಶ್ಚ ನಿರ್ಭಯಾ ಗುಣಿನೋ ನರಾಃ ॥೯೬॥

ಅಪರೇಽಪಿ ಚ ದೃಶ್ಯಂತೇ ರೋಗಾರ್ತಾ ಧನವರ್ಜಿತಾಃ ।
ಅಲ್ಪಾಯುಷೋಽಪ್ಯಪುತ್ರಾಶ್ಚ ನಿಗ್ರಹಾ ಗುಣವರ್ಜಿತಾಃ ॥೯೭॥

ತಸ್ಮಾತ್ಪುಣ್ಯಂ ಚ ಪಾಪಂ ಚ ನಿಶ್ಚಿತ್ಯಾಸೀತ ಮಾನವಃ ।
ಸ್ಯಾತ್ಪುಣ್ಯೇಷ್ವಾದರಪರೋ ನ ಪಾಪೇಷು ಕಥಂಚನ ॥೯೮॥

ಆಷಾಢೇ ಬತ ಯತ್ಪುಣ್ಯಂ ಪರಮಂ ಸ್ಯಾಚ್ಚ ಭೂತಲೇ ।
ಧರ್ಮ ಇಷ್ಟಶ್ಚ ಪೂರ್ತಶ್ಚ ನಾಸ್ಯತೋ ತತ್ಸಮಾವುಭೌ ॥೯೯॥

ಫಲವು ಭೋಗಿಸದೇ ಕ್ಷೀಣಿಸಲಾರದು. ॥೯೩॥ ಪುಣ್ಯಕರ್ಮಗಳ ಫಲವು ಸುಖಾತ್ಮಕವಾಗಿರುವದನ್ನೂ, ಪಾಪಕರ್ಮಗಳ ಫಲವು ದುಃಖಾತ್ಮಕವಾಗಿರುವದನ್ನೂ ಎಲ್ಲರೂ ಇಹಲೋಕದಲ್ಲಿ ನೋಡಿ ತಿಳಿದಿರುತ್ತಾರೆ. ॥೯೪॥ ಇಲ್ಲಿರುವಂತೆಯೇ ಪರಲೋಕದಲ್ಲಿಯೂ ಕೂಡ ಮನುಷ್ಯರು ಪುಣ್ಯ ಮತ್ತು ಪಾಪಕರ್ಮಗಳ ಫಲವಾದ ಸುಖ ಹಾಗೂ ದುಃಖಗಳನ್ನು ಹೊಂದುವರಾದ್ದರಿಂದ ಪಾಪಕರ್ಮಗಳನ್ನು ಎಂದಿಗೂ ಮಾಡಕೂಡದು. ॥೯೫॥ ಕೆಲವು ಜನರು ಸಂತಾನಸಂಪತ್ತುಗಳುಳ್ಳವರಾಗಿ, ದೀರ್ಘಾಯುಷಿಗಳಾಗಿ, ನಿರೋಗಿಗಳಾಗಿ, ಭಯರಹಿತರಾಗಿ, ಗುಣವಂತರಾಗಿ, ಸುಖಿಗಳಾಗಿ ಇರುವದನ್ನು ಕಾಣುತ್ತೇವೆ. ॥೯೬॥ ಇನ್ನು ಕೆಲವರು ರೋಗಗಳಿಂದ ಪೀಡಿತರಾಗಿ, ದರಿದ್ರರಾಗಿ, ಅಲ್ಪಾಯುಷಿಗಳಾಗಿ, ಪುತ್ರ ಸಂತಾನ ರಹಿತರಾಗಿ, ಗುಣ ರಹಿತರಾಗಿ ದುಃಖಿಗಳಾಗಿರುವದನ್ನೂ ಕಾಣುತ್ತೇವೆ. ॥೯೭॥ ಆದ್ದರಿಂದ ವಿವೇಕಿಯಾದ ಮನುಷ್ಯನು ಪುಣ್ಯಪಾಪಗಳೆರಡನ್ನೂ ನಿರ್ಧರಿಸಿ ಕರ್ಮಗಳನ್ನು ಮಾಡಬೇಕು. ಪುಣ್ಯಕರ್ಮಗಳಲ್ಲಿಯೇ ಆಸಕ್ತನಾಗಿದ್ದು ಪಾಪಕರ್ಮಗಳನ್ನೆಂದಿಗೂ ಆದರಿಸಬಾರದು. ॥೯೮॥ ಅಹೋ! ಆಷಾಢದಲ್ಲಿಯ ಪ್ರಾತಃಸ್ನಾನಾದಿ ಸತ್ಕರ್ಮಗಳಿಂದ ಅದಾವ ಪರಮಪುಣ್ಯವು ಲಭಿಸುವದೋ ಇದಕ್ಕೆ ಲೋಕದಲ್ಲಿಯ ಇಷ್ಟಾಪೂರ್ತಿಗಳಾವವೂ ಸಮಾನವಾಗಲಾರವು. ॥೯೯॥ ಅನಾಯಾಸವಾಗಿ ಯಾವುದರಿಂದ ಐಹಿಕ ಇಷ್ಟಾರ್ಥ

ವಾಂಛಿತಾರ್ಥಸ್ಯ ಸಂಸಿದ್ಧಿಃ ಯೇನಾಯಾಸಂ ವಿನಾ ಲಭೇತ್ ।
ಅನ್ಯತ್ಪುಣ್ಯಂ ತದಧಿಕಂ ಕಿಂಚಾಸ್ತಿ ಯನ್ನಿಗದ್ಯತೇ ॥೧೦೦॥

ಯಾವಂತೋ ಮುನಯಃ ಸಿದ್ಧಾ ಆಷಾಢೇ ಸವನಾದಿಹ ।
ತತ್ಸಂಖ್ಯಾ ಶಕ್ಯತೇ ಕರ್ತುಂ ನಾಪಿ ವರ್ಷಶತೈರಪಿ ॥೧೦೧॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಸ್ತ್ರಿಯಃ ಶೂದ್ರಾಸ್ತಥಾಪರೇ ।
ಸರ್ವೇಷಾಮಧಿಕಾರೋಽಪಿ ತಥಾಚಾಶ್ರಮಿಣಾಮಪಿ ॥೧೦೨॥

ಲೋಕಾರ್ಥಿನೋಽಭಿಗಚ್ಛಂತಿ ಲೋಕಾನ್ ಮನಸಿ ಈಪ್ಸಿತಾನ್ ।
ಅಪಿ ಮೋಕ್ಷಾರ್ಥಿನಾಂ ಮೋಕ್ಷ ಆಷಾಢೇ ಸ್ನಾನತೋ ಭವೇತ್ ॥೧೦೩॥

ಜಯಾರ್ಥಿನಶ್ಚ ವಿಜಯಂ ಬಲಾರ್ಥಿನಾಂ ಬಲೋನ್ನತಿಮ್ ।
ರೂಪಾರ್ಥಿನೋಽಪಿ ರೂಪತ್ವಂ ಲಭಂತೇ ನಾತ್ರ ಸಂಶಯಃ ॥೧೦೪॥

ಅಗಸ್ತ್ಯೇನ ಪುರಾ ರಾಜಾ ನಹುಷೋ ನಾಮ ವಿಶ್ರುತಃ ।
ವಿಪ್ರಿಯತ್ವಕರಂ ಶೀಘ್ರಂ ಪಾತಿತೋ ವಜ್ರಭೃತ್ಪದಾತ್ ॥೧೦೫॥

ತತೋ ದೀನೋ ವಿವರ್ಣೋಽಸೌ ಮಹತ್ಯಾ ತ್ರಪಯಾ ಯುತಃ ।
ಕಸ್ಯಾಪ್ಯಾನನಮಾತ್ಮೀಯಂ ನ ದರ್ಶಯಿತುಮೀಶ್ವರಃ ॥೧೦೬॥

ಸಿದ್ಧಿಯಾಗುವದೋ ಅಂಥ ಕರ್ಮಕ್ಕಿಂತಲೂ ಅಧಿಕ ಫಲದಾಯಕವಾದ ಬೇರೊಂದು ಪುಣ್ಯಕರ್ಮದ ಬಗ್ಗೆ ತಿಳಿಸುವೆನು ಕೇಳು. ॥೧೦೦॥ ಆಷಾಢಮಾಸದಲ್ಲಿ ಪ್ರಾತಃಸ್ನಾನವೆಂಬ ಪುಣ್ಯಕರ್ಮದಿಂದ ಅದೆಷ್ಟು ಪುಣ್ಯವು ಲಭಿಸುವದೋ ಅದರ ಮಿತಿಯನ್ನು ಲೋಕದಲ್ಲಿರುವ ಮುನಿಗಳು ಸಿದ್ಧರು ನೂರಾರು ವರ್ಷಗಳವರೆಗೆ ಹೇಳಿದರೂ ಮುಗಿಯಲಾರದು. ॥೧೦೧॥ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಹಾಗೂ ವರ್ಣಬಾಹಿರರಾದವರು ಮತ್ತು ಈ ವರ್ಣಗಳ (ನಾಲ್ಕು) ಆಶ್ರಮಿಗಳು ಇವರೆಲ್ಲರಿಗೂ ಆಷಾಢದ ಪ್ರಾತಃಸ್ನಾನ ಕರ್ಮಾದಿಗಳಲ್ಲಿ ಅಧಿಕಾರವಿದೆ. ॥೧೦೨॥ ಪ್ರಾತಃಸ್ನಾನಾದಿಗಳಿಂದ ಇವರೆಲ್ಲರೂ ಎಲ್ಲ ಮನೋಭೀಷ್ಟಗಳನ್ನು ನಿಶ್ಚಿತವಾಗಿ ಹೊಂದುವರು. ಆಷಾಢಸ್ನಾನದಿಂದ ಮುಮುಕ್ಷುಗಳಿಗೆ ಮೋಕ್ಷವು ದೊರಕುವದು. ॥೧೦೩॥ ಜಯಾರ್ಥಿಗಳಿಗೆ ಜಯವೂ, ಬಲಾರ್ಥಿಗಳಿಗೆ ಬಲಾಭಿವೃದ್ಧಿಯೂ, ರೂಪಾರ್ಥಿಗಳಿಗೆ ರೂಪವೂ ನಿಶ್ಚಿತವಾಗಿ ಲಭಿಸುವವು. ॥೧೦೪॥ ಹಿಂದಕ್ಕೆ ನಹುಷ ಎಂಬ ರಾಜನು ಅಗಸ್ತ್ಯಮುನಿಗೆ ಅಪ್ರಿಯವಾದುದನ್ನು ಮಾಡಿದ್ದರಿಂದ ಆ ಮುನಿಯು ರಾಜನನ್ನು ಇಂದ್ರಪದವಿಯಿಂದ ಭ್ರಷ್ಟನನ್ನಾಗಿ ಮಾಡಿದನು. ॥೧೦೫॥ ಐಂದ್ರಪದ

ತತೋ ಗತ್ವಾ ವಸಿಷ್ಠಂ ಸಃ ಪ್ರಣಿಪತ್ಯ ಮುಹುರ್ಮುಹುಃ ।
ಕೃತಾಂಜಲಿಪುಟೋ ಭೂತ್ವಾ ಪ್ರಾಹ ಗದ್ಗದಯಾ ಗಿರಾ ॥೧೦೭॥

ಸ್ವಕೀಯಾಜ್ಞಾನತಃ ಪಾಪಂ ಕೃತ್ವಾಪ್ಯತ್ರ ಕುಬುದ್ಧಿನಾ ।
ಯಚ್ಛ ದ್ವಿಜಾಃ ಕೃತಾ ಬಾಹ್ಯಾಸ್ತೇನ ಮೇ ದಹತೇ ಮನಃ ॥೧೦೮॥

ತೇನೈನಸಾ ಪಾತಿತೋಽಹಂ ಜೀಮೂತಮಘವತ್ಪದಾತ್ ।
ನಿಷ್ಕೃತಿಂ ಕಿಂ ಕರೋಮ್ಯತ್ರ ನ ಚ ಶಕ್ನೋಮಿ ಜಾನಿತುಮ್ ॥೧೦೯॥

ಯಸ್ಮಾಚ್ಚ ದುರಿತಾತ್ಪಚ್ಯೇ ಹ್ಯೇನಸಶ್ಚಾತಿದಾರುಣಾತ್ ।
ತದ್‌ಬ್ರೂಹಿ ಮೇ ಮಹಾಭಾಗ ಲಭೇ ಯೇನ ಸಮಾಹಿತಮ್ ॥೧೧೦॥

ಅಹಂ ತ್ವಾಂ ಶರಣಾಪನ್ನೋ ಮಾಮುದ್ಧರ ಮಹಾಮುನೇ ।
ಇತಿ ಸಂಶ್ರುತ್ಯ ತದ್ವಾಕ್ಯಂ ವಸಿಷ್ಠೋ ಮುನಿಸತ್ತಮಃ ॥೧೧೧॥

ಕೃಪಯಾ ಪರಯಾ ಯುಕ್ತೋ ರಾಜಾನಮಿತ್ಯಭಾಷತ ।
ವಸಿಷ್ಠ ಉವಾಚ-
ಅವಿಮೃಶ್ಯ ನ ಕಾರ್ಯಂ ಹಿ ಕಾರ್ಯಂ ಕಿಮಪಿ ಪಂಡಿತೈಃ ॥೧೧೨॥

ಭ್ರಷ್ಟನಾಗಿ ದೀನನಾದ ನಹುಷನು ಕಳೆಗುಂದಿ ಬಹು ದುಃಖಿತನಾಗಿ ಆಪತ್ಕಾಲದಲ್ಲಿ ಸಹಾಯ ಮಾಡುವ ಯಾವ ಆತ್ಮೀಯನನ್ನೂ ಕಾಣದವನಾದನು. ॥೧೦೬॥ ಅನಂತರ ಅವನು ವಸಿಷ್ಠ ಮುನಿಗಳಿದ್ದಲ್ಲಿ ಹೋಗಿ ಅವರನ್ನು ಸಂದರ್ಶಿಸಿ ಪುನಃ ಪುನಃ ನಮಸ್ಕರಿಸಿ ತನ್ನೆರಡೂ ಕೈಗಳನ್ನು ಜೋಡಿಸಿ ದುಃಖಿಸುತ್ತ ನಡೆದುದೆಲ್ಲವನ್ನೂ ನಿವೇದಿಸಿದನು. ॥೧೦೭॥ 'ಭೋ ಸ್ವಾಮಿನ್ ! ನನ್ನ ಅಜ್ಞಾನದಿಂದ ಪಾಪಕರ್ಮವನ್ನು ಮಾಡಿದ್ದೇನೆ. ಕೆಟ್ಟ ಬುದ್ಧಿಯ ನಾನು ಬ್ರಾಹ್ಮಣರನ್ನು ಅವಮಾನಿಸಿ ದೂರವಿಟ್ಟೆನು. ಇದರಿಂದ ನನ್ನ ಮನಸ್ಸು ಸುಡುತ್ತಿದೆ. ॥೧೦೮॥ ಈ ಪಾಪದಿಂದ ಮುಕ್ತನಾಗಲು ಯಾವ ಉಪಾಯವನ್ನು ಮಾಡಬೇಕೆಂಬುದನ್ನು ತಿಳಿಯದಾಗಿದ್ದೇನೆ. ॥೧೦೯॥ ಭೋ ಮಹಾತ್ಮರೇ ! ಈ ದಾರುಣವಾದ ಪಾಪದಿಂದ ಬಿಡುಗಡೆ ಹೊಂದಿ ನಾನೆಂತು ಸ್ವಸ್ಥನಾದೇನು ಎಂಬುದನ್ನು ತಿಳಿಸಿರಿ. ॥೧೧೦॥ ಹೇ ಮಹಾಮುನೆ ! ನಾನು ನಿಮಗೆ ಶರಣು ಬಂದಿದ್ದೇನೆ. ನನ್ನನ್ನು ಉದ್ಧರಿಸಿ ಅನುಗ್ರಹಿಸಿರಿ'. ಈ ಪ್ರಕಾರದ ನಹುಷ ರಾಜನ ಪ್ರಾರ್ಥನೆಯನ್ನು ಕೇಳಿದ ಮುನಿಶ್ರೇಷ್ಠ ವಸಿಷ್ಠರು ॥೧೧೧॥ ರಾಜನ ಮೇಲೆ ಕೃಪಾಪೂರ್ಣರಾಗಿ ಅವನಿಗೆ ಹೇಳಿದರು 'ಅಯ್ಯಾ ರಾಜಾ ! ತಿಳುವಳಿಕೆಯುಳ್ಳವನು ಎಂದಿಗೂ ವಿಚಾರಿಸದೇ ಹಾಗೂ ವಿಮರ್ಶಿಸದೇ ಯಾವ ಕಾರ್ಯವನ್ನೂ ಮಾಡಕೂಡದು ॥೧೧೨॥ ಅಯೋಗ್ಯ

ಅಯೋಗ್ಯಸ್ಯ ಚ ಕಾಯಸ್ಯ ವಿಪಾಕೋ ದಾರುಣೋ ಮತಃ ।
ತ್ವಯೇಂದ್ರಪದಸಂಪ್ರಾಪ್ತೇನೌತ್ಸುಕ್ಯಂ ಸಹಸಾ ಕೃತಮ್ ॥೧೧೩॥

ಯತ್‌ಕೃತಂ ತಸ್ಯ ಸಂಪ್ರಾಪ್ತಂ ಫಲಮೇವಂವಿಧಂ ತ್ವಯಾ ।
ಕಾಮಾದಯಃ ಶರೀರಸ್ಥಾಃ ಮಹಾಂತಃ ಶತ್ರವೋ ಮತಾಃ ॥೧೧೪॥

ಕ್ರಿಯತೇ ಯೈರಸತ್ಕರ್ಮ ಪುರುಷೈಃ ಸ್ವವಶಾತ್‌ಕೃತಮ್ ।
ಇಹಾಮುತ್ರ ಚ ಯೇನಾಸೌ ನೀಯತೇ ದಾರುಣಾಂ ದಶಾಮ್ ॥೧೧೫॥

ತಸ್ಮಾದೇತೇ ವಿಜೇತವ್ಯಾ ಲೋಕದ್ವಯಹಿತೈಷಿಣಾ ।
ಲೋಭೇನ ತ್ವಂ ಬಲವತಾ ಪ್ರಾಪಿತೋಽಸೀದೃಶೀಂ ದಶಾಮ್ ॥೧೧೬॥

ಚಿತ್ತಸ್ಯ ಶೋಕಜನನೀಂ ಸರ್ವಲೋಕವಿಗರ್ಹಿತಾಮ್ ।
ರಾಜನ್ ತ್ವಂ ತಪತೀಂ ಗತ್ವಾ ಸರ್ವಭೋಗವಿವರ್ಜಿತಃ ॥೧೧೭॥

ಏಕಾಗ್ರಮಾನಸೋ ಭೂತ್ವಾ ಶುಚೌ ಸ್ನಾನಂ ಸಮಾಚರ ।
ತೇನ ತ್ವಂ ಗತಪಾಪಸ್ತು ಲಪ್ಸ್ಯಸೇ ವಾಂಛಿತಂ ಫಲಮ್ ॥೧೧೮॥

ಕರ್ಮದ ಫಲವು ಭಯಂಕರವಾಗಿರುವದು ಸಿದ್ಧವಾಗಿದೆ. ಇಂದ್ರಪದವನ್ನು ಹೊಂದಿದ ನೀನು ಅವಿವೇಕತನದಿಂದ ವರ್ತಿಸಿದ್ದರಿಂದಲೇ ॥೧೧೩॥ ಇಂದು ಇಂಥ ಫಲವನ್ನು ಹೊಂದಿದ್ದೀಯೆ. ಕಾಮಾದಿಗಳೇನಿವೆಯೋ ಅವು ಶರೀರದಲ್ಲಿರುವ ಮಹಾಶತ್ರುಗಳಾಗಿವೆ. ॥೧೧೪॥ ಇವುಗಳಿಗೆ ವಶನಾಗಿ ಯಾರು ದುಷ್ಟಕಾರ್ಯಗಳನ್ನು ಮಾಡುವರೋ ಅವರು ಇಹಲೋಕದಲ್ಲಿಯೂ, ಪರಲೋಕದಲ್ಲಿಯೂ ದಾರುಣವಾದ ಅವಸ್ಥೆಯನ್ನು (ದುರ್ಗತಿ) ಹೊಂದುವರು ॥೧೧೫॥ ಆದ್ದರಿಂದ ಲೋಕದ್ವಯದಲ್ಲಿ ಹಿತವನ್ನು ಬಯಸುವ ಪುರುಷನು ಕಾಮಾದಿಗಳನ್ನು ತ್ಯಜಿಸಬೇಕು. ನೀನಂತೂ ಅತಿಯಾದ ಲೋಭದಿಂದ ॥೧೧೬॥ ಮನಸ್ಸಿಗೆ ದುಃಖವನ್ನುಂಟುಮಾಡುವ, ಎಲ್ಲರಿಂದ ನಿಂದಿತವಾದ ಇಂಥ ದುರ್ದಶೆಯನ್ನು ಹೊಂದಿರುವಿ. ಎಲೈ ರಾಜನೇ, ನೀನು ಸಕಲ ಭೋಗಗಳನ್ನು ತ್ಯಜಿಸಿ ತಾಪೀನದಿ ಇರುವಲ್ಲಿ ಹೋಗು. ॥೧೧೭॥ ಅಲ್ಲಿ ಏಕಾಗ್ರಚಿತ್ತನಾಗಿದ್ದು ಆಷಾಢಮಾಸ ಬಂದಾಗ ಆ ತಿಂಗಳು ಪೂರ್ತಿ ತಾಪೀ ನದಿಯಲ್ಲಿ ಸ್ನಾನ ಮಾಡುವವನಾಗು. ಹಾಗೆ ಮಾಡುವದರಿಂದ ನೀನು ಪಾಪಮುಕ್ತನಾಗಿ ನಿನ್ನ ಇಷ್ಟಾರ್ಥವನ್ನು ಹೊಂದುವಿ. ॥೧೧೮॥ ಅಯ್ಯಾ ಇದನ್ನು ಬಿಟ್ಟರೆ ನಿನಗೆ ಬೇಕಾದ ಬೇರಾವ ಉಪಾಯವೂ ಇರುವದಿಲ್ಲ.' ಮುಂದೆ ವಸಿಷ್ಠರ ಮಾತಿನಂತೆ ನಡೆದು ನಹುಷನು ಪಾಪಮುಕ್ತನಾಗಿ ಪರಮಗತಿಯನ್ನು ಹೊಂದಿದನು. ವಸಿಷ್ಠರ

ನಾನ್ಯಃ ಕೋಽಪಿ ತವೋಪಾಯೋ ವಿದ್ಯತೇ ತತ್ರ ನಿಶ್ಚಿತಃ ।
ನಹುಷ ಉವಾಚ-
ಏಕಃ ಶತಬಲೀ ರಾಜಾ ಸ್ವಪದಂ ಯೋಜಿತಃ ಕಥಮ್ ॥೧೯॥

ಶತ್ರುಣಾ ತತ್ಪುನಃ ಪ್ರಾಪ್ತಂ ಕಥಮೇತನ್ನಿಗದ್ಯತಾಮ್ ।
ವಸಿಷ್ಠ ಉವಾಚ-
ಪುರಾ ಶತಬಲೀ ರಾಜಾ ಶತ್ರುಣಾ ಚ್ಯಾವಿತಃ ಪದಾತ್ ॥೨೦॥

ಪುನಃ ಸ್ವಪದಮಾಪನ್ನ ಆಷಾಢಸ್ನಪನಾತ್ಪರಃ ।
ವಂಗಾನಾಮಧಿಪೋ ರಾಜಾಽಭವತ್ ಶತ್ರುಬಲಿಃ ಪುರಾ ॥೨೧॥

ತತೋ ವಂಗಕಲಿಂಗಾದ್ಯಾ ಜಿತಾ ದೇಶಾಃ ಸ್ವವೀರ್ಯತಃ ।
ಸ ಕದಾಚಿದ್ಯಯೌ ರಾಜಾ ಕಾಮರೂಪೇಶ್ವರಂ ಪ್ರತಿ ॥೨೨॥

ಯುದ್ಧಂ ತತ್ರಾಭವದ್ಘೋರಂ ಅನೇಕಸುಭಟಕ್ಷಯಮ್ ।
ತಸ್ಮಿನ್ ಯುದ್ಧೇ ಸುಬಹುಶೋ ಮೃತಾ ಅಶ್ವಗಜಾನರಾಃ ॥೨೩॥

ಮಾನುಷಾಣಾಂ ಚ ಪತಯೋ ಬಭೂವುರಪ್ಸರೋವರಾಃ ।
ಭಟಾನಾಂ ರಕ್ತಪಾನೇನ ಮತ್ತಾಶ್ಚೈವ ಪುನಃ ಪುನಃ ॥೨೪॥

ಆಶ್ರಮದಲ್ಲಿದ್ದಾಗ ನಹುಷನು ಪ್ರಶ್ನಿಸುತ್ತಾನೆ-ಭೋ ಮುನಿವರ್ಯರೇ! ಹಿಂದಕ್ಕೆ ಶತಬಲೀ ಎಂಬ ರಾಜನು ಮೊದಲು ಶತ್ರುವಿನಿಂದ ಸ್ಥಾನಭ್ರಷ್ಟನಾಗಿ ನಂತರ ॥೧೯॥ ಪುನಃ ತನ್ನ ರಾಜ್ಯವನ್ನು ಹೇಗೆ ದೊರಕಿಸಿದನು ಎಂಬುದನ್ನು ನನಗೆ ತಿಳಿಸಿರಿ ಎಂದು ಕೇಳಲು ವಸಿಷ್ಠರು ಹೇಳುತ್ತಾರೆ- ಅಯ್ಯಾ ರಾಜಾ ಕೇಳು, ಹಿಂದಕ್ಕೆ ಶತಬಲೀ ಎಂಬ ರಾಜನು ಶತ್ರುವಿನಿಂದ ರಾಜ್ಯಭ್ರಷ್ಟನಾಗಿದ್ದವನು ॥೨೦॥ ಮುಂದೆ ಆಷಾಢಮಾಸದಲ್ಲಿ ತಾಪೀ ಸ್ನಾನದಿಂದ ತನ್ನ ರಾಜ್ಯವನ್ನು ಪುನಃ ಪಡೆದುಕೊಂಡನು. ಶತಬಲಿಯು ವಂಗದೇಶದ ಅಧಿಪನಾಗಿದ್ದನು. ॥೨೧॥ ವಂಗ ಕಲಿಂಗಾದಿ ದೇಶಗಳನ್ನು ಸ್ವಪರಾಕ್ರಮದಿಂದ ಗೆದ್ದು ಮುಂದೆ ಒಮ್ಮೆ ಅವನು ಕಾಮರೂಪೇಶ್ವರನೆಂಬ (ಕಾಮರಾಜ) ರಾಜನನ್ನು ಗೆಲ್ಲಲು ಅವನ ರಾಜ್ಯಕ್ಕೆ ದಂಡೆತ್ತಿ ಹೋದನು. ॥೨೨॥ ಆಗ ಎರಡೂ ಕಡೆಯ ಸೈನಿಕರಲ್ಲಿ ಘನಘೋರವಾದ ಯುದ್ಧವು ನಡೆಯಿತು. ಆ ಯುದ್ಧದಲ್ಲಿ ಅನೇಕ ಶ್ರೇಷ್ಠ ಸೈನಿಕರು ಮತ್ತು ಉತ್ತಮವಾದ ಅಶ್ವ ಗಜಗಳು ಹತರಾದರು. ॥೨೩॥ ಅನೇಕ ರಾಜರು ಮೃತರಾಗಿ ಅಪ್ಸರ ಲೋಕವನ್ನು ಸೇರಿದರು. ಸೈನಿಕರ ರಕ್ತಪಾನದಿಂದ ಮತ್ತರಾದ

ನೃತ್ಯಂತಿ ಸ್ಮಾನುಗಾಯಂತಿ ಭೂತವೇತಾಲರಾಕ್ಷಸಾಃ ।
ಯತ್ರಾಯುಧ್ಯಂತ ಸುಭಟಾಃ ತ್ಯಕ್ತ್ವಾ ಮರಣಜಂ ಭಯಮ್ ॥೧೨೩॥

ಬಾಣೈಃ ಕುಂತೈಶ್ಚ ಖಡ್ಗೈಶ್ಚ ಪಟ್ಟಿಭಿಃ ಶಕ್ತಿಭಿಸ್ತಥಾ ।
ಯತಂ ಪ್ರತಿಗ್ರಹಾಣಾಯ ಪ್ರಹೃತಃ ಶತ್ರುಣಾಽಕರೋತ್ ॥೧೨೬॥

ಊರೀಚಕಾರ ಮರಣಂ ಸುಭಟೋ ನ ಪಲಾಯನಮ್ ।
ಶಿರೋಭಿಃ ಬಹುಭಿಃ ಪಾದೈರನ್ಯೈರವಯವೈಸ್ತಥಾ ॥೧೨೭॥

ಪತಿತೈಃ ಸುಭಟಾನಾಂ ಸಾ ರಣಭೂರ್ದುರ್ಗಮಾಽಭವತ್ ।
ವಾಜಿವಾರಣವೀರಾಣಾಂ ದೇಹೇಭ್ಯಃ ಪಾತಿತೈಃ ಕ್ಷಣಾತ್ ॥೧೨೮॥

ನ ದೃಶ್ಯತೇ ಸ್ಮ ಕೀರ್ಣಾ ಭೂಃ ಅಸೃಂಗ್ಮಾಂಸರಸಾಸ್ಥಿಭಿಃ ।
ಕ್ರವ್ಯಾದಗಣಸಂಕೀರ್ಣಂ ತದಾಸೀತ್ಸಂಗರಂ ಮಹತ್ ॥೧೨೯॥

ಶೂರಾಣಾಂ ಹರ್ಷಜನನಂ ಭೀರೂಣಾಂ ಭಯವರ್ಧನಮ್ ।
ತಸ್ಮಿನ್ಮಹತಿ ಸಂಗ್ರಾಮೇ ವರ್ತಮಾನೇ ಸುದಾರುಣೇ ॥೧೩೦॥

ಕಾಮರೂಪೇಶ್ವರಬಲಂ ಸಂಗ್ರಾಮಾತ್ತು ಪಲಾಯಿತಮ್ ।
ಕ್ಷತ್ರಿಯಾ ಮಾ ಪಲಾಯಧ್ವಂ ಭೋ ಭೋ ತಿಷ್ಠತ ತಿಷ್ಠತ ॥೧೩೧॥

॥೧೨೪॥ ಭೂತವೇತಾಲ ರಾಕ್ಷಸರು ಪುನಃ ಪುನಃ ಕುಣಿಕುಣಿದು ನರ್ತನ ಮಾಡುತ್ತ ಹಾಡುತ್ತಲಿದ್ದರು. ಆ ರಣರಂಗದಲ್ಲಿ ಮರಣ ಭೀತಿಯಿಲ್ಲದೇ ವೀರಸೈನಿಕರು ॥೧೨೫॥ ಬಾಣ, ಭಲ್ಲೆ, ಭರ್ಚಿ, ಖಡ್ಗ, ಪಟ್ಟಿ, ಶಕ್ತಿ ಮೊದಲಾದ ಆಯುಧಗಳಿಂದ ಪರಸ್ಪರ ಏಟು ಪ್ರತಿಏಟುಗಳನ್ನು ಹಾಕುತ್ತ ತಿನ್ನುತ್ತ ಘೋರವಾಗಿ ಹೋರಾಡಿದರು. ॥೧೨೬॥ ಶೂರರಾದ ಸೈನಿಕರು ರಣರಂಗದಿಂದ ಓಡಿಹೋಗದೇ ವೀರಸ್ವರ್ಗವನ್ನು ಪಡೆದರು. ಸಹಸ್ರಾರು ಭಟರ ಪತಿತವಾದ ಅನೇಕ ಶಿರಸ್ಸುಗಳು, ಪಾದಗಳು ಹಾಗೂ ಇತರ ಅವಯವಗಳಿಂದ ॥೧೨೭॥ ಆ ರಣಭೂಮಿಯು ಭಯಂಕರವಾಗಿ ಕಾಣತೊಡಗಿತು. ಕ್ಷಣದಲ್ಲಿ ಕೆಳಗೆ ಬಿದ್ದಿರುವ ಕುದುರೆ, ಆನೆ, ಸೈನಿಕರ ದೇಹಗಳಿಂದ ತುಂಬಿದ ಆ ರಣರಂಗವು ॥೧೨೮॥ ಅವರೆಲ್ಲರ ರಕ್ತಪ್ರವಾಹ, ಮಾಂಸ, ಅಸ್ಥಿಗಳಿಂದ ಆವೃತವಾಗಿ ನೆಲವೇ ಕಾಣದಂತಾಯಿತು. ಮಾಂಸಭಕ್ಷಕ ಹಿಂಸ್ರಪಶುಗಳು ಯುದ್ಧಭೂಮಿಯಲ್ಲಿ ಎಲ್ಲೆಡೆ ತುಂಬಿ ಓಡಾಡತೊಡಗಿದವು. ॥೧೨೯॥ ಶೂರರಿಗೆ ವೀರಾವೇಶದಿಂದ ಹರ್ಷವನ್ನುಂಟುಮಾಡುವ ಮತ್ತು ಭೀರುಗಳಿಗೆ ಭಯವನ್ನು ಹೆಚ್ಚಿಸುವ ಘನಘೋರವಾದ ಯುದ್ಧವು ನಡೆದಿರಲು ॥೧೩೦॥ ಕಾಮರೂಪೇಶ್ವರನ ಸೈನಿಕರು

ಕ್ಷತ್ರಧರ್ಮಂ ಪರಿತ್ಯಜ್ಯ ಪ್ರಪಲಾಯ್ಯ ಪ್ರಯಾಸ್ಯಥ ।
ಸ್ವೋಪಧರ್ಮಪರಿಭ್ರಷ್ಟಾ ದರ್ಶಯಿಷ್ಯಥ ಕಿಂ ಮುಖಮ್ ॥೧೩೨॥

ಏಷ ಲೋಕಃ ಪರಶ್ಚಾಪಿ ದ್ವಿತೀಯಶ್ಚ ವಿನಶ್ಯತಿ ।
ಪಶ್ಚಾದಪಿ ಹಿ ಮರ್ತವ್ಯಂ ಇತಿ ಮತ್ವಾ ನಿವರ್ತ್ಯತಾಮ್ ॥೧೩೩॥

ಕೇ ಲೋಕಾ ವಾ ಭವಿಷ್ಯಂತಿ ಪಶ್ಚಾದ್ಯದಿ ಮರಿಷ್ಯಥ ।
ಇತಿ ಶೂರವಚಃ ಶ್ರುತ್ವಾ ನಿವೃತ್ತಾಃ ಕೇಽಪಿ ತತ್ರ ತೇ ॥೧೩೪॥

ತೇ ನಿವೃತ್ಯ ವಧಂ ಚಕ್ರುರ್ದಾರುಣಂ ರೋಮಹರ್ಷಣಮ್ ।
ಕಾಮರೂಪೇಶ್ವರೋ ರಾಜಾ ಯೋಧಯನ್ ಪರವಾಹಿನೀಮ್ ॥೧೩೫॥

ತತಃ ಶತಬಲಿಃ ಪ್ರಾಪ್ತಃ ತಯೋರ್ಯುದ್ಧಮಭೂತ್ತದಾ ।
ಪರಸ್ಪರಾಕರ್ಷಿತಯೋಃ ಪರಸ್ಪರವಧೈಷಿಣೋಃ ॥೧೩೬॥

ಕಾಮರೂಪಶ್ಚ ಸ ವಿಭುಃ ಕೋಪಾಮರ್ಷವಶಂ ಗತಃ ।
ಅರ್ಧಚಂದ್ರನಿಭಾಭ್ಯಾಂ ಸ ನಿಶಿತಾಭ್ಯಾಂ ಮಹಾಬಲಃ ॥೧೩೭॥

ರಣಭೂಮಿಯಿಂದ ಪಲಾಯನ ಮಾಡತೊಡಗಿದರು. ಆಗ ಇದನ್ನು ನೋಡಿದ ರಾಜನು 'ಭೋ ಭೋ ಸೈನಿಕರೇ ! ಓಡಿ ಹೋಗದಿರಿ, ನಿಲ್ಲಿರಿ, ನಿಲ್ಲಿರಿ. ||೧೩೧|| ಕ್ಷತ್ರಿಯರ ಧರ್ಮವನ್ನು ಬಿಟ್ಟು ಹೀಗೆ ಓಡುತ್ತ ಹೋಗಬೇಡಿರಿ. ಸ್ವಧರ್ಮಭ್ರಷ್ಟರಾಗಿ ನೀವು ಅದೆಂತು ಜಗತ್ತಿನಲ್ಲಿ ಮುಖವನ್ನು ತೋರಿಸುವಿರಿ? ||೧೩೨|| ನಿಮ್ಮಂಥವರಿಗೆ ಈ ಲೋಕದಲ್ಲಿಯೂ ಹಾಗೂ ಪರಲೋಕದಲ್ಲಿಯೂ ಸದ್ಗತಿಯಾಗಲಾರದು. ನಿಮಗೆ ವೀರಸ್ವರ್ಗವು ಸಿಗಲಾರದು. ಎಂದಾದರೊಮ್ಮೆ ಸಾಯುವದು ಇದ್ದೇ ಇದೆ ಎಂದು ತಿಳಿದು ಯುದ್ಧಭೂಮಿಗೆ ತಿರುಗಿ ಬನ್ನಿರಿ. ||೧೩೩|| ಇಲ್ಲಿಂದ ಓಡಿ ಹೋದ ನೀವು ಮೃತರಾದ ಮೇಲೆ ನಿಮಗೆ ಅದಾವ ಒಳ್ಳೆಯ ಲೋಕವು ಸಿಗುವದು? ಈ ಪ್ರಕಾರವಾಗಿ ಶೂರನಾದ ರಾಜನು ಕೂಗುತ್ತಿರುವದನ್ನು ಕೇಳಿ ಕೆಲ ಸೈನಿಕರು ಯುದ್ಧ ಭೂಮಿಗೆ ಮರಳಿ ಬಂದರು. ||೧೩೪|| ಮೈನವಿರೇಳುವಂತೆ ಭಯಂಕರವಾದ ಯುದ್ಧ ಮಾಡುತ್ತ ಶತ್ರು ಸೈನಿಕರನ್ನು ತುಂಡರಿಸಿದರು. ಕಾಮರೂಪೇಶ್ವರನೂ ಶತ್ರುಸೈನಿಕರನ್ನು ಸದೆಬಡೆಯುತ್ತ ಮುಂದೆ ಸಾಗಿದನು. ||೧೩೫|| ಅಷ್ಟರಲ್ಲಿ ಶತಬಲೀರಾಜನು ಸ್ವತಃ ಈತನಿಗೆದುರಾಗಲು ಇಬ್ಬರ ನಡುವೆ ಘನಘೋರವಾದ ಯುದ್ಧವು ನಡೆಯಿತು. ಪರಸ್ಪರರನ್ನು ಕೊಲ್ಲಲು ಇಚ್ಛಿಸಿದ ಅವರು ಒಬ್ಬರು ಮಾಡಿದುದಕ್ಕೆ ಪ್ರತಿಯಾಗಿ ಮಾಡುತ್ತ ಕಾದಾಡತೊಡಗಿದರು. ||೧೩೬|| ಮಹಾಬಲನಾದ ಕಾಮರೂಪರಾಜನು ಬಹು

ಛಿತ್ವಾ ಧನುಃ ಶತಬಲೇಶ್ಚಿತ್ರಂ ಚಿಚ್ಛೇದ ವೀರ್ಯವಾನ್ ।
ತತೋಽನ್ಯದ್ಧನುರಾದಾಯ ಕೋಪಾಚ್ಛತಬಲಿಃ ಪುನಃ ॥೧೩೮॥

ದೃಢಂ ವಿವ್ಯಾಧ ಹೃದಯೇ ನಾರಾಚೇನ ವಿರೋಚಿಷಾ ।
ಸೋಽತಿವಿದ್ಧೋ ಬಲವತಾ ರಿಪುಣಾ ರಿಪುಸೂದನಃ ॥೧೩೯॥

ಪುನರಾಗತಚೈತನ್ಯೋ ರಥೋಪಸ್ಥ ಉಪಾವಿಶತ್ ।
ತತ್‌ಕ್ಷಣಾತ್ ಚೇತನಾಂ ಪ್ರಾಪ್ಯ ಗೃಹೀತ್ವಾ ತ್ವರಿತಂ ಧನುಃ ॥೧೪೦॥

ಛಿತ್ವಾ ಶತಬಲೇಸ್ತತ್ರ ಸಾರಥಿಂ ಚಾವಧೀತ್ ಶರೈಃ ।
ತತಃ ಕ್ರುದ್ಧಃ ಶತಬಲೀ ನಿತಾಂತಂ ಸಾರಥೌ ಹತೇ ॥೧೪೧॥

ಸ್ವಯಂ ರಶ್ಮೀನ್ಸಮಾದಾಯ ಯುಯುಧೇ ರಿಪುಣಾ ಸಹ ।
ನಾರಾಚಾನ್ ತತ ಆದಾಯ ಸುತೀಕ್ಷ್ಣಾನ್ ಕಂಚುಕಚ್ಛಿದಃ ॥೧೪೨॥

ಚತುರ್ಭಿಶ್ಚತುರೋ ವಾಹಾನ್ನವಧೀತ್ತಸ್ಯ ವೇಗತಃ ।
ಪಂಚಮೇನ ತತಶ್ಚಾಶು ಚಿಚ್ಛೇದ ಸಾರಥೇಃ ಶಿರಃ ॥೧೪೩॥

ಹತೇಷ್ವಶ್ವೇಷು ರಾಜಾ ಸ ಸಾರಥೌ ಚ ತತೋ ರಥಾತ್ ।
ಖಡ್ಗಮಾದಾಯ ವೈ ಶೀಘ್ರಂ ಸಖೇಟಕಮಥಾಭ್ಯಗಾತ್ ॥೧೪೪॥

ಕೋಪಾವಿಷ್ಟನಾಗಿ ಅರ್ಧಚಂದ್ರಾಕೃತಿಯ ಹರಿತವಾದ ಎರಡು ಬಾಣಗಳಿಂದ ॥೧೩೭॥ ಶತಬಲಿಯ ಧನುಸ್ಸನ್ನು ಕತ್ತರಿಸಿ ಅವನ ಕವಚವನ್ನು ಭೇದಿಸಿದನು. ಆಗ ಕೂಡಲೇ ಶತಬಲಿಯು ಬೇರೊಂದು ಧನುಸ್ಸನ್ನು ತೆಗೆದುಕೊಂಡು ಕೋಪೋದ್ರಿಕ್ತನಾಗಿ ॥೧೩೮॥ ಥಳಥಳಿಸುವ ಉಕ್ಕಿನ ಬಾಣದಿಂದ ಕಾಮರೂಪನ ಎದೆಗೆ ಬಲವಾಗಿ ಹೊಡೆದನು. ಆ ಹೊಡೆತದಿಂದ ॥೧೩೯॥ ಮೂರ್ಛಿತನಾದ ಅವನು ಕ್ಷಣಾರ್ಧದಲ್ಲಿ ಪುನಃ ಎಚ್ಚತ್ತು ರಥದಲ್ಲಿ ಕುಳಿತುಕೊಂಡು ಧನುಸ್ಸನ್ನು ಹಿಡಿದು ॥೧೪೦॥ ಬಾಣಗಳ ಮಳೆಗರೆಯುತ್ತ ಶತಬಲಿಯನ್ನು ಹೊಡೆದು ಅವನ ಸಾರಥಿಯನ್ನು ಕೊಂದು ಹಾಕಿದನು. ತನ್ನ ಸಾರಥಿಯು ಹತನಾದುದನ್ನು ಕಂಡ ಶತಬಲಿಯು ಕ್ರೋಧದಿಂದ ಪ್ರಜ್ವಲಿಸುತ್ತ ॥೧೪೧॥ ಸ್ವತಃ ಕುದುರೆಯ ಲಗಾಮುಗಳನ್ನು ಕೈಯಲ್ಲಿ ಹಿಡಿದು ಶತ್ರುವಿನೊಂದಿಗೆ ಹೋರಾಡತೊಡಗಿದನು. ಕವಚವನ್ನೂ ಕತ್ತರಿಸುವಷ್ಟು ಹರಿತವಾದ ಉಕ್ಕಿನಬಾಣಗಳನ್ನು ತೆಗೆದುಕೊಂಡು ನಾಲ್ಕು ಬಾಣಗಳಿಂದ ಕಾಮರೂಪೇಶ್ವರನ ರಥದ ನಾಲ್ಕೂ ಕುದುರೆಗಳನ್ನು ಹೊಡೆದು ಕೊಂದು ಹಾಕಿದನು. ಅನಂತರ ಐಯ್ದನೆಯ ಬಾಣದಿಂದ ಅವನ ಸಾರಥಿಯ ಶಿರಸ್ಸನ್ನು ಕತ್ತರಿಸಿದನು. ॥೧೪೩॥ ಈ ರೀತಿ ರಾಜನ ಕುದುರೆಗಳು ಮತ್ತು ಸಾರಥಿಯು ಹತರಾಗಲು ಅವನು ರಥದಿಂದ ಕೆಳಗಿಳಿದು ಕೈಯಲ್ಲಿ ಖಡ್ಗವನ್ನು

ತತಃ ಶತಬಲಿಸ್ತಸ್ಯ ಛಿತ್ವಾऽಸಿಮಪಿ ತಂ ಪುನಃ ।
ಮೌಲೌ ಜಘಾನ ಖಡ್ಗೇನ ಆಶ್ಚರ್ಯಮಭವತ್ ಕ್ಷಣಾತ್ ॥೧೪೫॥

ಖಡ್ಗಪ್ರಹಾರಮೂರ್ಛೇನ ವಿಹ್ವಲಂ ಪತಿತಂ ಭುವಿ ।
ಜೀವಗ್ರಾಹಂ ಸ ಜಗ್ರಾಹ ವಾಚಾ ನಿರ್ಭರ್ತ್ಸಯನ್ ಮುಹುಃ ॥೧೪೬॥

ಸ ಶತ್ರುವಶಮಾಯಾತಃ ಕಿಂಚಿತ್ ಪ್ರಾಪ್ತಂ ಚ ಭಾವಿತಮ್ ।
ತತಃ ಶತಬಲಿಸ್ತಸ್ಯ ಸರ್ವಸ್ವಂ ಚಾಗ್ರಹೀತ್ ಬಲಾತ್ ॥೧೪೭॥

ಸೇನಾಮಾದಾಯ ಸ್ವಬಲಾಂ ಗಂಗಾಂ ಪ್ರಾಪ ಮಹಾಯಶಾಃ ।
ತತೋ ನಿವೇಶಯಾಮಾಸ ಸೈನ್ಯಂ ಗಂಗಾತಟೇ ಬಲೀ ॥೧೪೮॥

ತತ್ರಾಪಶ್ಯದ್ ಋಷಿವರಾನ್ ಚರತಃ ಪರಮಂ ತಪಃ ।
ಶುಷ್ಕಪರ್ಣಾಶನಾಃ ಕೇಚಿತ್ ಕೇಚಿತ್ ವಾತಾಂಬುಭಕ್ಷಕಾಃ ॥೧೪೯॥

ಮಹಾಪರಾಕಿಣಃ ಕಾಂಶ್ಚಿತ್ ಕಾಂಶ್ಚಿಚ್ಚಾಂದ್ರಾಯಣೇ ರತಾನ್ ।
ತಾನ್ಸರ್ವಾನ್ಸ ನಮಸ್ಕೃತ್ಯ ಪ್ರತ್ಯೇಕಂ ಮಹದಾದರಾತ್ ॥೧೫೦॥

ತೈಃ ಸರ್ವೈಃ ಕುಶಲಂ ಪೃಷ್ಟ್ವಾ ರಾಜ್ಞೇ ದತ್ವಾ ತದಾಶಿಷಃ ।
ಸ ತೈರೂಚೇ ಪುನರಿದಂ ಕೃತಂ ಶತಬಲೇ ತ್ವಯಾ ॥೧೫೧॥

ಹಿಡಿದು ರಥದಲ್ಲಿ ಕುಳಿತಿರುವ ಶತಬಲಿಯತ್ತ ಧಾವಿಸಿದನು. ॥೧೪೪॥ ಆಗ ಶತಬಲಿಯು ತನ್ನ ಖಡ್ಗದಿಂದ ಕಾಮರೂಪರಾಜನ ಖಡ್ಗವನ್ನು ಕತ್ತರಿಸಿ ಅವನ ತಲೆಗೆ ಬಲವಾಗಿ ಹೊಡೆಯಲು ಅವನು ಮೂರ್ಛಿತನಾಗಿ ಕೆಳಗೆ ಬಿದ್ದನು. ॥೧೪೫॥ ಆಗ ರಣರಂಗದಲ್ಲೆಲ್ಲ ಹಾಹಾಕಾರಗಳಾದವು. ಮೂರ್ಛಿತನಾಗಿ ಕೆಳಗೆ ಬಿದ್ದಿರುವ ಕಾಮರಾಜನನ್ನು ಪುನಃ ಪುನಃ ಭರ್ತ್ಸಿಸುತ್ತ ಬಂಧಿಸಿದನು. ॥೧೪೬॥ ಅನಂತರ ಶತಬಲಿಯು ಶತ್ರುರಾಜನ ಸರ್ವಸ್ವವನ್ನೂ ಬಲಾತ್ಕಾರದಿಂದ ಅಪಹರಿಸಿ ॥೧೪೭॥ ಮುಂದೆ ತನ್ನ ಸೇನೆಯೊಂದಿಗೆ ಗಂಗಾತೀರಕ್ಕೆ ಬಂದು ಬಿಡಾರ ಹೂಡಿದನು. ॥೧೪೮॥ ಅಲ್ಲಿರುವಾಗ ಉಗ್ರವಾದ ತಪಸ್ಸನ್ನಾಚರಿಸುತ್ತಿರುವ ಅನೇಕ ಋಷಿವರರನ್ನು ಕಂಡನು. ಅವರಲ್ಲಿ ಕೆಲವರು ಕೇವಲ ಒಣಗಿದ ಎಲೆಗಳನ್ನು ಭಕ್ಷಿಸಿ, ಇನ್ನು ಕೆಲವರು ಗಾಳಿ, ನೀರು ಮಾತ್ರ ಸೇವಿಸಿ ತಪಸ್ಸನ್ನಾಚರಿಸುತ್ತಿದ್ದರು. ॥೧೪೯॥ ಕೆಲವರು ಮಹಾಪರಾಕ ವ್ರತವನ್ನೂ ಇನ್ನು ಕೆಲವರು ಚಾಂದ್ರಾಯಣ ವ್ರತವನ್ನೂ ಆಚರಿಸುತ್ತಲಿದ್ದರು. ಅಲ್ಲಿರುವ ಪ್ರತಿಯೊಬ್ಬ ಋಷಿಗೂ ಶತಬಲಿ ರಾಜನು ಭಕ್ತಿಯಿಂದ ನಮಸ್ಕರಿಸಲು ॥೧೫೦॥ ಅವರು ರಾಜನ ಕುಶಲ ಪ್ರಶ್ನೆ ಮಾಡಿ ಅವನಿಗೆ ಆಶೀರ್ವದಿಸುತ್ತ ಹೇಳಿದರು- 'ಅಯ್ಯಾ ಶತಬಲಿರಾಜಾ, ಯುದ್ಧದಲ್ಲಿ

ಕ್ಷತ್ರಸದೃಕ್‌ಧರ್ಮಕರ್ಮಕಾಮರೂಪೀಪದಗ್ರಹೀ ।
ಕ್ಷತ್ರಿಯಾಣಾಂ ಜಯೋ ಮೃತ್ಯುಃ ಸಂಗ್ರಾಮೇ ನ ಪಲಾಯನಮ್ ॥೧೫೨॥

ಏತದ್ವಿಚರತಾಂ ಲೋಕೇ ನ ದೋಷೋಽಸ್ತಿ ಹಿ ಕಶ್ಚನ ।
ಅತ್ರ ಧರ್ಮಂ ಪಾಲಯತಃ ಭಗ್ನಸೈನ್ಯೋಽಪಿ ಯೋ ಗ್ರಹಃ ॥೧೫೩॥

ನಾಸೌ ಪುಣ್ಯಾಯ ರಾಜೇಂದ್ರ ತಸ್ಮಾದೇತದ್ವ್ರತಂ ತ್ಯಜ ।
ನಿಶ್ಚಿತೋಽತ್ರ ಜಯಃ ಕಸ್ಯ ಭಂಗೋ ವಾ ಕಸ್ಯ ನಿಶ್ಚಯಃ ॥೧೫೪॥

ವಿಜಯಂ ತತ್ರ ಶತ್ರೂನ್ ಯೇ ಭಜ್ಯತೇ ತತ್ರ ಕರ್ಹಿಚಿತ್ ।
ಏತಾವಶ್ಚಿತೌ ಯಸ್ಮಾತ್ ಜಾತ್ವೇಹ ವಿಜಯೇಚ್ಛುಭಿಃ ॥೧೫೫॥

ಶತ್ರುರ್ವಿಪದಮಾಪನ್ನೋ ನ ಮಾರ್ಯಶ್ಚ ಕಥಂಚನ ।
ಸಂಗ್ರಾಮೇ ಪತಿತೋ ವೀರೋ ಜೀವನ್ನಪಿ ಮೃತೋ ಹಿ ಸಃ ॥೧೫೬॥

ಸ್ವೀಕರ್ತವ್ಯಃ ಸ ರಿಪುಭಿಃ ಕೋಪಾಮರ್ಷೌ ವಿಹಾಯ ಚ ।
ಸಂಗ್ರಾಮೇ ಪತಿತಂ ವೀರಂ ಯೇ ಘ್ನಂತಿ ಘಾತಯಂತಿ ವಾ ॥೧೫೭॥

ಕಾಮರೂಪೇಶ್ವರನನ್ನು ಬಂಧಿಸಿ ನೀನೇನೋ ಕ್ಷತ್ರಿಯರಿಗೆ ಉಚಿತವಾದ ಧರ್ಮ ಕರ್ಮಗಳನ್ನು ಮಾಡಿರುವಿ. 'ಕ್ಷತ್ರಿಯರಾದವರಿಗೆ ಯುದ್ಧದಲ್ಲಿ ಮರಣವೇ ಜಯವು, ಪಲಾಯನವಲ್ಲ' ॥೧೫೧॥೧೫೨॥ ಎಂಬ ಧರ್ಮವನ್ನು ಅರಿತವರಿಗೆ ಲೋಕದಲ್ಲಿ ಯಾವ ತರಹದ ದೋಷವೂ ಬರಲಾರದು. ಯುದ್ಧ ನಡೆದಾಗ ಸೈನಿಕರೆಲ್ಲ ಓಡಿ ಹೋದರೂ ಕ್ಷತ್ರಿಯ ಧರ್ಮವನ್ನು ಪರಿಪಾಲಿಸಿದ ಈ ಕಾಮರೂಪೇಶ್ವರನನ್ನು ಈ ರೀತಿ ಬಂಧಿಸಿ ತಂದಿರುವದು ॥೧೫೩॥ ನಿನಗೆ ಯೋಗ್ಯವಾಗುವದಿಲ್ಲ. ಇದರಿಂದ ಯಾವ ಪುಣ್ಯಸಾಧನೆಯೂ ಆಗಲಾರದು. ಆದ್ದರಿಂದ ಇವನನ್ನು ಕೂಡಲೇ ಬಿಟ್ಟುಬಿಡು. ಈ ಯುದ್ಧದಲ್ಲಿ ಯಾರಿಗೆ ಜಯವಾಗಿದೆ ಹಾಗೂ ಪರಾಜಯವಾಗಿದೆ ಎಂಬುದು ನಿರ್ಧಾರಿತವಾಗಿಲ್ಲ. ॥೧೫೪॥ ಯಾರು ಅಧಿಕ ಶತ್ರುಗಳನ್ನು ಕೊಂದಿರುವರೋ ಅವರು ಜಯಶಾಲಿಗಳೆಂಬುದು ಮೇಲ್ನೋಟಕ್ಕೆ ಕಂಡುಬಂದರೂ ಜಯಾಪಜಯಗಳು ಅನಿಶ್ಚಿತವಾಗಿವೆ. ಯುದ್ಧದಲ್ಲಿ ವಿಜಯವನ್ನು ಬಯಸುವವರು ॥೧೫೫॥ ವಿಪತ್ತಿನಲ್ಲಿರುವ ಶತ್ರುವನ್ನು ಯಾವ ಕಾಲಕ್ಕೂ ಯಾವ ರೀತಿಯಿಂದಲೂ ಹೊಡೆಯಬಾರದು. ಸಂಗ್ರಾಮದಲ್ಲಿ ಕೆಳಗೆ ಬಿದ್ದ ವೀರನು ಜೀವಂತವಾಗಿದ್ದರೂ ಮೃತನೆಂದೇ ತಿಳಿದು ॥೧೫೬॥ ಶತ್ರುಗಳು ಕೋಪಾದಿಗಳನ್ನು ಬಿಟ್ಟು ಬಿದ್ದಿರುವವನನ್ನು ಅನುಕಂಪೆಯಿಂದ ಸ್ವೀಕರಿಸಬೇಕು. ಯುದ್ಧದಲ್ಲಿ ಕೆಳಗೆ ಬಿದ್ದಿರುವ ವೀರನನ್ನು ಯಾರು ಕೊಲ್ಲುತ್ತಾರೋ

ಬ್ರಹ್ಮಹತ್ಯಾ ಸಮಂ ಪಾಪಂ ತೇಷಾಂ ಸ್ಯಾನ್ಮುನಯೋಽಬ್ರುವನ್ ।
ಮುಕ್ತೋ ಬದ್ಧಂ ಚಾಹೃತಂ ಚ ತವಾಹಮಿತಿವಾದಿನಮ್ ॥೧೫೮॥

ಕ್ಷತ್ರಿಯಂ ಯೇಽತ್ರ ನಿಘ್ನಂತಿ ಬ್ರಹ್ಮಘ್ನಾಸ್ತೇ ಪ್ರಕೀರ್ತಿತಾಃ ।
ಸೇವಕೈಃ ಸ್ವಾಮಿನಂ ವೃದ್ಧಂ ತ್ಯಕ್ತ್ವಾ ಪ್ರಾಣಪರಾಯಣಾಃ ॥೧೫೯॥

ಕ್ಷತ್ರಿಯಾ ಯೇ ನಿವರ್ತಂತೇ ತೇಷಾಂ ಹತ್ಯಾ ಪದೇ ಪದೇ ।
ಯಾವಜ್ಜೀವಂ ಸ್ವಾಮಿನೋಽನ್ನಂ ವಿತ್ತಂ ಶಸ್ತ್ರಾಣಿ ಭೂಷಣಮ್ ॥೧೬೦॥

ಉಪಯುಜ್ಯಾ ಯುದ್ಧ್ಯತಾಂ ಚ ಗರ್ದಭಾಶ್ಚ ಭವಾಂತರೇ ।
ಶತ್ರುರಪ್ಯಾಪದಂ ಪ್ರಾಪ್ತೋ ನ ಹಂತವ್ಯಃ ಕಥಂಚನ ॥೧೬೧॥

ವಿಕ್ರೀತಃ ಸಪ್ರತೀಕ್ಷಃ ಸ್ಯಾದ್ಯಾವತಾ ಪ್ರತರೇದಿಹ ।
ಯಾ ಚ ನೀತಿರಿಹ ಪ್ರಾಹ ವ್ಯಸನೇ ಸತಿ ಸರ್ವದಾ ॥೧೬೨॥

ಪ್ರಹರ್ತವ್ಯೋ ವಿಪಕ್ಷಂ ಸ್ಯಾತ್ತಥಾಽಸ್ಯೋಪಚಯೇ ಸತಿ ।
ಪ್ರವಾಹಿಕಂ ತು ವಚನಂ ನ ಚೈತತ್ ಪಾರಮಾರ್ಥಿಕಮ್ ॥೧೬೩॥

ಕರ್ಮವಶ್ಯಂ ಜಗದಿದಂ ಕರ್ಮವಶ್ಯೋಽಥ ಮಾನವಃ ।
ಕರ್ಮಾಯತ್ತೋ ದೃಷ್ಟಕರ್ಮಾ ಕರ್ಮಾಯತ್ತಃ ಪರಾಜಯಃ ॥೧೬೪॥

ಅಥವಾ ಕೊಲ್ಲಿಸುತ್ತಾರೋ ॥೧೫೭॥ ಅಂಥವರಿಗೆ ಬ್ರಹ್ಮಹತ್ಯೆಗೆ ಸಮನಾದ ಪಾಪವು ಬರುವದೆಂದು ಜ್ಞಾನಿಗಳು ಹೇಳುತ್ತಾರೆ. ಬಂಧಿತನಾದ, ಸೆರೆಹಿಡಿಯಲ್ಪಟ್ಟ ಮತ್ತು 'ನಾನು ನಿನ್ನವನಾಗಿದ್ದೇನೆ' ಎಂದು ಹೇಳುವ ॥೧೫೮॥ ಕ್ಷತ್ರಿಯನನ್ನು ಯಾರು ಕೊಲ್ಲುವರೋ ಅವರು ಬ್ರಹ್ಮಘಾತಕರೆಂದು ತಿಳಿಯಲ್ಪಡುವರು. ವೃದ್ಧನಾದ ಸ್ವಾಮಿಯನ್ನು ಏಕಾಂಗಿಯಾಗಿ ಬಿಟ್ಟು ತಮ್ಮ ಜೀವವನ್ನು ಉಳಿಸಿಕೊಳ್ಳಲು ॥೧೫೯॥ ರಣಭೂಮಿಯನ್ನು ಬಿಟ್ಟು ಓಡುವ ಕ್ಷತ್ರಿಯರನ್ನು ಆ ಕೂಡಲೇ ಕೊಂದು ಹಾಕಬೇಕು. ಹೀಗೆ ಯುದ್ಧ ಮಾಡದೇ ತಪ್ಪಿಸಿಕೊಂಡು ಓಡಿ ಹೋದವರು ತಾವು ಜೀವಿಸಿರುವವರೆಗೆ ತಮ್ಮ ಸ್ವಾಮಿಯ ಅನ್ನ, ಸಂಪತ್ತು, ಶಸ್ತ್ರ ಅಲಂಕಾರಾದಿಗಳನ್ನು ॥೧೬೦॥ ಉಪಯೋಗಿಸಿ ಜನ್ಮಾಂತರದಲ್ಲಿ ಗರ್ದಭಗಳಾಗುವರು. ಆಪತ್ತಿನಲ್ಲಿರುವ ಶತ್ರುವನ್ನು ಎಂದಿಗೂ ಕೊಲ್ಲಬಾರದು. ॥೧೬೧॥ ಬಂಧಿಸಲ್ಪಟ್ಟವನನ್ನು ಅವನು ಮೋಸ ಮಾಡುವವರೆಗೆ ಕೃಪೆಯಿಂದ ನೋಡಿಕೊಳ್ಳಬೇಕು. ಇದು ಕ್ಷತ್ರಿಯರ ಧರ್ಮವಾಗಿದೆ. ಇನ್ನು ತಾನು ಸ್ವತಃ ಸಂಕಟದಲ್ಲಿದ್ದಾಗ ॥೧೬೨॥ ಅಥವಾ ಶತ್ರುವು ಪ್ರಬಲನಾದರೆ ಶತ್ರುವನ್ನು ನಿರ್ದಾಕ್ಷಿಣ್ಯವಾಗಿ ಕೊಲ್ಲಬೇಕೆಂಬ ವಚನವೇನಿದೆಯೋ ಅದು ತೋರಿಕೆಯ ಧರ್ಮವಚನವಾಗಿದ್ದು ಪಾರಮಾರ್ಥಿಕವಾದುದಲ್ಲ. ॥೧೬೩॥ ಈ ಜಗತ್ತೆಲ್ಲವೂ

ಬುದ್ಧಿಶ್ರೀಶ್ಚ ಸುಖಂ ದುಃಖಂ ಸರ್ವಕರ್ಮಾನುಗಾಮಿ ಚ ।
ಅನ್ಯಸ್ಯಾಂ ಕಿಮಸತ್ಕಾರ್ಯಂ ರಾಜ್ಯಂ ಸ್ಯಾತ್ ಕಸ್ಯಚಿತ್ಪುನಃ ॥೧೬೫॥

ಸುಬದ್ಧಂ ಯಾತಿ ಕಸ್ಯಾತಿಸಹಸಾ ತದಚಿಂತಿತಮ್ ।
ಯಸ್ಯೈವ ಸರ್ವಸೌಖ್ಯಾನಿ ದೃಷ್ಟ್ವಾ ಯಸ್ಯೇತರಸ್ಯ ಚ ॥೧೬೬॥

ತಸ್ಯ ಕಾಲೇನ ದೃಶ್ಯಂತೇ ಕಥಂ ಕರ್ಮ ನ ಕಾರಣಮ್ ।
ಸಹಸಾ ಚ ಮಹಾವ್ಯಾಧೇರಾಗಮಃ ಕಸ್ಯಚಿದ್ಭವೇತ್ ॥೧೬೭॥

ಧನಾಗಮಸ್ಯ ಕಸ್ಯಾಪಿ ಕಥಂ ಕರ್ಮ ನ ಕಾರಣಮ್ ।
ಕಸ್ಯಚಿದಾಪದೋ ದೃಷ್ಟ್ವಾ ಸಹಸಾಪ್ಯಧನಂ ತಥಾ ॥೧೬೮॥

ಏತಾಂ ನೀತಿಂ ವಿನಿಶ್ಚಿತ್ಯ ಕರ್ಮ ಕಾರಣಮುಚ್ಯತೇ ।
ಅನ್ಯೇ ತು ಪುರುಷಾಕಾರಂ ಮನ್ಯಂತೇ ತತ್ತು ನಿಶ್ಚಿತಮ್ ॥೧೬೯॥

ತತ್ರಾಪಿ ಗ್ರಹಚಾರೋ ಹಿ ದೃಶ್ಯತೇ ಕರ್ಮಣೋ ವಶಾತ್ ।
ಕರ್ಮವಶಾತ್ಪುರುಷಸ್ಯ ಯಾದೃಶೀ ಭಾವನಾ ಭವೇತ್ ॥೧೭೦॥

ಕರ್ಮಾಧೀನವಾಗಿದೆ ಮತ್ತು ಮಾನವನು ಕರ್ಮಾಧೀನನಾಗಿದ್ದಾನೆ. ಸೋಲು ಗೆಲುವುಗಳೆರಡೂ ಕರ್ಮಾಧೀನವಾಗಿವೆ. ॥೧೬೪॥ ಬುದ್ಧಿ, ಸಂಪತ್ತು, ಸುಖ, ದುಃಖಗಳೆಲ್ಲವೂ ಕರ್ಮವನ್ನು ಅನುಸರಿಸಿ ಇರುತ್ತವೆ. ಸತ್ಕಾರ್ಯ ಅಸತ್ಕಾರ್ಯಗಳೂ ಪುರುಷನ ಕರ್ಮಾಧೀನವಾಗಿವೆ. ಒಬ್ಬನಿಗೆ ರಾಜ್ಯಲಾಭವಾಗುವದು. ॥೧೬೫॥ ಬೇರೊಬ್ಬನು ಬಂಧಿಸಲ್ಪಡುವನು. ಪೂರ್ವಯೋಜನೆಯಿಲ್ಲದೇ ನಡೆಯುವ ಇದೆಲ್ಲವೂ ಅಚಿಂತ್ಯವಾಗಿದೆ. ಒಬ್ಬನಿಗೆ ಸಕಲಸೌಖ್ಯಗಳಿರುವದು ಬೇರೊಬ್ಬನಿಗೆ ಸೌಖ್ಯಗಳಿಲ್ಲದಿರುವದು ಈಗ ಕಂಡರೂ ॥೧೬೬॥ ಕಾಲಾಂತರದಲ್ಲಿ ಇದಕ್ಕೆ ವಿಪರೀತವಾಗುವದನ್ನು ನೋಡಿದಾಗ ಎಲ್ಲದಕ್ಕೂ ಅದು ಹೇಗೆ ಕರ್ಮವು ಕಾರಣವಾಗದೇ ಇದ್ದೀತು? ಒಬ್ಬನಿಗೆ ಇದ್ದಕ್ಕಿದ್ದಂತೆ ಮಹಾವ್ಯಾಧಿಯು ಕಾಣಿಸಿಕೊಳ್ಳುವದು. ॥೧೬೭॥ ಇನ್ನೊಬ್ಬನಿಗೆ ಇದಕ್ಕಿದ್ದಂತೆ ಧನವು ಪ್ರಾಪ್ತವಾಗುವದು. ಹೀಗಾಗುವಾಗ ಇದೆಲ್ಲದಕ್ಕೆ ಕರ್ಮವು ಕಾರಣವಾಗದೇ ಇದ್ದೀತೆ? ಒಬ್ಬನಿಗೆ ಇದ್ದಕ್ಕಿದ್ದಂತೆ ಆಪತ್ತುಗಳು ಬರುವವು. ಬೇರೊಬ್ಬನು ದರಿದ್ರನಾಗುವನು. ॥೧೬೮॥ ಇದೆಲ್ಲವನ್ನು ಕಂಡಾಗ ಎಲ್ಲದಕ್ಕೂ ಕರ್ಮವೇ ಕಾರಣವಾಗುವದೆಂಬುದು ನಿಶ್ಚಿತವಾಗುವದು. ಇನ್ನು ಕೆಲವರು ಎಲ್ಲದಕ್ಕೂ ಪುರುಷನೇ ಕಾರಣನೆಂದು ತಿಳಿಯುವರು. ಅದೂ ಕೂಡ ನಿಶ್ಚಿತವೇ. ॥೧೬೯॥ ಏಕೆಂದರೆ ಪುರುಷನ ಗ್ರಹಚಾರಗಳೆಲ್ಲ ಕರ್ಮಾಧೀನವೇ

ತದ್ಯಥಾ ಕರ್ಮಣಾಂ ವೃಷ್ಟ್ಯಾ ತತ್ಕರೋತಿ ಪ್ರಯತ್ನತಃ ।
ದೈವಮೇವ ಹಿ ತಸ್ಮಾಚ್ಚ ಶ್ರೇಷ್ಠಂ ಮನ್ಯಾಮಹೇ ವಯಮ್ ॥೧೭೧॥

ದೈವೇನ ಸರ್ವಮಾಪ್ನೋತಿ ದೈವೇನ ಚ ಪರಾಭವಮ್ ।
ದೈವೇನ ಧರ್ಮಮಾಪ್ನೋತಿ ನೈರುಜ್ಯಂ ಚ ಸರೋಗತಾಮ್ ॥೧೭೨॥

ಲಯಕ್ಷಯಾದಿಕಂ ಚೈವ ಸರ್ವಂ ದೈವೇ ಪ್ರತಿಷ್ಠಿತಮ್ ।
ಅಸೌ ದೈವಾಚ್ಚ ವಿಪದಂ ಪ್ರಾಪ್ತಸ್ತ್ವಂ ಪಿತೃಜಂ ಪದಮ್ ॥೧೭೩॥

ತಸ್ಮಾದೇನಂ ವಿಮುಞ್ಚಾಶು ಕಾಮರಾಜಂ ತಥಾಗತಮ್ ।
ಋಷೀಣಾಂ ವಚನಾತ್ ಸೋಽಥ ವಿಮುಚ್ಯೈನಂ ಮಹಾಬಲಮ್ ॥೧೭೪॥

ಮುನೀನಪೃಚ್ಛದ್ವಿಷಯಾನ್ ಸ್ವಾನ್ ಜಗಾಮ ಮುದಾನ್ವಿತಃ ।
ಕಾಮರೂಪಾಧಿಪಶ್ಚಾಥ ಋಷಿಭಿರ್ಮೋಚಿತಸ್ತದಾ ॥೧೭೫॥

ವಿವರ್ಣವದನೋ ಮರ್ಷಲಜ್ಜಾಶೋಕಪರಿಪ್ಲುತಃ ।
ಗಂಗಾಯಾಃ ಸಲಿಲೇ ಸ್ನಾತ್ವಾ ಚೋಪಸ್ಪೃಶ್ಯ ಹ್ಯುಪಾಗತಃ ॥೧೭೬॥

ಆಗಿರುತ್ತವೆ. ಪೂರ್ವಕರ್ಮ ವಶದಿಂದ ಮನುಷ್ಯನ ವಿಚಾರಧಾರೆಯು ನಡೆದು ॥೧೭೦॥ ಅದಕ್ಕನುಸಾರವಾಗಿ ಮನುಷ್ಯನು ಕಾರ್ಯಗಳನ್ನು ಮಾಡುವನು. ಹೇ ರಾಜಾ! ನಾವಂತೂ ದೈವವೇ ಶ್ರೇಷ್ಠವೆಂದು ತಿಳಿಯುತ್ತೇವೆ. ॥೧೭೧॥ ದೈವದಿಂದಲೇ ಸರ್ವವೂ ಲಭಿಸುವದು, ದೈವದಿಂದಲೇ ಪರಾಭವವಾಗುವದು, ದೈವದಿಂದ ಧರ್ಮವು ನಡೆಯುವದು, ನಿರೋಗವಾಗಲೀ ರೋಗರುಜಿನಗಳಾಗಲೀ ಎಲ್ಲವೂ ದೈವಾಧೀನವಾಗಿವೆ. ॥೧೭೨॥ ಲಯ ಕ್ಷಯಾದಿಗಳೆಲ್ಲ ದೈವವನ್ನೇ ಆಶ್ರಯಿಸಿವೆ. ಹೇ ರಾಜಾ, ಈ ಕಾಮರೂಪೇಶ್ವರನು ದೈವದಿಂದ ಪರಾಜಿತನಾಗಿ ವಿಪತ್ತಿನಲ್ಲಿದ್ದಾನೆ ಮತ್ತು ನೀನಾದರೂ ದೈವದಿಂದಲೇ ನಿನ್ನ ತಂದೆಯಿಂದ ಬಂದ ರಾಜ್ಯಭಾರವನ್ನು ಪಡೆದಿರುವಿ. ॥೧೭೩॥ ಆದ್ದರಿಂದ ನೀನು ಕೂಡಲೇ ಈತನನ್ನು ಬಂಧಮುಕ್ತಗೊಳಿಸುವವನಾಗು.' ಆಗ ಶತಬಲಿಯು ಋಷಿಗಳ ಆಜ್ಞಾನುಸಾರವಾಗಿ ಮಹಾಬಲಿಷ್ಠನಾದ ಕಾಮರೂಪೇಶ್ವರನನ್ನು ಬಂಧದಿಂದ ಮುಕ್ತಗೊಳಿಸಿ ॥೧೭೪॥ ತನ್ನ ಮುಂದಿನ ಕಾರ್ಯಗಳ ಬಗ್ಗೆ ಋಷಿಗಳಿಂದ ಮಾರ್ಗದರ್ಶನ ಹಾಗೂ ಆದೇಶಗಳನ್ನು ಪಡೆದು ಮುದದಿಂದ ತನ್ನ ದೇಶಕ್ಕೆ ಹೊರಟು ಹೋದನು. ಇತ್ತ ಋಷಿಗಳಿಂದ ಮುಕ್ತಗೊಳಿಸಲ್ಪಟ್ಟ ಕಾಮರೂಪೇಶ್ವರ ರಾಜನು ॥೧೭೫॥ ಕಳೆಗುಂದಿದ ಮುಖವುಳ್ಳವನಾಗಿ, ಕೋಪ ಲಜ್ಜಾ ಶೋಕಗಳಿಂದ ಕ್ಲೇಶಪಡುತ್ತ ಗಂಗಾನದಿಯ ಜಲದಲ್ಲಿ ಸ್ನಾನ ಮಾಡಿ ತನ್ನ ರಾಜ್ಯಕ್ಕೆ

ಬ್ರಾಹ್ಮಂ ಸರೋ ಜಗಾಮಾಶು ಹಿತ್ವಾ ದಾರಾನ್ ಸಪುತ್ರಕಾನ್ ।
ರಾಜ್ಯಂ ಸಪ್ತಾಂಗಕಂ ತ್ಯಕ್ತ್ವಾ ಶೋಕಾಮರ್ಷವಶಂಗತಃ ॥೧೭೭॥

ನಿರಂತರಂ ಶ್ವಸನ್ ಕ್ಷಾಮೋ ನಿರಭೀಭೂತಪನ್ನಗಃ ।
ಮಾನೀ ಮಾನೇನ ಚ ತ್ಯಕ್ತೋ ವರಾನ್ ಪ್ರಾಣಾನ್ ಪರಿತ್ಯಜೇತ್ ॥೧೭೮॥

ಕಥಂಚಿದಪಿ ಲೋಕಾನಾಂ ದರ್ಶಯೇತ್ಯಾತ್ಮನೋ ಮುಖಮ್ ।
ತತ್ರ ಸ್ಥಿತ್ವಾ ಚಿರಂ ದಧ್ಯೌ ಕಿಂ ಜಾತಂ ಮಮ ಸಾಂಪ್ರತಮ್ ॥೧೭೯॥

ಜುಹೋಮಿ ಖಂಡಶಃ ಕೃತ್ವಾ ವಹ್ನೌ ದೇಹಮಿಮಂ ತಥಾ ।
ಕಿಂ ವಾ ಕಂಠೇ ಶಿಲಾಂ ಬಧ್ವಾ ಮಜ್ಜಯಾಮಿ ನಿಜಾಂ ತನುಮ್ ॥೧೮೦॥

ಅಥವಾ ಭೃಗುಪಾತ್ತಂ ಚ ಕೃತ್ವಾ ತ್ಯಾಜ್ಯಾಮಿ ವಿಗ್ರಹಮ್ ।
ಅಥವೋಗ್ರೇಣ ತಪಸಾರಾಧಯಾಮಿ .(ಆರಾಧಯಾಮಿ)
ಮಹೇಶ್ವರಮ್ ॥೧೮೧॥

ತತಶ್ಚ ತಪಸಾ ಶೀಘ್ರಂ ತ್ಯಕ್ಷಾಮಿ ಚ ಕಲೇವರಮ್ ।
ತತಃ ಸ ತಪ ಆರೇಭೇ ವಿಚಾರ್ಯೇತಿ ಮುಹುರ್ಮುಹುಃ ॥೧೮೨॥

ತಿರುಗಿ ಬಂದನು. ॥೧೭೬॥ ಅಲ್ಲಿ ಹೆಚ್ಚು ಕಾಲನಿಲ್ಲದೇ ತನ್ನ ಪತ್ನಿ-ಪುತ್ರರನ್ನು ಹಾಗೂ ಸಪ್ತಾಂಗ ಸೈನ್ಯವನ್ನು ಪರಿತ್ಯಜಿಸಿ ಬ್ರಾಹ್ಮ ಸರೋವರಕ್ಕೆ ಬಂದು ಸೇರಿದನು. ॥೧೭೭॥ ಬಹು ಕೃಶನಾದ ರಾಜನು ಮಂತ್ರೌಷಧಿಗಳಿಂದ ಪ್ರತಿರುದ್ಧವಾದ ಪರಾಕ್ರಮವುಳ್ಳ ಸರ್ಪದಂತೆ ನಿರಂತರ ನಿಟ್ಟುಸಿರು ಬಿಡುತ್ತ ಅಲೆಯತೊಡಗಿದನು. ತೇಜಸ್ವಿಯಾದವನು ಈ ರೀತಿ ಅವಮಾನಿತನಾಗಿ ಇರುವದಕ್ಕಿಂತ ಶ್ರೇಷ್ಠವಾದ ಪ್ರಾಣಗಳನ್ನು ತ್ಯಜಿಸುವದೇ ಶ್ಲಾಘ್ಯವಾಗಿದೆ. ॥೧೭೮॥ ಇದುವರೆಗೆ ಧೈರ್ಯದಿಂದ ಜನರ ಮುಂದೆ ಮುಖ ತೋರಿಸುತ್ತ ಜೀವಿಸಿದೆನು. ಇಂದು ಅದೇನೋ ಒಂದು ತರಹವಾಗುತ್ತಿದೆ. ನನಗೇನಾಯಿತು? ॥೧೭೯॥ ಈ ನನ್ನ ದೇಹವನ್ನು ತುಂಡು ತುಂಡು ಮಾಡಿ ಅಗ್ನಿಯಲ್ಲಿ ಹಾಕಿ ಸುಟ್ಟು ಬಿಡಲೇ? ಅಥವಾ ಕುತ್ತಿಗೆಯಲ್ಲಿ ಕಲ್ಲು ಬಂಡೆಯನ್ನು ಕಟ್ಟಿಕೊಂಡು ಈ ದೇಹವನ್ನು ನೀರಿನಲ್ಲಿ ಮುಳುಗಿಸಿ ಬಿಡಲೇ ? ॥೧೮೦॥ ಇಲ್ಲವೇ ದೇಹದ ಮೇಲೆ ಕಲ್ಲುಬಂಡೆಯನ್ನು ಒಗೆದುಕೊಂಡು ದೇಹವನ್ನು ಬಿಟ್ಟುಬಿಡಲೇ ? ಉಗ್ರವಾದ ॥೧೮೧॥ ತಪಸ್ಸಿನಿಂದ ಮಹೇಶ್ವರನನ್ನು ಆರಾಧಿಸಿ ನಂತರ ಈ ದೇಹವನ್ನು ಬಿಡುವುದೇ ಲೇಸೆಂದು ಭಾವಿಸಿ ಕಾಮರೂಪೇಶ್ವರನು ತಪಸ್ಸನ್ನು ಪ್ರಾರಂಭಿಸಿದನು. ॥೧೮೨॥ ನಿತ್ಯವೂ ಅವನು

ನಿತ್ಯಂ ತ್ರಿಸವನಂ ಕುರ್ವನ್ ತ್ರಿಃ ಕೃತ್ವಾ ಪೂಜಯನ್ ಶಿವಮ್ ।
ಶಿವಮಂತ್ರಾನ್ ಜಪನ್ನಿತ್ಯಂ ಶಿವಧ್ಯಾನಪರಾಯಣಃ ॥೧೮೩॥

ತತ್ರೋಟಜೇ ಸಮಾಧಾಯ ವಹ್ನಿಂ ಚ ವಿಧಿಪೂರ್ವಕಮ್ ।
ತ್ರಿವಾರಂ ಸಮಿಧಾ ಹೋಮಂ ಯಜ್ಞಿಯಾನಾಂ ಸಮಾಹಿತಃ ॥೧೮೪॥

ಏವಂ ಕೃತ್ವಾ ವದತ್ಯೇವಂ ಶಂಕರಃ ಪ್ರೀಯತಾಮಿತಿ ।
ಸಂಧ್ಯಾಯಾಂ ಚ ತತಃ ಸಾಂಧ್ಯಂ ಕೃತ್ವಾ ಚೈವ ಸಮಾಹಿತಃ ॥೧೮೫॥

ಸ್ವಪಿತೃತರ್ಪಣಾನಾಂ ಚ ಆಹಾರಂ ಕುರುತೇ ವಶಃ ।
ಅಥ ವರ್ಷತ್ರಯಂ ಸಾಗ್ರಂ ಜಾತಂ ತಸ್ಯ ಮಹಾತ್ಮನಃ ॥೧೮೬॥

ಅಥೈಕಸ್ಮಿನ್‌ದಿನೇ ರಾಜಾ ಮಧ್ಯಾಹ್ನೇ ಸ್ನಾತುಮಾಗತಃ ।
ಏವಂ ಸತಿ ಮೃಗಃ ಕಶ್ಚಿತ್ತತ್ಸಮೀಪಂ ಸಮಾಗತಃ ॥೧೮೭॥

ರಾಜನ್ಮಾಂ ರಕ್ಷ ರಕ್ಷ ತ್ವಂ ವೇದನಾಪೀಡಿತೋಽಸ್ಮ್ಯಹಂ ।
ಪಶ್ಚಾದ್ವಿಲೋಕಯನ್ ಭೂಯಃ ಕಂಪಮಾನೋ ಭಯಾತುರಃ ॥೧೮೮॥

ರಾಜಾನಂ ದೀನಯಾ ದೃಷ್ಟ್ಯಾ ಪಶ್ಯಂಸ್ತತ್ರ ಚ ಸಂಸ್ಥಿತಃ ।
ನೃಪೋಽಪಿ ಕೃಪಯಾವಿಷ್ಟೋ ದೃಷ್ಟ್ವಾ ಮೃಗಮಭಾಷತ ॥೧೮೯॥

ಮೂರು ಹೊತ್ತು ಸ್ನಾನಮಾಡಿ ಸಂಧ್ಯಾರ್ಘ್ಯಗಳನ್ನು ಕೊಟ್ಟು ಶಿವನನ್ನು ಪೂಜಿಸತೊಡಗಿದನು. ಶಿವಮಂತ್ರಗಳನ್ನು ಪಠಿಸುತ್ತ ಸದಾಕಾಲ ಶಿವಧ್ಯಾನದಲ್ಲೇ ರತನಾದನು. ॥೧೮೩॥ ಗುಡಿಸಲಿನಲ್ಲಿ ವಹ್ನಿಯನ್ನು ವಿಧಿಪೂರ್ವಕ ಸ್ಥಾಪಿಸಿ ಮೂರು ಹೊತ್ತು ಸಮಿತ್ತುಗಳಿಂದ ಹೋಮವನ್ನು ಮಾಡತೊಡಗಿದನು. ॥೧೮೪॥ ಈ ಪ್ರಕಾರ ಹೋಮಾದಿಗಳನ್ನು ಮಾಡುತ್ತ 'ಹೇ ಪರಮೇಶ್ವರಾ! ಶಂಕರಾ! ನನ್ನ ಮೇಲೆ ದಯೆ ತೋರು' ಎಂದು ಪ್ರಾರ್ಥಿಸುತ್ತ ಸಾಯಂಕಾಲದಲ್ಲಿ ಸಂಧ್ಯಾಕರ್ಮವನ್ನು ಮುಗಿಸಿ ಪುನಃ ಈಶ್ವರನ ಧ್ಯಾನದಲ್ಲಿ ರತನಾಗಿರುತ್ತಿದ್ದನು. ॥೧೮೫॥ ನಿತ್ಯ ತನ್ನ ಪಿತೃಗಳಿಗೆ ಸಕಾಲದಲ್ಲಿ ತರ್ಪಣಗಳನ್ನು ಕೊಡುತ್ತ ಮಿತಾಹಾರಿಯಾಗಿ ಈಶ್ವರನನ್ನು ಕುರಿತು ತಪಸ್ಸನ್ನು ಮಾಡುತ್ತ ಮೂರು ವರ್ಷಗಳನ್ನು ಕಳೆದನು. ॥೧೮೬॥ ಹೀಗಿರುತ್ತಿರಲು ಒಂದು ದಿನ ರಾಜನು ಮಧ್ಯಾಹ್ನದಲ್ಲಿ ಸ್ನಾನಕ್ಕೆಂದು ಹೋದಾಗ ಅಲ್ಲಿ ಒಂದು ಮೃಗವು-"ಹೇ ರಾಜನ್! ನೀನು ನನ್ನನ್ನು ರಕ್ಷಿಸು, ರಕ್ಷಿಸು, ವೇದನೆಯಿಂದ ಪೀಡಿತನಾಗಿದ್ದೇನೆ" ಎಂದು ಧ್ವನಿ ಮಾಡುತ್ತ ಇವನತ್ತ ಧಾವಿಸಿ ಬಂದಿತು. ಹಿಂದೆ ತಿರುಗಿ ಪುನಃ ಪುನಃ ನೋಡುತ್ತ ಭಯದಿಂದ ನಡುಗುತ್ತಿರುವ ಆ ಮೃಗವು ॥೧೮೭॥೧೮೮॥ ರಾಜನನ್ನು ದೀನ ದೃಷ್ಟಿಯಿಂದ ನೋಡುತ್ತ ಅಲ್ಲಿಯೇ ನಡುಗುತ್ತ ನಿಂತುಕೊಂಡಿತು. ರಾಜನಾದರೋ ಕೃಪಾಪೂರ್ಣನಾಗಿ ಆ

ಮಾ ಭೈಷೀರ್ಮೃಗ ತೇ ತ್ರಾಣಂ ಕರಿಷ್ಯಾಮಿ ತವ ಪ್ರಿಯಮ್ ।
ಏವಂ ವದತಿ ಭೂಮೀಶೇ ತತ್ರ ವ್ಯಾಧಾಃ ಸಮಾಗತಾಃ ॥೯೦॥

ಸಾಧಿಜ್ಯಶರಧನ್ವಾನೋ ಮಾರ್ಯತಾಮಿತಿ ವಾದಿನಃ ।
ಅಸ್ಮಿನ್ವನೇ ಮೃಗೋಽಯಂ ವೈ ಅಸ್ಮಾಕಂ ಬಲವರ್ಧಿನಾಮ್ ॥೯೧॥

ಅಥೋಚುಸ್ತೇಽಥ ರಾಜಾನಂ ಮೃಗೋ ನೋಽಯಂ ಪ್ರದೀಯತಾಮ್ ।
ತಪಸ್ವಿನೋ ನ ಯುಕ್ತಂ ತೇ ಹರಣಂ ಪರವಸ್ತುನಃ ॥೯೨॥

ಅಥವಾ ನ ತಪಸ್ವೀ ತ್ವಂ ಕಪಟೀ ಪಶ್ಯತೋ ಹರಃ ।
ಏತತ್‌ಕೃತೇ ವಯಂ ಭ್ರಾಂತಾ ಅತ್ರಾಸ್ಮದ್ ದೃಷ್ಟಿಗೋಚರಃ ॥೯೩॥

ಅಸ್ಮಾಭಿರ್ಘಾತಿತೋ ಯಾವತ್ತಾವದ್ ಗೃಹ್ಣಾಸಿ ಕಿಂ ಛಲಾತ್ ।
ನೂನಂ ಹಂತುಮಶಕ್ತಸ್ತ್ವಂ ಕಪಟೇನ ಜಿಘೃತ್ಸಸಿ ॥೯೪॥

ಜ್ಞಾತಂ ತವ ಮುನಿತ್ವಂ ಹಿ ಮೃಗಾರ್ಥಂ ಕ್ರಿಯತೇಽತ್ರ ಸತ್ ।
ಅಸ್ಮಾಕಂ ಮಿಷತಾಂ ಚಾಯಂ ಕುರಂಗಃ ಕೇನ ಲಕ್ಷ್ಯತೇ ॥೯೫॥

ಮೃಗವನ್ನು ನೋಡಿ ಹೇಳಿದನು. ॥೮೯॥ ಎಲೈ ಮೃಗವೇ! ಹೆದರದಿರು. ನಿನ್ನ ರಕ್ಷಣೆಯನ್ನು ಮಾಡಿ ನಿನಗೆ ಹಿತವಾಗುವಂತೆ ಮಾಡುವೆನು. ಈ ಪ್ರಕಾರ ರಾಜನು ನುಡಿಯುತ್ತಿರುವಂತೆಯೇ ಅಲ್ಲಿ ಕೆಲ ವ್ಯಾಧರು ಧಾವಿಸಿ ಬಂದರು. ॥೯೦॥ ಬಿಲ್ಲಿನ ಹೆದೆಗೆ ಏರಿಸಿದ ಬಾಣಗಳುಳ್ಳ ಅವರು. ''ಕೊಲ್ಲಿರಿ ಕೊಲ್ಲಿರಿ, ಈ ವನದಲ್ಲಿ ಬಂದಿರುವ ಮೃಗವು ನಮ್ಮದಾಗಿದೆ'' ಎಂದು ಒದರುತ್ತ ಬಂದ ವ್ಯಾಧರು ರಾಜನನ್ನು ಕುರಿತು ಹೇಳಿದರು. ॥೯೧॥ 'ಭೋ ಈ ಮೃಗವನ್ನು ನಮಗೆ ಒಪ್ಪಿಸಿ ಬಿಡು. ತಪಸ್ವಿಯಾದ ನಿನಗೆ ಪರರ ವಸ್ತುವನ್ನು ಅಪಹರಿಸುವದು ಯೋಗ್ಯವಾಗಲಾರದು. ॥೯೨॥ ಪರವಸ್ತುವನ್ನು ಅಪಹರಿಸುವಿಯಾದರೆ ನೀನು ತಪಸ್ವಿಯೇ ಅಲ್ಲ. ಮೋಸಗಾರನಾಗಿರುವಿ ಎಂಬುದು ಸ್ಪಷ್ಟವಾಗುವದು. ಈ ಮೃಗಕ್ಕೋಸ್ಕರ ನಾವು ತಿರುಗಿ ತಿರುಗಿ ಭ್ರಾಂತರಾಗಿದ್ದೇವೆ. ಈ ವನದಲ್ಲಿ ಇದನ್ನು ಕಂಡಾಕ್ಷಣ ॥೯೩॥ ನಾವು ಅದನ್ನು ಹೊಡೆದಿರುವಾಗ ಅದನ್ನು ನೀನು ಹಟದಿಂದ ತೆಗೆದುಕೊಳ್ಳುವಿಯಾ? ನಿಜವಾಗಿಯೂ ನೀನು ಇಂಥ ಮೃಗವನ್ನು ಕೊಲ್ಲಲು ಸಮರ್ಥನಲ್ಲ. ಆದರೆ ಮೋಸದಿಂದ ಕೊಲ್ಲಬೇಕೆಂದಿರುವಿ. ॥೯೪॥ ಇಲ್ಲಿ ನೀನು ಕಪಟ ಮುನಿಯ ವೇಷವನ್ನು ಧರಿಸಿ ಈ ಮೃಗವನ್ನು ಪಡೆಯುವ ಆಶೆಯಿಂದ ಕುಳಿತಿರುವಂತೆ ತೋರುತ್ತಿದೆ. ನಿನ್ನ ಈ ಕಪಟತನವನ್ನು ಯಾರು ಕೇಳುವರು? ನಮಗೆ ನಮ್ಮ ಮೃಗವು ತಿರುಗಿಬೇಕು. ॥೯೫॥

ಅವಿಲಂಬೇನ ದೇಹ್ಯೇನಂ ವಿಲಂಬಸ್ತವ ದಾರುಣಃ ।
ಇತಿ ತೇಷಾಂ ವಚಃ ಶ್ರುತ್ವಾ ರಾಜಾ ಗರ್ವಸಮನ್ವಿತಃ ॥೧೯೬॥

ಪ್ರತ್ಯುವಾಚ ತತೋದಾತ್ತಸ್ವರೇಣ ಗರ್ಜಯನ್ನಿವ ।
ಯಾದೃಶಾಃ ಪಾಪಿನಃ ಸರ್ವೇ ತಾದೃಶಂ ವಚನಂ ಹಿ ವಃ ॥೧೯೭॥

ಅಥವಾ ಹೃದಯೇ ಯತ್ತು ತಾದೃಗ್ವಾಚಿ ಪ್ರವರ್ತತೇ ।
ಯದ್ಯಹಂ ಕ್ಷತ್ರಿಯಸ್ತರ್ಹಿ ನೈವ ದಾಸ್ಯಾಮಿ ವೋ ಮೃಗಮ್ ॥೧೯೮॥

ನ ಕ್ಷಮಂತ್ಯಪಿ ಖಲ್ವೈನಂ ಚಾಂಡಾಲಂ ಶರಣಾಗತಮ್ ।
ಗೃಹೀತುಮಾಗತೋಽಸ್ಮ್ಯೇನಂ ಮಯಾ ನಾಕಾರಿತೋ ಹ್ಯಸೌ ॥೧೯೯॥

ಅಥ ಕಿಂ ತು ಸಮಾಯಾತಃ ಶರಣಾರ್ಥೀ ಭಯಾತುರಃ ।
ಜೀವಂತಂ ನ ತ್ಯಜಾಮ್ಯೇನಂ ಮೃತ್ಯೋರ್ಭೀತಂ ಚ ಲುಬ್ಧಕಾಃ ॥೨೦೦॥

ಮಮ ದೇಹಃ ಪರತ್ರಾಣೇ ಪ್ರಾಣಾಶ್ಚೈವ ತು ಲುಬ್ಧಕಾಃ ।
ಸಪ್ರಾಣಶ್ಚೈವ ದೇಹೋ ಮೇ ನ ತ್ಯಜೇ ಶರಣಾಗತಮ್ ॥೨೦೧॥

ಎಲೈ ಮೂಢನೇ ವಿಲಂಬ ಮಾಡದೇ ಈ ಮೃಗವನ್ನು ನಮಗೆ ತಿರುಗಿ ಒಪ್ಪಿಸು. ವಿಲಂಬ ಮಾಡುವುದರಿಂದ ನಿನಗೆ ಮಹಾ ಅನರ್ಥವು ಕಾದಿದೆ'' ಎಂದು ಮುಂತಾಗಿ ವ್ಯಾಧರು ಹೇಳುತ್ತಿರುವದನ್ನು ಕೇಳಿದ ರಾಜನು ಪುನಃ ಗರ್ವಸಮನ್ವಿತನಾಗಿ ॥೧೯೬॥ ಉಚ್ಚ ಧ್ವನಿಯಿಂದ ಗಂಭೀರವಾಗಿ ಹೇಳಿದನು- ಎಲೈ ನೀವು ಪಾಪಿಗಳಾಗಿರುವಂತೆ ನಿಮ್ಮ ಮಾತುಗಳೂ ನೀಚವಾಗಿವೆ. ॥೧೯೭॥ ನಿಮ್ಮ ಹೃದಯದಲ್ಲಿರುವುದೇ ಮಾತಿನಲ್ಲಿ ಬರುವದು, ಭೋ ವ್ಯಾಧರೇ! ನಾನು ಕ್ಷತ್ರಿಯನಾಗಿರುವದರಿಂದ ಈ ಮೃಗವನ್ನು ನಿಮಗೆ ಸರ್ವಥಾ ಕೊಡಲಾರೆನು. ॥೧೯೮॥ ಶರಣಾಗತನಾದವನು ಚಾಂಡಾಲನಾಗಿದ್ದರೂ ಕ್ಷತ್ರಿಯರು ಅಂಥವರನ್ನೂ ಕ್ಷಮಿಸುವದಿಲ್ಲವೇ! ಭೋ, ನಾನು ಈ ಮೃಗವನ್ನು ಹಿಡಿಯಲು ಬಂದವನಲ್ಲ. ಒಂದು ವೇಳೆ ಹಿಡಿಯಲೆಂದೇ ಬಂದಿದ್ದರೆ ಇದನ್ನು ಸುಮ್ಮನೇ ಬಿಡುತ್ತಿರಲಿಲ್ಲ. ॥೧೯೯॥ ಹಾಗೂ ಭಯಾತುರವಾದ ಇದು ನನ್ನೆಡೆಗೆ ಶರಣಾರ್ಥಿಯಾಗಿ ಬರುತ್ತಿದ್ದಿತೇ? ಎಲೈ ಬೇಡರೇ! ಮೃತ್ಯುವಿನಿಂದ ಗಾಬರಿಯಾಗಿರುವ ಇದನ್ನು ಜೀವಂತವಿರುವಾಗ ಬಿಟ್ಟು ಕೊಡಲಾರೆನು. ॥೨೦೦॥ ನನ್ನ ದೇಹ ಹಾಗೂ ಜೀವವು ಪರರ ರಕ್ಷಣೆಗಾಗಿಯೇ ಇರುವವು. ಆದ್ದರಿಂದ ಶರಣಾಗತನಾಗಿ ಬಂದಿರುವ ಈ ಮೃಗವನ್ನು ನಾನು ಜೀವಂತವಿರುವವರೆಗೆ ಬಿಟ್ಟುಕೊಡಲಾರೆನು. ॥೨೦೧॥ ಈ

ಮೃಗೇ ಚ ಶರಣಂ ಪ್ರಾಪ್ತೇ ಮಮ ತತ್ತ್ಯಾಗಪಾತಕಮ್ ।
ರಕ್ಷಣಾರ್ಥೇ ಚ ಯಂ ಪ್ರಾಪ್ತಂ ನ ತ್ಯಜೇತ್ಸುವಿಚಾರಯನ್ ॥೨೦೨॥

ಸ್ಥಾಪಯಿತ್ವಾ ತು ವಿಪುಲಾಂ ಕೀರ್ತಿಂ ಸ್ವರ್ಯಾತಿ ಸೋ ನರಃ ।
ಯತ್ರೇಂದ್ರಾದಿಪದಪ್ರಾಪ್ತಿಃ ಮರಣೇ ಮೋಕ್ಷ ಏವ ವಾ ॥೨೦೩॥

ಇಹ ಕೀರ್ತಿಶ್ಚ ವಿಪುಲಾ ತತ್ರ, ಕಾಸ್ತಿ ವಿಚಾರಣಾ ।
ನ ಲೋಕೋ ಯತ್ರ, ಕೋಽಪಿ ಸ್ಯಾದ್ಗಮನಂ ತಸ್ಯ ದುರ್ಗತೌ ॥೨೦೪॥

ನ ತನ್ಮರಣಮನ್ವಿಚ್ಛೇತ್ತತ್ರಾತ್ಮಾ ರಕ್ಷ್ಯ ಏವ ಹಿ ।
ಇತಿ ಮೇ ನಿಶ್ಚಯಂ ಕೃತ್ವಾ ಕೃತಂ ವೋ ಮರ್ಮಘಾತನಮ್ ॥೨೦೫॥

ಮೃಗೋ ಮೇ ನ ವಧ್ಯೋಽಯಮತ್ರ, ನಾಸ್ತಿ ವಿಚಾರಣಾ ।
ಇತಿ ತಸ್ಯ ವಚಃ ಶ್ರುತ್ವಾ ವ್ಯಾಧಾ ಊಚುರನಂತರಮ್ ॥೨೦೬॥

ಅಹೋ ಪರಸ್ತಪಸ್ವೀ ತ್ವಂ ತನುಂ ತ್ಯಜಸಿ ಕಿಂ ವೃಥಾ ।
ಸತ್ಕರ್ಮ ಕುರ್ವತಾ ಕಾಲೇ ಜೀವ ತರ್ಹಿ ಸುಖಂ ಭವೇತ್ ॥೨೦೭॥

ಮೃಗವು ನನಗೆ ಶರಣು ಬಂದಿರುವಾಗ ಅದನ್ನು ಬಿಟ್ಟುಕೊಟ್ಟರೆ ಆದರಿಂದ ಬರುವ ಪಾತಕವನ್ನು ಕಟ್ಟಿಕೊಳ್ಳಲಾರೆನು ಮತ್ತು ರಕ್ಷಣೆಯಿಂದ ಬರಲಿರುವ ಪುಣ್ಯವನ್ನು ಬಿಟ್ಟುಕೊಡಲಾರೆನು. ॥೨೦೨॥ ಶರಣಾಗತರನ್ನು ರಕ್ಷಣೆ ಮಾಡುವ ಪುರುಷನು ಇಹಲೋಕದಲ್ಲಿ ವಿಪುಲವಾದ ಕೀರ್ತಿಯನ್ನು ಪಡೆಯುವನು ಮತ್ತು ಮರಣಾನಂತರ ಸ್ವರ್ಗಲೋಕವನ್ನು ಸೇರಿ ಅಲ್ಲಿ ಇಂದ್ರಾದಿ ಪದವನ್ನು ಪಡೆಯುವನು. ಒಮ್ಮೊಮ್ಮೆ ಮರಣಾನಂತರ ಮೋಕ್ಷವೂ ಲಭಿಸುವದು. ॥೨೦೩॥ ಇನ್ನು ಶರಣಾರ್ಥಿಯನ್ನು ರಕ್ಷಿಸದೇ 'ಇಲ್ಲಿರುವಾಗಲಂತೂ ವಿಪುಲವಾದ ಕೀರ್ತಿಯು ಬರುವದು ಮರಣಾನಂತರ ಏನಾಗುವದೆಂಬುದನ್ನು ವಿಚಾರಿಸಿ ಏನು ಮಾಡುವದಿದೆ?' ಎಂದು ತಿಳಿಯುವವನಿಗೆ ಯಾವ ಒಳ್ಳೆಯ ಲೋಕವೂ ಸಿಗದೇ ಅವನು ದುರ್ಗತಿಯನ್ನೇ ಹೊಂದುವನು. ॥೨೦೪॥ ಆದ್ದರಿಂದ 'ಈ ಮೃಗವು ಸಾಯಬಾರದು. ಇದನ್ನು ಜೀವಂತ ರಕ್ಷಿಸಬೇಕು' ಎಂದು ನಿರ್ಧರಿಸಿಯೇ ಇದನ್ನು ಹಿಡಿದಿಟ್ಟುಕೊಂಡಿದ್ದೇನೆ. ॥೨೦೫॥ ನನ್ನ ದೃಷ್ಟಿಯಲ್ಲಿ ಈ ಮೃಗವು ಅವಧ್ಯವಾಗಿದೆ. ಈ ವಿಷಯದಲ್ಲಿ ಎರಡು ವಿಚಾರವೇ ಇರುವದಿಲ್ಲ. ರಾಜನ ಈ ಪ್ರಕಾರದ ಮಾತುಗಳನ್ನು ಕೇಳಿದ ವ್ಯಾಧರು ರಾಜನಿಗೆ ಹೇಳಿದರು. ॥೨೦೬॥ ಅಹೋ, ನೀನೊಬ್ಬ ದೊಡ್ಡ ತಪಸ್ವಿಯೇ ಆಗಿರುವಿ ! ಏಕೆ ವ್ಯರ್ಥವಾಗಿ ನಿನ್ನ ದೇಹವನ್ನು ತ್ಯಜಿಸುವಿ ? ಸತ್ಕರ್ಮವನ್ನು ಮಾಡುವ ನಿನಗೆ ಕಾಲಾಂತರದಲ್ಲಿ ಸುಖವಾಗುವದು. ॥೨೦೭॥ ಹೇ ರಾಜನ್, ನೀನು ವಿಚಾರ ಮೂಢನಾಗಿರುವಂತೆ

ವಿಚಾರಮೂಢಸ್ತ್ವಂ ರಾಜನ್ ಮೃಗಾರ್ಥಂ ಜೀವಿತಂ ತ್ಯಜೇಃ ।
ರಕ್ಷಣೇನ ಮೃಗಸ್ಯಾಸ್ಯ ಪುಣ್ಯಂ ಸ್ಯಾತ್ತದ್ದಿನೇ ದಿನೇ ॥೨೦೮॥

ತಪ್ಯಮಾನೇನ ಚ ತಪಸ್ತ್ವಯಾ ರಕ್ಷ್ಯಾ ನಿಜಾ ತನೂಃ ।
ದೇಹಸ್ಯಾರಕ್ಷಣೇ ಕಿಂ ಸ್ಯಾತ್ಪುಣ್ಯಂ ತೇ ಚಾತ್ಮಘಾತಿನಃ ॥೨೦೯॥

ತತ್ಪಾಪಂ ಭವಿತಾ ಯನ್ನ ಭೋಗ್ಯಂ ವರ್ಷಶತೈರಪಿ ।
ಭಕ್ಷ್ಯಾ ಹಿ ಪಶವಃ ಪುಂಸಾಂ ತದರ್ಥಂ ಮ್ರಿಯತೇಽತ್ರ ಕಃ ॥೨೧೦॥

ಸಾಧನಂ ದೇವ ಪ್ರೀತ್ಯರ್ಥಂ ಕಥಂ ತ್ವಂ ರಕ್ಷಸೇ ಪಶುಮ್ ।
ರಕ್ಷಣಾತ್ತೇ ಭವೇತ್ಪಾಪಂ ವಧೇನ ಸುಖಭಾಗಯಮ್ ॥೨೧೧॥

ನಿಹತಃ ಪಿತೃದೇವಾರ್ಥಂ ಪ್ರಾಪ್ನೋತಿ ಹಿ ದಿವಂ ಪಶುಃ ।
ಹತ್ವೇಮಂ ಹವ್ಯಕವ್ಯಾರ್ಥಂ ದಾಸ್ಯಾಮಸ್ತಂ ದ್ವಿಜನ್ಮನಾಮ್ ॥೨೧೨॥

ವಧಂ ವಿನಾ ಮೃಗಸ್ಯಾಸ್ಯ ನಾಪಿ ಸ್ವರ್ಗಂ ಪ್ರಯಾಸ್ಯತಿ ।
ಅಥ ತ್ವಯಾ ಮೋಚಿತೋಽಯಮಾತ್ಮದಾನೇನ ಚಾಪರೇ ॥೨೧೩॥

ತೋರುತ್ತಿದೆ. ಈ ಕ್ಷುದ್ರ ಮೃಗಕ್ಕಾಗಿ ಮನುಷ್ಯ ದೇಹವನ್ನೇ ತ್ಯಜಿಸಿಬಿಡುವೆಯಾ ? ಇದನ್ನು ರಕ್ಷಿಸುವದರಿಂದ ನಿನಗಾವ ಪುಣ್ಯವೂ ಬರಲಾರದು. ಆದರೆ ಪ್ರತಿದಿನ ॥೨೦೮॥ ತಪಸ್ಸನ್ನಾಚರಿಸುವ ನೀನು ನಿನ್ನ ದೇಹವನ್ನು ಮೊದಲು ಸುರಕ್ಷಿತವಾಗಿಡು. ದೇಹ ರಕ್ಷಣೆ ಮಾಡದೇ ಆತ್ಮಹತ್ಯೆ ಮಾಡಿಕೊಳ್ಳಲು ಬಯಸುವ ನಿನಗೆ ಪುಣ್ಯವು ಬರುವದೇ ? ॥೨೦೯॥ ಆತ್ಮಘಾತದಿಂದ ಪಾಪವು ಬಂದು ನೂರಾರು ವರ್ಷಗಳವರೆಗೆ ಭೋಗಿಸಿದರೂ ಅದು ಮುಗಿಯಲಾರದು. ಪಶುಗಳೇನಿವೆಯೋ ಅವು ಮನುಷ್ಯರ ಆಹಾರವಾಗಿವೆ. ಇಂಥ ಪಶುಗಳಿಗೋಸ್ಕರ ಯಾರಾದರೂ ಸಾಯುವರೇ ? ॥೨೧೦॥ ದೇವ ಪಿತೃಗಳ ಪ್ರೀತ್ಯರ್ಥ ಮನುಷ್ಯದೇಹದಲ್ಲಿದ್ದು ಸಾಧನ ಮಾಡಬೇಕು ಮತ್ತು ದೇವಪಿತೃಗಳ ಪ್ರೀತಿಸಾಧನವಾಗಿರುವ ಈ ಪಶುವನ್ನು ನೀನು ರಕ್ಷಿಸುವದು ಉಚಿತವೇ ? ಇದರ ರಕ್ಷಣೆಯಿಂದ ನಿನಗೆ ಪಾಪವೇ ಬರುವದು ಹಾಗೂ ವಧೆ ಮಾಡುವದರಿಂದ ಸುಖಭಾಗಿಯಾಗುವಿ. ॥೨೧೧॥ ಪಿತೃದೇವತೆಗಳಿಗೋಸ್ಕರ ಕೊಲ್ಲಲ್ಪಟ್ಟ ಈ ಪಶುವಾದರೋ ಸ್ವರ್ಗಲೋಕವನ್ನು ಹೊಂದುವದು. ಇದನ್ನು ಕೊಂದು ನಾವು ದ್ವಿಜರಿಗೆ ಹವ್ಯಕವ್ಯಾರ್ಥವಾಗಿ ಕೊಡುವೆವು. ॥೨೧೨॥ ಈ ಮೃಗದ ವಧೆಯಾಗದೇ ಇದು ಸ್ವರ್ಗವನ್ನು ಹೊಂದಲಾರದು. ಒಂದು ವೇಳೆ ಇದನ್ನು ಕೊಲ್ಲದೇ ನೀನು ಜೀವಂತ ಬಿಟ್ಟುಬಿಟ್ಟರೆ ॥೨೧೩॥ ಕಾಲಾಂತರದಲ್ಲಿ ಬೇರೆ ವ್ಯಾಧರು ಇದನ್ನು ಮತ್ತು ಇತರ

ಹನಿಷ್ಯಂತ್ಯಂತಕಾಲೇನ ಕಿಂಚಾನ್ಯಾಂಶ್ಚ ಮೃಗಾಂತಕಾಃ ।
ಮೃಗಾರ್ಥಂ ಮ್ರಿಯಮಾಣಸ್ಯ ಕಿಂ ಪುಣ್ಯಂ ತೇ ಭವಿಷ್ಯತಿ ॥೨೧೪॥

ತಸ್ಮಾದ್ದುರಾಗ್ರಹಮಮುಂ ತ್ಯಜ ತ್ವಂ ಮೋಹಸಂಭವಮ್ ।
ಪೌನಃಪುನ್ಯೇನಾತ್ರ ವಯಂ ವಚ್ಮಸ್ತ್ವದ್ಧಿತಕಾಮ್ಯಯಾ ॥೨೧೫॥

ಕರಿಷ್ಯಾಮೋಽನ್ಯಥಾಚಾರ್ಯಂ ಮೃತಂ ಮೃಗಾರ್ಥಿನಂ ನ ಚ ।
ಇತಿ ವ್ಯಾಧವಚಃ ಶ್ರುತ್ವಾ ಪ್ರಾಹ ಸಂವಹ್ನಿಸಂನ್ನಿವ ॥೨೧೬॥

ಪ್ರಾರ್ಥಿತೋ ವೋ ನಿಕರ್ಷಾಯ ತರ್ಹ್ಯಯಂ ರಕ್ಷ್ಯತಾಂ ಮೃಗಃ ।
ತಸ್ಮಾತ್ಪರತರಂ ನಾಸ್ತಿ ಮಹ್ಯಂ ತಲ್ಲುಬ್ಧಕಾಃ ಖಲು ॥೨೧೭॥

ಮಯಾಪಿ ರಕ್ಷಣೀಯೋ ಹಿ ಚೇತಸೋಽಯಂ ವಿನಿಶ್ಚಯಃ ।
ಕಿಂ ಪ್ರಯೋಜನಮತ್ರಾಸ್ತಿ ಪಶ್ಚಾನ್ಮರಣಶಂಕಯಾ ॥೨೧೮॥

ವಿನೇಕ್ಷ್ಯತೀತಿ ಕೃತ್ವಾಯಂ ರಕ್ಷಣೀಯೋ ನ ರಕ್ಷ್ಯತೇ ।
ಅಥವಾ ಕಿನ್ನ ರಕ್ಷ್ಯಃ ಸ್ಯಾದ್ಯಜ್ಞಾರ್ಥಮಾದೃತಃ ಪಶುಃ ॥೨೧೯॥

ಮೃಗಗಳನ್ನೂ ನಿಶ್ಚಿತವಾಗಿ ಕೊಲ್ಲುವರು. ಇಂಥ ಈ ಮೃಗಕ್ಕಾಗಿ ಸಾಯಲು ಸಿದ್ಧನಾಗಿರುವ ನಿನಗೆ ಅದಾವ ಪುಣ್ಯವು ಬರುವದು ? ॥೨೧೪॥ ಆದ್ದರಿಂದ ಅಜ್ಞಾನದಿಂದ ಉಂಟಾಗಿರುವ ಈ ದುರಾಗ್ರಹವನ್ನು ಬಿಟ್ಟು ಬಿಡು ಎಂದು ನಿನ್ನ ಹಿತಕ್ಕಾಗಿಯೇ ಪುನಃ ಪುನಃ ಹೇಳುತ್ತಿದ್ದೇವೆ. ವ್ಯಾಧರ ಈ ಪ್ರಕಾರವಾಗಿರುವ ಮಾತುಗಳನ್ನು ಕೇಳಿದ ರಾಜನು ಕೋಪದಿಂದ ಕೆಂಡದಂತಾಗಿ ಹೇಳಿದನು. ॥೨೧೫॥ ಭೋ ವ್ಯಾಧರೇ, ರಕ್ಷಣೆ ಮಾಡಬೇಕೆಂದು ಈ ಮೃಗದಿಂದ ನಾನು ಪ್ರಾರ್ಥಿತನಾಗಿದ್ದೇನೆ. ಆದ್ದರಿಂದ ನೀವು ಇದನ್ನು ಅವಶ್ಯವಾಗಿ ರಕ್ಷಿಸಬೇಕು. ಇದನ್ನು ರಕ್ಷಿಸುವದಕ್ಕಿಂತ ಹೆಚ್ಚಿನ ಕಾರ್ಯವು ಈಗ ನನಗೆ ತೋರುತ್ತಿಲ್ಲ. ॥೨೧೬॥೨೧೭॥ ನಾನಾದರೂ ಇದನ್ನು ರಕ್ಷಿಸಬೇಕೆಂದು ನಿರ್ಧರಿಸಿದ್ದೇನೆ. ಇದು ಅನಂತರ ಯಾವುದೊಂದು ಕಾರಣದಿಂದ ಸತ್ತೇ ಸಾಯುವದು ಎಂದು ಶಂಕಿಸುವದರಿಂದ ಈಗೇನು ಪ್ರಯೋಜನವಿದೆ? ॥೨೧೮॥ ಆಮೇಲೆ ಸಾಯಲಿರುವದೆಂದು ತಿಳಿದು ಶರಣುಬಂದಿರುವ ಇದನ್ನು ಈಗ ರಕ್ಷಿಸದೇ ಇರಲಾದೀತೇ? ಅಥವಾ ಯಜ್ಞಾರ್ಥವಾಗಿ ಅವಶ್ಯ ಬೇಕಾಗಿರುವ ಈ ಪಶುವನ್ನು ರಕ್ಷಿಸದೇ ಇರುವದೇ? ॥೨೧೯॥ ಹಿಂದಕ್ಕೆ ಲೋಕ ಕ್ಷೇಮಕ್ಕಾಗಿ ಮಾಡಲ್ಪಡುತ್ತಿದ್ದ ಯಜ್ಞಗಳ ರಕ್ಷಣೆಗಾಗಿ ಮಕ್ಕಳನ್ನು ಕಳುಹಿಸಿ ತಂದೆಯಾದ ದಶರಥನು ತನ್ನ ಪ್ರಾಣಗಳನ್ನೇ ಕಳೆದುಕೊಂಡನಷ್ಟೇ! ॥೨೨೦॥ ಯಜ್ಞರಕ್ಷಣೆ ಮಾಡಲು ವಿಶ್ವಾಮಿತ್ರನು

ರಕ್ಷಣೇ ಯದಿ ಶಕ್ತಿಃ ಸ್ಯಾತ್ತದಾ ತ್ವಂ ಪ್ರತಿರೋಧಿನಃ ।
ಯಜ್ಞಾರ್ಥಂ ಪಿತೃದೇಹಸ್ತು ಪುರಾಭೂತ್ತತ್ಕೃತೇ ಕಿಲ ॥೨೨೦॥

ವಿಶ್ವಾಮಿತ್ರೇಣ ಚ ಕಥಂ ಸ್ವಪ್ರಭಾವೋ ನ ರಕ್ಷಿತಃ ।
ತದ್ರಕ್ಷಣೈಶ್ಚ ತೈಃ ಪ್ರಾಣೈಃ ಪರಪ್ರಾಣಯಶೋಽರ್ಥಿಭಿಃ ॥೨೨೧॥

ನಾತಃ ಪರತರಂ ಲೋಕೇ ಪುಣ್ಯಮಸ್ತೀಹ ಕಿಂಚನ ।
ಶಿಬಿರೋಶೀನರೋ ರಕ್ಷ್ಯನ್ ಸ್ವದೇಹೇನ ಕಪೋತಕಮ್ ॥೨೨೨॥

ವಿಸ್ತಾರ್ಯೇಷ ಯಶೋರಾಶಿಂ ಸ್ವರ್ಗಲೋಕಮತೋ ಗತಃ ।
ತಸ್ಮಾದ್ ವ್ಯಾಧಾ ಮೃಗಸ್ಯಾಸ್ಯ ನಿಷ್ಕ್ರಯೋ ಯಾಚ್ಯತಾಂ ಧ್ರುವಮ್ ॥೨೨೩॥

ವಕ್ರಭಾವಂ ಪರಿತ್ಯಜ್ಯ ಮಯಿ ಕೃತ್ವಾ ಸುಚಿತ್ತತಾಮ್ ।
ತತಸ್ತೇ ವಚನಂ ವ್ಯಾಧಾಃ ಯತ್ತ್ವಯ್ಯೇವಂ ವಿನಿಶ್ಚಿತಮ್ ॥೨೨೪॥

ಅಸ್ಮಾಂಶ್ಚ ಸ್ವಶಿರೋ ದೇಹಿ ಮೃಗಸ್ಯಾಯಂ ಹಿ ನಿಷ್ಕ್ರಯಃ ।
ತತೋ ರಾಜಾ ಹೃಷ್ಟಮನಾ ಗೃಹ್ಯತಾಂ ಮಚ್ಛಿರೋ ದ್ರುತಮ್ ॥೨೨೫॥

ಸಮರ್ಥನಾಗಿದ್ದರೂ ಹಾಗೇಕೆ ಮಾಡಲಿಲ್ಲ? ಮಹಾತ್ಮರಾದವರು ಇನ್ನೊಬ್ಬರಿಗೆ ಕೀರ್ತಿ ತಂದುಕೊಡುವದಕ್ಕಾಗಿಯೆ ತಮ್ಮ ಪ್ರಾಣಗಳನ್ನು ಅಡವಿಟ್ಟು ಅವರಿಂದ ಲೋಕ ಕಲ್ಯಾಣ ಕಾರ್ಯಗಳನ್ನು ಮಾಡಿಸಿದ್ದಾರೆ. ॥೨೨೧॥ ಇದರ ರಕ್ಷಣೆ ಮಾಡುವದಕ್ಕಿಂತ ಅಧಿಕ ಪುಣ್ಯಪ್ರದವಾದ ಇನ್ನಾವ ಕಾರ್ಯವೂ ನನಗೆ ಕಾಣುತ್ತಿಲ್ಲ. ತನ್ನ ದೇಹದಿಂದ ಮಾಂಸವನ್ನು ತೆಗೆದುಕೊಟ್ಟು ಪಾರಿವಾಳವನ್ನು ರಕ್ಷಿಸಿದ ಶಿಬಿಚಕ್ರವರ್ತಿಯು ॥೨೨೨॥ ಇಹಲೋಕದಲ್ಲಿ ತನ್ನ ಕೀರ್ತಿಯನ್ನು ಹೆಚ್ಚಿಸಿಕೊಂಡು ಮರಣಾನಂತರ ಸ್ವರ್ಗಲೋಕವನ್ನು ಹೊಂದಿದನು. ಆದ್ದರಿಂದ ಭೋ ವ್ಯಾಧರೇ! ಈ ಮೃಗದ ಬಿಡುಗಡೆಗೆ ಪ್ರತಿಯಾಗಿ ನನ್ನಿಂದ ಏನು ಬೇಕಾದರೂ ಕೇಳಿಕೊಳ್ಳಿರಿ. ॥೨೨೩॥ ಕುಟಿಲತನವನ್ನು ಬಿಟ್ಟು ನಾನು ಹೇಳುವದನ್ನು ಸರಿಯಾಗಿ ತಿಳಿದುಕೊಂಡು ವರ್ತಿಸಿರಿ. ಆಗ ವ್ಯಾಧರು ರಾಜನ ಮಾತುಗಳನ್ನು ಕೇಳಿ-'ಈ ಮೃಗವನ್ನು ಯಾವ ಬೆಲೆ ತೆತ್ತಾದರೂ ರಕ್ಷಿಸುವದೆಂದು ನೀನು ನಿಶ್ಚಯಿಸಿರುವಿಯಾದರೆ ॥೨೨೪॥ ನಿನ್ನ ಶಿರಸ್ಸನ್ನು ನಮಗೆ ಕೊಡುವವನಾಗು. ಇದೇ ಈ ಮೃಗದ ನಿಷ್ಕ್ರಯವು (ಸಮಾನವಾದ ಬೆಲೆಯುಳ್ಳ ಬದಲಾವಣೆಯ ವಸ್ತು)' ಎಂದು ಹೇಳಿದರು. ಆಗ ರಾಜನು ಸಂತುಷ್ಟನಾಗಿ ಸುತ್ತಲೂ ನಿಂತಿರುವ ಆ ವ್ಯಾಧರನ್ನು ಕುರಿತು "ಈ ಮೃಗವು ಇಲ್ಲಿಂದ ಹೊರಟು ಹೋದನಂತರ ನೀವು ಅವಶ್ಯವಾಗಿ ನನ್ನ ಈ ಶಿರಸ್ಸನ್ನು ತೆಗೆದುಕೊಳ್ಳಿರಿ" ಎಂದು ಹೇಳಿ ॥೨೨೫॥೨೨೬॥ ರಾಜನು ಆ ಮೃಗವನ್ನು

ಇತ್ಯಬ್ರವೀತ್ಸ ತಾನ್ ವ್ಯಾಧಾನ್ಸರ್ವಾಂಶ್ಚ ಪರಿತಃ ಸ್ಥಿತಾನ್ ।
ಯಾವದ್ಯಾತಿ ಮೃಗೋ ಯಸ್ಮಾತ್ತಾವತ್ಕಾಲಂ ಪ್ರತೀಕ್ಷ್ಯ ಚ ॥೨೨೬॥

ಏವಮುಕ್ತ್ವಾ ತತೋ ವ್ಯಾಧಾನ್ ಮೃಗಂ ಹಿತ್ವಾ ತು ದೂರತಃ ।
ಮುಮೋಚ ರಾಜಾ ಏನಾಸೌ ಕ್ಷಿಪ್ರಂ ಯಾತೋ ವನಾಂತರಮ್ ॥೨೨೭॥

ವ್ಯಾವೃತ್ಯಾಥ ತತೋ ರಾಜಾಪ್ಯಾಯಯೌ ವ್ಯಾಧ ಸನ್ನಿಧೌ ।
ಗೃಹೀತ ಮಚ್ಛಿರೋ ವ್ಯಾಧಾ ವಿಲಂಬೋ ಮಾ ಭವೇದಿಹ ॥೨೨೮॥

ತತಸ್ತಸ್ಯ ವಚಃ ಶ್ರುತ್ವಾ ಪ್ರತ್ಯಭಾಷತ ಲುಬ್ಧಕಾಃ ।
ನ ವಯಂ ತಾಪಸಂ ಹನ್ಮೋ ನೋದಾಸೀನಮಶಸ್ತ್ರಿಣಮ್ ॥೨೨೯॥

ಆಯುಷ್ಯಮಾನಂ ಭೀತಂ ಚ ತವಾಹಮಿತಿವಾದಿನಂ ।
ತಸ್ಮಾತ್ತ್ವಂ ಸ್ವಯಮುತ್ಕೃತ್ಯ ಸ್ವಶಿರೋ ದೇಹಿ ನಃ ಕೃತೇ ॥೨೩೦॥

ಸತ್ಯೇನ ನಿಷ್ಕ್ರಯೋ ಹ್ಯಸ್ಯ ಮೃಗಸ್ಯ ಯದಿ ಮನ್ಯಸೇ ।
ತತಸ್ತೇಭ್ಯೋಽಥವಾಚಿತ್ವಾ ರಾಜಾಸ್ತ್ರಂ ತೀಕ್ಷ್ಣಮಾತ್ಮನಃ ॥೨೩೧॥

ಪ್ರಚಕ್ರಮೇ ನಿಜಶಿರಃ ಕರ್ತಿತುಂ ನಿಜಕಾರಣಾತ್ ।
ಏತಸ್ಮಿನ್ನಂತರೇ ದೇವೋ ಭಗವಾನ್ ಶಶಿಶೇಖರಃ ॥೨೩೨॥

ಕರೆದುಕೊಂಡು ದೂರ ಹೋಗಿ ಬಿಟ್ಟುಬಿಡಲು ಅದು ಕೂಡಲೇ ವನಾಂತರಕ್ಕೆ ಜಿಗಿಯುತ್ತ ಓಡಿಹೋಯಿತು. ॥೨೨೭॥ ಅನಂತರ ರಾಜನು ವ್ಯಾಧರಿರುವಲ್ಲಿ ತಿರುಗಿ ಬಂದು 'ಭೋ ವ್ಯಾಧರೇ! ಇನ್ನು ತಡಮಾಡದೇ ನನ್ನ ಶಿರವನ್ನು ಕತ್ತರಿಸಿಕೊಳ್ಳಿರಿ' ಎಂದೆನಲು ಆ ವ್ಯಾಧರು- ''ಭೋ! ನಾವು ವ್ಯಾಧರಾಗಿದ್ದರೂ ತಪಸ್ವಿಯನ್ನು ಕೊಲ್ಲುವದಿಲ್ಲ. ಉದಾಸೀನನಾದವನನ್ನು ಹಾಗೂ ಶಸ್ತ್ರಧರಿಸದಿರುವವನನ್ನೂ ಕೊಲ್ಲುವದಿಲ್ಲ. ॥೨೨೮॥ ಭೀತನಾದವನನ್ನು ಮತ್ತು 'ನಾನು ನಿಮ್ಮವನು' ಎಂದು ಹೇಳಿ ಶರಣು ಬಂದವನನ್ನೂ ಕೂಡ ಕೊಲ್ಲುವದಿಲ್ಲ. ಆದ್ದರಿಂದ ನೀನೇ ದೇಹದಿಂದ ನಿನ್ನ ಶಿರಸ್ಸನ್ನು ಕತ್ತರಿಸಿ ನಮಗೆ ಕೊಡಬೇಕು. ॥೨೨೯॥೨೩೦॥ ನಿನ್ನ ಶಿರಸ್ಸು ಈಗ ಓಡಿಹೋಗಿರುವ ಮೃಗದ ನಿಷ್ಕ್ರಯವೆಂದು ತಿಳಿದು ನಿಜವಾಗಿಯೂ ಕೊಡಲು ಬಯಸುವಿಯಾದರೆ ನಾವು ಹೇಳಿದಂತೆ ಮಾಡು'' ಎಂದೆನಲು ರಾಜನು ಕೂಡಲೇ ಹರಿತವಾದ ಅಸ್ತ್ರವನ್ನು ಹಿಡಿದುಕೊಂಡು ॥೨೩೧॥ ತನ್ನ ಶಿರಸ್ಸನ್ನು ಕತ್ತರಿಸಲು ಪ್ರಾರಂಭಿಸಿದನು. ಅಷ್ಟರಲ್ಲಿ ಐಯ್ದು ತಲೆಗಳು ಹಾಗೂ ಹತ್ತು ಕೈಗಳಿಂದ ಕೂಡಿದ ಚಂದ್ರಶೇಖರನಾದ ಮಹೇಶ್ವರ ದೇವನು ತನ್ನ ಗಣಗಳೊಂದಿಗೆ ಕೂಡಿಕೊಂಡು ಆ ಸ್ಥಳಕ್ಕೆ ಬಂದು ರಾಜನನ್ನು ಕುರಿತು- 'ಭೋ ರಾಜನೇ ನಿಲ್ಲು. ಇಂಥ ಸಾಹಸವನ್ನು ಮಾಡದಿರು. ॥೨೩೨॥೨೩೩॥ ನಿನ್ನಲ್ಲಿ

ಆಜಗಾಮ ಗಣೈಃ ಸಾರ್ಧಂ ಪಂಚಾಸ್ಯೋ ದಶಬಾಹುಕಃ ।
ಅಥಾಗತ್ಯ ನೃಪಂ ಪ್ರಾಹ ಮಾಽಕಾರ್ಷೀಃ ಸಾಹಸಂ ನೃಪ ॥೨೩॥

ತುಷ್ಟೋಽಸ್ಮೀತಿ ವರಂ ಬ್ರೂಹಿ ಯತ್ತೇ ಮನಸಿ ವರ್ತತೇ ।
ಇತ್ಯುಕ್ತ್ವಾ ತಂ ಚ ರಾಜಾನಂ ಅಚ್ಛಿದ್ಯಾಸ್ತ್ರಂ ನಿಜೈಃ ಕರೈಃ ॥೨೪॥

ಜಗ್ರಾಹಾಥ ಮಹಾದೇವಸ್ತದ್ಭಕ್ತ್ಯಾಹೃತಮಾನಸಃ ।
ಯಾವತ್ಸಮೀಕ್ಷತೇ ರಾಜಾ ತಾವದಗ್ರೇ ನ ಲುಬ್ಧಕಃ ॥೨೫॥

ದದರ್ಶ ಶ್ರೀಮಹಾದೇವಂ ದೇವದೇವಮುಮಾಪತಿಮ್ ।
ದೃಷ್ಟ್ವಾಽಥ ಶಂಕರಂ ರಾಜಾ ಸ್ವಸಮೀಪಮುಪಸ್ಥಿತಮ್ ॥೨೬॥

ಜಾನುಭ್ಯಾಮವನೀಂ ಗತ್ವಾ ಪ್ರಣನಾಮ ಪುನಃ ಪುನಃ ।
ನತ್ವಾ ಪುನಃ ಪುನರ್ಭಕ್ತ್ಯಾ ಸ್ತೋತ್ರಮೇತದುವಾಚ ಹ ॥೨೭॥

ರಾಜೋವಾಚ-
ನಮಸ್ತುಭ್ಯಂ ಭಗವತೇ ಬಾಲಚಂದ್ರಾರ್ಕಧಾರಿಣೇ ।
ದೇಹಾರ್ಧೇ ಬಿಭ್ರತಂ ದೇವೀಂ ಪಾರ್ವತೀಂ ತೇ ನಮೋ ನಮಃ ॥೨೮॥

ನಮಸ್ತೇ ಕಾಲಕೂಟಾಯ ನೀಲಕಂಠಾಯ ತೇ ನಮಃ ।
ಅಷ್ಟಮೂರ್ತೇ ನಮಸ್ತುಭ್ಯಂ ನಮಃ ಕಾಲಾಯ ಹಾರಿಣೇ ॥೨೯॥

ಪ್ರಸನ್ನನಾಗಿದ್ದೇನೆ. ನಿನ್ನ ಮನದಲ್ಲಿ ಏನಿರುವದೋ ಆ ವರವನ್ನು ಕೇಳುವವನಾಗು' ಎಂದು ಹೇಳಿ ಮಹೇಶ್ವರನು ತನ್ನ ಕೈಗಳಿಂದ ರಾಜನು ಹಿಡಿದ ಅಸ್ತ್ರವನ್ನು ಕೆಳಗೆ ಬಿಡಿಸಿ ರಾಜನ ಭಕ್ತಿಯಿಂದ ಪ್ರಸನ್ನನಾಗಿ ಅವನನ್ನು ಕೈಹಿಡಿದು ಅನುಗ್ರಹಿಸಿದನು. ರಾಜನು ತಲೆಯೆತ್ತಿ ನೋಡಲು ಎದುರಿನಲ್ಲಿ ವ್ಯಾಧರಾರೂ ಇರದೇ ॥೨೪॥೨೫॥ ದೇವದೇವನಾದ ಉಮಾಪತಿ ಶ್ರೀಮಹಾದೇವನು ತನ್ನ ಸಮೀಪದಲ್ಲಿ ನಿಂತಿರುವದನ್ನು ಕಂಡು ಹರ್ಷಾಶ್ಚರ್ಯ ಭರಿತನಾದನು. ॥೨೬॥ ಕೂಡಲೇ ಭಯಭಕ್ತಿಯುತನಾದ ರಾಜನು ಮೊಣಕಾಲುಗಳನ್ನು ನೆಲದ ಮೇಲೆ ಊರಿ ಮಹೇಶ್ವರನಿಗೆ ಪುನಃ ಪುನಃ ನಮಸ್ಕರಿಸಿ ಅವನನ್ನು ಸ್ತುತಿಸತೊಡಗಿದನು. ॥೨೭॥ ಭಗವನ್, ಬಾಲಚಂದ್ರ ಹಾಗೂ ಬಾಲಸೂರ್ಯರನ್ನು ಧರಿಸಿರುವ ನಿನಗೆ ನಮಿಸುತ್ತೇನೆ. ದೇಹದ ಅರ್ಧಭಾಗದಲ್ಲಿ ಪಾರ್ವತೀದೇವಿಯನ್ನೂ ಧರಿಸಿರುವ ನಿನಗೆ ನಮೋ ನಮಃ ॥೨೮॥ ಕಾಲಕೂಟ ವಿಷವನ್ನು ಪಾನಮಾಡಿದ ಮತ್ತು ನೀಲಕಂಠನಾದ ನಿನಗೆ ನಮಸ್ಕಾರವು. ಅಷ್ಟರೂಪಗಳನ್ನು ಧರಿಸುವ, ಕಾಲನಾಮಕನಾದ ನಿನಗೆ ನಮಸ್ಕಾರವು. ॥೨೯॥

ನಮಃ ಕಾಲಾಗ್ನಿನೇತ್ರಾಯ ಶಂಕರಾಯ ನಮೋ ನಮಃ ।
ನಮೋ ಬ್ರಹ್ಮಸ್ವರೂಪಾಯ ನಮಸ್ತೇ ವಿಷ್ಣುರೂಪಿಣೇ ॥೨೪೦॥

ನಮೋ ಮಹೇಶರೂಪಾಯ ಸರ್ವದೇವಾತ್ಮನೇ ನಮಃ ।
ಪುರಾಭಿದೇ ನಮಸ್ತುಭ್ಯಂ ದಕ್ಷಾಧ್ವರವಿನಾಶಿನೇ ॥೨೪೧॥

ಪರಾವರಸ್ವರೂಪಾಯ ಸೃಷ್ಟಿಸಂಹಾರಹೇತವೇ ।
ಸರ್ವಜ್ಞಾಯ ನಮಸ್ತುಭ್ಯಂ ಸ್ಥೂಲರೂಪಧರಾಯ ಚ ॥೨೪೨॥

ನಮಸ್ತೇ ಸೂಕ್ಷ್ಮರೂಪಾಯ ಅರೂಪಾಯ ನಮೋ ನಮಃ ।
ನೃತ್ಯಪ್ರಿಯಾಯ ದೇವಾಯ ಭೂತಾನಾಂ ಪತಯೇ ನಮಃ ॥೨೪೩॥

ನಂದೀವಾಹ ನಮಸ್ತುಭ್ಯಂ ನಮಸ್ತುಭ್ಯಂ ಪ್ರವೀಯಸೇ ।
ವರ್ಷೀಯಸೇ ನಮಸ್ತುಭ್ಯಂ ಮಹಿಷ್ಠಾಯ ನಮೋ ನಮಃ ॥೨೪೪॥

ಗೃಹೀತಂ ರಜಸಾ ವಿಶ್ವಂ ಶಂಭವೇ ಮೃಡರೂಪಿಣೇ ।
ನಮೋ ಸಂಹಾರರೂಪಾಯ ಹರಯೇ ತೇ ನಮೋ ನಮಃ ॥೨೪೫॥

ಸತ್ವೋತ್ಪತ್ತೌ ಭವತ್ತೋಽಪಿ ನಿಸ್ತ್ರೈಗುಣ್ಯಶಿವಾಯ ಚ ।
ನಮೋ ನಮೋ ಮಹಾದೇವ ಪ್ರಸೀದ ಪರಮೇಶ್ವರ ॥೨೪೬॥

ಕಾಲಾಗ್ನಿ ನೇತ್ರಗಳುಳ್ಳ ಶಂಕರನೇ ನಿನಗೆ ನಮಿಸುವೆನು. ಬ್ರಹ್ಮಸ್ವರೂಪಿಯಾದ, ವಿಷ್ಣುರೂಪಿಯಾದ ನಿನಗೆ ನಮಸ್ಕಾರವು. ॥೨೪೦॥ ಮಹೇಶರೂಪಿಯಾದ, ಸರ್ವದೇವಾತ್ಮನಾದ ನಿನಗೆ ನಮಸ್ಕಾರವು. ಪುರಾಭಿದನಾದ, ದಕ್ಷಪ್ರಜಾಪತಿಯ ಯಜ್ಞವನ್ನು ನಾಶಮಾಡಿದ ಈಶ್ವರನೇ ನಿನಗೆ ನಮಿಸುವೆನು. ॥೨೪೧॥ ಪರಾವರಸ್ವರೂಪನಾದ, ಸೃಷ್ಟಿಸಂಹಾರಗಳಿಗೆ ಕಾರಣನಾದ, ಸರ್ವಜ್ಞನಾದ, ಸ್ಥೂಲರೂಪವನ್ನು ಧಾರಣ ಮಾಡಿದ ॥೨೪೨॥ ಸೂಕ್ಷ್ಮರೂಪವನ್ನು ಧರಿಸಿದ, ಅರೂಪಿಯಾದ ಪರಮೇಶ್ವರಾ ನಿನಗೆ ನಮಸ್ಕಾರಗಳು. ನೃತ್ಯಪ್ರಿಯದೇವನಾದ, ಭೂತಗಳ ಪತಿಯಾದ, ನಿನಗೆ ನಮಸ್ಕಾರವು. ॥೨೪೩॥ ನಂದಿಯೇ ವಾಹನವಾಗಿವುಳ್ಳ, ಅತಿ ತಿಳುವಾಗಿರುವ ಹಾಗೂ ಅತಿ ಸಮೃದ್ಧನಾಗಿರುವ, ಅತಿ ದೊಡ್ಡವನಾದ ನಿನಗೆ ನಮೋ ನಮಃ ॥೨೪೪॥ ರಜೋಗುಣದಿಂದ ವಿಶ್ವವನ್ನು ಧರಿಸಿರುವ, ಮೃಡರೂಪಿಯಾದ, ಸಂಹಾರರೂಪಿಯಾದ, ಶಂಭುವಿಗೆ ಪುನಃ ಪುನಃ ನಮಸ್ಕಾರವು. ॥೨೪೫॥ ನಿನ್ನಿಂದ ಸತ್ವಗುಣವು ಹುಟ್ಟಿದರೂ, ತ್ರಿಗುಣರಹಿತನಾಗಿರುವ ನಿನಗೆ ನಮಸ್ಕಾರವು. ಹೇ ಮಹಾದೇವಾ ನಿನಗೆ ನಮೋ ನಮಃ, ಹೇ ಪರಮೇಶ್ವರಾ ನನ್ನ ಮೇಲೆ ಪ್ರಸನ್ನನಾಗಿ ಅನುಗ್ರಹಿಸು ॥೨೪೬॥ ಈ ಪ್ರಕಾರವಾಗಿ ರಾಜನಿಂದ ಸ್ತುತಿಸಲ್ಪಟ್ಟ

ಇತಿ ಸ್ತುತಸ್ತದಾ ರಾಜ್ಞಾ ದೇವದೇವೋ ಮಹೇಶ್ವರಃ ।
ಪ್ರಸನ್ನವದನಃ ಪ್ರಾಹ ಬ್ರೂಹಿ ಯತ್ತೇಽಭಿವಾಂಛಿತಮ್ ॥೨೪೭॥

ತತೋಽಸೌ ಪ್ರಣಿಪತ್ಯಾಪ ಶಂಕರಂ ಲೋಕಶಂಕರಮ್ ।
ವಚಸಃ ಕಾರಣಂ ಸರ್ವಂ ಚಿರಂ ಯದ್‌ಹೃದಿಸಂಸ್ಥಿತಮ್ ॥೨೪೮॥

ರಾಜಾಹಂ ಶತಬಲೀನಾಮ ಪರಾಭೂತಃ ಪುನಃ ಪುನಃ ।
ಸ್ವಪದಾತ್ ತಾಜ್ಯಿತಸ್ತಸ್ಮಾದ್ಯಾಚೇ ತ್ವಾಂ ದೇವದೇವ ಹಿ ॥೨೪೯॥

ಮಮ ರಾಜ್ಯಪದಭ್ರಂಶೋ ಯಾವಜ್ಜೀವಂ ಭವತ್ವಿಹ ।
ತಪೋಭಿರ್ಯಜನೈಶ್ಚೈವ ತೀರ್ಥೈರ್ಬಹುವಿಧೈಃ ಕೃತೈಃ ॥೨೫೦॥

ಸ್ವಪದಸ್ಯ ಪುನಃ ಪ್ರಾಪ್ತಿರ್ಮಾಭೂದೇತದ್ವಿಧೀಯತಾಮ್ ।
ಯಥಾ ಶೃಣೋಷಿ ಸತತಂ ಪದಭ್ರಷ್ಟಂ ಸದೈವ ಹಿ ॥೨೫೧॥

ತಸ್ಯೈವಂ ವಚನಂ ಶ್ರುತ್ವಾ ಪ್ರಾಹ ದೇವೋ ಜಗದ್ಗುರುಃ ।
ಆಷಾಢಸವನಂ ಮುಕ್ತ್ವಾ ತಪತ್ಯಾಂ ಸರ್ವಕಾಮದಮ್ ॥೨೫೨॥

ದೇವದೇವನಾದ ಮಹೇಶ್ವರನು ಪ್ರಸನ್ನವದನನಾಗಿ- ಅಯ್ಯಾ, ನಿನ್ನ ಮನದಲ್ಲಿರುವ ಅಭಿಲಾಷೆಯನ್ನು ಹೇಳುವವನಾಗು ಎಂದೆನಲು ॥೨೪೭॥ ರಾಜನು ಲೋಕಗಳಿಗೆಲ್ಲ ಮಂಗಳವನ್ನುಂಟು ಮಾಡುವ ಶಂಕರನಿಗೆ ಭಕ್ತಿಯಿಂದ ನಮಿಸಿ ಹೇಳಿದನು- 'ಭಗವನ್, ನನ್ನ ಈ ಮಾತುಗಳಿಗೆ ಕಾರಣವನ್ನು ಮತ್ತು ಬಹುಕಾಲದಿಂದ ಮನದಲ್ಲಿ ಕೊರೆಯುತ್ತಿರುವದನ್ನು ನಿನ್ನೆದುರು ನಿವೇದಿಸುತ್ತಿದ್ದೇನೆ. ॥೨೪೮॥ ನಾನು ಶತಬಲಿಯೆಂಬ ರಾಜನಿಂದ ಪುನಃ ಪುನಃ ಸೋಲಿಸಲ್ಪಟ್ಟು, ಸ್ಥಾನಭ್ರಷ್ಟನಾಗಿ ಮಾಡಲ್ಪಟ್ಟಿದ್ದೇನೆ. ಆದ್ದರಿಂದ ಹೇ ದೇವದೇವಾ, ನಿನ್ನನ್ನು ಪ್ರಾರ್ಥಿಸುತ್ತಿದ್ದೇನೆ ಏನೆಂದರೆ ॥೨೪೯॥ ನಾನು ಜೀವಂತವಿರುವವರೆಗೂ ಆ ಶತಬಲಿಗೆ ನನ್ನ ರಾಜ್ಯವು ಸಿಗದಂತಾಗಲಿ. ಬಹುವಿಧವಾದ ತಪಸ್ಸು, ಯಜ್ಞ, ತೀರ್ಥಸ್ನಾನಗಳನ್ನು ಮಾಡಿರುವದರಿಂದ ನನ್ನ ರಾಜ್ಯವು ಇನ್ನೆಂದಿಗೂ ಅವನ ವಶವಾಗದಿರಲಿ. ಪರಮೇಶ್ವರಾ, ಈಗ ಪದಭ್ರಷ್ಟನಾಗಿರುವ ನನ್ನ ಈ ಮನೋರಥವನ್ನು ಈಡೇರಿಸಿಕೊಡು. ॥೨೫೦॥೨೫೧॥ ರಾಜನ ಈ ಪ್ರಕಾರದ ಪ್ರಾರ್ಥನೆಯನ್ನು ಕೇಳಿದ ಜಗದ್ಗುರುವಾಗ ಮಹಾದೇವನು ಸರ್ವಕಾಮನೆಗಳನ್ನು ಕೊಡುವ ತಾಪೀನದಿಯಲ್ಲಿರುವ ಆಷಾಢ ಸ್ನಾನವನ್ನು ಬಿಟ್ಟು ॥೨೫೨॥ ಶತಬಲಿಯು ಆಕ್ರಮಿಸಿಕೊಂಡಿರುವ ರಾಜ್ಯವು ಇತರ ಯಾವ ಉಪಾಯಗಳಿಂದಲಾಗಲೀ ಹಾಗೂ ಎಲ್ಲ ಸುಕೃತಗಳಿಂದಾಗಲೀ ಕಾಮರೂಪೇಶ್ವರನಿಗೆ ಪುನಃ ದೊರೆಯಲು

ಅನ್ಯೈಃ ಸರ್ವೈರುಪಾಯೈಸ್ತು ಸುಕೃತೈರಪಿ ಯತ್ನತಃ ।
ನ ತಸ್ಯ ಪದಸಂಪ್ರಾಪ್ತಿಃ ಕಥಂಚನ ಭವಿಷ್ಯತಿ ॥೨೫೩॥

ತವ ಸ್ವರಾಜ್ಯಸಂಪ್ರಾಪ್ತಿಃ ಭವಿಷ್ಯತಿ ಪುನಸ್ತಥಾ ।
ತತೋ ಮಮ ಪದಾವಾಪ್ತಿರ್ಭವಿತ್ರೀ ತವ ಭೂಮಿಪ ॥೨೫೪॥

ಇತ್ಯುಕ್ತ್ವಾ ದೇವದೇವೋಽಪಿ ತತ್ರೈವಾಂತರಧೀಯತ ।
ರಾಜಾಪಿ ಸ್ವಪುರಂ ಪ್ರಾಪ್ಯ ಪ್ರಾಪ್ತಂ ರಾಜ್ಯಮಕಂಟಕಮ್ ॥೨೫೫॥

ಪೂರ್ವವನ್ಮುಮುದೇ ತತ್ರ ಶಂಕರಸ್ಯ ಪ್ರಸಾದತಃ ।
ಕಾಮರೂಪೇಶ್ವರೋ ಯಾವತ್ ಶಕ್ತಿಮಾನ್ ಸೈನ್ಯಸಂಯುತಃ ॥೨೫೬॥

ಪ್ರತಿಷ್ಠಿತೇ ಶತಬಲೌ ಪೂರ್ವವೈರಮನುಸ್ಮರತ್ ।
ತಾವದ್ರಾಜ್ಯಂ ಪರಿತ್ಯಜ್ಯ ಸಪ್ತಾಂಗಂ ನಿರ್ಗತಃ ಪುರಾತ್ ॥೨೫೭॥

ಸ ತಸ್ಮಾದ್ಧೂರ್ಜಟವರಾತ್ ರಾಜ್ಯಭ್ರಷ್ಟೋಽಭ್ಯಜಾಯತ ।
ಭ್ರಮನ್ಮಹಾಭೂಂ ಸಕಲಾಂ ಶೋಕಾಮರ್ಷಸಮನ್ವಿತಃ ॥೨೫೮॥

ಭ್ರಷ್ಟರಾಜ್ಯೋ ಗತಃಶ್ರೀಕೋ ನಾವಿಂದಚ್ಚ ಸುಖಂ ಕ್ವಚಿತ್ ।
ಗಿರಿಶಸ್ಯ ಪ್ರಭಾವೇನ ಪಾತಿತಃ ಸ್ವಪದಾದಪಿ ॥೨೫೯॥

ಸಾಧ್ಯವಿಲ್ಲವೆಂಬುದು ಗೊತ್ತಿದ್ದರೂ ॥೨೫೩॥ ಹೇ ರಾಜಾ! ನಿನಗೆ ರಾಜ್ಯವು ಲಭಿಸುವದು. ಅನಂತರ ಪರತ್ರದಲ್ಲಿ ನನ್ನ ಲೋಕವೂ ನಿನಗೆ ದೊರೆಯುವುದು ॥೨೫೪॥ ಎಂದು ವರವನ್ನು ಕೊಟ್ಟು ಅಲ್ಲಿಯೇ ಅಂತರ್ಧಾನ ಹೊಂದಿದನು. ರಾಜನಾದರೋ ತನ್ನ ಪುರಕ್ಕೆ ಬರಲಾಗಿ ಅವನಿಗೆ ಮೊದಲಿನಂತೆ ಅಕಂಟಕವಾದ ರಾಜ್ಯವು ಪ್ರಾಪ್ತವಾಗಿ ॥೨೫೫॥ ಅವನು ಶಂಕರನ ಅನುಗ್ರಹದಿಂದ ಮತ್ತೆ ಮೊದಲಿನಂತೆ ಮುದದಿಂದ ಇದ್ದನು. ಕಾಮರೂಪೇಶ್ವರನು ಯಾವಾಗ ಬಹಳ ಸೈನ್ಯಯುತನಾಗಿ ಬಲಶಾಲಿಯಾದನೋ ಆಗ ಅವನು ಶತಬಲಿಯೊಂದಿಗಿನ ತನ್ನ ಪೂರ್ವ ವೈರವನ್ನು ಸ್ಮರಿಸಿಕೊಂಡು ಅವನ ಮೇಲೆ ದಂಡೆತ್ತಿ ಹೋದನು. ಇದನ್ನು ಕಂಡ ಶತಬಲಿಯು ಸಪ್ತಾಂಗಗಳಿಂದ ಸಹಿತವಾದ ರಾಜ್ಯವನ್ನು ಬಿಟ್ಟುಕೊಟ್ಟು ಕಾಮರೂಪೇಶ್ವರನ ರಾಜ್ಯದಿಂದ ಓಡಿಹೋದನು. ॥೨೫೬॥೨೫೭॥ ಈಶ್ವರನ ವರದ ಪ್ರಭಾವದಿಂದಾಗಿ ಈ ರೀತಿ ರಾಜ್ಯಭ್ರಷ್ಟನಾಗಿ ಶೋಕಾಮರ್ಷಗಳಿಂದ ಯುಕ್ತನಾದ ಶತಬಲಿಯು ಭೂಮಂಡಲದಲ್ಲಿ ಸರ್ವತ್ರ ಸಂಚರಿಸತೊಡಗಿದನು. ॥೨೫೮॥ ರಾಜ್ಯ ಭ್ರಷ್ಟನಾಗಿ ಸರ್ವಸಂಪತ್ತನ್ನು ಕಳೆದುಕೊಂಡ ಅವನಿಗೆ ಸ್ವಲ್ಪವೂ ಸುಖವಿಲ್ಲದಂತಾಯಿತು. ಈಶ್ವರನ ವರಪ್ರಭಾವದಿಂದ ಸ್ವಪದಭ್ರಷ್ಟನಾದನು. ॥೨೫೯॥ ಈ ಜಗತ್ತಿನಲ್ಲಿ ರುದ್ರದೇವರಿಗೆ ವಿರುದ್ಧವಾಗಿ

ಕಿಂ ಕರೋತಿ ಸ ಕೋಽಪ್ಯಸ್ತಿ ಯೋ ರುದ್ರೇಣ ವಿರುಧ್ಯತೇ ।
ಪುಷ್ಣಾತಿ ದರ್ಶನಾದ್ಯೇನ ಪಾತಿತಾ ಹಿ ತಥಾ ಬಲಾತ್ ॥೨೬೦॥

ವಜ್ರಿಣಃ ಸ್ತಂಭಿತಂ ವಜ್ರಂ ಕಸ್ತೇನ ಸ್ಪರ್ಧಯೇದಿಹ ।
ಇಂದ್ರಾದಿಪದದಾನಾಚ್ಚ ತಸ್ಮಾದನ್ಯೋ ನ ವಿದ್ಯತೇ ॥೨೬೧॥

ವರಾಭಿಧಾರಿಣೋ ದೇವದೈತ್ಯದಾನವಪನ್ನಗಾಃ ।
ಗಿರಿಶಂ ತಂ ಸಮಾಸಾದ್ಯ ಯಸ್ಯ ದ್ವಾರಮುಪಾಸತೇ ॥೨೬೨॥

ಆರಾಧನಾಚ್ಚ ಯಸ್ಮಾತ್ತೇ ಸ್ವಾನಿ ಸ್ವಾನಿ ಪದಾನಿ ತೇ ।
ಲಭಂತೇ ತೇಷು ಶುಧ್ಯಂತೇ ಮಹಿಮ್ನಾ ಯತ್ಪ್ರಸಾದತಃ ॥೨೬೩॥

ಯೋ ದದಾತ್ಯತ್ರ ಸರ್ವೇಶಃ ಪದಾನಿ ಸುಮಹಾಂತ್ಯಪಿ ।
ಸ ಚೇತ್ಪದಾತ್ ಚ್ಯಾವಯತಿ ವಿಷಾದಃ ಕ್ರಿಯತೇಽತ್ರ ಕಃ ॥೨೬೪॥

ಸ ದೀನವದನೋ ಜಾತಃ ಪಾದಚಾರೀ ಗತಾನುಗಃ ।
ವಿಪೇತಕಾಂತಿರ್ನಿರ್ಭೂತಿಃ ಏಕಾಕೀ ನಿಃಶ್ವಸನ್ಮುಹುಃ ॥೨೬೫॥

ನಡೆಯಲು ಅದಾರಿಗೆ ಸಾಧ್ಯ? ಯಾವನ ದರ್ಶನದಿಂದ ಭಕ್ತರಾದವರು ಸರ್ವಸಮೃದ್ಧಿಯನ್ನು ಹೊಂದುವರೋ ಮತ್ತು ವಿರೋಧಿಗಳು ಸ್ಥಾನಭ್ರಷ್ಟರಾಗುವರೋ ॥೨೬೦॥ ಯಾವನ ಬಲದಿಂದ ಇಂದ್ರನ ವಜ್ರಾಯುಧವೂ ನಿಷ್ಕ್ರಿಯವಾಯಿತೋ ಅಂಥ ಮಹಾರುದ್ರನೊಂದಿಗೆ ಸ್ಪರ್ಧಿಸಲು ಅದಾರು ಸಮರ್ಥರಾದಾರು? ಇಂದ್ರಾದಿಪದಗಳನ್ನು ಕೊಡುವ ಈಶ್ವರನನ್ನು ಬಿಟ್ಟು ಬೇರೆ ಯಾರೂ ಈ ಕಾರ್ಯವನ್ನು ಮಾಡಲಾರರು. ॥೨೬೧॥ ದೇವ, ದೈತ್ಯ, ದಾನವ, ಪನ್ನಗರೆಲ್ಲರೂ ಈಶ್ವರನನ್ನು ಪ್ರಸನ್ನೀಕರಿಸಿ ಅವನಿಂದ ವರಗಳನ್ನು ಪಡೆದು ತಮ್ಮ ತಮ್ಮ ಕಾರ್ಯಗಳನ್ನು ಮಾಡುತ್ತಿರುವರು. ಇವರೆಲ್ಲರೂ ಈಶ್ವರನ ದ್ವಾರದಲ್ಲಿದ್ದು ॥೨೬೨॥ ಅವನನ್ನು ಆರಾಧಿಸಿ, ಅವನ ಅನುಗ್ರಹದಿಂದ ತಮ್ಮ ತಮ್ಮ ಪದಗಳನ್ನು (ಸ್ಥಾನಗಳನ್ನು) ಪಡೆಯುತ್ತಾರೆ ಮತ್ತು ಈಶ್ವರನ ಪ್ರಸಾದದಿಂದಲೇ ಆ ಆ ಸ್ಥಾನಗಳಲ್ಲಿ ವಿರಾಜಿಸುತ್ತಾರೆ. ॥೨೬೩॥ ಸರ್ವೇಶನಾದ ಯಾವ ಈಶ್ವರನು ಉಚ್ಚವಾದ ಸ್ಥಾನಗಳನ್ನು ಕೊಡುವನೋ ಅಂಥವನು ಯಾವನೊಬ್ಬನನ್ನು ಪದಭ್ರಷ್ಟನನ್ನಾಗಿ ಮಾಡಿದಾಗ ವಿಷಾದ ಪಡುವುದೇಕೆ? ॥೨೬೪॥ ಶತಬಲಿಯು ದೀನವದನನಾಗಿ, ಕಾಂತಿಹೀನನಾಗಿ ಸಂಪತ್ತು ರಹಿತನಾಗಿ ಏಕಾಕಿಯಾಗಿ, ಪಾದಚಾರಿಯಾಗಿ ಸಂಚರಿಸುತ್ತ ಪುನಃ ಪುನಃ ನಿಟ್ಟುಸಿರು ಬಿಡುತ್ತ ॥೨೬೫॥ ತನಗೆ ಇನ್ನೆಂದು ಒಳ್ಳೆಯ ದಿನಗಳು ಬರುವವು ಎಂದು ಚಿಂತಿಸುತ್ತ ಮಾರ್ಕಂಡೇಯ ಋಷಿಗಳ

ಕದಾ ಭಾವೀನಿ ಕಲ್ಯಾಣೆ ಮಾರ್ಕಂಡೇಯಾಶ್ರಮಂ ಯಯೌ ।
ದೃಷ್ಟಃ ಸ ಮುನಿನಾ ತೇನ ಕೃತಾತಿಥ್ಯ ಉಪಾವಿಶತ್ ॥೨೬೬॥

ನಮಸ್ಕೃತ್ಯ ಮುನಿಂ ಸೋಽಥ ಕೃತಾಂಜಲಿಪುಟಃ ಸ್ಥಿತಃ ।
ಮಾರ್ಕಂಡೇಯೇನ ಸಂಪೃಷ್ಟಃ ಕಿಂಮೂಲಂ ವ್ಯಸನಂ ತು ತೇ ॥೨೬೭॥

ಕಸ್ಮಾತ್ ತ್ವಮಿಹ ಸಂಪ್ರಾಪ್ತೋ ರಾಜನ್ನೇವಂವಿಧಾಂ ದಶಾಮ್ ।
ಕ್ವ ತೇ ಗತಂ ಮಹದ್ರಾಜ್ಯಂ ಕ್ವ ಚ ತೇ ಮತ್ತದಂತಿನಃ ॥೨೬೮॥

ಕ್ವ ತೇ ಲಕ್ಷ್ಮೀಃ ಕ್ವ ತೇಽಮಾತ್ಯಾಃ ಸಹಾಯಾಃ ಕ್ವ ಚ ತೇ ಗತಾಃ ।
ಸರ್ವಮೇಕಪದೇ ಭ್ರಷ್ಟಂ ಸ್ವಪ್ನದೃಷ್ಟಂ ಪ್ರಬೋಧವತ್ ॥೨೬೯॥

ಧಿಕ್‌ಸಂಪದೋ ಮಹಾಕಷ್ಟೈರರ್ಜಿತಾಃ ಕ್ಷಣಭಂಗುರಾಃ ।
ಸತ್ಕರ್ಮವಶಗಾಸ್ತಾ ಹಿ ಕರ್ಮ ವಾಪಿ ಕ್ಷಯಾತ್ಮಕಮ್ ॥೨೭೦॥

ಸತೀಷು ತಾಸು ಗರ್ವೋ ನ ನ ವಿಷಾದೋ ಗತಾಸು ಚ ।
ಕಾರ್ಯೇಽಪಿ ಚಿಂತಾ ಪರಮಾ ಚಂಚಲಾಸ್ತಾ ನಿರಂತರಮ್ ॥೨೭೧॥

ಆಶ್ರಮಕ್ಕೆ ಬಂದು ಸೇರಿದನು. ಆಶ್ರಮದಲ್ಲಿ ಮುನಿಗಳಿಂದ ನೋಡಲ್ಪಟ್ಟು ಅವರಿಂದ ಅತಿಥ್ಯವನ್ನು ಸ್ವೀಕರಿಸಿ ಒಂದೆಡೆ ಕುಳಿತುಕೊಂಡನು. ॥೨೬೬॥ ಮತ್ತೆ ಮೇಲೆದ್ದು ಮಾರ್ಕಂಡೇಯ ಋಷಿಗಳಿಗೆ ನಮಸ್ಕರಿಸಿ ಕೈಜೋಡಿಸಿಕೊಂಡು ನಿಂತುಕೊಂಡನು. ಆಗ ಮಾರ್ಕಂಡೇಯ ಮುನಿಗಳು ರಾಜನನ್ನು ಕುರಿತು- 'ಅಯ್ಯಾ ರಾಜಾ ! ನಿನ್ನ ಈ ವ್ಯಸನಕ್ಕೆ ಕಾರಣವೇನು? ॥೨೬೭॥ ಏತಕ್ಕಾಗಿ ನೀನಿಲ್ಲಿ ಬಂದಿರುವಿ? ನಿನಗೇಕೆ ಇಂಥ ಅವಸ್ಥೆಯು ಬಂದಿದೆ ? ನಿನ್ನ ಮಹಾರಾಜ್ಯವು ಎಲ್ಲಿ ಹೋಯಿತು ? ನಿನ್ನ ಅಸಂಖ್ಯವಾದ ಮದ್ದಾನೆಗಳೆಲ್ಲಿ? ॥೨೬೮॥ ನಿನ್ನ ಅತುಲವಾದ ಸಂಪತ್ತೆಲ್ಲಿ? ನಿನ್ನ ಮಹಾರಾಣಿ ಎಲ್ಲಿ? ನಿನ್ನ ಅಮಾತ್ಯರೆಲ್ಲಿ? ರಾಜ್ಯಭಾರದಲ್ಲಿ ಸಹಾಯಕರಾದ ಮಂತ್ರಿಗಳೆಲ್ಲಿ? ಇವರೆಲ್ಲರೂ ಎಲ್ಲಿಗೆ ಹೊರಟು ಹೋದರು? ಇದೆಲ್ಲವೂ ಏಕಕಾಲಕ್ಕೆ ಹೋಗಿರುವದನ್ನು ಕಂಡರೆ ಎಚ್ಚತ್ತವನು ಎಲ್ಲವನ್ನೂ ಸ್ವಪ್ನದಲ್ಲಿ ಕಂಡಂತಾಗಿದೆ. ಮಹಾಕಷ್ಟಗಳನ್ನು ಅನುಭವಿಸಿ ಸಂಪಾದಿಸಿದ ಈ ರಾಜ್ಯಸಂಪತ್ತುಗಳಿಗೆ ಧಿಕ್ಕಾರವಿರಲಿ. ಇವೆಲ್ಲ ಕ್ಷಣಿಕವಾದವುಗಳು, ಸತ್ಕರ್ಮಗಳ ಅಧೀನವಾಗಿರುವವು. ಕರ್ಮವಾದರೋ ಭೋಗದಿಂದ ನಾಶ-ವಾಗುವಂಥದಾಗಿದೆ. ॥೨೬೯।೨೭೦॥ ಆದ್ದರಿಂದ ರಾಜ್ಯಸಂಪತ್ತುಗಳು ಇರುವಾಗ ಗರ್ವವನ್ನೂ, ಕಳೆದಾಗ ವಿಷಾದವನ್ನೂ ಮಾಡಕೂಡದು. ಸತ್ಕಾರ್ಯಗಳನ್ನು ಮಾಡುವ ಬಗ್ಗೆ ಸದಾ ಚಿಂತಿಸಬೇಕು. ಸಂಪತ್ತುಗಳು ಚಂಚಲವಾಗಿವೆ'' ॥೨೭೧॥ ಎಂದು

ಇತ್ಯುಕ್ತಸ್ತು ತತೋ ರಾಜಾ ಮಾರ್ಕಂಡೇಯೇನ ಧೀಮತಾ ।
ಸರ್ವಂ ನಿವೇದಯಾಂಚಕ್ರೇ ಸ್ವರಾಜ್ಯಭ್ರಂಶಕಾರಣಮ್ ॥೨೭೨॥

ಕೃತಮಾರಾಧನಂ ಶಂಭೋಃ ಕಾಮರೂಪಾಧಿಪೇನ ತು ।
ಜಿತೇನ ಶತ್ರುಣಾ ಯದ್ವತ್ತೋಷಿತೋ ಭಗವಾನ್ ಹರಃ ॥೨೭೩॥

ತಸ್ಮಾಚ್ಚ ತದ್ವರಪ್ರಾಪ್ತಿಂ ಸರ್ವಮೇತನ್ನಿವೇದಿತಮ್ ।
ವಿನಯಾವನತೋ ಭೂತ್ವಾ ಪುನಃ ಪಪ್ರಚ್ಛ ತಂ ಮುನಿಮ್ ॥೨೭೪॥

ಮಹರ್ಷೇಽಹಂ ಮಹೇಶೇನ ಸ್ವಪದಾದ್‌ಭ್ರಂಶಿತಃ ಕಥಮ್ ।
ಅಧ್ಯಾಪನಂ ಮಹೇಶಸ್ಯ ನ ಮಯಾ ವಿಹಿತಂ ಕ್ವಚಿತ್ ॥೨೭೫॥

ಕಲ್ಯಾಣಂ ಜಗತಃ ಕರ್ತಾ ಮಿತ್ರಶತ್ರೂ ತು ತಸ್ಯ ಕೌ ।
ಅಪವರ್ಜ್ಯ ಜಗತ್ಸರ್ವಂ ನಿಕೃತೋಽಭೂತ್ಕಥಂ ಮಯಿ ॥೨೭೬॥

ಇತಿ ತಸ್ಯ ವಚಃ ಶ್ರುತ್ವಾ ಪ್ರತ್ಯಭಾಷತ ತಂ ಮುನಿಃ ।
ಕ್ಷಣಂ ಧ್ಯಾನಪರೋ ಭೂತ್ವಾ ಧ್ಯಾತ್ವಾ ತಂ ಪುನರಬ್ರವೀತ್ ॥೨೭೭॥

ರಾಜನ್ ಜಾನಾಮಿ ತತ್ಸರ್ವಂ ಯಸ್ತ್ವಂ ವದಸಿ ಬುದ್ಧಿಮಾನ್ ।
ಫಲದಾತಾ ಮಹಾದೇವಃ ಕೃತಕರ್ಮಾನುಸಾರತಃ ॥೨೭೮॥

ಮುಂತಾಗಿ ಮಾರ್ಕಂಡೇಯರು ಹೇಳಲು ಆ ರಾಜನು ತನ್ನ ರಾಜ್ಯಭ್ರಂಶದ ಎಲ್ಲ ಕಾರಣವನ್ನು ವಿಸ್ತಾರವಾಗಿ ಹೇಳಿದನು. ॥೨೭೨॥ 'ನನ್ನಿಂದ ಪರಾಜಿತನಾದ ಕಾಮರೂಪೇಶ್ವರ ರಾಜನು ಶಂಭುವನ್ನು ಆರಾಧಿಸಿ ಅವನನ್ನು ಪ್ರಸನ್ನಗೊಳಿಸಿದನು. ಶಂಭುದೇವನಿಂದ ವರವನ್ನು ಪಡೆದನು. ಆ ವರಪ್ರಭಾವದಿಂದ ಇದೆಲ್ಲ ನಡೆದಿದೆ' ಎಂದು ಸರ್ವವನ್ನೂ ನಿವೇದಿಸಿದನು. ಅನಂತರ ಶತಬಲಿಯು ವಿನಯದಿಂದ ಬಾಗಿ ಋಷಿಗಳನ್ನು ಪ್ರಶ್ನಿಸಿದನು. ॥೨೭೩॥೨೭೪॥ ಭೋ ಮಹರ್ಷಿಗಳೇ! ಶಂಭುವಿನಿಂದ ನಾನು ಪದಚ್ಯುತನಾಗಲು ಕಾರಣವೇನು? ನಾನೆಂದಿಗೂ ಈಶ್ವರನಿಗೆ ದ್ರೋಹ ಬಗೆದವನಲ್ಲ; ॥೨೭೫॥ ಸಮಸ್ತ ಜಗತ್ತಿಗೆ ಕಲ್ಯಾಣವನ್ನುಂಟು ಮಾಡುವ ಆ ಪರಮೇಶ್ವರನಿಗೆ ಮಿತ್ರ ಮತ್ತು ಶತ್ರುಗಳೆಂಬವರು ಇರುವರೇ? ಜಗತ್ತಿನಲ್ಲಿರುವ ಎಲ್ಲರನ್ನೂ ಬಿಟ್ಟು ನನ್ನನ್ನೇ ತಿರಸ್ಕರಿಸಲು ಕಾರಣವೇನು? ॥೨೭೬॥ ರಾಜನ ಈ ಪ್ರಶ್ನೆಗಳನ್ನು ಕೇಳಿದ ಮಾರ್ಕಂಡೇಯರು ಒಂದು ಕ್ಷಣ ಧ್ಯಾನಪರರಾಗಿ, ಆಲೋಚಿಸಿ ನಂತರ ಆ ರಾಜನಿಗೆ ಎಲ್ಲವನ್ನೂ ಹೇಳಿದರು. ॥೨೭೭॥ ಹೇ ರಾಜನ್! ಬುದ್ಧಿವಂತನಾದ ನೀನು ಭಕ್ತಿಯಿಂದ ಏನು ಪ್ರಶ್ನಿಸುತ್ತಿರುವಿಯೋ ಅದರ ಉತ್ತರವನ್ನೆಲ್ಲ

ಜನ್ಮನಿ ತ್ವಂ ತೃತೀಯೇ ಚ ರಾಜಾ ಭೂರ್ಗೌಡಮಂಡಲೇ ।
ತತಸ್ತ್ವಯಾ ಪ್ರಮತ್ತೇನ ಬ್ರಾಹ್ಮಣಃ ಪಾತಿತಃ ಪದಾತ್ ॥೨೭೯॥

ತಸ್ಯ ಸರ್ವಂ ತ್ವಯಾನೀತಂ ದೇಶಾನ್ನಿಷ್ಕಾಸಿತಃ ಸ ಚ ।
ತತಸ್ತ್ವನೇನ ಪಾಪೇನ ಮೃತೋ ನರಕಮಾಪ್ತವಾನ್ ॥೨೮೦॥

ಬಹುಕಾಲಂ ತತ್ರ ದುಃಖಂ ಭುಕ್ತ್ವಾ ನಿಷ್ಪಾಪತಾಂ ಗತಃ ।
ಪೂರ್ವಪುಣ್ಯಾನುಸಾರೇಣ ಜಾತಸ್ತ್ವಂ ಬ್ರಾಹ್ಮಣಃ ಪುನಃ ॥೨೮೧॥

ತತ್ರ ತ್ವಂ ಸತತಂ ಕಷ್ಟಂ ಬಹೂಂಶ್ಚ ಪರಿವತ್ಸರಾನ್ ।
ಗಂಗಾತಟಂ ಸಮಾಶ್ರಿತ್ಯ ಕಾಲಿಂದ್ಯಾ ಯತ್ರ ಸಂಗಮಃ ॥೨೮೨॥

ತತಸ್ತತ್ರೈವ ನಿಧನಂ ಪ್ರಪನ್ನಃ ಕಾಲಪರ್ಯಯಾತ್ ।
ತಪಸಾ ದುಷ್ಕರೇಣೈವ ನಿರ್ಜರ್ಜರಕಲೇವರಃ ॥೨೮೩॥

ಪ್ರಭಾವೈಸ್ತಪಸಃ ಪುಣ್ಯೈರ್ಗತಸ್ತ್ವಂ ವಿಷ್ಣುಸನ್ನಿಧೌ ।
ತತಸ್ಥಿತಶ್ಚ ಸುಚಿರಂ ರಮಮಾಣೋ ಯದೃಚ್ಛಯಾ ॥೨೮೪॥

ಬ್ರಾಹ್ಮಣಾಭಿಭವಾಜ್ಜಾತಂ ತತ್ಪಾಪಂ ನಾಶಮಾಪ್ತವಾನ್ ।
ವಿಷ್ಣುನಾ ಪ್ರೇಷಿತೋ ಭೋಕ್ತುಂ ಪುಣ್ಯಶೇಷಾನ್ನೃಪೋಽ ಭವಃ ॥೨೮೫॥

ನಾನು ತಿಳಿದಿರುವೆನು ಕೇಳು. ಮಹಾದೇವನು ಜೀವರ ಕರ್ಮಾನುಸಾರ ಫಲವನ್ನು ಕೊಡುವನಷ್ಟೇ ॥೨೭೮॥ ಈ ಹಿಂದಿನ ಮೂರನೆಯ ಜನ್ಮದಲ್ಲಿ ನೀನು ಗೌಡಮಂಡಲದಲ್ಲಿ ಒಬ್ಬ ರಾಜನಾಗಿದ್ದಿ. ಆಗ ರಾಜ್ಯಮತ್ತನಾದ ನೀನು ಒಬ್ಬ ಬ್ರಾಹ್ಮಣನನ್ನು ಕಾಲಿನಿಂದ ಒದ್ದು ॥೨೭೯॥ ಅವನ ಸರ್ವಸ್ವವನ್ನೆಲ್ಲ ಅಪಹರಿಸಿ ಅವನನ್ನು ರಾಜ್ಯದಿಂದ ಹೊರಗೆ ಹಾಕಿದ್ದಿ. ಈ ಪಾಪದಿಂದ ಲಿಪ್ತನಾದ ನೀನು ಮರಣಾನಂತರ ನರಕವನ್ನು ಹೊಂದಿ ॥೨೮೦॥ ಅಲ್ಲಿ ಬಹುಕಾಲ ದುಃಖವನ್ನು ಭೋಗಿಸಿ ಮುಂದೆ ಪೂರ್ವಪುಣ್ಯಾನುಸಾರವಾಗಿ ನೀನು ಒಬ್ಬ ಬ್ರಾಹ್ಮಣನಾಗಿ ಹುಟ್ಟಿದಿ. ಆ ಜನ್ಮದಲ್ಲಿ ಬಹು ವರ್ಷಗಳವರೆಗೆ ಸತತವಾಗಿ ಅನೇಕ ಕಷ್ಟಗಳನ್ನು ಅನುಭವಿಸಿ ಕೊನೆಗೆ ಗಂಗಾ-ಯಮುನಾ ಸಂಗಮ ಸ್ಥಳಕ್ಕೆ ಬಂದು ಗಂಗಾತಟದಲ್ಲಿದ್ದು ॥೨೮೧॥೨೮೨॥ ದುಷ್ಕರವಾದ ತಪವನ್ನಾಚರಿಸುತ್ತ ಜರ್ಜರಿಯಾದ ದೇಹವುಳ್ಳ ನೀನು ಅಲ್ಲಿಯೇ ಕಾಲಬಲದಿಂದ ಮರಣ ಹೊಂದಿದಿ. ॥೨೮೩॥ ತಪಃಪ್ರಭಾವದಿಂದ ನೀನು ವಿಷ್ಣು ಸನ್ನಿಧಿಯನ್ನು ಹೊಂದಿ ಅಲ್ಲಿ ಯಥೇಷ್ಟವಾಗಿ ರಮಿಸುತ್ತ ಸುಖದಿಂದ ಬಹುಕಾಲ ವಾಸ ಮಾಡಿದಿ ॥೨೮೪॥ ಬ್ರಾಹ್ಮಣನ ಅವಮಾನದಿಂದ ಪ್ರಾಪ್ತವಾದ ಪಾಪವನ್ನು ಕಳೆದುಕೊಂಡು ಮುಂದೆ ವಿಷ್ಣುವಿನಿಂದ ಭೂಲೋಕಕ್ಕೆ ಕಳಹಿಸಲ್ಪಟ್ಟಿರುವ ನೀನು ಪುಣ್ಯಶೇಷವನ್ನು ಭೋಗಿಸಲು

ಯತ್ತ್ವಯಾ ತಾಡಿತೋ ವಿಪ್ರಃ ಸ್ವಪದಾತ್ಪೂರ್ವಜನ್ಮನಿ ।
ತತ್ಕರ್ಮಣಃ ಫಲಂ ತ್ವೇತತ್ತತ್ ಸ್ವಯಂ ಯಚ್ಛತೇ ಗತಮ್ ॥೨೮೬॥

ತನ್ನ ದೇವಾ ನ ಮನುಜಾ ದದತೇ ಸುಖದುಃಖಯೋಃ ।
ಕಾರಣಂ ಕೇವಲಂ ಕರ್ಮ ಯತ್ಕೃತಂ ಪೂರ್ವಜನ್ಮನಿ ॥೨೮೭॥

ಈಶಸ್ತದನುಸಾರೇಣ ಫಲಂ ಯಚ್ಛತಿ ದೇಹಿನಾಮ್ ।
ಅಲ್ಪಂ ವಾ ಯದಿ ವಾನಲ್ಪಂ ಶುಭಂ ವಾ ಯದಿ ವಾಶುಭಮ್ ॥೨೮೮॥

ಏತದಾಕರ್ಣ್ಯ ವಾಕ್ಯಂ ಸ ಮಹರ್ಷೇಃ ಸಾರವತ್ತರಮ್ ।
ರಾಜಾ ವಿಜ್ಞಾಪಯಾಮಾಸ ಮುನಯೇ ಸರ್ವತೋ ಗತಿಮ್ ॥೨೮೯॥

ಭಗವನ್ಕೋಽಪ್ಯುಪಾಯೋಽಸ್ತಿ ಯೇನಾಹಂ ಸುಖಮಾಪ್ನುಯಾಮ್ ।
ಮಮೋಪರಿ ಕೃಪಾಂ ಕೃತ್ವಾ ಉಪಾಯಃ ಸ ನಿಗದ್ಯತಾಮ್ ॥೨೯೦॥

ಇತಿ ವಿಜ್ಞಾಪಿತಸ್ತೇನ ಪುನರ್ಧ್ಯಾನಪರೋಽಭವತ್ ।
ಪ್ರಣಿಧಾನೇನ ಮನಸಾ ಜ್ಞಾತ್ವಾ ತಸ್ಯ ಮನಃ ಪುನಃ ॥೨೯೧॥

ರಾಜನ್ ತ್ವಂ ಗಚ್ಛ ತಪತೀಮಾಷಾಢೇ ಸ್ನಾನಮಾಚರ ।
ತಸ್ಮಾದುಪಾಯೋ ನಾನ್ಯೋಽಸ್ತಿ ಸ್ವಪದಪ್ರಾಪ್ತಯೇ ತವ ॥೨೯೨॥

ಈಗ ರಾಜನಾಗಿರುವಿ. ॥೨೮೫॥ ಪೂರ್ವಜನ್ಮದಲ್ಲಿ ಕಾಲಿನಿಂದ ಬ್ರಾಹ್ಮಣನನ್ನು ಒದ್ದುದರಿಂದ ಪ್ರಾಪ್ತವಾದ ಪಾಪದ ಫಲವಾಗಿಯೇ ಈಗ ನಿನಗೆ ಈ ಅವಸ್ಥೆಯು ಪ್ರಾಪ್ತವಾಗಿದೆ. ॥೨೮೬॥ ದೇವತೆಗಳಾಗಲೀ, ಮನುಷ್ಯರಾಗಲೀ ಸುಖದುಃಖಗಳನ್ನು ಕೊಡಲು ಸಮರ್ಥರಾಗುವದಿಲ್ಲ. ಪೂರ್ವಜನ್ಮದಲ್ಲಿ ಮಾಡಿದ ಕರ್ಮವೇ ಸುಖದುಃಖಗಳ ಪ್ರಾಪ್ತಿಗೆ ಕಾರಣವಾಗಿರುತ್ತದೆ. ॥೨೮೭॥ ದೇಹಿಗಳ ಕರ್ಮಾನುಸಾರವಾಗಿ ಈಶ್ವರನು ಅವರಿಗೆ (ದೇಹಿಗಳಿಗೆ) ಅಲ್ಪವಾದ ಅಥವಾ ಬಹುವಾದ ಶುಭಾಶುಭ ಫಲಗಳನ್ನು ಕೊಡುವನು.'' ॥೨೮೮॥ ಮಾರ್ಕಂಡೇಯ ಮುನಿಗಳ ಸಾರಭೂತವಾದ ಈ ಮಾತುಗಳನ್ನು ಕೇಳಿ ಮತ್ತು ತನ್ನ ಹಿಂದಿನ ಜನ್ಮಗಳ ವಿಷಯವನ್ನೂ ತಿಳಿದು ರಾಜನು ಅವರನ್ನು ಕುರಿತು ॥೨೮೯॥ ಭಗವನ್, ನಾನು ಪುನಃ ಸುಖವನ್ನು ಹೊಂದಲು ಉಪಾಯವೇನಾದರೂ ಇದ್ದರೆ ನನ್ನ ಮೇಲೆ ಅನುಗ್ರಹಮಾಡಿ ಅದನ್ನು ತಿಳಿಸಿರಿ ಎಂದು ವಿಜ್ಞಾಪಿಸಲು ॥೨೯೦॥ ಮುನಿಗಳು ಪುನಃ ಧ್ಯಾನಪರರಾದರು. ಮನಃಪ್ರಣಿಧಾನದಿಂದ ಎಲ್ಲವನ್ನೂ ತಿಳಿದು ರಾಜನಿಗೆ ಹೇಳಿದರು. ॥೨೯೧॥ ಹೇ ರಾಜಾ ! ನೀನು ತಾಪೀನದಿ ಇರುವಲ್ಲಿ ಹೋಗಿ ಅಲ್ಲಿ ಆಷಾಢಮಾಸ ಬಂದಾಗ ನಿತ್ಯ

ಕೃತೇ ಚಾಷಾಢಸವನೇ ಪರಿಪೂರ್ಣಂ ಕೃತಂ ದ್ವಿಜ ।
ನಿಶ್ಚಿತಂ ಸ್ವಪದಪ್ರಾಪ್ತಿಸ್ತವ ರಾಜನ್ಭವಿಷ್ಯತಿ ॥೨೬೩॥

ನಿರೂಪಿತಃ ಪದಭ್ರಂಶೇ ಕಾಮರೂಪಾಧಿಪೇ ಮಯಾ ।
ಭಗವಾನಪಿ ಭೂತೇಶೋ ಭಾವ್ಯಮಾನೋ ಪುನಃ ಪುನಃ ॥೨೬೪॥

ತಪತ್ಯಾಷಾಢಸವನಂ ವರ್ಜಯಿತ್ವಾ ವರಂ ದದೌ ।
ಸಮಾಧಿನಾ ಮಯಾ ದೃಷ್ಟ ಏಷೋಽರ್ಥಃ ಕಥಿತಸ್ತವ ॥೨೬೫॥

ಉಪಾಯೇನೈವ ರಾಜೇಂದ್ರ ಯಸ್ತ್ವಂ ಸ್ವಪದಮಿಚ್ಛಸಿ ।
ಇತ್ಯುಕ್ತಸ್ತೇನ ಮುನಿನಾ ಮಾರ್ಕಂಡೇಯೇನ ಭೂಮಿಪಃ ॥೨೬೬॥

ತಮಾಮಂತ್ರ್ಯ ನಮಸ್ಕೃತ್ಯ ಗೃಹೀತಾಶೀಸ್ತತೋ ವಶೀ ।
ಯಯೌ ಸ ಸತ್ವರಂ ತಾಪೀಮಾಷಾಢಸ್ನಾನಹೇತವೇ ॥೨೬೭॥

ದೃಷ್ಟ್ವಾ ತಾಪೀಂ ನಮಸ್ಕೃತ್ಯ ತುಷ್ಟಾವ ಸವಿತುಃ ಸುತಾಮ್ ।
ಜಗತಃ ಪಾಪಹಂತ್ರೀಂ ಚ ಪಾವನೀಂ ಜಗದಾಶ್ರಯಾಮ್ ॥೨೬೮॥

ಸ್ನಾನ ಮಾಡುವವನಾಗು. ನಿನ್ನ ರಾಜ್ಯ ಪ್ರಾಪ್ತಿಗೋಸ್ಕರ ಇದನ್ನು ಬಿಟ್ಟು ಬೇರಾವ ಉಪಾಯವಿಲ್ಲ. ॥೨೬೨॥ ಹೇ ರಾಜನ್! ಆಷಾಢ ಸ್ನಾನವನ್ನು ವಿಧಿಪೂರ್ವಕ ಪೂರ್ಣಮಾಡಿದಿಯಾದರೆ ನಿನ್ನ ರಾಜ್ಯವು ನಿಶ್ಚಿತವಾಗಿ ಪುನಃ ಪ್ರಾಪ್ತವಾಗುವದು ॥೨೬೩॥ ಕಾಮರೂಪೇಶ್ವರನನ್ನು ಪದಭ್ರಷ್ಟನನ್ನಾಗಿ ಮಾಡುವ ಉಪಾಯವನ್ನು ನಿನಗೆ ತಿಳಿಸಿದ್ದೇನೆ. ಮುಂದಿನದೆಲ್ಲವನ್ನೂ ಅರಿತಿರುವ ಭಗವಾನ್ ಭೂತೇಶನು (ಈಶ್ವರನು) ॥೨೬೪॥ ತಾಪೀನದಿಯಲ್ಲಿ ಆಷಾಢಸ್ನಾನ ಮಾಡುವಂತೆ ಹೇಳುವದನ್ನು ಮಾತ್ರ ಬಿಟ್ಟು ಕಾಮರೂಪೇಶ್ವರನಿಗೆ ವರವನ್ನು ಕೊಟ್ಟಿದ್ದಾನೆ. ಸಮಾಧಿಯಿಂದ ಅರಿತು ನಾನು ನಿನಗೆ ಇದೆಲ್ಲವನ್ನು ತಿಳಿಸಿದ್ದೇನೆ. ಹೇ ರಾಜನ್! ಸ್ವರಾಜ್ಯವನ್ನು ಇಚ್ಛಿಸುವಿಯಾದರೆ ನಾನು ಹೇಳಿದಂತೆ ಮಾಡು. ಈ ಒಂದು ಉಪಾಯದಿಂದಲೇ ನಿನ್ನ ರಾಜ್ಯವು ಮರಳಿ ದೊರೆಯುವದು.'' ಈ ಪ್ರಕಾರವಾಗಿ ಮಾರ್ಕಂಡೇಯ ಮುನಿಗಳಿಂದ ಆದೇಶಿಸಲ್ಪಟ್ಟ ಶತಬಲೀ ರಾಜನು ॥೨೬೫॥೨೬೬॥ ಅವರಿಗೆ ಭಕ್ತಿಯಿಂದ ನಮಸ್ಕರಿಸಿ ಅವರಿಂದ ಆಶೀರ್ವಾದಗಳನ್ನು ಪಡೆದನು. ಮುನಿಗಳಿಂದ ಅನುಜ್ಞೆಯನ್ನು ಪಡೆದು ಆಷಾಢಸ್ನಾನ ಮಾಡುವದಕ್ಕೆಂದು ಕೂಡಲೇ ತಾಪೀನದಿಯ ತೀರಕ್ಕೆ ಹೋದನು. ಇಂದ್ರಿಯನಿಗ್ರಹವುಳ್ಳವನಾಗಿ ಅವನು ॥೨೬೭॥ ಅಲ್ಲಿ ತಾಪೀನದಿಯನ್ನು ಕಂಡಾಕ್ಷಣ ರವಿಸುತೆಯಾದ ಅವಳನ್ನು ಸ್ತುತಿಸಲು ಪ್ರಾರಂಭಿಸಿದನು. ಸಕಲ ಜನರ ಪಾಪಗಳನ್ನು

ದ್ವಿಜೈರ್ಜುಷ್ಟಾಂ ಹಿ ಸತತಂ ಸಾನಂದಂ ವನವಾಸಿಭಿಃ ।
ತಸ್ಯಾಃ ಪೀತ್ವಾಥ ಚಾಂಭಾಂಸಿ ತೃಷ್ಣಾ ಕಸ್ಯ ಭವೇತ್ಪುನಃ ॥೯೯॥

ಪೀಡ್ಯಮಾನಾನ್ನರಾನ್ ದೃಷ್ಟ್ವಾ ದಾರುಣೈಃ ಪಾಪಕರ್ಮಭಿಃ ।
ತೇಷಾಂ ಪಾಪವಿನಾಶಾಯ ಜಾನಾಮಿ ತ್ವಾಮಿಹಾಗತಾಮ್ ॥೧೦೦॥

ಕಾಮಧುಕ್ ಶ್ರೂಯತೇ ಯತ್ರ ಸಾ ಪರಾ ಸುರಕಾಮಧುಕ್ ।
ಸರ್ವೇಷಾಂ ತ್ವಂ ತು ಲೋಕಾನಾಂ ಕಾಮದಾ ಚ ಮಹಾನದೀ ॥೧೦೧॥

ಯದಾ ಪರಾಸ್ತರಂಗಿಣ್ಯೋ ಜಾಯಂತೇ ಸ್ಪರ್ಶನಾಕ್ಷಮಾಃ ।
ತ್ವದಂಬುಸ್ನಾನಮಾಹಾತ್ಮ್ಯಂ ತದತ್ಯರ್ಥಂ ವಿಶಿಷ್ಯತೇ ॥೧೦೨॥

ಯದಾಷಾಢೇ ತವ ಜಲೈಃ ಪೂತಾಃ ಕೇಚನ ಮಾನವಾಃ ।
ಯಥಾಭಿಲಷಿತಂ ಪ್ರಾಪ್ತಾ ನ ಕಾಮಂ ರವಿನಂದನೇ ॥೧೦೩॥

ಅಮೃತತ್ವಂ ಚ ಸಂಪ್ರಾಪ್ಯ ಯಸ್ಯಾಮಾಷಾಢಸೇವನಾತ್ ।
ಅಮೃತತ್ವಂ ನರಾಃ ಪ್ರಾಪ್ಯ ಕ್ರೀಡಂತಿ ತ್ರಿದಶೈಃ ಸಹ ॥೧೦೪॥

ಕಳೆದು ಪಾವಿತ್ರ್ಯವನ್ನು ಕೊಡುವ, ಜಗತ್ತಿಗೆ ಆಶ್ರಯಳಾದ, ॥೯೮॥ ವನವಾಸಿಗಳಾದ ದ್ವಿಜರಿಂದ ಸದಾ ಭಕ್ತಿಯಿಂದ ಸೇವಿಸಲ್ಪಡುವ, ತಾಪೀನದಿಯನ್ನು ಸ್ತುತಿಸುತ್ತ ರಾಜನು ಹೇಳುತ್ತಾನೆ- ''ಮಹಿಮೋಪೇತಳಾದ ತಾಪಿಯ ಜಲವನ್ನು ಕುಡಿದ ಯಾವನಿಗೆ ಪುನಃ ತೃಷ್ಣಾ ಎಂಬುದು ಉಂಟಾಗುವದು? ॥೯೯॥ ದಾರುಣವಾದ ಪಾಪಕರ್ಮಗಳಿಂದ ಪೀಡಿತರಾದ ಜನರನ್ನು ಕಂಡು ಅವರ ಪಾಪಗಳನ್ನು ನಾಶಮಾಡುವದಕ್ಕಾಗಿಯೇ ನೀನು ಭೂಲೋಕಕ್ಕೆ ಬಂದಿರುವಿಯೆಂದು ನಾನು ತಿಳಿಯುತ್ತೇನೆ. ಶ್ರೇಷ್ಠವಾದ ಕಾಮಧೇನುವೇನಿದೆಯೋ ಅದು ಸುರಲೋಕದ ಜನರಿಗೆ ಮಾತ್ರ ವಾಂಛಿತಗಳನ್ನು ಕೊಡುವದೆಂದು ಇಲ್ಲಿ ಪ್ರಸಿದ್ಧವಾಗಿದೆ. ಆದರೆ ನೀನಾದರೋ ಸಕಲ ಜನರ ಕಾಮನೆಗಳನ್ನು ಪೂರೈಸುವ ಮಹಾನದಿಯಾಗಿರುವಿ. ॥೧೦೦॥೧೦೧॥ ಇತರ ಎಲ್ಲ ನದಿಗಳು ನಿನ್ನ ನೀರನ್ನು ಮುಟ್ಟಲು ಸಮರ್ಥವಾಗುವದಿಲ್ಲ. ನಿನ್ನ ಪ್ರವಾಹದಲ್ಲಿ ಸ್ನಾನ ಮಾಡುವದು ಮೋಕ್ಷಪ್ರಾಪ್ತಿಗೆ ಒಂದು ಸಾಧನವಾಗಿರುವದು. ॥೧೦೨॥ ಹೇ ರವಿನಂದನೆ ತಾಪಿಯೇ, ಆಷಾಢಮಾಸದಲ್ಲಿ ನಿನ್ನ ಜಲದಲ್ಲಿ ಸ್ನಾನಮಾಡುವದರಿಂದ ಪುನೀತರಾದ ಕೆಲವರು ತಮ್ಮ ಎಲ್ಲ ಮನೋರಥಗಳನ್ನು ಪಡೆಯುವರು. ॥೧೦೩॥ ಆಷಾಢಸ್ನಾನದಿಂದ ಜನರು ಅಮೃತತ್ವವನ್ನು ಹೊಂದಿ ದೇವತೆಗಳೊಂದಿಗೆ ಕ್ರೀಡಿಸುವರು. ''ಈ ಪ್ರಕಾರ ರಾಜನು ಸೂರ್ಯಪುತ್ರಿಯಾದ ತಾಪೀದೇವಿಯನ್ನು ಸ್ತುತಿಸಿ

ಇತಿ ಸ್ತುತ್ವಾ ತತೋ ದೇವೀಂ ತಾಪೀಂ ದಿನಕರಾತ್ಮಜಾಮ್ ।
ಆಷಾಢಮಾಸಸವನಂ ರಾಜಾ ಕರ್ತುಂ ಪ್ರಚಕ್ರಮೇ ॥೩೦೫॥

ಜ್ಯೇಷ್ಠಸ್ಯೈವ ದಶಮ್ಯಾದೌ ಕೃತ್ವಾಽಥ ವಿಧಿಪೂರ್ವಕಮ್ ।
ಸಂಪೂಜ್ಯ ತಪತೀಂ ದೇವೀಂ ಭಕ್ತ್ಯಾ ಪರಮಯಾನ್ವಿತಃ ॥೩೦೬॥

ಪ್ರಾತರ್ಮಧ್ಯಂ ತಥಾ ಸಾಯಂ ವಿದಧೇ ಸ್ನಾನಮಾದೃತಃ ।
ಸಂಚಿಂತಯನ್ನವಿರತಂ ಸೂರ್ಯಮಂಡಲಗಂ ಹರಿಮ್ ॥೩೦೭॥

ಕಮಲಾಸನಸಂಸ್ಥಂ ಚ ಚಾರುಹಾಸಂ ಹಿರಣ್ಮಯಮ್ ।
ಕೇಯೂರಕುಂಡಲೋಪೇತಂ ಶಂಖಚಕ್ರಧರಂ ವಿಭುಮ್ ॥೩೦೮॥

ಪೂಜಯಿತ್ವಾ ತತೋ ಭಕ್ತ್ಯಾ ವಿಷ್ಣುಂ ತದ್ಗತಮಾನಸಃ ।
ವಿಷ್ಣುಪಾದೋದಕಂ ರಾತ್ರೌ ತುಲಸೀದಲಸಂಯುತಮ್ ॥೩೦೯॥

ಚಕಾರ ಭೋಜನಸ್ಥಾನೇ ಸಂಧ್ಯೋಪಾಸನಪೂರ್ವಕಮ್ ।
ಏವಂ ತೇನ ಕೃತಂ ರಾಜ್ಞಾ ಆಷಾಢಸವನಂ ಪರಮ್ ॥೩೧೦॥

ಆಷಾಢ್ಯಾಂ ಪೌರ್ಣಮಾಯಾಂ ಚ ವಿಧಿವತ್ಸಂಯತಾತ್ಮನಃ ।
ತತಃ ಪುರಾಣಪುರುಷಃ ಪ್ರತ್ಯಕ್ಷಃ ಪ್ರಾಹ ತಂ ನೃಪಮ್ ॥೩೧೧॥

ಆಷಾಢಸ್ನಾನವನ್ನು ಮಾಡಲು ಪ್ರಾರಂಭಿಸಿದನು. ॥೩೦೪॥೩೦೫॥ ಜ್ಯೇಷ್ಠಮಾಸದ ಶುಕ್ಲಪಕ್ಷ ದಶಮಿಯ ದಿನವೇ ಮಾಸ ಸ್ನಾನವ್ರತವನ್ನು ಸಂಕಲ್ಪಪೂರ್ವಕ ಗ್ರಹಣ ಮಾಡಿ ಮೊದಲು ಪರಮಭಕ್ತಿಯಿಂದ ತಾಪೀ ದೇವಿಯನ್ನು ಪೂಜಿಸಿದನು. ॥೩೦೬॥ ಅನಂತರ ಪ್ರತಿದಿನ ಬೆಳಿಗ್ಗೆ ಮಧ್ಯಾಹ್ನ ಮತ್ತು ಸಂಜೆಗೆ ನಿಯಮದಿಂದ ಶ್ರದ್ಧಾಪೂರ್ವಕ ಸ್ನಾನವನ್ನು ಮಾಡತೊಡಗಿದನು. ಆ ಕಾಲದಲ್ಲಿ ॥೩೦॥ ಕಮಲಾಸನಸ್ಥನಾದ, ಮಂದಸ್ಮಿತನಾದ, ಹಿರಣ್ಮಯನಾದ, ಕೇಯೂರಕುಂಡಲಾದಿ ಆಭರಣಗಳನ್ನು ಧರಿಸಿದ, ಶಂಖ ಚಕ್ರಗಳನ್ನು ಧರಿಸಿದ, ವಿಭುವಾದ ಸೂರ್ಯಮಂಡಲಸ್ಥ ಶ್ರೀಹರಿಯನ್ನು ಅವಿರತವಾಗಿ ಧ್ಯಾನಿಸುತ್ತ ॥೩೦೮॥ ವಿಷ್ಣುವಿನಲ್ಲೇ ಏಕಾಗ್ರಮನಸ್ಸುಳ್ಳವನಾಗಿ ಭಕ್ತಿಯಿಂದ ಅವನನ್ನು ಪೂಜಿಸಿದನು. ಸಾಯಂಸಂಧ್ಯಾವಂದನೆಯ ನಂತರ ರಾತ್ರಿಯಲ್ಲಿ ಭೋಜನಸ್ಥಾನದಲ್ಲಿ ತುಲಸೀದಲ-ಯುತವಾದ ವಿಷ್ಣುಪಾದೋದಕವನ್ನು ಮಾತ್ರ ಸ್ವೀಕರಿಸತೊಡಗಿದನು. ಈ ಕ್ರಮದಲ್ಲಿ ರಾಜನು ಶ್ರೇಷ್ಠವಾದ ಆಷಾಢಸ್ನಾನವ್ರತವನ್ನು ಆಚರಿಸಿದನು. ॥೩೦೯॥೩೧೦॥ ಈತನ ಭಕ್ತಿಗೆ ಮೆಚ್ಚಿ ಆಷಾಢಮಾಸದ ಪೌರ್ಣಮೆಯ ದಿನ ಪುರಾಣಪುರುಷನಾದ ಶ್ರೀಹರಿಯು ಪ್ರತ್ಯಕ್ಷನಾಗಿ ಆ ರಾಜನಿಗೆ ಹೇಳಿದನು. ॥೩೧೧॥ "ಹೇ ಶತಬಲಿ ರಾಜಾ,

ಕೃತಂ ಶತಬಲೇ ಸ್ನಾನಂ ಮತ್ಪೂಜನಸಮನ್ವಿತಮ್ ।
ತುಷ್ಟೋಽಸ್ಮಿ ಕಿಂ ಫಲಾಪೇಕ್ಷಾ ಸ್ನಾನಾದಸ್ಮಾತ್ತದುಚ್ಯತಾಮ್ ॥೩೧೨॥

ಶತಬಲಿರುವಾಚ-
ತುಷ್ಟೋಽಸಿ ಯದಿ ದೇವೇಶ ಪುರಾಣಪುರುಷೋತ್ತಮ ।
ಮಮ ಸ್ವಪದಸಂಪ್ರಾಪ್ತಿರ್ಭವತು ತ್ವತ್ಪ್ರಸಾದತಃ ॥೩೧೩॥

ಪಶ್ಚಾತ್ತು ತ್ವತ್ಪದಾವಾಪ್ತಿರಿದಂ ಮೇ ದೇವ ದೀಯತಾಮ್ ।
ಇತಿ ಸಂಪ್ರಾರ್ಥಿತಸ್ತೇನ ಪ್ರೋವಾಚ ಪರಮೇಶ್ವರಃ ॥೩೧೪॥

ತವ ಸ್ವಪದಸಂಪ್ರಾಪ್ತಿರ್ಭವೇದ್ವೈ ಮತ್ಪ್ರಸಾದತಃ ।
ಅಂತೇ ಚ ಮತ್ಪದಾವಾಪ್ತಿರ್ಭವಿತಾ ಚ ನ ಸಂಶಯಃ ॥೩೧೫॥

ಕೃತಂ ತ್ವಯಾ ಯತ್ಸ್ನವನಂ ಆಷಾಢೇ ತಪತೀಜಲೇ ।
ತೇನ ಪೂರ್ವಕೃತಾತ್ಪಾಪಾದ್ವಿಮುಕ್ತೋಽಸಿ ತ್ರಿಭಿರ್ದಿನೈಃ ॥೩೧೬॥

ಶೇಷೈರಹೋಭಿರ್ನೃಪತೇ ಯದ್ವಾಂಛಸಿ ಕರೇ ಸ್ಥಿತಮ್ ।
ತಾಪ್ಯಾಮಾಷಾಢಕರ್ತೄಣಾಂ ದುರ್ಲಭಂ ನಾಸ್ತಿ ಕಿಂಚನ ॥೩೧೭॥

ನನ್ನ ಪೂಜೆಯನ್ನು ಮಾಡುತ್ತ ನೀನು ಆಷಾಢ ಸ್ನಾನವ್ರತವನ್ನು ನಿರ್ವಿಘ್ನವಾಗಿ ವಿಧಿಪೂರ್ವಕ ಆಚರಿಸಿರುವಿ. ಇದರಿಂದ ನಾನು ಪ್ರಸನ್ನನಾಗಿರುವೆ. ಈ ಸ್ನಾನವ್ರತದಿಂದ ನಿನಗಿರುವ ಫಲಾಪೇಕ್ಷೆಯನ್ನು ತಿಳಿಸುವವನಾಗು.'' ॥೩೧೨॥ ಶ್ರೀಹರಿಯ ಸಂದರ್ಶನದಿಂದ ಹರ್ಷಿತನಾದ ಶತಬಲಿ ರಾಜನು ಆಗ- ''ಹೇ ಪುರಾಣಪುರುಷೋತ್ತಮಾ, ದೇವೇಶಾ, ನೀನು ನನ್ನಲ್ಲಿ ಪ್ರಸನ್ನನಾಗಿದ್ದರೆ ನಿನ್ನ ಅನುಗ್ರಹದಿಂದ ನನಗೆ ಮೊದಲಿನ ಪದಪ್ರಾಪ್ತಿಯಾಗಲಿ ॥೩೧೩॥ ಮರಣಾನಂತರ ನಿನ್ನ ಲೋಕದ ಪ್ರಾಪ್ತಿಯಾಗಲಿ. ಇದೇ ನನ್ನ ಬಯಕೆಯಾಗಿದೆ'' ಎಂದು ಪ್ರಾರ್ಥಿಸಲು ಪರಮಪುರುಷ ಶ್ರೀಹರಿಯು ಹೇಳಿದನು. ॥೩೧೪॥ ''ಅಯ್ಯಾ, ನನ್ನ ಅನುಗ್ರಹದಿಂದ ನಿನಗೆ ನಿನ್ನ ರಾಜ್ಯಪದವು ಪುನಃ ದೊರೆಯುವದಲ್ಲದೇ ಕೊನೆಗೆ ನನ್ನ ಲೋಕದ ಪ್ರಾಪ್ತಿಯೂ ಆಗುವದು ಇದು ನಿಶ್ಚಯವು. ॥೩೧೫॥ ಆಷಾಢಮಾಸದಲ್ಲಿ ತಾಪೀನದಿಯಲ್ಲಿ ಸ್ನಾನವನ್ನು ಮಾಡಿರುವದರಿಂದ ಕೊನೆಯ ಮೂರು ದಿನಗಳ ಸ್ನಾನ ಪುಣ್ಯದಿಂದ ನೀನು ಹಿಂದಿನ ಸಕಲ ಪಾಪಗಳಿಂದ ಮುಕ್ತನಾಗಿರುವಿ. ॥೩೧೬॥ ಹೇ ರಾಜಾ, ಇನ್ನು ಉಳಿದ ೨೭ ದಿನಗಳಲ್ಲಿ ಮಾಡಿದ ಸ್ನಾನಪುಣ್ಯದಿಂದ ನೀನು ಅಪೇಕ್ಷಿಸಿದ್ದೆಲವೂ ಸುಲಭವಾಗಿ ಈಡೇರುವದು. ತಾಪೀನದಿಯಲ್ಲಿ ಆಷಾಢ ಸ್ನಾನ

ಇತ್ಯುಕ್ತ್ವಾ ಭಗವಾನ್ ದೇವಃ ಕರ್ಮಣಾಂ ಫಲದಾಯಕಃ ।
ಅಂತರ್ದಧೇ ಸ ವಿಶ್ವಾತ್ಮಾ ತ್ರೈಲೋಕ್ಯವ್ಯಾಪಕೋ ಹರಿಃ ॥೩೧೮॥

ರಾಜಾಪಿ ಪರಮಾನಂದಸ್ವರೂಪಂ ತಮವೇಕ್ಷ್ಯ ಚ ।
ರೋಮಾಂಚಿತಶ್ಚ ಹರ್ಷಾಶ್ರುಪೂರ್ಣದೃಷ್ಟಿರಜಾಯತ ॥೩೧೯॥

ಅಂತರ್ಹಿತೇ ಭಗವತಿ ತಸ್ಮಿನ್ ದೇವೇ ಜನಾರ್ದನೇ ।
ಸೋಽಪಿ ಸ್ವನಿಯಮಂ ಪೂರ್ಣಂ ವಿದಧೇ ಸ್ನಪನಸ್ಯ ಚ ॥೩೨೦॥

ತತಶ್ಚ ಸ್ವಪುರಂ ಗತ್ವಾ ಸ್ವಂ ರಾಜ್ಯಂ ಪ್ರಾಪ್ಯ ಪೂರ್ವವತ್ ।
ತಥೈವ ದುಸ್ತರತರೋ ರಿಪೂಣಾಂ ಸಮಪದ್ಯತ ॥೩೨೧॥

ತಪತ್ಯಾಶ್ಚ ಪ್ರಸಾದೇನ ವಿಷ್ಣೋಃ ಸಾಲೋಕತಾಂ ಯಯೌ ।
ವಿಷ್ಣೋಶ್ಚಾರಾಧನೇನಾಶು ಪ್ರಾಪ್ಯತೇ ಕಿಂ ನ ದುರ್ಲಭಮ್ ॥೩೨೨॥

ಜ್ಞಾತಾಷಾಢಪ್ರಭಾವಸ್ತು ಸಸ್ನೌ ಸ ಪ್ರತಿವತ್ಸರಮ್ ।
ಆಗತ್ಯಾಗಮನಿಯಮಾದ್ವಿಧಿವತ್ ಶ್ರದ್ಧಯಾನ್ವಿತಃ ॥೩೨೩॥

ಮಾಡುವವರಿಗೆ ಯಾವುದೂ ದುರ್ಲಭವಾಗುವದಿಲ್ಲ.'' ॥೩೧೭॥ ಈ ಪ್ರಕಾರ ವರವನ್ನು ಕೊಟ್ಟು ಕರ್ಮಗಳ ಫಲವನ್ನು ಕೊಡುವ, ತ್ರಿಲೋಕವ್ಯಾಪಿಯಾದ, ವಿಶ್ವಾತ್ಮನಾದ ಭಗವಾನ್ ಶ್ರೀಹರಿಯು ಅಲ್ಲಿಯೇ ಅಂತರ್ಧಾನ ಹೊಂದಿದನು. ॥೩೧೮॥ ರಾಜನಾದರೋ ಪರಮಾನಂದ ಸ್ವರೂಪಿಯಾದ ಆ ಶ್ರೀಹರಿಯ ದರ್ಶನ ಮಾಡಿಕೊಂಡು ರೋಮಾಂಚಿತನಾದನು. ಹರ್ಷಾಶ್ಚರ್ಯಗಳಿಂದ ಕಣ್ಣುಗಳಿಂದ ಆನಂದಬಾಷ್ಪಗಳು ಸುರಿಯತೊಡಗಿದವು. ॥೩೧೯॥ ಶ್ರೀಹರಿ ಜನಾರ್ದನನು ಅಂತರ್ಧಾನ ಹೊಂದಿದ ಮೇಲೆ ಆ ರಾಜನು ತನ್ನ ಸ್ನಾನದ ನಿಯಮವನ್ನು ಪೂರ್ಣಗೊಳಿಸಿದನು. ॥೩೨೦॥ ಅನಂತರ ತನ್ನ ರಾಜ್ಯಕ್ಕೆ ಹೋಗಿ ಮೊದಲಿನಂತೆ ತನ್ನ ರಾಜ್ಯಶ್ರೀಯನ್ನು ಪಡೆದು ಪುನಃ ಶತ್ರುಗಳಿಗೆ ಭಯಂಕರನಾಗಿ ವಿರಾಜಿಸಿದನು. ॥೩೨೧॥ ತಪತಿಯ (ತಾಪೀ) ಅನುಗ್ರಹದಿಂದ ಮರಣಾನಂತರ ವಿಷ್ಣುಲೋಕವನ್ನು ಹೊಂದಿದನು. ವಿಷ್ಣುವಿನ ಆರಾಧನೆ ಮಾಡುವದರಿಂದ ದುರ್ಲಭವಾಗಿದ್ದರೂ ಯಾವುದು ತಾನೇ ದೊರೆಯದಿದ್ದೀತು! (ದುರ್ಲಭವಾದ ವಿಷ್ಣುಲೋಕವು ದೊರೆಯದಿರುವುದೇ? ನಿಶ್ಚಿತವಾಗಿ ದೊರೆಯುವದೆಂದು ಭಾವ.) ॥೩೨೨॥ ಸ್ವರಾಜ್ಯವನ್ನು ಪುನಃ ದೊರಕಿಸಿದ ರಾಜನು ಆಷಾಢ ಸ್ನಾನದ ಮಹಿಮೆಯನ್ನು ಮನಗಂಡು ಪ್ರತಿವರ್ಷ ತಪ್ಪದೇ ಆಷಾಢದಲ್ಲಿ ಶ್ರದ್ಧೆಯಿಂದ ತಾಪೀ ಸ್ನಾನವನ್ನು ವಿಧಿಪೂರ್ವಕ ಮಾಡತೊಡಗಿದನು. ॥೩೨೩॥ ತಾಪಿಯಲ್ಲಿ ಶ್ರೇಷ್ಠವಾದ, ಮಹಾಮಹಿಮೋಪೇತವಾದ

ಸ್ನಾನೇ ಸಮಾಪ್ತೇ ಪರಮೇ ತಪತ್ಯಾಮಾಷಾಢಮಾಸಸ್ಯ ಮಹಾಪ್ರಭಾವೇ ।
ರಾಜಾ ಭೃಶಂ ಕಾಂತಿಸಮನ್ವಿತೋಽಭೂತ್ ಸಂಪೂರ್ಣಬಿಂಬಃ
ಶರದೀವ ಸೋಮಃ ॥೩೨೪॥

ಆಷಾಢಮಾಸಸ್ನಪನೇನ ಸರ್ವೈಃ ಪಾಪೈರ್ವಿಮುಕ್ತಃ ಸ ಭೃಶಂ ಬಭಾಷೇ ।
ಐಂದ್ರೋ ಗಜಃ ಪಲ್ವಲಕರ್ದಮಾಕ್ತೋ ರಾಜ್ಞಃ ಸಮೀಪೇಽಭಿಮುಖಂ
ಸ ತಸ್ಥೌ ॥೩೨೫॥

ತತೋ ಮಹೇಂದ್ರೋ ನೃಪತಿಂ ಬಭಾಷೇ ತ್ವಮೇಹಿ ರಾಜ್ಯಂ ತ್ರಿದಿನಂ
ವ್ರಜಾಮಃ ।
ತಾಪ್ಯಾ ಜಲೈರಪ್ಯಘಪುಂಜದಾಹತೀವ್ರೈಃ ಪವಿತ್ರೀಕೃತವಿಗ್ರಹೋಽಸಿ ॥೩೨೬॥

ದಿವಂ ಸಮಾಗತ್ಯ ಚ ಭುಂಕ್ಷ್ವ ಭೋಗಾಂಸ್ತಪೋತ್ತಮೈಃ ಕರ್ಮಭಿರರ್ಜಿತಾಂಶ್ಚ ।
ಧನ್ಯೋಽಸಿ ರಾಜನ್ನಿತಿ ಪಶ್ಯ ಹೇತೋಃ ಸುರಾಃ ಸಮಸ್ತಾ
ವಸುಧಾಂ ಸಮೇತಾಃ ॥೩೨೭॥

ರಾಜಾ ಮಹೇಂದ್ರಂ ತದನು ಪ್ರಣಮ್ಯ ಕೃತಾಂಜಲಿಃ ಪ್ರಶ್ರಯವಾನುವಾಚ ।
ಅಯಂ ಪ್ರಸಾದೋ ಭಗವಂಸ್ತಪತ್ಯಾಸ್ತವಾನುಕಂಪ್ಯೋ ಯದಹಂ
ಬಭೂವ ॥೩೨೮॥

ಆಷಾಢ ಸ್ನಾನವನ್ನು ಮುಗಿಸಿದ ನಂತರ ರಾಜನು ಬಹಳ ಕಾಂತಿಯುತನಾಗಿ ಶರತ್ಕಾಲದ ಹುಣ್ಣಿಮೆಯ ಚಂದ್ರನಂತೆ ಕಂಗೊಳಿಸಿದನು. ॥೩೨೪॥ ಆಷಾಢಸ್ನಾನದಿಂದ ಶತಬಲಿರಾಜನು ಸಕಲ ಪಾಪಗಳಿಂದ ಮುಕ್ತನಾದನು. ಸರೋವರದ ಕೆಸರಿನಿಂದ ಲಿಪ್ತವಾದ ಇಂದ್ರನ ಐರಾವತವು ರಾಜನೆದುರು ಬಂದು ನಿಂತಿತು. ॥೩೨೫॥ ಆಗ ಅಲ್ಲಿಗೆ ಬಂದಿದ್ದ ಇಂದ್ರನು ರಾಜನನ್ನು ಕುರಿತು- 'ಹೇ ರಾಜಾ, ಸ್ವರ್ಗಲೋಕಕ್ಕೆ ಹೋಗುವಾ, ನಡೆ. ತಾಪೀ ಜಲಸ್ನಾನದಿಂದ ಪಾಪಸಮೂಹಗಳು ಸುಟ್ಟು ಭಸ್ಮವಾಗಿರುವದರಿಂದ ನೀನು ಅತ್ಯಂತ ಪವಿತ್ರನಾಗಿರುವಿ ॥೩೨೬॥ ಇನ್ನು ಸ್ವರ್ಗಲೋಕಕ್ಕೆ ಬಂದು ಅಲ್ಲಿ ನಿನ್ನ ಸುಕರ್ಮಗಳ ಫಲಸ್ವರೂಪಗಳಾದ ವಿವಿಧ ಭೋಗಗಳನ್ನು ಭೋಗಿಸು. ಹೇ ರಾಜಾ, ನೀನು ಧನ್ಯನಾಗಿರುವಿ. ಇಗೋ ನೋಡು ನಿನಗೋಸ್ಕರ ದೇವತೆಗಳೆಲ್ಲರೂ ವಸುಧಾತಲಕ್ಕೆ ಧಾವಿಸಿ ಬಂದಿದ್ದಾರೆ' ॥೩೨೭॥ ಸುರಲೋಕಾಧಿಪತಿಯನ್ನು ನೋಡಿ ರಾಜನು ಕೂಡಲೇ ಅವನಿಗೆ ಕೈಜೋಡಿಸಿ ನಮಸ್ಕರಿಸುತ್ತ ಹೇಳಿದನು 'ಹೇ ಭಗವನ್ ! ಇದೆಲ್ಲ ತಪತೀನದಿಯ ಪ್ರಸಾದವು. ಅವಳ ಅನುಗ್ರಹದಿಂದಲೇ ನಾನು ನಿನ್ನ ಕರುಣೆಗೆ ಪಾತ್ರನಾಗಿದ್ದೇನೆ. ॥೩೨೮॥ ತಾಪೀನದಿಯ

ಹೃತ್ವಾತಿಪೀತಾ ಪ್ರಸಭಾಂಬುರಾಶೀರ್ವಾಂಗ್ಮಾತ್ರ ಸಂಸ್ತಂಭಿತವಧ್ಯವೃತ್ತಿಃ ।
ಅನುಗ್ರಹಸ್ತೇ ಮಮ ಕುಂಭಯೋನಿರ್ಮಾ ಭ್ರಂಶಯಾಮಾಸ
ಪದಾತ್ತ್ವಯಾ ಸ್ಯಾತ್ ॥೩೯॥

ಸರ್ವೇ ಸುರಾ ಯೇನ ಮಮ ಪ್ರಸನ್ನಾ ಮಾಂ ನೇತುಮುರ್ವೀತಲಮಾಗತಾಶ್ಚ ।
ಧನ್ಯೀಕೃತೋಽಹಂ ಸಹ ಪೂರ್ವಜೈಸ್ಯೈಃ ಕುತೋಽನ್ಯಥಾ
ಸ್ಯಾತ್ರಿದಿವಪ್ರತಿಷ್ಠಾ ॥೩೦॥

ಇತಿ ವಚನಮುದಾರಂ ಶಕ್ರಮುಕ್ತ್ವಾ ನೃಪೋಽಸೌ ತರಣಿಕಿರಣವರ್ಣ
ಕ್ಷಿಪ್ರಮಾರುಹ್ಯ ದತ್ತಮ್ ।
ಸಕಲಸುರವಿನೇತ್ರಾನೀತಿಭಾಜಾ ವಿಮಾನಂ ಸಹ ವಿಬುಧಸಮಾಜೈಃ
ಸ್ವರ್ಗಲೋಕಂ ಜಗಾಮ ॥೩೧॥

ಕಥಿತಮಿತಿ ಮಯಾ ತೇ ವತ್ಸ ಮಾಹಾತ್ಮ್ಯಮೇತತ್ ದಿನಕರತನಯಾಯಾಃ
ಸ್ನಾನತೋ ಜಾಯತೇ ಯತ್ ।
ವ್ರಜತಿ ಹಿ ಶುಚಿ ಮಾಸೇ ನೀರದಾಯಾನಹೇತೌ ವಿಕಚಕುರರಜನೀ
ಯೇ ಕೇ ಕಾಂತಿರಮ್ಯಾ ॥೩೨॥

ಇತಿ ಶ್ರೀಸ್ಕಂದಪುರಾಣೇ ರುದ್ರಕಾರ್ತಿಕಸಂವಾದೇ ಆಷಾಢ ಮಾಹಾತ್ಮ್ಯೇ ದ್ವಿತೀಯೋಽಧ್ಯಾಯಃ ॥೨॥

ಪವಿತ್ರತಮವಾದ ಜಲವನ್ನು ಕೈಯಲ್ಲಿ ಹಿಡಿದು ಕುಡಿದಿದ್ದೇನೆ. ಅಷ್ಟು ಮಾತ್ರದಿಂದಲೇ ದುರಿತ ರಾಶಿಗಳು ಕಳೆದು ಹೋದವು. ನಿನ್ನ ಅನುಗ್ರಹವುಂಟಾಗಿದೆ. ॥೨೯॥ ಎಲ್ಲ ದೇವತೆಗಳು ನನ್ನಲ್ಲಿ ಅನುಗ್ರಹಮಾಡಿ ನನ್ನನ್ನು ಕರೆದೊಯ್ಯಲು ವಸುಧಾತಲಕ್ಕೆ ಬಂದಿರುವದರಿಂದ ಅವರಿಂದ ನಾನು ಅನುಗೃಹಿತನಾಗಿದ್ದೇನೆ, ಧನ್ಯನಾಗಿದ್ದೇನೆ, ಕೃತಾರ್ಥನಾಗಿದ್ದೇನೆ. ದೇವತೆಗಳ ಅನುಗ್ರಹವಿಲ್ಲದಿದ್ದರೆ ಸ್ವರ್ಗಲೋಕ ಪ್ರಾಪ್ತಿಯಾಗುವದೆಂತು? ॥೩೦॥ ಈ ಪ್ರಕಾರವಾಗಿ ದೇವೇಂದ್ರನನ್ನು ಕುರಿತು ಗೌರವಪೂರ್ವಕ ಕೆಲ ಮಾತುಗಳನ್ನು ಆಡಿ ನಂತರ ರಾಜನು ಕೂಡಲೇ ದಿವ್ಯವಾದ ವಿಮಾನವನ್ನೇರಿ ದೇವತೆಗಳಿಂದೊಡಗೂಡಿ ಸ್ವರ್ಗಲೋಕಕ್ಕೆ ಹೊರಟನು. ॥೩೧॥ ಹೇ ವತ್ಸಾ! ಈ ರೀತಿಯಾಗಿ ತಾಪಿಯ ಸ್ನಾನದಿಂದುಂಟಾಗುವ ಮಹಾತ್ಮೆಯನ್ನು ನಿನಗೆ ತಿಳಿಸಿದ್ದೇನೆ. ॥೩೨॥

ಇಲ್ಲಿಗೆ ಶ್ರೀಸ್ಕಂದ ಪುರಾಣದಲ್ಲಿಯ ರುದ್ರ-ಕಾರ್ತಿಕ ಸಂವಾದದಲ್ಲಿ ''ಆಷಾಢ ಮಹಾತ್ಮೆ''ಯಲ್ಲಿಯ ೨ನೆಯ ಅಧ್ಯಾಯವು ಸಮಾಪ್ತವಾಯಿತು.

॥ ಶ್ರೀಕೃಷ್ಣಾರ್ಪಣಮಸ್ತು ॥

೩ನೆಯ ಅಧ್ಯಾಯ
ತಾಪೀಸ್ನಾನ ಮಹಿಮೆ

❋

ಈಶ್ವರ ಉವಾಚ-

ದ್ವಾವಭೂತಾಂ ಪುರಾ ವಿಪ್ರೌ ಶುದ್ಧವಂಶಸಮುದ್ಭವೌ ।
ಪಶುಕ್ರೀತಖರಕ್ರೀತನಾಮಭ್ಯಾಂ ವಿದಿತೌ ಭುವಿ ॥೧॥

ಬಾಲಭಾವಾತ್ತಯೋಃ ಪ್ರೀತಿರವರ್ಧತ ದಿನೇ ದಿನೇ ।
ಸಮಾನಶೀಲವ್ಯಸನೌ ಸ್ವಭಾವೋಽಪಿ ತಯೋಃ ಸಮಃ ॥೨॥

ತಯೋಃ ಪರಸ್ಪರಂ ಪ್ರೀತ್ಯಾ ದದತೋಃ ಪ್ರತಿಗೃಹ್ಣತೋಃ ।
ಭುಂಜಾನಯೋರ್ಭೋಜಯತೋಃ ಸಧ್ರೀಚೋಃ ಸತತಂ ತಯೋಃ ॥೩॥

ಗುಹ್ಯಂ ಕಥಯತೋಶ್ಚಾಪಿ ಪೃಚ್ಛತೋಶ್ಚ ಪರಸ್ಪರಮ್ ।
ವರ್ಧಮಾನಾಧಿಕಂ ಪ್ರೀತಿರ್ದಿವಸೇ ದಿವಸೇಽಭವತ್ ॥೪॥

ಪತಿತೈಃ ಸಹ ಸಂಸರ್ಗೈಃ ಸ್ತ್ರೀಷು ಲಂಪಟಯೋಸ್ತಯೋಃ ।
ನಾಸ್ತಿಕಾನಾಂ ಚ ಸಂಸರ್ಗಾದಭವತ್ಪುಣ್ಯನಾಶನಮ್ ॥೫॥

ತತ್ಸಂಗವಶಾತ್ತೌ ತು ನಾಸ್ತಿಕಂ ಧರ್ಮಮಾಶ್ರಿತೌ ।
ಲೋಕದ್ವಯಭ್ರಂಶಕರಂ ಮಹಾಮೋಹಸಮುದ್ಭವಮ್ ॥೬॥

ಈಶ್ವರನು ಸ್ಕಂದನನ್ನು ಕುರಿತು ಹೇಳುತ್ತಾನೆ- ಹಿಂದಕ್ಕೆ ಸತ್ಕುಲೋತ್ಪನ್ನರಾದ ಇಬ್ಬರು ಬ್ರಾಹ್ಮಣರಿದ್ದರು ಪಶುಕ್ರೀತ ಮತ್ತು ಖರಕ್ರೀತ ಎಂಬ ಹೆಸರಿನಿಂದ ಪ್ರಸಿದ್ಧರಾದ ಅವರಿಬ್ಬರೂ ॥೧॥ ಸಣ್ಣವಯಸ್ಸಿನಲ್ಲಿ ಪರಸ್ಪರ ಬಹಳ ಪ್ರೀತಿಸುತ್ತಿದ್ದರು. ಆ ಪ್ರೀತಿಯು ದಿನದಿಂದ ದಿನಕ್ಕೆ ಹೆಚ್ಚುತ್ತ ನಡೆಯಿತು. ಇಬ್ಬರ ಶೀಲ, ವ್ಯಸನಗಳು ಹಾಗೂ ಸ್ವಭಾವವೂ ಒಂದೇ ಬಗೆಯಾಗಿದ್ದವು. ॥೨॥ ಪರಸ್ಪರ ಪ್ರೀತಿಯಿಂದ ಕೊಡುವದು- ತೆಗೆದುಕೊಳ್ಳುವದು, ಊಟ ಮಾಡುವದು- ಊಟ ಮಾಡಿಸುವದು, ಗೌಪ್ಯ ವಿಷಯಗಳನ್ನು ಹೇಳುವದು, ಆಪ್ತಾಲೋಚನೆ ಮಾಡುವದು ಮುಂತಾದ ಸಕಲ ವ್ಯವಹಾರಗಳಲ್ಲಿ ಅನ್ಯೋನ್ಯರಾಗಿದ್ದ ಅವರ ನಡುವೆ ದಿನದಿನಕ್ಕೂ ಅಂತಃಕರಣ ಪ್ರೀತಿ ವಿಶ್ವಾಸಗಳು ಹೆಚ್ಚುತ್ತ ನಡೆದವು. ॥೩.೪॥ ಹೀಗಿರುತ್ತಿರುವ ಅವರು ದುಷ್ಟ ಜನರ ಸಹವಾಸದಲ್ಲಿ ಬಂದ ಕಾರಣ ಸ್ತ್ರೀಲಂಪಟರಾದರು. ನಾಸ್ತಿಕ ಜನರ ಸಂಗದಿಂದ ಅವರ ಪುಣ್ಯವು ಹ್ರಾಸವಾಯಿತು. ॥೫॥ ಮತ್ತು ಅವರಿಬ್ಬರೂ ಇಹಲೋಕ ಪರಲೋಕಗಳೆರಡರಲ್ಲಿಯೂ ಅಧೋಗತಿಯನ್ನು ಕಾಣಿಸುವ ಮಹಾಅಜ್ಞಾನದಿಂದ ಉಂಟಾದ ನಾಸ್ತಿಕ ಮತವನ್ನು ಅವಲಂಬಿಸಿದರು. ॥೬॥ ಪರಸ್ತ್ರೀ ಹಾಗೂ ಪರವಿತ್ತಗಳಲ್ಲಿ

ಏವಂವಿಧಾನಿ ವಾಕ್ಯಾನಿ ಶ್ರೂಯಂತೇ ಯತ್ರ ಪಾಪಿನಾಮ್ ।
ಪರಸ್ತ್ರೀಪರವಿತ್ತೇಷು ಪ್ರಸಕ್ತಾನಾಂ ಸುರಾಸು ಚ ॥೭॥

ನಾಸ್ತಿ ಪುಣ್ಯಂ ಚ ಪಾಪಂ ಚ ನಿಗ್ರಹಾಯ ನಿರಾತ್ಮಕಃ ।
ಭೂತಾನಾಂ ಸಮವಾಯೋಽಪಿ ನಾಸ್ತಿ ತೇಷಾಂ ಚ ಕರ್ಮಣಃ ॥೮॥

ನಾಸ್ತಿ ಚಾತಃ ಪರೋ ಲೋಕಸ್ತದರ್ಥಾ ನಿಷ್ಫಲಾಃ ಕ್ರಿಯಾಃ ।
ಯತ್ ಪ್ರತ್ಯಕ್ಷಂ ತದೇವಾಸ್ತಿ ತತೋಽನ್ಯನ್ನಾಸ್ತಿ ಕಿಂಚನ ॥೯॥

ಯತ್ಖಾದ್ಯತೇ ಪೀಯತೇ ಚ ಸುಖಂ ಯದಿ ಹ ಭುಜ್ಯತೇ ।
ತದೇವ ಸತ್ಯಮಪರಂ ಸರ್ವಂ ಮಿಥ್ಯಾವಧಾರ್ಯತಾಮ್ ॥೧೦॥

ಮೃತಃ ಸ್ಮರತಿ ಭುಕ್ತಂ ಚ ಯಚ್ಚ ವೃತ್ತಂ ಸ್ವಬಂಧುಭಿಃ ।
ಯಾತಿ ಸ್ವರ್ಗಂ ಚ ನರಕಮಿತ್ಯೇಷಾ ಧೂರ್ತಕಲ್ಪನಾ ॥೧೧॥

ಆಸಕ್ತರಾದ ಮತ್ತು ಸುರಾಪಾನದಲ್ಲಿ ರತರಾದ ಜನರು ತಮ್ಮೊಳಗೆ ಈ ರೀತಿ ಮಾತನಾಡುವರು ಏನೆಂದರೆ ॥೭॥ ಪುಣ್ಯಪಾಪಗಳೆಂಬುವು ಇರುವದಿಲ್ಲ. ಇವು ಆತ್ಮನ ಬಂಧಕ್ಕೆ ಕಾರಣವಾಗುವದಿಲ್ಲ. ಏಕೆಂದರೆ ಆತ್ಮ ಎಂಬುದೇ ಇರುವದಿಲ್ಲ. ಪಂಚಮಹಾಭೂತಗಳ ಸಮವಾಯದಿಂದ ದೇಹಾದಿ ಪದಾರ್ಥಗಳು ಆಗುವವು ಎಂಬುದು ಸತ್ಯವಲ್ಲ. ಹಾಗೂ ಜೀವಿಗಳಿಗೆ ಪರಸ್ಪರ ಸಂಬಂಧವಿಲ್ಲ, ಮತ್ತು ಅವರಿಗೆ ಕರ್ಮಗಳ ಲೇಪವಾಗುವದಿಲ್ಲ. ॥೮॥ ಪರಲೋಕದ ಕಲ್ಪನೆಯು ನಿಜವಲ್ಲ. ಆದ್ದರಿಂದ ಇಂಥ ಅಸತ್ಯಭೂತವಾದ ಪರಲೋಕದ ಪ್ರಾಪ್ತಿಗಾಗಿ ಮಾಡುವ ಕ್ರಿಯೆಗಳು ನಿಷ್ಫಲವಾಗಿವೆ. ಯಾವುದು ಪ್ರತ್ಯಕ್ಷಸಿದ್ಧವೋ ಅದು ಮಾತ್ರ ಸತ್ಯವಾದುದು, ಪ್ರತ್ಯಕ್ಷ ಬಿಟ್ಟು ಉಳಿದ ಯಾವುದೂ ಇರುವದಿಲ್ಲ. ॥೯॥ ಈ ಲೋಕದಲ್ಲಿ ತಿನ್ನುವದು, ಕುಡಿಯುವದು ಮತ್ತು ಭೋಗಿಸಿದ ಸುಖ ಇವು ಮಾತ್ರ ಸತ್ಯವಾಗಿವೆ. ಇವುಗಳನ್ನು ಬಿಟ್ಟು ಉಳಿದುದೆಲ್ಲವೂ ಅಸತ್ಯವೆಂದು ನಿಶ್ಚಿತವಾಗಿ ತಿಳಿಯಬೇಕು. ॥೧೦॥ 'ಮೃತನಾದ ಪುರುಷನು ಆಪ್ತೇಷ್ಟರೊಂದಿಗೆ ತಾನು ಮಾಡಿದ ಕರ್ಮಗಳನ್ನು ಸ್ಮರಿಸಿಕೊಳ್ಳುತ್ತಾನೆ. ತನ್ನ ಕರ್ಮಾನುಸಾರವಾಗಿ ಸ್ವರ್ಗ ಅಥವಾ ನರಕವನ್ನು ಹೊಂದುತ್ತಾನೆ' ಇತ್ಯಾದಿ ವಚನವು ಮೋಸದ ಮಾತಾಗಿದೆ. ॥೧೧॥ ಆಶ್ರಮಗಳು, ಮತ್ತು ವ್ರತನಿಯಮಾದಿ ಕ್ಲಿಷ್ಟಕರ್ಮಗಳು ಹೊಟ್ಟೆಪಾಡಿಗಾಗಿ ಕಲ್ಪಿತವಾದವುಗಳಾಗಿವೆ. ನರಕಗಳ ಪರಿಕಲ್ಪನೆಯಿಂದ ಆತ್ಮಾ, ಸ್ತ್ರೀ ಮತ್ತು ದ್ರವ್ಯಸಂಗ್ರಹ ಇತ್ಯಾದಿಗಳು ಮನುಷ್ಯನನ್ನು ಭಯಪಡಿಸುತ್ತವೆ. ಅಂದರೆ ತನಗೋಸ್ಕರ ಏನಾದರೂ ಮಾಡಿಕೊಳ್ಳಬೇಕು, ಸ್ತ್ರೀ ಭೋಗ ಮಾಡಬೇಕು, ಹೇಗಾದರೂ ಮಾಡಿ ದ್ರವ್ಯ ಸಂಪಾದನೆ ಮಾಡಬೇಕು ಎಂದು ಮುಂತಾಗಿ

ಆಶ್ರಮಾ ಜೀವಿತಾರ್ಥಾಯ ಕ್ಲೇಶಾಸ್ತು ಪರಿಕಲ್ಪಿತಾಃ ।
ಆತ್ಮಾಸ್ತ್ರೀದ್ರವ್ಯರಕ್ಷಾ ಚ ನರಕೈರ್ಭೀಷಯಂತಿ ಚ ॥೧೨॥

ದೇಹಾದ್ಯದಿ ಪರೋ ಹ್ಯಾತ್ಮಾ ಭಿನ್ನೇ ದೇಹೇ ಕಥಂ ನ ಸಃ ।
ದೃಶ್ಯತೇ ಕ್ವಾಪಿ ಯುಷ್ಮಾಕಂ ತಸ್ಮಾದಾತ್ಮಾ ನ ಚಾಪರಃ ॥೧೩॥

ನಾಸ್ತಿ ಪ್ರಮಾಣಂ ಪ್ರತ್ಯಕ್ಷಾನ್ನಾಪರಂ ನ ಚ ಮೃತ್ಯುತಃ ।
ಅನ್ಯೋ ಭೋಕ್ತಾತ್ರಸ್ತ್ಯವಾಂಶ್ಚ ದೃಷ್ಟೋ ಲೋಕೈಃ ಕದಾಪಿ ಚ ॥೧೪॥

ಸಾಧಾರಣೇ ಮನುಷ್ಯತ್ವೇ ಕೇಯಂ ವರ್ಣವ್ಯವಸ್ಥಿತಿಃ ।
ಕಿಮಭಕ್ಷ್ಯಂ ಚ ಭಕ್ಷ್ಯಂ ಚ ತದ್ಭಕ್ಷ್ಯಂ ಯಚ್ಚ ರೋಚತೇ ॥೧೫॥

ಸರ್ವೋಪಭೋಗ್ಯಂ ಯದ್ವಸ್ತು ರಮಣೀಯಮವಿಶ್ರುತಮ್ ।
ರಮಮಾಣಸ್ಯ ತಸ್ಮಿನ್ವಾ ಅವಶ್ಯಮಿತಿ ಜಾನತಾಮ್ ॥೧೬॥

ಪರೋಪಕಾರಃ ಕರ್ತವ್ಯ ಇತಿ ಚೇತ್ ಶಾಸ್ತ್ರನಿರ್ಣಯಃ ।
ಸ್ತ್ರೀಣಾಮನುಪಕಾರಃ ಕಿಂ ರಕ್ಷಯಾ ಕ್ರಿಯತೇ ಬುಧೈಃ ॥೧೭॥

ಬಯಸಿದಾಗ ನರಕಗಳ ಪರಿಕಲ್ಪನೆಯನ್ನು ನಂಬಿದ ಮನುಷ್ಯನು ಭೀತನಾಗಿ ಹಿಂಜರಿಯುವನು. ॥೧೨॥ ಕಣ್ಣಿಗೆ ಕಾಣುವ ದೇಹವಲ್ಲದೇ ಒಳಗೆ ಕಾಣದ ಆತ್ಮನೊಬ್ಬನು ಇರುವನೆಂದರೆ ದೇಹವನ್ನು ಕತ್ತರಿಸಿದಾಗ ಒಳಗಿರುವ ಆತ್ಮನು ಅದೇಕೆ ನಿಮಗೆ ಕಾಣುವದಿಲ್ಲ? ಆದ್ದರಿಂದ ದೇಹಾತಿರಿಕ್ತನಾದ ಆತ್ಮನೆಂಬುವನು ಇರುವದಿಲ್ಲ. ॥೧೩॥ ಪ್ರತ್ಯಕ್ಷ ಬಿಟ್ಟು ಬೇರೇ ಪ್ರಮಾಣವೆಂಬುದು ಇರುವದಿಲ್ಲ ಮತ್ತು ಮೃತ್ಯುವನ್ನು ಬಿಟ್ಟು ಪರಲೋಕಾದಿಗಳಾವವೂ ಇರುವದಿಲ್ಲ. ನಮ್ಮ ಸುಖ ದುಃಖಗಳನ್ನು ಭೋಗಿಸುವವನು ಜೀವಾತ್ಮನು ಅವನು ಸತ್ಯವಾಗಿರುವನು ಎಂದು ತಿಳಿದರೆ ಇಂಥ ಜೀವಾತ್ಮನು ಲೋಕದಲ್ಲಿ ಎಂದಾದರೂ ಕಂಡಿರುವನೇ? ॥೧೪॥ ಮನುಷ್ಯತ್ವವೆಂಬುದು ಮಾನವ ಸಾಮಾನ್ಯ ಧರ್ಮವಾಗಿರುವಾಗ ಈ ವರ್ಣವ್ಯವಸ್ಥೆ ಎಂದರೇನು? ಇದು ಏತಕ್ಕಾಗಿ? ಭಕ್ಷ್ಯಾಭಕ್ಷ್ಯಗಳ ವ್ಯವಸ್ಥೆ ಏಕೆ? ಯಾವುದು ರುಚಿಸುವದೋ ಅದು ಭಕ್ಷ್ಯವು. (ರುಚಿಸದಿರುವದು ಅಭಕ್ಷ್ಯವು). ॥೧೫॥ ಸರ್ವರಿಗೂ ಉಪಭೋಗ್ಯವಾದ ರಮಣೀಯವಾಗಿರುವ ಒಂದು ವಸ್ತು ಎಂಬುದು ಇರುವದಿಲ್ಲ. ಒಬ್ಬೊಬ್ಬರಿಗೆ ಒಂದೊಂದು ರುಚಿಸುವದು. ಒಂದು ವಸ್ತುವಿನಲ್ಲಿ ಆಸಕ್ತನಾದರೆ ಆ ವಸ್ತು ಅವನಿಗೆ ಇಷ್ಟವೆಂದು ತಿಳಿಯಬೇಕು. ॥೧೬॥ ಪರೋಪಕಾರವನ್ನು ಮಾಡಬೇಕು ಎಂಬುದು ಶಾಸ್ತ್ರ ನಿರ್ಣಯವಾಗಿದ್ದರೆ ತಿಳಿದವರು ಸ್ತ್ರೀಯರಿಗೆ ಅನುಪಕಾರವನ್ನು ಮಾಡುವದೇಕೆ? ॥೧೭॥

ಏವಂವಿಧಾನಿ ವಾಕ್ಯಾನಿ ಶ್ರೂಯಂತೇ ಯತ್ರ ಪಾಪಿನಾಮ್ ।
ಪರಸ್ತ್ರೀಪರವಿತ್ತೇಷು ಪ್ರಸಕ್ತಾನಾಂ ಸುರಾಸು ಚ ॥೭॥

ನಾಸ್ತಿ ಪುಣ್ಯಂ ಚ ಪಾಪಂ ಚ ನಿಗ್ರಹಾಯ ನಿರಾತ್ಮಕಃ ।
ಭೂತಾನಾಂ ಸಮವಾಯೋಽಪಿ ನಾಸ್ತಿ ತೇಷಾಂ ಚ ಕರ್ಮಣಃ ॥೮॥

ನಾಸ್ತಿ ಚಾತಃ ಪರೋ ಲೋಕಸ್ತದರ್ಥಾ ನಿಷ್ಫಲಾಃ ಕ್ರಿಯಾಃ ।
ಯತ್ ಪ್ರತ್ಯಕ್ಷಂ ತದೇವಾಸ್ತಿ ತತೋಽನ್ಯನ್ನಾಸ್ತಿ ಕಿಂಚನ ॥೯॥

ಯತ್ಖಾದ್ಯತೇ ಪೀಯತೇ ಚ ಸುಖಂ ಯದಿ ಹ ಭುಜ್ಯತೇ ।
ತದೇವ ಸತ್ಯಮಪರಂ ಸರ್ವಂ ಮಿಥ್ಯಾವಧಾರ್ಯತಾಮ್ ॥೧೦॥

ಮೃತಃ ಸ್ಮರತಿ ಭುಕ್ತಂ ಚ ಯಚ್ಚ ವೃತ್ತಂ ಸ್ವಬಂಧುಭಿಃ ।
ಯಾತಿ ಸ್ವರ್ಗಂ ಚ ನರಕಮಿತ್ಯೇಷಾ ಧೂರ್ತಕಲ್ಪನಾ ॥೧೧॥

ಆಸಕ್ತರಾದ ಮತ್ತು ಸುರಾಪಾನದಲ್ಲಿ ರತರಾದ ಜನರು ತಮ್ಮೊಳಗೆ ಈ ರೀತಿ ಮಾತನಾಡುವರು ಏನೆಂದರೆ ॥೭॥ ಪುಣ್ಯಪಾಪಗಳೆಂಬುವು ಇರುವದಿಲ್ಲ. ಇವು ಆತ್ಮನ ಬಂಧಕ್ಕೆ ಕಾರಣವಾಗುವದಿಲ್ಲ. ಏಕೆಂದರೆ ಆತ್ಮ ಎಂಬುದೇ ಇರುವದಿಲ್ಲ. ಪಂಚಮಹಾಭೂತಗಳ ಸಮವಾಯದಿಂದ ದೇಹಾದಿ ಪದಾರ್ಥಗಳು ಆಗುವವು ಎಂಬುದು ಸತ್ಯವಲ್ಲ. ಹಾಗೂ ಜೀವಿಗಳಿಗೆ ಪರಸ್ಪರ ಸಂಬಂಧವಿಲ್ಲ, ಮತ್ತು ಅವರಿಗೆ ಕರ್ಮಗಳ ಲೇಪವಾಗುವದಿಲ್ಲ. ॥೮॥ ಪರಲೋಕದ ಕಲ್ಪನೆಯು ನಿಜವಲ್ಲ. ಆದ್ದರಿಂದ ಇಂಥ ಅಸತ್ಯಭೂತವಾದ ಪರಲೋಕದ ಪ್ರಾಪ್ತಿಗಾಗಿ ಮಾಡುವ ಕ್ರಿಯೆಗಳು ನಿಷ್ಫಲವಾಗಿವೆ. ಯಾವುದು ಪ್ರತ್ಯಕ್ಷಸಿದ್ಧವೋ ಅದು ಮಾತ್ರ ಸತ್ಯವಾದುದು, ಪ್ರತ್ಯಕ್ಷ ಬಿಟ್ಟು ಉಳಿದ ಯಾವುದೂ ಇರುವದಿಲ್ಲ. ॥೯॥ ಈ ಲೋಕದಲ್ಲಿ ತಿನ್ನುವದು, ಕುಡಿಯುವದು ಮತ್ತು ಭೋಗಿಸಿದ ಸುಖ ಇವು ಮಾತ್ರ ಸತ್ಯವಾಗಿವೆ. ಇವುಗಳನ್ನು ಬಿಟ್ಟು ಉಳಿದುದೆಲ್ಲವೂ ಅಸತ್ಯವೆಂದು ನಿಶ್ಚಿತವಾಗಿ ತಿಳಿಯಬೇಕು. ॥೧೦॥ 'ಮೃತನಾದ ಪುರುಷನು ಆಪ್ತೇಷ್ಟರೊಂದಿಗೆ ತಾನು ಮಾಡಿದ ಕರ್ಮಗಳನ್ನು ಸ್ಮರಿಸಿಕೊಳ್ಳುತ್ತಾನೆ. ತನ್ನ ಕರ್ಮಾನುಸಾರವಾಗಿ ಸ್ವರ್ಗ ಅಥವಾ ನರಕವನ್ನು ಹೊಂದುತ್ತಾನೆ' ಇತ್ಯಾದಿ ವಚನವು ಮೋಸದ ಮಾತಾಗಿದೆ. ॥೧೧॥ ಆಶ್ರಮಗಳು, ಮತ್ತು ವ್ರತನಿಯಮಾದಿ ಕ್ಲಿಷ್ಟಕರ್ಮಗಳು ಹೊಟ್ಟೆಪಾಡಿಗಾಗಿ ಕಲ್ಪಿತವಾದವುಗಳಾಗಿವೆ. ನರಕಗಳ ಪರಿಕಲ್ಪನೆಯಿಂದ ಆತ್ಮಾ, ಸ್ತ್ರೀ ಮತ್ತು ದ್ರವ್ಯಸಂಗ್ರಹ ಇತ್ಯಾದಿಗಳು ಮನುಷ್ಯನನ್ನು ಭಯಪಡಿಸುತ್ತವೆ. ಅಂದರೆ ತನಗೋಸ್ಕರ ಏನಾದರೂ ಮಾಡಿಕೊಳ್ಳಬೇಕು, ಸ್ತ್ರೀ ಭೋಗ ಮಾಡಬೇಕು, ಹೇಗಾದರೂ ಮಾಡಿ ದ್ರವ್ಯ ಸಂಪಾದನೆ ಮಾಡಬೇಕು ಎಂದು ಮುಂತಾಗಿ

ಆಶ್ರಮಾ ಜೀವಿತಾರ್ಥಾಯ ಕ್ಲೇಶಾಸ್ತು ಪರಿಕಲ್ಪಿತಾಃ ।
ಆತ್ಮಾಸ್ತ್ರೀದ್ರವ್ಯರಕ್ಷಾ ಚ ನರಕೈರ್ಭೀಷಯಂತಿ ಚ ॥೧೨॥

ದೇಹಾದ್ಯದಿ ಪರೋ ಹ್ಯಾತ್ಮಾ ಭಿನ್ನೇ ದೇಹೇ ಕಥಂ ನ ಸಃ ।
ದೃಶ್ಯತೇ ಕ್ವಾಪಿ ಯುಷ್ಮಾಕಂ ತಸ್ಮಾದಾತ್ಮಾ ನ ಚಾಪರಃ ॥೧೩॥

ನಾಸ್ತಿ ಪ್ರಮಾಣಂ ಪ್ರತ್ಯಕ್ಷಾನ್ನಾಪರಂ ನ ಚ ಮೃತ್ಯುತಃ ।
ಅನ್ಯೋ ಭೋಕ್ತಾತ್ತಸ್ತ್ಯವಾಂಶ್ಚ ದೃಷ್ಟೋ ಲೋಕೈಃ ಕದಾಪಿ ಚ ॥೧೪॥

ಸಾಧಾರಣೇ ಮನುಷ್ಯತ್ವೇ ಕೇಯಂ ವರ್ಣವ್ಯವಸ್ಥಿತಿಃ ।
ಕಿಮಭಕ್ಷ್ಯಂ ಚ ಭಕ್ಷ್ಯಂ ಚ ತದ್ಭಕ್ಷ್ಯಂ ಯಚ್ಚ ರೋಚತೇ ॥೧೫॥

ಸರ್ವೋಪಭೋಗ್ಯಂ ಯದ್ವಸ್ತು ರಮಣೀಯಮವಿಶ್ರುತಮ್ ।
ರಮಮಾಣಸ್ಯ ತಸ್ಮಿನ್ವಾ ಅವಶ್ಯಮಿತಿ ಜಾನತಾಮ್ ॥೧೬॥

ಪರೋಪಕಾರಃ ಕರ್ತವ್ಯ ಇತಿ ಚೇತ್ ಶಾಸ್ತ್ರನಿರ್ಣಯಃ ।
ಸ್ತ್ರೀಣಾಮನುಪಕಾರಃ ಕಿಂ ರಕ್ಷಯಾ ಕ್ರಿಯತೇ ಬುಧೈಃ ॥೧೭॥

ಬಯಸಿದಾಗ ನರಕಗಳ ಪರಿಕಲ್ಪನೆಯನ್ನು ನಂಬಿದ ಮನುಷ್ಯನು ಭೀತನಾಗಿ ಹಿಂಜರಿಯುವನು. ॥೧೨॥ ಕಣ್ಣಿಗೆ ಕಾಣುವ ದೇಹವಲ್ಲದೇ ಒಳಗೆ ಕಾಣದ ಆತ್ಮನೊಬ್ಬನು ಇರುವನೆಂದರೆ ದೇಹವನ್ನು ಕತ್ತರಿಸಿದಾಗ ಒಳಗಿರುವ ಆತ್ಮನು ಅದೇಕೆ ನಿಮಗೆ ಕಾಣುವದಿಲ್ಲ? ಆದ್ದರಿಂದ ದೇಹಾತಿರಿಕ್ತನಾದ ಆತ್ಮನೆಂಬುವನು ಇರುವದಿಲ್ಲ. ॥೧೩॥ ಪ್ರತ್ಯಕ್ಷ ಬಿಟ್ಟು ಬೇರೇ ಪ್ರಮಾಣವೆಂಬುದು ಇರುವದಿಲ್ಲ ಮತ್ತು ಮೃತ್ಯುವನ್ನು ಬಿಟ್ಟು ಪರಲೋಕಾದಿಗಳಾವವೂ ಇರುವದಿಲ್ಲ. ನಮ್ಮ ಸುಖ ದುಃಖಗಳನ್ನು ಭೋಗಿಸುವವನು ಜೀವಾತ್ಮನು ಅವನು ಸತ್ಯವಾಗಿರುವನು ಎಂದು ತಿಳಿದರೆ ಇಂಥ ಜೀವಾತ್ಮನು ಲೋಕದಲ್ಲಿ ಎಂದಾದರೂ ಕಂಡಿರುವನೇ? ॥೧೪॥ ಮನುಷ್ಯತ್ವವೆಂಬುದು ಮಾನವ ಸಾಮಾನ್ಯ ಧರ್ಮವಾಗಿರುವಾಗ ಈ ವರ್ಣವ್ಯವಸ್ಥೆ ಎಂದರೇನು? ಇದು ಏತಕ್ಕಾಗಿ? ಭಕ್ಷ್ಯಾಭಕ್ಷ್ಯಗಳ ವ್ಯವಸ್ಥೆ ಏಕೆ? ಯಾವುದು ರುಚಿಸುವದೋ ಅದು ಭಕ್ಷ್ಯವು. (ರುಚಿಸದಿರುವದು ಅಭಕ್ಷ್ಯವು). ॥೧೫॥ ಸರ್ವರಿಗೂ ಉಪಭೋಗ್ಯವಾದ ರಮಣೀಯವಾಗಿರುವ ಒಂದು ವಸ್ತು ಎಂಬುದು ಇರುವದಿಲ್ಲ. ಒಬ್ಬೊಬ್ಬರಿಗೆ ಒಂದೊಂದು ರುಚಿಸುವದು. ಒಂದು ವಸ್ತುವಿನಲ್ಲಿ ಆಸಕ್ತನಾದರೆ ಆ ವಸ್ತು ಅವನಿಗೆ ಇಷ್ಟವೆಂದು ತಿಳಿಯಬೇಕು. ॥೧೬॥ ಪರೋಪಕಾರವನ್ನು ಮಾಡಬೇಕು ಎಂಬುದು ಶಾಸ್ತ್ರ ನಿರ್ಣಯವಾಗಿದ್ದರೆ ತಿಳಿದವರು ಸ್ತ್ರೀಯರಿಗೆ ಅನುಪಕಾರವನ್ನು ಮಾಡುವದೇಕೆ? ॥೧೭॥

ಇತ್ಯಾದಿವಾಕ್ಯೈರ್ಲೋಕಾನಾಂ ಮೋಹಯಂತೋ ಭೃಶಂ ತತಃ ।
ಸಂಸತ್ಸು ವಿದುಷಾಮಾವಾಂ ವೈಷ್ಣವಾವಿತಿ ವಾದಿನೌ ॥೧೮॥

ರಾತ್ರೌ ಯದೃಚ್ಛಯಾ ಪೀತ್ವಾ ಗಣಿಕಾವದನಾಸವಮ್ ।
ಪ್ರಾತಃಸ್ನಾತ್ವಾ ಧೌತವಸ್ತ್ರೇ ಪರೀಧಾಯಾಹಿತೇ ಸತೇ ॥೧೯॥

ಮೃತ್ಪಿಂಡಲಾಂಛಿತೌ ಬಾಹೂ ಶಿರಸೀ ಚ ತಥಾ ತಯೋಃ ।
ಪವಿತ್ರಪಾಣೀ ಜಪತಸ್ತೌ ಮಿಥ್ಯಾಮೌನಧಾರಿಣೌ ॥೨೦॥

ಪ್ರತಾರಯಾಮಾಸತುಸ್ತೌ ದಂಭೇನೇತಿ ಸದಾ ಜನಾನ್ ।
ಚಕ್ರತುಃ ಸತತಂ ಪಾಪಮಭಕ್ಷ್ಯಾಣಾಂ ಚ ಭಕ್ಷಣಮ್ ॥೨೧॥

ಅಗಮ್ಯಾಯಾಂ ಗುರುಭ್ರಾತೃಪತ್ನ್ಯಾಂ ತದ್ಗಮನೇ ರತೌ ।
ಪರಸ್ತ್ರಿಯೋಽಂತ್ಯಜಾದ್ಯಾಸ್ತು ತಾಸು ಸಕ್ತಾವುಭಾವಪಿ ॥೨೨॥

ಮಹಾಪ್ರತಿಗ್ರಹರತೌ ಮಹಾತೀರ್ಥೇಷು ತೇಷು ಚ ।
ರಜಕಾದಿಗೃಹೇ ಭುಕ್ತಂ ಗುಪ್ತಂ ತಾಭ್ಯಾಂ ಯದೃಚ್ಛಯಾ ॥೨೩॥

ಇವೇ ಮೊದಲಾದ ಉದ್ದಂಡವಾದಗಳಿಂದ ಬಹು ಜನರನ್ನು ಬಹಳವಾಗಿ ಮೋಹಗೊಳಿಸುತ್ತ ಅವರಿಬ್ಬರೂ ಸಭೆ ಮುಂತಾದವುಗಳಲ್ಲಿ ತಾವು ವೈಷ್ಣವಾಗ್ರೇಸರರು ಎಂದು ಹೇಳಿಕೊಳ್ಳುತ್ತಿದ್ದರು. ॥೧೮॥ ರಾತ್ರಿಯಲ್ಲಿ ಮಾತ್ರ ಯಥೇಷ್ಟವಾಗಿ ಸುರಾಪಾನ ಮಾಡಿ ವೇಶ್ಯಾಸ್ತ್ರೀಯರನ್ನು ಆಲಿಂಗಿಸಿ ಚುಂಬಿಸುತ್ತಿದ್ದರು. ಬೆಳಗಾಗುತ್ತಲೇ ಸ್ನಾನಮಾಡಿ ಶುಭ್ರವಸ್ತ್ರಗಳನ್ನುಟ್ಟುಕೊಂಡು ॥೧೯॥ ಬಾಹುಶಿರಸ್ಸುಗಳಲ್ಲಿ ಗೋಪಿಚಂದನ ಮುದ್ರಾಗಳನ್ನು ಹಚ್ಚಿಕೊಂಡು (ಭಸ್ಮಧಾರಣ ಮಾಡಿಕೊಂಡು) ಕೈಯಲ್ಲಿ ಪವಿತ್ರಗಳನ್ನು ಜಪಮಣಿಗಳನ್ನು ಧರಿಸಿ ಜಪಮಾಡುತ್ತ ಕಪಟ ಮೌನದಿಂದ ಒಂದೆಡೆ ಕುಳಿತುಕೊಳ್ಳುತ್ತಿದ್ದರು. ॥೨೦॥ ಈ ಪ್ರಕಾರದ ಆಡಂಬರದ ವರ್ತನೆಯಿಂದ ಅವರಿಬ್ಬರೂ ಸದಾ ಮುಗ್ಧ ಜನರನ್ನು ಮೋಸಗೊಳಿಸತೊಡಗಿದರು. ಯಾವಾಗಲೂ ಪಾಪಕರ್ಮಗಳನ್ನೇ ಮಾಡುತ್ತ ಅಭಕ್ಷ್ಯಪದಾರ್ಥಗಳನ್ನು ಸೇವಿಸುತ್ತ ॥೨೧॥ ಗುರುಪತ್ನಿ, ಭ್ರಾತೃಪತ್ನಿ ಮುಂತಾದ ಅಗಮ್ಯ ಸ್ತ್ರೀಯರಲ್ಲಿ ಗಮನ ಮಾಡುತ್ತ, ಅಲ್ಲದೇ ಅಂತ್ಯಜಸ್ತ್ರೀಯರನ್ನೂ ಭೋಗಿಸುತ್ತ ಕಾಲ ಕಳೆದರು. ॥೨೨॥ ತೀರ್ಥಸ್ನಾನಕ್ಕೆಂದು ಹೋಗುವದು ಅಲ್ಲಿ ಹೋದಾಗ ನಿಷಿದ್ಧವಾದ ದಾನಗಳನ್ನೂ ಸ್ವೀಕರಿಸುವದು, ರಜಕಾದಿಗಳ ಮನೆಯಲ್ಲಿ ಯಥೇಷ್ಟವಾಗಿ ಉಂಡದ್ದನ್ನು ಗೌಪ್ಯವಾಗಿಡುವದು ಮುಂತಾದ ನಿಷಿದ್ಧ ಕರ್ಮಗಳನ್ನು ಮಾಡತೊಡಗಿದರು. ॥೨೩॥ ಅದು ಕಲಿಯುಗವಾಗಿದ್ದ ಕಾರಣ

ತದಾ ಕಲಿಯುಗಂ ಚಾಸೀನ್ನ ತಾದೃಕ್ ಪ್ರಸರೋಽನ್ಯಥಾ ।
ನ ತತ್ರ ಶಿಕ್ಷಕೋ ರಾಜಾ ಯತ್ರ ಪಾಪರತಾ ಜನಾಃ ॥೨೪॥

ನೈಕಪಾದಸ್ತತ್ರ ಧರ್ಮೋ ನ ಸತ್ಯಂ ಯತ್ರ ದೃಶ್ಯತೇ ।
ಪಾಖಂಡೀ ಪ್ರಸರೋ ಯತ್ರ ನಾಸ್ತಿಕೋಪಾಸನಕ್ರಿಯಾಃ ॥೨೫॥

ತಸ್ಮಿನ್ಯುಗೇಽಸದಾಚಾರೌ ಕೇನಾಪಿ ನ ಚ ದಂಡಿತೌ ।
ರಾಜ್ಞಃ ಪುಣ್ಯವತೋ ಭಾವಾದ್ಧರ್ಮತೋ ದಂಡ್ಯದಂಡಿನಃ ॥೨೬॥

ತತ್ಕಿಂಚಿತ್ಪಾತಕಂ ನಾಸ್ತಿ ಪುಣ್ಯಂ ಚಾಪಿ ಕೃತಂ ಪುನಃ ।
ಸಮ್ಮತಿರ್ನ ತಯೋರಾಸೀದ್ವಾರಸಂಸರ್ಗಿಣೋಸ್ತಯೋಃ ॥೨೭॥

ತತಃ ಕಾಲೇನ ಕಿಯತಾ ಪಶುಕ್ರೀತೋ ಗತೋ ವನಮ್ ।
ಹಂತುಂ ಮೃಗಾನ್ವಾ ಗುರಿಕೈಃ ಸಾರ್ಧಂ ಮಾಂಸಸ್ಯ ಭಕ್ಷಣಾತ್ ॥೨೮॥

ತತ್ರ ವ್ಯಾಘ್ರಾತ್ಸ ಮರಣಂ ಪ್ರಾಪ ಪರ್ವತಮಸ್ತಕೇ ।
ಅಗ್ನಿರ್ನ ದತ್ತಃ ಕೇನಾಪಿ ನ ಕ್ರಿಯಾ ಚೌರ್ಧ್ವದೆಹಿಕೀ ॥೨೯॥

ಎಲ್ಲವೂ ಅಡೆತಡೆ ಇಲ್ಲದೇ ನಡೆಯತೊಡಗಿತು. ಇಲ್ಲದಿದ್ದರೆ ಇಂಥ ನಾಸ್ತಿಕ್ಯವಾದಿಗಳಿಗೆ ಅವಕಾಶವೇ ಆಗುತ್ತಿರಲಿಲ್ಲ. ಆಗ ಪಾಪಕರ್ಮಗಳಲ್ಲಿ ರತರಾದ ಜನರನ್ನು ಶಿಕ್ಷಿಸುವ ರಾಜನೆಂಬುವನೇ ಇರಲಿಲ್ಲ. ॥೨೪॥ ಕಲಿಯುಗದ ಆ ಕಾಲದಲ್ಲಿ ಒಂದು ಪಾದ ಧರ್ಮವು ಮತ್ತು ಒಂದು ಪಾದ ಸತ್ಯವು ಕೂಡ ಉಳಿದಿರಲಿಲ್ಲ. ಪಾಖಂಡಿಗಳೇ ಅಧಿಕವಾಗಿರುವ ಆ ಕಾಲದಲ್ಲಿ ಸರ್ವತ್ರ ನಾಸ್ತಿಕ ಧರ್ಮಗಳ ಉಪಾಸನೆಯೇ ನಡೆದಿದ್ದಿತು. ॥೨೫॥ ಆ ಕಾಲದಲ್ಲಿ ದುರಾಚಾರಿಗಳಾದ ಇವರಿಬ್ಬರನ್ನೂ ಯಾರೂ ದಂಡಿಸಲಿಲ್ಲ. ಪುಣ್ಯವಂತನಾದ ಸದಾಚಾರಿಯಾದ ಧಾರ್ಮಿಕ ರಾಜನಿದ್ದರೆ ಮಾತ್ರ ತಪ್ಪಿತಸ್ಥರು ದಂಡಿಸಲ್ಪಡುವರಷ್ಟೇ? ॥೨೬॥ ಅವರಿಬ್ಬರೂ ಮಾಡದಿರುವ ಪಾಪಕರ್ಮವು ಉಳಿಯಲಿಲ್ಲ ಮತ್ತು ಪುಣ್ಯಕರ್ಮವನ್ನಂತೂ ಮೊದಲೇ ಮಾಡಲಿಲ್ಲ. ವೇಶ್ಯಾಸ್ತ್ರೀಯರ ದ್ವಾರಗಳಲ್ಲೇ ಬಿದ್ದಿರುವ ಅವರೀರ್ವರಿಗೆ ಪುಣ್ಯ ಪಾಪಗಳಲ್ಲಿ ನಂಬಿಕೆ ಇರಲಿಲ್ಲ. ॥೨೭॥ ಕೆಲವು ಕಾಲದ ನಂತರ ಒಮ್ಮೆ ಪಶುಕ್ರೀತನು ಮೃಗಗಳ ಬೇಟೆಯಾಡಲು ಬಲೆಗಾರರೊಂದಿಗೆ (ವಾಗುರಿಕಃ) ಕೂಡಿಕೊಂಡು ವನಕ್ಕೆ ಹೋದನು. ॥೨೮॥ ಅಲ್ಲಿ ಪರ್ವತದ ಎತ್ತರ ಪ್ರದೇಶದಲ್ಲಿ ಬೇಟೆಗಾಗಿ ಸಂಚರಿಸುತ್ತಿರುವಾಗ ಒಂದು ನರಮಾಂಸಭಕ್ಷಕ ಹುಲಿಯಿಂದ ಪಶುಕ್ರೀತನು ಕೊಲ್ಲಲ್ಪಟ್ಟನು. ಮೃತದೇಹಕ್ಕೆ ಯಾರೂ ಅಗ್ನಿಸಂಸ್ಕಾರವನ್ನು ಮಾಡಲಿಲ್ಲ ಹಾಗೂ ಔರ್ಧ್ವದೈಹಿಕಕ್ರಿಯೆಗಳೂ ಮಾಡಲ್ಪಡಲಿಲ್ಲ.

ತತೋಽಸೌ ಕಿಂಕರೈರ್ನೀತೋ ಹತ್ವಾ ಬಧ್ವಾ ಯಮಾಂತಿಕಮ್ ।
ಜ್ಞಾತ್ವಾ ಯಮೇನ ಕರ್ತ್ರೀತಿ ರೌರವೇ ಪಾತಿತಸ್ತದಾ ॥೩೦॥

ಯದಾ ತಾಮ್ರಮಯೀ ಭೂಮಿರ್ವಹ್ನಿತಾಪೇನ ತಾಪಿತಾ ।
ವಹ್ನಿಜ್ವಾಲಾಸಮಾಕೀರ್ಣಾ ದೃಷ್ಟ್ವಾ ಪ್ರಾಣಾಪಹಾರಿಣೀ ॥೩೧॥

ಯೋಜನಾನಾಂ ಸಹಸ್ರೇ ದ್ವೇ ದೀರ್ಘಾ ಸಾಹಸ್ರಮಾಯತಾ ।
ಗರ್ತೈಶ್ಚ ಸಾರ್ಧಂ ಪರುಷಾ ಪಾಪಿನಾಂ ದುಃಖದಾಯಿನೀ ॥೩೨॥

ತತ್ರ ಲೋಹಮಯೈರುಗ್ರೈಃ ಶೃಂಖಲೈರ್ಹಸ್ತಪಾದಯೋಃ ।
ಬಧ್ವಾ ಕ್ಷಿಪ್ತಾಶ್ಚ ಬಹುಶೋ ವಿಲಪನ್ ಯಮಕಿಂಕರೈಃ ॥೩೩॥

ತತೋ ದುಃಖಂ ಸಮಸ್ತತ್ವಕ್ ತ್ರೋಟನಾತ್ಸಮಜಾಯತ ।
ಶುಷ್ಕಮಾನಸ್ತು ಮಾಂಸಾಸ್ಥಿಸಂಜಾತಬಹುವೇದನಃ ॥೩೪॥

ಉಪರಿಸ್ಥೈಃ ಕಿಂಕರೈಶ್ಚ ಹನ್ಯಮಾನಃ ಪುನಃ ಪುನಃ ।
ಘಟಿಕಾರ್ಧಂ ಸುಖಮಪಿ ತಸ್ಯ ಜಾತು ನ ಚಾಭವತ್ ॥೩೫॥

॥೨೯॥ ಆಗ ಯಮಕಿಂಕರರು ಅವನನ್ನು ಪಾಶಗಳಿಂದ ಬಿಗಿದು ಹೊಡೆಯುತ್ತ ಬಡಿಯುತ್ತ ಯಮಧರ್ಮರಾಜನಿದ್ದಲ್ಲಿ ಸೆಳೆದೊಯ್ದರು. ಇವನು ಪಾಪಕರ್ಮಗಳನ್ನು ಮಾಡಿದವನೆಂದು ತಿಳಿದು ಯಮರಾಯನು ಅವನನ್ನು ರೌರವನರಕದಲ್ಲಿ ಒಗೆಯಲು ಆಜ್ಞಾಪಿಸಿದನು. ॥೩೦॥ ರೌರವನರಕದಲ್ಲಿಯ ತಾಮ್ರಮಯವಾದ ಭೂಮಿಯು ಪ್ರಜ್ವಲಿಸುವ ವಹ್ನಿಯ ಜ್ವಾಲೆಗಳಿಂದ ಕಾದು ಕೆಂಪಾಗಿದ್ದಿತು. ಭೂಮಿಯ ಮೇಲ್ಭಾಗದ ಅವಕಾಶವೆಲ್ಲ ಪ್ರಾಣಾಂತಕವಾದ ವಹ್ನಿಜ್ವಾಲೆಗಳಿಂದ ವ್ಯಾಪಿಸಿದ್ದಿತು. ॥೩೧॥ ನರಕದ ಆ ಭಾಗವು ಎರಡು ಸಹಸ್ರ ಯೋಜನ ಉದ್ದ ಹಾಗೂ ಒಂದು ಸಹಸ್ರ ಯೋಜನ ಅಗಲವಾಗಿದ್ದಿತು. ಅಲ್ಲಲ್ಲಿ ಪಾಪಿಗಳಿಗೆ ದುಃಖವನ್ನುಂಟು ಮಾಡುವ ಕಠಿಣವಾದ ತಗ್ಗುಗಳಿದ್ದವು. ॥೩೨॥ ಆ ನರಕದಲ್ಲಿ ಲೋಹದ ಉಗ್ರವಾದ ಸರಪಳಿಗಳಿಂದ ಕೈಕಾಲುಗಳನ್ನು ಕಟ್ಟಿ ಯಮದೂತರಿಂದ ಒಗೆಯಲ್ಪಟ್ಟು ದುಃಖಪಡುತ್ತಿರುವ ಅನೇಕ ಜನರಿದ್ದರು. ॥೩೩॥ ಇಂಥ ರೌರವ ನರಕದಲ್ಲಿ ಒಗೆಯಲ್ಪಟ್ಟ ಪಶುಕ್ರೀತನಿಗೆ ಅವನ ಚರ್ಮವೆಲ್ಲ ಸುಡುತ್ತಿರುವಾಗ ಬಹು ವೇದನೆಯಾಯಿತು. ಮಾಂಸ ಅಸ್ಥಿಗಳೆಲ್ಲ ಸುಡುತ್ತ ಹೋದಂತೆ ಅಸಹ್ಯವಾದ ವೇದನೆಯು ಹೆಚ್ಚುತ್ತ ಹೋಯಿತು. ॥೩೪॥ ಮೇಲೆ ನಿಂತಿರುವ ಯಮದೂತರು ಪುನಃ ಪುನಃ ಹೊಡೆಯುತ್ತಿರಲು ಅವನಿಗೆ ಒಂದರ್ಧ ಕ್ಷಣವಾದರೂ ಸುಖವೆಂಬುದು ಅನುಭವಕ್ಕೆ ಬರಲಿಲ್ಲ. ॥೩೫॥ ನಾಸ್ತಿಕನಾಗಿ ತಾನು

ಸ್ಮರನ್ ಘೋರಂ ನಿಜಂ ಕರ್ಮ ನಾಸ್ತಿಕಾದ್ಯದ್ಧಿ ಜಾಯತೇ ।
ನಾಪಶ್ಯತ್ ಶರಣಂ ತತ್ರ ಕಿಂಚಿದ್ದುಃಖಸ್ಯ ಮೋಕ್ಷಣೇ ॥೩೬॥

ಅಹರ್ನಿಶಂ ಚಿಂತಯಂಶ್ಚ ನ ಚೋಪಾಯಂ ಸ ಪಶ್ಯತಿ ।
ನರಕೇ ಭೃಶದುಃಖಾರ್ತಃ ಪಾತ್ಯಮಾನೋ ನಿರಂತರಮ್ ॥೩೭॥

ಆಜೀವಂ ನಿಸ್ತರಂ ಕರ್ಮ ಕರ್ಮ ಸ್ವಂ ವಿದ್ಯತೇ ಕಥಮ್ ।
ಆತ್ಮಾನಂ ಪ್ರತ್ಯುಪಾಲಂಭೋ ನೈವಂ ವದತಿ ಸರ್ವದಾ ॥೩೮॥

ಏವಂ ಸ ನಿರಯೇ ಮಗ್ನೋ ಭುಂಕ್ತೇ ಕಷ್ಟಂ ಸ್ವಕರ್ಮತಃ ।
ಅಥಾಸೌ ಖರಕ್ರೀತೋಽಪಿ ಸ್ವಮಿತ್ರಂ ಪಂಚತಾಂ ಗತಮ್ ॥೩೯॥

ಶ್ರುತ್ವಾ ವ್ಯಲಪದತ್ಯರ್ಥಂ ಶಿಥಿಲೋ ಜೀವಿತೋಽಭವತ್ ।
ಕಿಯದ್ದಿನಾನಿ ಶೋಚಿತ್ವಾ ಪಶ್ಚಾತ್ ಸ್ವಸ್ಥೋಽಭಿಜಾಯತೇ ॥೪೦॥

ತಥೈವ ಚ ನಿಜಂ ಕರ್ಮ ಪಾಪರೂಪಂ ಚಕಾರ ಸಃ ।
ತತ್ರ ತತ್ರ ತದಾಯಾತಿ ಯತ್ರ ಲೋಕಾಃ ಕುಮಾರ್ಗಕಾಃ ॥೪೧॥

ಮಾಡಿದ್ದ ಘೋರ ಕರ್ಮಗಳನ್ನು ಒಂದೊಂದಾಗಿ ನೆನೆಯುತ್ತಿರುವ ಅವನಿಗೆ ಆ ನರಕದಲ್ಲಿ ತನ್ನ ದುಃಖನಿವಾರಣೆಗಾಗಿ ಯಾವುನೊಬ್ಬ ರಕ್ಷಕನನ್ನೂ ಕಾಣದಂತಾದನು. ॥೩೬॥ ಹಗಲು ರಾತ್ರಿ ವಿಚಾರಮಾಡಿದರೂ ದುಃಖ ನಿವಾರಣೆಗೆ ಒಂದು ಉಪಾಯವನ್ನೂ ಅರಿಯಲಿಲ್ಲ. ಆ ನರಕದಲ್ಲಿ ಪುನಃ ಪುನಃ ಒಗೆಯಲ್ಪಟ್ಟ ಅವನು ಬಹು ದುಃಖವನ್ನು ಅನುಭೋಗಿಸಿದನು. ॥೩೭॥ "ಅಯ್ಯೋ ಅದೆಂಥ ಕರ್ಮವನ್ನು ಮಾಡಿದೆನು ! ಈ ಕರ್ಮಭೋಗದಿಂದ ಪಾರಾಗುವ ಉಪಾಯವಾವುದು? ನನ್ನನ್ನು ಎಷ್ಟು ನಿಂದಿಸಿಕೊಂಡರೂ ಸಾಲದು" ಎಂದು ಸದಾ ದುಃಖಿಸುತ್ತಿರುವ ಅವನು ॥೩೮॥ ನಿರಯದಲ್ಲಿ ಬಿದ್ದು ಸ್ವಕರ್ಮಾನುಸಾರ ಕಷ್ಟವನ್ನು ಅನುಭೋಗಿಸಿದನು. ಇತ್ತ ಖರಕ್ರೀತನು ತನ್ನ ಮಿತ್ರನಾದ ಪಶುಕ್ರೀತನ ಮರಣ ವಾರ್ತೆಯನ್ನು ಕೇಳಿ ॥೩೯॥ ಬಹು ದುಃಖಿಸಿದನು. ಈ ದುಃಖದಿಂದ ಅವನ ದೇಹವು ಕೊರಗಿತು. ಮಿತ್ರನ ವಿಯೋಗದಿಂದ ಬಹುದಿನಗಳವರೆಗೆ ಶೋಕಾಕುಲನಾದ ಖರಕ್ರೀತನು ಬರಬರುತ್ತ ಶೋಕವನ್ನು ಮರೆತು ಸ್ವಸ್ಥಚಿತ್ತನಾದನು. ॥೪೦॥ ಅನಂತರ ಮತ್ತೆ ಮೊದಲಿನಂತೆ ಪಾಪಕರ್ಮಗಳಲ್ಲಿ ಆಸಕ್ತನಾದನು. ಹೋದ ಕಡೆಗೆಲ್ಲ ದುಷ್ಟ ಜನರ ಸಹವಾಸದಲ್ಲೇ ಇರತೊಡಗಿದನು. ॥೪೧॥ ಆ ದುಷ್ಟರು ಭೋಜನಾಚ್ಛಾದನಾದಿಗಳಲ್ಲಿ ಸ್ತ್ರೀಯರಿಂದ ಆದರಪೂರ್ವಕ ಇವನ ಸೇವೆ ಮಾಡಿಸುತ್ತಲಿದ್ದರು. ಖರಕ್ರೀತನ ಆದೇಶಾನುಸಾರ ಎಲ್ಲರೂ ಪರಸ್ಪರ ಸ್ತ್ರೀಯರನ್ನು

ಭೋಜನಾಚ್ಛಾದಾನೇ ಸ್ತ್ರೀಭಿಸ್ತಂ ಸತ್ಕುರ್ವಂತಿ ಭಕ್ತಿತಃ ।
ತದಾದೇಶಾಚ್ಚ ತೇ ಸರ್ವೇ ಭುಂಜತೇ ಸ್ತ್ರೀಃ ಪರಸ್ಪರಮ್ ॥೪೨॥

ನಿಃಶಂಕಂ ಚ ಮಿಥೋಚ್ಛಿಷ್ಟಂ ಖಾದಂತಿ ಚ ಪಿಬಂತಿ ಚ ।
ವರ್ತಮಾನಃ ಸ ಇತ್ಥಂ ತು ಕದಾಚಿದಾವ್ರಜತ್ಪುರಮ್ ॥೪೩॥

ಸುದೂರಾದ್ವರ್ತ್ಮನಿ ಸ್ತೇನೈರ್ನಿಘ್ನೇ ವಿತ್ತಸ್ಯ ಕಾರಣಾತ್ ।
ತಸ್ಯಾಪಿ ನಾಭವತ್ ಕ್ವಾಪಿ ದಾಹಾದ್ಯಾ ವೈದಿಕೀ ಕ್ರಿಯಾ ॥೪೪॥

ತಥೈವ ಕಿಂಕರೈರ್ಬಧ್ವಾ ಸೋಽಪಿ ನೀತೋ ಯಮಾಂತಿಕಮ್ ।
ಪಶುಕ್ರೀತಸ್ತು ಯತ್ರಾಸೀತ್ತತ್ರೈವ ಯಮಶಾಸನಾತ್ ॥೪೫॥

ಸೋಽಪಿ ಕ್ಷಿಪ್ತೋ ಭೃಶಂ ಕ್ರೂರೈಃ ಕಿಂಕರೈರ್ವಿಲಪನ್ಮುಹುಃ ।
ಹನ್ಯಮಾನೈರ್ಮಹಾಘೋರೈರ್ನರಕೇ ಮೀಲಿತೋ ಪುನಃ ॥೪೬॥

ನಿಂದಂತೌ ಸ್ವಕೃತಂ ಕರ್ಮ ಕ್ರಂದಂತೌ ಚ ಪುನಃ ಪುನಃ ।
ಕ್ಷುತ್ತೃಟ್‌ಭ್ಯಾಂ ಬಾಧ್ಯಮಾನೌ ತೌ ಪತಿತೌ ದುಃಖಸಾಗರೇ ॥೪೭॥

ಅತ್ಯಾರ್ತಾವಲ್ಪಚೈತನ್ಯೌ ದಹ್ಯಂತೌ ರೌರವಾಗ್ನಿನಾ ।
ಸಹಕಾರಪದೌ ದೀನೌ ತಾಡ್ಯಮಾನೌ ಪ್ರತಿಕ್ಷಣೇ ॥೪೮॥

ಭೋಗಿಸುತ್ತಲಿದ್ದರು. ॥೪೨॥ ಒಬ್ಬರು ತಿಂದುಳಿದ ಹಾಗೂ ಕುಡಿದು ಉಳಿದ ಎಂಜಲನ್ನು ಪರಸ್ಪರರು ನಿಃಶಂಕೆಯಿಂದ ಸೇವಿಸುತ್ತಿದ್ದರು. ಈ ರೀತಿ ಜೀವನ ಸಾಗಿಸಿದ ಖರಕ್ರೀತನು ಒಮ್ಮೆ ತನ್ನ ಊರಿಗೆ ತಿರುಗಿ ಬರುತ್ತಿರುವಾಗ ॥೪೩॥ ಮಾರ್ಗ ಮಧ್ಯದಲ್ಲಿ ಧನದಾಶೆಯಿಂದ ಕಳ್ಳರಿಂದ ಕೊಲ್ಲಲ್ಪಟ್ಟನು. ಪಶುಕ್ರೀತನಂತೆಯೇ ಇವನ ದೇಹಕ್ಕೂ ದಾಹಾದಿ ವೈದಿಕ ಕ್ರಿಯೆಗಳು ನೆರವೇರಲಿಲ್ಲ. ॥೪೪॥ ಮುಂದೆ ಯಮಕಿಂಕರರು ಇವನನ್ನು ಕಟ್ಟಿ ಯಮಧರ್ಮನ ಸನಿಹಕ್ಕೆ ಸೆಳೆದೊಯ್ದರು. ಅಲ್ಲಿ ಯಮರಾಜನ ಆಜ್ಞಾನುಸಾರವಾಗಿ ಇವನೂ ಕೂಡ ಪಶುಕ್ರೀತನಿರುವ ನರಕದಲ್ಲೇ ॥೪೫॥ ಯಮದೂತರಿಂದ ಒಗೆಯಲ್ಪಟ್ಟನು. ಆ ನರಕದಲ್ಲಿ ಮಹಾಭಯಂಕರರಾದ ಯಮಭಟರಿಂದ ಪುನಃ ಪುನಃ ಹಿಂಸಿಸಲ್ಪಟ್ಟು ಶೋಕಿಸುತ್ತಿರುವ ಖರಕ್ರೀತನು ತನ್ನ ಮಿತ್ರನಾದ ಪಶುಕ್ರೀತನನ್ನು ಕೂಡಿಕೊಂಡನು. ॥೪೬॥ ಅಲ್ಲಿರುವಾಗ ಪೂರ್ವದಲ್ಲಿ ತಾವಿಬ್ಬರೂ ಮಾಡಿದ ಪಾಪಕರ್ಮಗಳನ್ನು ನಿಂದಿಸುತ್ತ ಪುನಃ ಪುನಃ ಶೋಕಿಸುತ್ತ ಹಸಿವೆ ನೀರಡಿಕೆಗಳಿಂದ ಅತಿಯಾಗಿ ಬಳಲಿದ ಅವರಿಬ್ಬರೂ ದುಃಖಸಾಗರದಲ್ಲಿ ಬಿದ್ದು ಒದ್ದಾಡಿದರು. ॥೪೭॥ ಅತಿ ದುಃಖಿತರಾದ, ಅಲ್ಪಚೈತನ್ಯವುಳ್ಳ, ರೌರವಾಗ್ನಿಯಿಂದ ಸುಡಲ್ಪಡುತ್ತಿರುವ, ದೀನರಾದ ಈರ್ವರೂ ಪ್ರತಿಕ್ಷಣ ಯಮಭಟರಿಂದ ಹೊಡೆತಗಳನ್ನು ತಿನ್ನುತ್ತ ॥೪೮॥

ಸಂತಕ್ಷ್ಯಮಾಣೌ ದುರ್ವಾಕ್ಯೈಃ ಕಂಪಮಾನೌ ಭಯಾತುರೌ ।
ನರಕಾಂತಮಪಶ್ಯಂತೌ ವರ್ಷಾಣಾಮಪಿ ಕೋಟಿಭಿಃ ॥೪೯॥

ಮರ್ತ್ಯಲೋಕೇ ಸುಖಮಭೂತ್ಪಾಪಕರ್ಮ ಪ್ರಕುರ್ವತಾಮ್ ।
ತದ್ವಿಪಾಕೋ ಮಹಾದುಃಖಕಾರಕೋ ನರಕೋऽಭವತ್ ॥೫೦॥

ಸ್ಯಾತ್ತತ್ರ ಪಾಪಿನಾಂ ಸೌಖ್ಯಂ ಪಾಪಕರ್ಮ ಪ್ರಕುರ್ವತಾಮ್ ।
ತೇಷಾಂ ತು ನಿರಯೇ ಕಷ್ಟಃ ಪರಿಪಾಕೋ ದುರತ್ಯಯಃ ॥೫೧॥

ಪುಣ್ಯಕರ್ಮಕೃತಾಂ ಲೋಕೇ ಕಷ್ಟಂ ಸ್ಯಾಚ್ಚ ಪದೇ ಪದೇ ।
ಅತ್ಯಂತಸುಖಸಂಪ್ರಾಪ್ತಿಃ ಸ್ವರ್ಗಲೋಕೇ ತು ಜಾಯತೇ ॥೫೨॥

ಪಾಪಕರ್ಮಕೃತಾಂ ತೇಷಾಂ ತತ್ಕ್ಷಣಂ ಹ್ಯುಪಪದ್ಯತೇ ।
ಫಲಪಾಕೇ ಮಹದ್ದುಃಖಂ ಯತ್ರ ಕಲ್ಪಾಯುತೇಕ್ಷಣಃ ॥೫೩॥

ಅರ್ಥೋ ಹಿ ನಶ್ವರೋ ಲೋಕೇ ಸುಖಂ ಕ್ಷಣಿಕಮೇವ ಚ ।
ಜೀವಿತಂ ಚಂಚಲತರಂ ಸರ್ವಂ ಜಾನಾತಿ ಮಾನವಃ ॥೫೪॥

ಅವರ ದುರ್ವಾಕ್ಯಗಳನ್ನು (ಬೈಗಳು, ಭರ್ತ್ಸನೆಗಳು) ಕೇಳಿ ಭಯದಿಂದ ಗದಗದ ನಡುಗುತ್ತ ಕೋಟಿ ವರ್ಷಗಳು ಗತಿಸಿದರೂ ನರಕಯಾತನೆಯ ಕೊನೆಯನ್ನು ಕಾಣದೇ ಮತ್ತೆ ಮತ್ತೆ ಹೀಗೆ ಚಿಂತಿಸತೊಡಗಿದರು ಏನೆಂದರೆ- ॥೪೯॥ 'ಪಾಪಕರ್ಮಗಳನ್ನು ಮಾಡುವವರಿಗೆ ಭೂಲೋಕದಲ್ಲೇನೋ ಸುಖವಿತ್ತು. ಆದರೆ ಆ ಪಾಪಕರ್ಮಗಳ ಫಲವಾಗಿ ನರಕದಲ್ಲಿ ಈಗ ಮಹಾದುಃಖವನ್ನು ಅನುಭೋಗಿಸಬೇಕಾಗಿದೆ. ॥೫೦॥ ಪಾಪಕರ್ಮಗಳನ್ನು ಮಾಡುವ ಪಾಪಿಗಳಿಗೆ ಭೂಲೋಕದಲ್ಲಿ ಸೌಖ್ಯವು ಕಂಡರೂ ಅವರಿಗೆ ನರಕದಲ್ಲಿ ದುರತ್ಯಯವಾದ ಕಷ್ಟವು ಕಾದಿರುವದು. ॥೫೧॥ ಇನ್ನು ಮರ್ತ್ಯಲೋಕದಲ್ಲಿ ಪುಣ್ಯಕರ್ಮಗಳನ್ನು ಮಾಡುವವರಿಗೆ ಹೆಜ್ಜೆ ಹೆಜ್ಜೆಗೆ ಕಷ್ಟಗಳು ಪ್ರಾಪ್ತವಾದರೂ ಸ್ವರ್ಗಲೋಕದಲ್ಲಿ ಅತಿಯಾದ ಸುಖವು ಲಭಿಸುವದು. ॥೫೨॥ ಪಾಪಕರ್ಮಗಳನ್ನು ಮಾಡುವವರಿಗೆ ಅವರ ಪಾಪವು ತುಂಬಿ ಬಂದಾಗ ಅದರ ಫಲವಾದ ಮಹದ್ದುಃಖವು ತತ್ಕಾಲದಲ್ಲೇ ಉಂಟಾಗುವದು. ॥೫೩॥ ಲೋಕದಲ್ಲಿ ಕಾಣುವ ಅರ್ಥವು ನಶ್ವರವಾಗಿದೆ, ಐಹಿಕ ಸುಖವು ಕ್ಷಣಿಕವಾಗಿದೆ, ಜೀವಿತವು ಚಂಚಲವಾಗಿದೆ (ಆಯುಷ್ಯವು ಅನಿಶ್ಚಿತವಾಗಿದೆ). ಇದೆಲ್ಲವನ್ನು ತಿಳಿದೂ ಮನುಷ್ಯನು ॥೫೪॥ ಕಾಮಾದಿಗಳ ವಶನಾಗಿ ಯುಗಗಳು ಕಳೆದರೂ ಬಂಧಮುಕ್ತಿಯಾಗದ ದುಸ್ತರವಾದ ಕರ್ಮವನ್ನು ಬಲವಂತದಿಂದ ಮಾಡುವನು.' ॥೫೫॥ ಇತ್ತ ಭೂಲೋಕದಲ್ಲಿ ಪಶುಕ್ರೀತನ ಹೆಂಡತಿಯು ಗಂಡನನ್ನು ತ್ಯಜಿಸಿ ಕಾರಣಾಂತರದಿಂದ

ಕಾಮಾದಿಕೈಸ್ತಥಾಪ್ಯೇತೇ ಜಾನಂತೋಽಪಿ ಬಲಾದಿಹ ।
ಕಾರ್ಯತೇ ಕರ್ಮ ಕಿಮಪಿ ದುಸ್ತರಂ ಯದ್ಯುಗೈರಪಿ ॥೫೫॥

ಪಶುಕ್ರೀತಸ್ಯ ಭಾರ್ಯಾ ತು ತ್ಯಕ್ತ್ವಾ ತಂ ಸ್ವಪಿತುರ್ಗೃಹೇ ।
ಸತ್ಸಂಗತಿವಶಾತ್ಸಾ ಚ ನ ಪಾಪಾಂತಿಕಮಭ್ಯಗಾತ್ ॥೫೬॥

ತಸ್ಯಾಃ ಸ್ವಜನಕೋ ವಿಪ್ರಃ ಪುಣ್ಯಕರ್ಮಪರಾಯಣಃ ।
ಶ್ರುತಿಸ್ಮೃತಿಪುರಾಣಾರ್ಥಾತ್ ಪಾಪಾದ್ದೂರೇ ಪಥಿ ಸ್ಥಿತಃ ॥೫೭॥

ತದ್‌ಗೃಹೇ ಸಾ ಸ್ಥಿತಾ ಸಾಧ್ವೀ ಸರ್ವಥಾ ವಿಜತೇಂದ್ರಿಯಾ ।
ಭವಾಂತರ ಕೃತಂ ಕರ್ಮ ನಿಂದತಿ ಸ್ವಪತಿಂ ನ ಚ ॥೫೮॥

ತತಸ್ತು ಸ್ವಪತಿಂ ಶ್ರುತ್ವಾ ಮೃತ್ಯೋರ್ವಶಮುಪಾಗತಮ್ ।
ಏಕೇಶಾ ವ್ರತಿನೀ ಭೂತ್ವಾ ತಪಸ್ತೇಪೇ ಸುದುಷ್ಕರಮ್ ॥೫೯॥

ಪರಿಧತ್ತೇ ನ ವಸನಂ ರಕ್ತಂ ಚ ವ್ರತಧಾರಿಣೀ ।
ಸ್ನಿಗ್ಧಸ್ನಾನಂ ನ (ಚ?) ಕುರುತೇ ಭೂಶಯ್ಯಾ ಪತ್ರಭೋಜನೀ ॥೬೦॥

ಮಾಸೋಪವಾಸಾನ್ಕುರುತೇ ಕೃಚ್ಛ್ರಾಣಿ ವಿವಿಧಾನಿ ಚ ।
ಏವಂ ಕಾಲಂ ನಯಂತೀ ಸಾ ತಪೋಭಿರ್ವಿವಿಧೈರಪಿ ॥೬೧॥

ತನ್ನ ತಂದೆಯ ಮನೆಯಲ್ಲೇ ಉಳಿದಿದ್ದಳು. ಅವಳು ಅಲ್ಲಿ ಸಜ್ಜನರ ಸಹವಾಸದಿಂದ ಯಾವ ಪಾಪಕರ್ಮವನ್ನೂ ಮಾಡಲಿಲ್ಲ. ॥೫೬॥ ಅವಳ ತಂದೆಯು ಸದಾ ಪುಣ್ಯಕರ್ಮಗಳಲ್ಲಿ ಆಸಕ್ತನಾದ ಬ್ರಾಹ್ಮಣನಾಗಿದ್ದನು. ಶ್ರುತಿ, ಸ್ಮೃತಿ ಪುರಾಣಗಳ ಅರ್ಥಗಳನ್ನು ಚೆನ್ನಾಗಿ ಬಲ್ಲ ಅವನು ಪಾಪಕರ್ಮಗಳಿಂದ ದೂರದಲ್ಲಿದ್ದನು. ॥೫೭॥ ಇಂಥ ಪುಣ್ಯಾತ್ಮನಾದ ತಂದೆಯ ಮನೆಯಲ್ಲಿ ಜಿತೇಂದ್ರಿಯಳಾಗಿದ್ದ ಆ ಸಾಧ್ವಿಯು ತನ್ನ ಗಂಡನು ಮಾಡುವ, ಬಂಧಕ್ಕೆ ಕಾರಣವಾಗುವ ಕರ್ಮಗಳನ್ನು ನಿಂದಿಸುತ್ತಿದ್ದಳಲ್ಲದೇ ತನ್ನ ಪತಿಯನ್ನು ಎಂದಿಗೂ ನಿಂದಿಸುತ್ತಿರಲಿಲ್ಲ. ॥೫೮॥ ಹೀಗಿರುತ್ತಿರುವ ಅವಳು ಒಮ್ಮೆ ತನ್ನ ಪತಿಯ ಮರಣ ವಾರ್ತೆಯನ್ನು ಕೇಳಿ ವಿಕೇಶಳಾಗಿ ವ್ರತಿನಿಯಾಗಿ ದುಷ್ಕರವಾದ ತಪವನ್ನಾಚರಿಸಿದಳು. ॥೫೯॥ ಆಗ ಅವಳು ಕೆಂಪುಬಣ್ಣದ ಬಟ್ಟೆಗಳನ್ನು ಉಟ್ಟುಕೊಳ್ಳುತ್ತಿರಲಿಲ್ಲ. ಎಣ್ಣೆ ಹಚ್ಚಿಕೊಂಡು ಸ್ನಾನಮಾಡಿಕೊಳ್ಳುತ್ತಿರಲಿಲ್ಲ. ನಿತ್ಯವೂ ಎಲೆಯಲ್ಲಿ ಊಟ ಮಾಡುವದು ಮತ್ತು ನೆಲದ ಮೇಲೆ ಮಲಗಿಕೊಳ್ಳುವದನ್ನು ಮಾಡುತ್ತಿದ್ದಳು. ॥೬೦॥ ಮಾಸದ ಉಪವಾಸಗಳನ್ನು ಮತ್ತು ವಿವಿಧ ಕೃಚ್ಛ್ರವ್ರತಗಳನ್ನು ಆಚರಿಸುತ್ತಿದ್ದಳು. ಈ ಪ್ರಕಾರ ವಿವಿಧವಾದ ವ್ರತತಪಗಳನ್ನು ಆಚರಿಸುತ್ತ ಕಾಲಕಳೆಯುತ್ತಿರುವ ಅವಳು ॥೬೧॥ ತನ್ನ ಗಂಡನನ್ನು ಉದ್ದೇಶಿಸಿ ಅನ್ನ ಹಾಗೂ ನೀರನ್ನು

ಸಾ ಯದ್ಭರ್ತಾರಮುದ್ದಿಶ್ಯ ದದಾತ್ಯನ್ನಂ ಚ ವಾರಿ ಚ ।
ನೋಪತಿಷ್ಠತಿ ತತ್ತಸ್ಯ ಅಂತರಿಕ್ಷೇ ವಿನಶ್ಯತಿ ॥೬೨॥

ಪಿಂಡಪ್ರದಾನದಾನಾದಿ ಯದ್ಯಚ್ಛ್ರದ್ಧಾಸಮನ್ವಿತಮ್ ।
ಯತ್ಕಿಂಚಿದ್ದೀಯತೇ ತಚ್ಚ ಪಾಪಿನಾಂ ನೋಪತಿಷ್ಠತೇ ॥೬೩॥

ಕದಾಚಿದಥ ಸಾ ದೃಷ್ಟ್ವಾ ಸಾರ್ಥಂ ರವಿಸುತಾಂ ಪ್ರತಿ ।
ಗಚ್ಛಂತಮತಿವೇಗೇನ ಶುಚಿಸ್ನಾನಾಯ ಭಕ್ತಿತಃ ॥೬೪॥

ತೇನ ಸಾರ್ಥೇನ ಸಾ ಸಾರ್ಧಂ ಸಂಶ್ರುತ್ಯ ಸ್ನಾನಜಂ ಫಲಮ್ ।
ಜಗಾಮ ಸತ್ವರಾದ್ ಹೃಷ್ಟಾ ತಾಪೀಂ ಪ್ರತಿ ಮಹಾನದೀಮ್ ॥೬೫॥

ತತ್ರ ಸಾ ವ್ರತಿನೀ ಸ್ನಾತ್ವಾ ಆಷಾಢೇ ತಪತೀಜಲೇ ।
ಮಾಸಂ ಯಾವನ್ನಿರಾಹಾರಾ ಏಕಾಗ್ರಸ್ಥಿತಮಾನಸಾ ॥೬೬॥

ಸ್ನಾನಂ ಸಮಾಪ್ಯ ಸಾ ವಿಪ್ರಾನ್ ಭೋಜಯಿತ್ವಾ ತಪಸ್ವಿನೀ ।
ಅನ್ಯೇದ್ಯುಶ್ಚೈವ ವಿಪ್ರಾನ್ ಸಾ ನಿಮಂತ್ರ್ಯ ಚ ತಥಾ ಪುನಃ ॥೬೭॥

ಶ್ರಾದ್ಧಂ ಕೃತ್ವಾ ತಥಾಷಾಢಫಲಂ ಪತ್ಯೇ ದದಾವಥ ।
ಪಶ್ಚಾತ್ತಾನ್ ಭೋಜಯಾಮಾಸ ಮಿಷ್ಟಾನ್ನೈಃ ಶ್ರದ್ಧಯಾನ್ವಿತಾ ॥೬೮॥

ಸಮರ್ಪಿಸಿದರೂ ಅದು ಅಲ್ಲಿ ನಿಲ್ಲದೇ ಆಕಾಶದಲ್ಲೇ ನಾಶವಾಗಿ ಹೋಗುತ್ತಲಿದ್ದಿತು. ॥೬೨॥ ಶ್ರಾದ್ಧ ದಿನ ಶ್ರದ್ಧೆಯಿಂದ ಪಿಂಡಪ್ರದಾನ ದಾನಾದಿಗಳನ್ನು ಕೊಟ್ಟರೂ ಅದು ಪಾಪಿಗಳಾದವರಿಗೆ ತಲುಪುವದಿಲ್ಲವಷ್ಟೆ! ॥೬೩॥ ಒಮ್ಮೆ ಆ ಸ್ತ್ರೀಯು ತಾಪೀನದಿಯಲ್ಲಿ ಪವಿತ್ರ ಸ್ನಾನ ಮಾಡುವ ಉದ್ದೇಶದಿಂದ ಶ್ರದ್ಧಾಭಕ್ತಿಯುತರಾದ ಅನೇಕ ಜನರು ಲಗುಬಗೆಯಿಂದ ಹೋಗುತ್ತಿರುವದನ್ನು ಕಂಡಳು. ॥೬೪॥ ತಾಪೀಸ್ನಾನದ ಫಲವನ್ನು ಕೇಳಿ ಹರ್ಷಿತಳಾದ ಅವಳು ತಾನೂ ಕೂಡ ಮಹಾನದಿಯಾದ ತಾಪಿಯಲ್ಲಿ ಸ್ನಾನ ಮಾಡಬೇಕೆಂದು ಆ ಜನಸಮೂಹದೊಂದಿಗೆ ನಡೆದಳು. ॥೬೫॥ ಅಲ್ಲಿ ಹೋಗಿ ಆ ತಪಸ್ವಿನೀ ಸ್ತ್ರೀಯು ಆಷಾಢಮಾಸದಲ್ಲಿ ಒಂದು ತಿಂಗಳು ಪೂರ್ತಿ ನಿರಾಹಾರದಿಂದ ಇದ್ದು ಏಕಾಗ್ರಚಿತ್ತಳಾಗಿ ತಾಪೀನದಿಯಲ್ಲಿ ಶ್ರದ್ಧೆಯಿಂದ ಸ್ನಾನ ಮಾಡಿದಳು. ॥೬೬॥ ಈ ರೀತಿ ಒಂದು ತಿಂಗಳು ಸ್ನಾನವನ್ನು ಮಾಡಿ ಪೂರ್ಣಗೊಳಿಸಿ ಉದ್ಯಾಪನೆಯ ದಿನ ಬ್ರಾಹ್ಮಣ ಭೋಜನ ಮಾಡಿಸಿದಳು. ಉದ್ಯಾಪನೆಯ ಮರುದಿನ ಕೆಲ ಬ್ರಾಹ್ಮಣರನ್ನು ಆಮಂತ್ರಿಸಿ ॥೬೭॥ ಪತಿಶ್ರಾದ್ಧವನ್ನು ಮಾಡಿ ಆಷಾಢಸ್ನಾನದ ಫಲವನ್ನು ಪತಿಗೆ ಸಮರ್ಪಿಸಿದಳು. ಶ್ರದ್ಧಾಯುತಳಾದ ಅವಳು ಅನಂತರ ಬಂದ ಬ್ರಾಹ್ಮಣರಿಗೆಲ್ಲ ಯಥೇಷ್ಟವಾಗಿ ಮಿಷ್ಟಾನ್ನ ಭೋಜನ ಮಾಡಿಸಿದಳು. ॥೬೮॥ ಶ್ರಾದ್ಧದೇವತೆಗಳಾದ

ಆದಿತ್ಯಾ ವಸವೋ ರುದ್ರಾಃ ಪಿತರಃ ಶ್ರಾದ್ಧದೇವತಾಃ ।
ತೇ ಗತ್ವಾ ಕಥಯಾಮಾಸುಸ್ತತ್ಪುಣ್ಯಮಂತಕಾಯ ಚ ॥೯೯॥

ತಥಾಽಷಾಢೇ ಯತ್ ಸ್ನಾತ್ವಾ ಸ್ವಭರ್ತ್ರೇ ಶ್ರದ್ಧಯಾ ದದೌ ।
ಯಮಸ್ತಚ್ಚಿತ್ರಗುಪ್ತಾಯ ವಿಚಾರ್ಯೈತನ್ಮಹಾಫಲಮ್ ॥೭೦॥

ಸ್ವಕಂ ಪುರುಷಮಾಕಾರ್ಯ ತ್ವರಯಾ ವಿನಯಾನ್ವಿತಮ್ ।
ಆದಿದೇಶಾತಿವೇಗೇನ ಯಾತ್ವಾಽಽಕೃಷ್ಯ ಚ ರೌರವಾತ್ ॥೭೧॥

ನೀಯತಾಂ ತಂ ವಿಮಾನೇನ ಪಶುಕ್ರೀತಂ ತ್ರಿವಿಷ್ಟಪಮ್ ।
ನಿಷ್ಕಲ್ಮಷೋಽಯಂ ಸಂಪನ್ನಃ ಶುಚಿಸ್ನಾನಸ್ಯ ಪುಣ್ಯಭಾಕ್ ॥೭೨॥

ಸ್ನಾತ್ವಾ ತಪತ್ಯಾಮೇತಸ್ಯ ಪತ್ನ್ಯಾ ದತ್ತಂ ಫಲಂ ಮಹತ್ ।
ತಸ್ಮಾಜ್ಜಾತಾಚ್ಚ ಪುಣ್ಯಾಚ್ಚ ಭೋಕ್ತಾ ಭೋಗಾನ್ಮನೋರಮಾನ್ ॥೭೩॥

ಕಲ್ಪೇನಾಪಿ ನ ಭೋಗೇನ ತಸ್ಯ ಪುಣ್ಯಸ್ಯ ಸಂಕ್ಷಯಃ ।
ಅನ್ಯಾನಿ ಸರ್ವಪುಣ್ಯಾನಿ ಕ್ಷೀಯಂತೇ ಕಿಲ ಭೋಗತಃ ॥೭೪॥

ವಸು ರುದ್ರ ಆದಿತ್ಯರು ಇವರೆಲ್ಲರೂ ಯಮಧರ್ಮನಿದ್ದಲ್ಲಿಗೆ ಹೋಗಿ ಪಶುಕ್ರೀತನು ಹೆಂಡತಿಯ ಮೂಲಕ ಪುಣ್ಯವನ್ನು ಸಂಪಾದಿಸಿರುವ ವಿಷಯವನ್ನು ಯಮಧರ್ಮರಾಯನಿಗೆ ನಿವೇದಿಸಿದರು. ॥೯೯॥ ಮತ್ತು ಆಷಾಢಮಾಸದಲ್ಲಿ ತಾಪೀ ಸ್ನಾನದಿಂದ ಬಂದ ಪುಣ್ಯ ವಿಶೇಷವನ್ನು ತನ್ನ ಗಂಡನಿಗೆ ಶ್ರದ್ಧೆಯಿಂದ ಕೊಟ್ಟಿರುವ ವಿಷಯವನ್ನೂ ಯಮಧರ್ಮರಾಜನಿಗೆ ಅರುಹಿದರು. ಯಮರಾಯನು ಇದೆಲ್ಲವನ್ನು ಕೇಳಿ ಚಿತ್ರಗುಪ್ತನೊಂದಿಗೆ ಇದರ ಮಹಾಫಲದ ಬಗ್ಗೆ ವಿಚಾರಿಸಿ ॥೭೦॥ ವಿನಯಾನ್ವಿತನಾದ ತನ್ನ ದೂತನನ್ನು ಕರೆದು ಹೀಗೆ ಆಜ್ಞಾಪಿಸಿದನು - 'ಅಯ್ಯಾ, ನೀನು ಬಹುವೇಗದಿಂದ ಪಶುಕ್ರೀತನಿರುವಲ್ಲಿ ಹೋಗಿ ಅವನನ್ನು ಆ ರೌರವನರಕದಿಂದ ಮೇಲೆತ್ತಿ ॥೭೧॥ ದೇವ ವಿಮಾನದಲ್ಲಿ ಕುಳ್ಳಿರಿಸಿ ಸ್ವರ್ಗಲೋಕಕ್ಕೆ ಕೊಟ್ಟು ಕಳಿಸಬೇಕು. ಈ ಪಶುಕ್ರೀತನು ಆಷಾಢಸ್ನಾನದ ಪುಣ್ಯವಿಶೇಷವನ್ನು ಸಂಪಾದಿಸಿದವನಾಗಿ ಸಕಲಪಾಪಗಳಿಂದ ಮುಕ್ತನಾಗಿದ್ದಾನೆ. ॥೭೨॥ ಇವನ ಹೆಂಡತಿ ಏನಿರುವಳೋ ಅವಳು ತಾಪೀನದಿಯಲ್ಲಿ ಸ್ನಾನಮಾಡಿ ಬಂದ, ಮಹಾಪುಣ್ಯವನ್ನು ಇವನಿಗೆ ಸಮರ್ಪಿಸಿದ್ದಾಳೆ. ಆ ಮಹಾಪುಣ್ಯಸಂಪಾದನೆಯಿಂದ ಈ ಪಶುಕ್ರೀತನು ಈಗ ಮನೋಹರವಾದ ಭೋಗಗಳನ್ನು ಭೋಗಿಸಲು ಅರ್ಹನಾಗಿದ್ದಾನೆ. ॥೭೩॥ ಒಂದು ಕಲ್ಪವು ಮುಗಿಯುವವರೆಗೆ ಭೋಗಿಸುತ್ತಿದ್ದರೂ ಅವನ ಪುಣ್ಯವು ಕ್ಷಯಿಸುವದಿಲ್ಲ. ಇತರ ಪುಣ್ಯಗಳು ಭೋಗದಿಂದ ನಾಶಹೊಂದುತ್ತವಷ್ಟೇ! ॥೭೪॥ ಆದರೆ ಆಷಾಢದಲ್ಲಿ

ಅತ್ರ ಯತ್ ಕ್ರಿಯತೇ ಪುಣ್ಯಮಾಪಾಥೇ ತಪತೀಜಲೇ ।
ತಸ್ಯ ಪುಣ್ಯಸ್ಯ ನಾಂತೋಽಸ್ತಿ ಭೋಗಾತ್ಕಲ್ಪಶತೈರಪಿ ॥೭೫॥

ತತೋಽಸೌ ಧರ್ಮರಾಜಸ್ಯ ವಾಕ್ಯೇನ ತ್ವರಯಾನ್ವಿತಃ ।
ಯಾತ್ವಾ ಚ ತಂ ಸಮುದ್ಧೃತ್ಯ ರೌರವಾತ್ ಭೃಶದಾರುಣಾತ್ ॥೭೬॥

ವಿಮಾನವರಮಾರೋಪ್ಯ ಜಾತಂ ದಿವ್ಯಶರೀರಕಮ್ ।
ದಿವ್ಯಾಂಗರಾಗವಸ್ತ್ರೈ ಚ ದಿವ್ಯಚಂದನಚರ್ಚಿತಮ್ ॥೭೭॥

ದಿವ್ಯವಸ್ತ್ರಪರೀಧಾನಂ ದಿವ್ಯಮಾಲ್ಯೋಪಶೋಭಿತಮ್ ।
ಶಾಸನಾದ್ಧರ್ಮರಾಜಸ್ಯ ವಿನಾಯ ತ್ರಿದಿವಂ ಪ್ರತಿ ॥೭೮॥

ಹರ್ಷಿತಶ್ಚ ಪಶುಕ್ರೀತೋ ವಿಸ್ಮಯೋತ್ಫುಲ್ಲಲೋಚನಃ ।
ಏತತ್ ಸ್ವಪ್ನಮಥೋ ಭ್ರಾಂತಿರಸತ್ಯಂ ಸತ್ಯಮೇವ ವಾ ॥೭೯॥

ಕಿಮೇತನ್ಮಮ ಪಾಪಸ್ಯ ಸ್ವರ್ಗಪ್ರಾಪ್ತಿಃ ಕಥಂ ಭವೇತ್ ।
ನಾಸ್ತಿ ಮೇ ಸುಕೃತಂ ಕಿಂಚಿದ್ಧ್ರುವಂ ಮೇ ಪಾಪಕಾರಿಣಃ ॥೮೦॥

ಸರ್ವಥಾ ನೈವ ಪಶ್ಯಾಮಿ ಸ್ವಸ್ವರ್ಗಪ್ರಾಪ್ತಿಕಾರಣಮ್ ।
ಕೋಽಯಂ ವಾ ಪುರುಷೋ ಯೇನ ರೌರವಾದಹಮುದ್ಧೃತಃ ॥೮೧॥

ತಾಪೀನದಿಯಲ್ಲಿ ಸ್ನಾನಮಾಡಿ ಮನುಷ್ಯನು ಎಷ್ಟು ಪುಣ್ಯವನ್ನು ಸಂಪಾದಿಸುವನೋ ಅದು ನೂರಾರು ಕಲ್ಪಗಳವರೆಗೆ ಭೋಗಿಸಿದರೂ ಕಡಿಮೆಯಾಗುವದಿಲ್ಲ. ॥೭೫॥ ಈ ಪ್ರಕಾರ ಯಮಧರ್ಮನಿಂದ ಆಜ್ಞಪ್ತನಾದ ದೂತನು ಕೂಡಲೇ ಪಶುಕ್ರೀತನಿದ್ದಲ್ಲಿ ಧಾವಿಸಿ ಬಂದು ಅವನನ್ನು ಅತಿ ದಾರುಣವಾದ ರೌರವನರಕದಿಂದ ಉದ್ಧರಿಸಿದನು. ॥೭೬॥ ಮುಂದೆ ಅವನು ದಿವ್ಯವಾದ ವಿಮಾನವನ್ನೇರಿದಾಗ ದಿವ್ಯಶರೀರವನ್ನು ಹೊಂದಿದವನಾಗಿ ಅಲ್ಲಿ ದಿವ್ಯವಾದ ಪೀತಾಂಬರ, ಚಂದನ ॥೭೭॥ ವಸ್ತ್ರಗಳು, ಮನೋಹರವಾದ ಮಾಲೆಗಳಿಂದ ಶೋಭಿಸಿದನು. ಯಮಧರ್ಮರಾಯನ ಶಾಸನಾನುಸಾರ ಆ ದೂತನು ಅವನನ್ನು ಸ್ವರ್ಗಲೋಕಕ್ಕೆ ಕರೆದೊಯ್ದನು. ॥೭೮॥ ಪೂರ್ವ ಸೂಚನೆ ಇಲ್ಲದೇ ಏಕಾಏಕೀ ನಡೆದ ಇದೆಲ್ಲವನ್ನೂ ಕಂಡು ಪಶುಕ್ರೀತನು ಅತಿ ವಿಸ್ಮಿತನೂ ಹರ್ಷಿತನೂ ಆದನು. 'ಅಹೋ ! ಇದೇನು ಸ್ವಪ್ನವೋ, ಭ್ರಾಂತಿಯೋ, ಸತ್ಯವೋ, ಅಸತ್ಯವೋ ಒಂದೂ ತಿಳಿಯದಾಗಿದೆ. ॥೭೯॥ ಇದೇನು ! ನಾನು ಮಾಡಿದ್ದ ಪಾಪಕ್ಕೆ ಸ್ವರ್ಗಪ್ರಾಪ್ತಿಯು ಹೇಗಾಯಿತು ? ಕೇವಲ ಪಾಪಗಳನ್ನೇ ಮಾಡಿದ್ದ ನಾನು ಇನಿತೂ ಸುಕೃತವನ್ನು ಮಾಡಿರಲಿಲ್ಲ. ॥೮೦॥ ಈ ನನ್ನ ಸ್ವರ್ಗಪ್ರಾಪ್ತಿಗೆ ಎಷ್ಟು ವಿಚಾರಿಸಿದರೂ ಕಾರಣವು ತಿಳಿಯದಾಗಿದೆಯಲ್ಲ ! ರೌರವನರಕದಿಂದ ಉದ್ಧರಿಸಿದ ಈ

ಕ್ಷಣಂ ಸುಖಂ ಮೇ ಸಂಜಾತಂ ಏತಚ್ಚ ಕಿಂ ಸ್ವಭಾವಜಮ್ ।
ಏವಂ ವಿತರ್ಕ್ಯ ಬಹುಧಾ ಪುರುಷಂ ಸಮಭಾಷತ ॥೮೨॥

ಕಸ್ತ್ವಂ ಕಸ್ಮಾದಾಗತೋಽಸಿ ಕೇನ ವಾ ಪ್ರೇಷಿತಃ ಶುಭಃ ।
ಕೇನಾಹಂ ಮೋಚಿತೋಽಸ್ಮ್ಯಸ್ಮಾದ್ರೌರವಾದ್ದಾರುಣಾತ್ ಭೃಶಮ್ ॥೮೩॥

ಮಹಾಪುಣ್ಯಸ್ಯ ಲೇಶೋಽಪಿ ನ ಕೃತಃ ಪಾಪಬುದ್ಧಿನಾ ।
ಯತ್ನೇನ ಪಾತಕಮಹೋ ಮಯಾ ಪ್ರತಿದಿನಂ ಕೃತಮ್ ॥೮೪॥

ಕಸ್ಮಾನ್ಮೇ ಸ್ವರ್ಗಸಂಪ್ರಾಪ್ತಿರೇಷ ಮೇ ಸಂಶಯೋ ಮಹಾನ್ ।
ಏತಂ ಮೇ ಸಂಶಯಂ ಪ್ರಾಪ್ತಂ ಛೇತ್ತುಮರ್ಹಸಿ ಬಾಂಧವ ॥೮೫॥

ಯೇನಾಹಂ ದಾರುಣಾದಸ್ಮಾತ್ ದುಃಖಾಚ್ಚೈವ ಸಮುದ್ಧೃತಃ ।
ಯೋ ನ ಕುರ್ಯಾತ್ಪಿತಾ ಭ್ರಾತಾ ನ ಪುತ್ರೋ ನ ಚ ಬಾಂಧವಃ ॥೮೬॥

ಕೃಪಾಲುರಪಿ ನಾಸ್ತ್ಯನ್ಯೋ ಧರ್ಮರಾಜಾದ್ವಿನಾಪಿ ಹಿ ।
ಮಿಲಿಷ್ಯತಿ ಚ ಕೋಪ್ಯನ್ಯಃ ಸ ನಾಸ್ತಿ ಭುವನತ್ರಯೇ ॥೮೭॥

ಪುರುಷನಾರಿರಬಹುದು ? ॥೮೧॥ ಒಂದು ಕ್ಷಣದಲ್ಲಿ ನನಗೆ ಸುಖವುಂಟಾಯಿತು. ಇದೇನು ಸ್ವಾಭಾವಿಕವಾದ ಸುಖವೋ? ಹೀಗೆಲ್ಲ ಬಹು ಯೋಚಿಸಿದ ನಂತರ ಪಶುಕ್ರೀತನು ಜೊತೆಯಲ್ಲಿದ್ದ ಯಮದೂತನನ್ನು ಕೇಳಿದನು- ॥೮೨॥ ಅಯ್ಯಾ ಶುಭದಾಯಕನೇ! ನೀನಾರು? ಎಲ್ಲಿಂದ ಬಂದಿರುವಿ? ನಿನ್ನನ್ನು ಯಾರಾದರೂ ಕೊಟ್ಟು ಕಳಿಸಿರುವರೇ? ಯಾವ ಕಾರಣಕ್ಕಾಗಿ ನಾನು ಅತಿದಾರುಣವಾದ ಈ ರೌರವನರಕದಿಂದ ಉದ್ಧೃತನಾಗಿರುವೆನು? ॥೮೩॥ ಪಾಪಬುದ್ಧಿಯಾದ ನಾನಂತೂ ಪುಣ್ಯದ ಲವಲೇಶವನ್ನೂ ಮಾಡಿರಲಿಲ್ಲವಲ್ಲ ! ಪ್ರತಿದಿನವೂ ಪ್ರಯತ್ನಪೂರ್ವಕ ಪಾಪಕರ್ಮಗಳನ್ನೇ ಮಾಡಿದ್ದೆನು ! ॥೮೪॥ ಹೀಗಿರುವಾಗ ಯಾವ ಕಾರಣದಿಂದ ಇಂದು ನನಗೆ ಈ ಸ್ವರ್ಗ ಪ್ರಾಪ್ತಿಯಾಗಿದೆ? ಇದೆಲ್ಲದರ ಬಗ್ಗೆ ನನಗೆ ಮಹಾಸಂಶಯವು ಉಂಟಾಗಿದೆ. ಹೇ ಬಾಂಧವಾ ! ನನ್ನ ಈ ಸಂಶಯವನ್ನು ದೂರಮಾಡು. ॥೮೫॥ ಈ ದಾರುಣವಾದ ರೌರವನರಕದಿಂದಲೂ ಮತ್ತು ಅಲ್ಲಿಯ ದುಃಖಯಾತನೆಗಳಿಂದಲೂ ನಾನಿಂದು ಮುಕ್ತಗೊಳಿಸಲ್ಪಟ್ಟಿದ್ದೇನೆ. ನನ್ನನ್ನು ಈ ನರಕದಿಂದ ಉದ್ಧರಿಸಲು ನನ್ನ ತಂದೆಯಾಗಲಿ, ಸಹೋದರನಾಗಲಿ, ಪುತ್ರನಾಗಲೀ ಅಥವಾ ಬಾಂಧವನಾಗಲೀ ಇವರಲ್ಲಿ ಯಾರಿಗೂ ಸಾಧ್ಯವಾಗಲಾರದು. ॥೮೬॥ ಯಮಧರ್ಮರಾಜನನ್ನು ಬಿಟ್ಟರೆ ಬೇರಾವ ಕೃಪಾಲುವೂ ಈ ಕಾರ್ಯವನ್ನು ಮಾಡಲಾರರು. ತ್ರಿಲೋಕಗಳಲ್ಲಿ ಇಂಥ ಕಾರ್ಯವನ್ನು ಮಾಡಲು ಸಮರ್ಥನಾದವನು ಯಮಧರ್ಮನನ್ನು ಬಿಟ್ಟರೆ ಬೇರೆ

ಇತ್ಯುಕ್ತೇ ತೇನ ಸ ತದಾ ದೇವದೂತ ಉವಾಚ ತಮ್ ।
ಕಿಂ ಕರಿಷ್ಯಸಿ ಪ್ರಶ್ನೇನ ಸ್ವರ್ಗಮೇಹಿ ಮಯಾ ಸಹ ॥೮೮॥

ಭುಂಕ್ಷ್ವಾತ್ರ ವಿಪುಲಾನ್ ಭೋಗಾನ್ಮಾನವೈರತಿದುರ್ಲಭಾನ್ ।
ಅತ್ಯಂತಪುಣ್ಯಜನಿತಾನ್ ಕಾಲಾವಧಿವಿವರ್ಜಿತಾನ್ ॥೮೯॥

ಅಥವಾ ಶ್ರವಣೇಚ್ಛಾ ತೇ ತತ್ ಶೃಣುಷ್ವ ವದಾಮಿ ತೇ ।
ಯಮಸ್ಯ ಪುರುಷಂ ಮಾಂ ತ್ವಂ ತದ್‌ಗೃಹಾಚ್ಚ ಸಮಾಗತಮ್ ॥೯೦॥

ತೇನ ಚ ಪ್ರೇಷಿತಂ ವಿದ್ಧಿ ತದ್ವಾಕ್ಯಾಚ್ಚ ವಿಮೋಚಿತಃ ।
ಸ್ವರ್ಗಂ ನಿನೀಯಸೇ ತದ್ವದಿತಿ ತೇ ಕಥಿತಂ ಮಯಾ ॥೯೧॥

ಇತಿ ದೂತವಚಃ ಶ್ರುತ್ವಾ ಪಶುಕ್ರೇತಃ ಪುನಸ್ತದಾ ।
ಉವಾಚ ಪುನರಪ್ಯಾತ್ಮನ್ ಮಮ ತದ್ಧಿತಕಾರಕಮ್ ॥೯೨॥

ಮಮ ಮಿತ್ರಂ ಖರಕ್ರೇತಃ ಪಾತ್ಯಮಾನೋಽಸ್ತಿ ರೌರವೇ ।
ಮಯಾ ತೇನ ಚ ಸಂಭೂಯ ಪಾತಕಂ ಬಹುಶಃ ಕೃತಮ್ ॥೯೩॥

ಕುಮೃತ್ಯುರಪಿ ತುಲ್ಯೋಽಭೂತ್ ನ ತು ದಾಹಾದಿಕಾಃ ಕ್ರಿಯಾಃ ।
ತಸ್ಯಾಪ್ಯಾಸೀದ್ರೌರವಶ್ಚ ದ್ವಯೋರಪ್ಯಭವತ್ಸಮಃ ॥೯೪॥

ಇನ್ನಾರು ಇರುವರು?' ॥೮೭॥ ಈ ಪ್ರಕಾರವಾಗಿ ಪಶುಕ್ರೇತನು ಮಾತನಾಡುತ್ತಿರಲು ದೇವದೂತನು ಹೇಳಿದನು- ಅಯ್ಯಾ ! ಇವೆಲ್ಲ ಪ್ರಶ್ನೆಗಳಿಂದೇನು ಮಾಡುವಿ? ಏನೊಂದೂ ವಿಚಾರಿಸದೇ ನನ್ನೊಂದಿಗೆ ಸ್ವರ್ಗಕ್ಕೆ ನಡೆ. ॥೮೮॥ ಅಲ್ಲಿ ಮಾನವರಿಗೆ ಅತಿ ದುರ್ಲಭವಾದ, ಬಹುಪುಣ್ಯಗಳಿಂದ ಪ್ರಾಪ್ತವಾಗುವ, ಕಾಲಾವಧಿ ಇಲ್ಲದೆ ವಿಪುಲವಾದ ಭೋಗಗಳನ್ನೂ ಭೋಗಿಸುವಿಯಂತೆ ॥೮೯॥ ಅಥವಾ ಪ್ರಶ್ನೆಗಳಿಗೆ ಉತ್ತರವನ್ನು ಕೇಳಲೇಬೇಕೆಂದು ಬಯಸುವಿಯಾದರೆ ಹೇಳುವೆನು ಕೇಳು. ನಾನು ಯಮದೂತನಾಗಿದ್ದೇನೆ. ಯಮಸದನದಿಂದ ಇಲ್ಲಿಗೆ ಬಂದಿರುವೆನು. ॥೯೦॥ ಯಮಧರ್ಮನಿಂದ ಇಲ್ಲಿಗೆ ಕಳಿಸಲ್ಪಟ್ಟದ್ದು ಅವನ ಆಜ್ಞಾನುಸಾರವಾಗಿ ನಿನ್ನನ್ನು ಮುಕ್ತಗೊಳಿಸಿದ್ದೇನೆ ಮತ್ತು ನಿನ್ನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿದ್ದೇನೆ. ಅಯ್ಯಾ, ನೀನು ಕೇಳಿದುದಕ್ಕೆಲ್ಲ ಉತ್ತರಿಸಿದ್ದೇನೆ. ॥೯೧॥ ಯಮದೂತನ ಈ ಮಾತುಗಳನ್ನು ಕೇಳಿ- ''ಭೋ ಆತ್ಮೀಯನೇ, ಯಮಧರ್ಮರಾಯನು ಮಾಡಿದ್ದು ನನಗೇನೋ ಹಿತಕಾರಕವಾಗಿದೆ. ॥೯೨॥ ಆದರೆ ನನ್ನ ಮಿತ್ರನಾದ ಖರಕ್ರೇತನು ಇನ್ನೂ ರೌರವನರಕದಲ್ಲಿ ಬಿದ್ದು ದುಃಖಪಡುತ್ತಿದ್ದಾನಲ್ಲಾ. ನಾವಿಬ್ಬರೂ ಕೂಡಿಯೇ ಅನೇಕ ಪಾಪಕರ್ಮಗಳನ್ನು ಮಾಡಿದ್ದೆವು. ॥೯೩॥ ಮತ್ತು ಇಬ್ಬರಿಗೂ ದುರ್ಮರಣವೇ ಆಗಿದ್ದು ಇಬ್ಬರಿಗೂ ದಾಹಾದಿಕ್ರಿಯೆಗಳಾವವೂ ನಡೆದಿರುವದಿಲ್ಲ. ಈ ಎಲ್ಲ ಕಾರಣಗಳಿಂದಲೇ

ತ್ಯಕ್ತಃ ಸ ಕಥಂ ತತ್ರೈವ ಕಸ್ಮಾದಹಂ ಚ ಮೋಚಿತಃ ।
ಏತನ್ಮೇ ಕಾರಣಂ ದೇವದೂತ ಬ್ರೂಹಿ ಯಥಾ ತಥಾ ॥೯೫॥

ದೂತ ಉವಾಚ-
ಸ್ವರ್ಗಸ್ಯ ಕಾರಣಂ ಶ್ರೋತುಮಿಚ್ಛಾ ತೇ ತನ್ನಿಶಾಮಯ ।
ಯಾವತ್ ತ್ಯಕ್ತಾ ತ್ವಯಾ ಭಾರ್ಯಾ ಶ್ರೋತ್ರಿಯಾಣಾಂ ಕುಲೋದ್ಭವಾ ॥೯೬॥

ಆಷಾಢಸ್ನಪನಂ ಯಸ್ಯಾಸ್ತಪತ್ಯಾಂ ಪಾಪನಾಶನಮ್ ।
ತಸ್ಯ ಪುಣ್ಯಂ ತಯಾ ದತ್ತಂ ತುಭ್ಯಂ ಬ್ರಾಹ್ಮಣಸನ್ನಿಧೌ ॥೯೭॥

ತತ್ಪುಣ್ಯಂ ಚ ಮಹತ್ ಜ್ಞಾತ್ವಾ ಧರ್ಮರಾಜೇನ ತತ್ಕ್ಷಣಾತ್ ।
ಮೋಚಿತೋ ನರಕಾದ್ ಘೋರಾತ್ಕಲ್ಪಭೋಗಾತ್ಸುದುಃಖದಾತ್ ॥೯೮॥

ಆಷಾಢಪುಣ್ಯದಾನೇನ ಮೋಚಿತಸ್ತ್ವಂ ಸ್ವಭಾರ್ಯಯಾ ।
ಖರಕ್ರೀತಸ್ಯ ನರಕಾನ್ಮುಕ್ತಿಸ್ತಸ್ಯ ನ ವಿದ್ಯತೇ ॥೯೯॥

ತಸ್ಮಾದ್ವರ್ಷಸಹಸ್ರಾಣಿ ಪತಿತೋಽಸೌ ಹಿ ರೌರವೇ ।
ಪೀಡ್ಯಮಾನೋ ನಿಜಂ ಕರ್ಮ ಭುಕ್ತ್ವಾ ಯದ್ವಿಹಿತಂ ಪುರಾ ॥೧೦೦॥

ಖರಕ್ರೀತನಿಗೂ ನನಗೂ ರೌರವನರಕಗಳಾದವು. ॥೯೪॥ ಹೀಗಿರುವಾಗ ಅದಾವ ಕಾರಣಕ್ಕಾಗಿ ಅವನು ಅಲ್ಲಿಯೇ ಉಳಿದನು? ಮತ್ತು ಅವನನ್ನು ಬಿಟ್ಟು ನಾನೊಬ್ಬನೇ ಏತಕ್ಕಾಗಿ ಮುಕ್ತಗೊಳಿಸಲ್ಪಟ್ಟಿರುವೆನು? ಅಯ್ಯಾ ದೇವದೂತನೇ! ಇದೆಲ್ಲದರ ರಹಸ್ಯವನ್ನು ಇದ್ದಕ್ಕಿದ್ದಂತೆ ನೀನು ದಯಮಾಡಿ ನನಗೆ ತಿಳಿಸುವವನಾಗು ಎಂದು ಪುನಃ ಕೇಳಲು ॥೯೫॥ ದೂತನು ಹೇಳಿದನು- ಅಯ್ಯಾ, ನಿನ್ನ ಸ್ವರ್ಗಪ್ರಾಪ್ತಿಯ ಕಾರಣವನ್ನು ಕೇಳಬೇಕೆಂದು ಬಯಸುವಿಯಾದರೆ ಹೇಳುವೆನು ಕೇಳು'. ಶ್ರೋತ್ರಿಯರ ಕುಲದಲ್ಲಿ ಜನಿಸಿದ ಹೆಂಡತಿಯನ್ನು ನೀನು ಕಾರಣಾಂತರದಿಂದ ಬಿಟ್ಟು ಹೋದನಂತರ ॥೯೬॥ ಅವಳು ತನ್ನ ತಂದೆಯ ಮನೆಯಲ್ಲಿದ್ದಳು. ಅವಳು ಮುಂದೆ ಆಷಾಢಮಾಸ ಬಂದಾಗ ತಾಪೀ ನದಿಯಲ್ಲಿ ಪಾಪನಾಶಕವಾದ ಪ್ರಾತಃಸ್ನಾನವನ್ನು ಮಾಡಿದಳು. ಈ ಪ್ರಾತಃಸ್ನಾನದಿಂದ ಬಂದ ಪುಣ್ಯವನ್ನು ಅವಳು ಬ್ರಾಹ್ಮಣರ ಸಮ್ಮುಖದಲ್ಲಿ ನಿನಗೆ ಸಮರ್ಪಿಸಿದ್ದಾಳೆ. ॥೯೭॥ ಅದು ಮಹಾಪುಣ್ಯವಾಗಿರುವದನ್ನರಿತ ಧರ್ಮರಾಯನು ಕಲ್ಪಾಂತದವರೆಗೆ ನಿನಗೆ ಅತಿ ದುಃಖದಾಯಕವಾಗಲಿದ್ದ ಘೋರವಾದ ಈ ನರಕದಿಂದ ನಿನ್ನನ್ನು ಮುಕ್ತಗೊಳಿಸಿದನು. ॥೯೮॥ ಈ ಪ್ರಕಾರವಾಗಿ ನಿನ್ನ ಪತ್ನಿಯು ಆಷಾಢ ಸ್ನಾನದ ಪುಣ್ಯವನ್ನು ನಿನಗೆ ಕೊಟ್ಟ ಕಾರಣ ನೀನು ನರಕಾದ್ಯನರ್ಥದಿಂದ ಮುಕ್ತನಾಗಿರುವಿ. ಆದರೆ ಆ ಖರಕ್ರೀತನಿಗೆ ಮಾತ್ರ ಮುಕ್ತಿ ಇರುವದಿಲ್ಲ. ॥೯೯॥ ಆದ್ದರಿಂದಲೇ ಇವನು ಸಾವಿರಾರು ವರ್ಷಗಳವರೆಗೆ ರೌರವನರಕದಲ್ಲಿ ಬಿದ್ದು ದುಃಖಪಡುತ್ತ ತನ್ನ

ಆಷಾಢಸ್ನಾನಸ್ಯ ತ್ವಂ ಫಲಂ ಸುವಿಪುಲಂ ದಿವಿ ।
ನಿತ್ಯಂ ರಮಸ್ವ ಭುಂಜಾನೋ ಯಾವತ್ಕಲ್ಪವ್ಯವಸ್ಥಿತಿಃ ॥೧೦೧॥

ಇತಿ ತದ್ವಚಸಃ ಪ್ರೀತಃ ಪಶುಕ್ರೀತೋಽಭ್ಯಯಾತ್ಪುನಃ ।
ಯಮಸ್ಯಾನುಚರೋ ಭೂತ್ವಾ ದಯಾಲುಸ್ತ್ವಂ ವಿಲೋಕ್ಯಸೇ ॥೧೦೨॥

ತಂ ತ್ವಾಂ ಕಿಯದಹಂ ಯಾಚೇ ನಾನ್ಯಥಾ ಪುರುಷೇ ಯದಿ ।
ಯದಾಷಾಢಸ್ಯ ಮೇ ಪುಣ್ಯಮಸ್ತಿ ದತ್ತಂ ತು ಭಾರ್ಯಯಾ ॥೧೦೩॥

ಅಹಂ ಯಸ್ಯಾಃ ಪ್ರಭಾವೇನ ನಿರ್ಗತೋ ರೌರವಾತ್ ಕ್ಷಣಾತ್ ।
ತದರ್ಧಪುಣ್ಯಂ ದತ್ವಾ ತ್ವಂ ಖರಕ್ರೀತೋಽಪಿ ಮುಚ್ಯತಾಮ್ ॥೧೦೪॥

ನರಕೇ ದಾರುಣೇ ತ್ಯಕ್ತ್ವಾ ಕಥಮೇನಂ ವ್ರಜಾಮ್ಯಹಮ್ ।
ಭ್ರಾತುರಪ್ಯಧಿಕಂ ಯಸ್ಮಾತ್ ಧೃಷಂ ಮೇ ಸಹಚಾರಿಣಮ್ ॥೧೦೫॥

ಯದ್ಯನೇನ ಸಮಂ ಸ್ವರ್ಗಂ ಯಾಮ್ಯಹಂ ತ್ವತ್ ಪ್ರಸಾದತಃ ।
ಏತದ್ಯಾಚೇಽಂಜಲಿಂ ಬಧ್ವಾ ನಾನ್ಯಥಾ ಕರ್ತುಮರ್ಹಸಿ ॥೧೦೬॥

ಕರ್ಮಫಲವನ್ನು ಅನುಭೋಗಿಸುವನು. ॥೧೦೦॥ ಆಷಾಢಸ್ನಾನದ ಫಲವನ್ನು ಹೊಂದಿರುವ ನೀನಾದರೋ ಸ್ವರ್ಗದಲ್ಲಿ ನಿತ್ಯವೂ ವಿಪುಲವಾದ ಭೋಗಗಳನ್ನು ಭೋಗಿಸುತ್ತ ಕಲ್ಪಾಂತದವರೆಗೆ ಸುಖದಿಂದ ಇರುವವನಾಗು. ॥೧೦೧॥ ಯಮದೂತನ ಮಾತುಗಳಿಂದ ಪ್ರೀತನಾದ ಪಶುಕ್ರೀತನು ಪುನಃ ಪ್ರಾರ್ಥಿಸಿದನು- 'ಅಯ್ಯಾ, ನೀನು ಯಮಧರ್ಮನ ದೂತನಾಗಿದ್ದರೂ ಬಹು ದಯಾಳುವಾಗಿರುವಂತೆ ಕಾಣುತ್ತಿರುವಿ. ॥೧೦೨॥ ದಯಾಳುವಾಗಿರುವದರಿಂದಲೇ ನಿನ್ನನ್ನು ಒಂದು ವಿಷಯಕ್ಕಾಗಿ ಪ್ರಾರ್ಥಿಸುತ್ತಿರುವೆನು- ಏನೆಂದರೆ, ನನ್ನ ಹೆಂಡತಿಯಿಂದ ಕೊಡಲ್ಪಟ್ಟ ಪುಣ್ಯವಿಶೇಷವೇನಿದೆಯೋ ॥೧೦೩॥ ಮತ್ತು ಯಾವಳ ಪುಣ್ಯಪ್ರಭಾವದಿಂದ ನಾನಿಂದು ಒಂದು ಕ್ಷಣದಲ್ಲಿ ಈ ರೌರವನರಕದಿಂದ ಉದ್ಧೃತನಾಗಿರುವೆನೋ, ಆ ಪುಣ್ಯದ ಅರ್ಧಭಾಗವನ್ನು ಖರಕ್ರೀತನಿಗೆ ಕೊಟ್ಟು ಅವನನ್ನೂ ಕೂಡ ಈ ನರಕದುಃಖದಿಂದ ಮುಕ್ತಗೊಳಿಸಬೇಕು. ॥೧೦೪॥ ದಾರುಣವಾದ ಈ ನರಕದಲ್ಲಿ ಇವನನ್ನು ಬಿಟ್ಟು ನಾನೊಬ್ಬನೇ ಅದೆಂತು ಸ್ವರ್ಗಕ್ಕೆ ಹೋಗಲಿ? ಸಹೋದರನಿಗಿಂತಲೂ ಅಧಿಕನಾಗಿರುವ ಈ ನನ್ನ ಸಹಚಾರಿಯನ್ನೂ ನನ್ನೊಂದಿಗೆ ಕಳಿಸು. ॥೧೦೫॥ ಹಾಗೆ ಮಾಡಿದೆಯಾದರೆ ನಿನ್ನ ಅನುಗ್ರಹದಿಂದ ಇವನೊಂದಿಗೆ ಕೂಡಿಕೊಂಡೇ ನಾನು ಸ್ವರ್ಗಕ್ಕೆ ಹೊರಡುವೆನು. ಅಯ್ಯಾ ನಿನಗೆ ಕೈಮುಗಿದು ಇದೊಂದನ್ನೇ ಪ್ರಾರ್ಥಿಸುತ್ತಿರುವೆನು. ನನ್ನ ಪ್ರಾರ್ಥನೆಯನ್ನು ತಿರಸ್ಕರಿಸದಿರು. ॥೧೦೬॥ ಉತ್ತಮರಲ್ಲಿ ಮಾಡಿದ ಪ್ರಾರ್ಥನೆಯು ಎಂದಿಗೂ

ಉತ್ತಮೇ ವಿಫಲಾ ಯಾಂಚಾ ಕಸ್ಯಾಪೀಹ ನ ಜಾಯತೇ ।
ಇತಿ ಶ್ರುತ್ವಾ ದೇವದೂತಃ ಪುನಸ್ತಂ ಪ್ರತ್ಯಭಾಷತ ॥೧೦೭॥

ಏನೇಷ್ಯಸಿ ಯದಿ ಸ್ವರ್ಗಂ ಸ್ವಮಿತ್ರಂ ಪ್ರತಿದೀಯತಾಮ್ ।
ಸವನಾರ್ಧಫಲಂ ತಸ್ಮೈ ನಿರಯಾದ್ಯೇನ ನಿಃಸರೇತ್ ॥೧೦೮॥

ತತೋಽಸೌ ಹೃಷ್ಟಮನಸಾ ದದೌ ಪುಣ್ಯಾರ್ಧಮಾದೃತಃ ।
ದತ್ತಂ ಪುಣ್ಯಂ ದೇವದೂತಃ ಸ್ಥಾಪಯಿತ್ವಾ ತು ತಂ ಪಥಿ ॥೧೦೯॥

ನಿವೃತ್ತಸ್ತಂ ಗೃಹೀತ್ವಾ ತು ತತ್ಸಮೀಪಮುಪಾಯಯೌ ।
ಖರಕ್ರೀತೇನ ಸಂಯುಜ್ಯ ಪಶುಕ್ರೀತಸ್ತು ಹರ್ಷಿತಃ ॥೧೧೦॥

ತಸ್ಯ ಪತ್ನ್ಯಾತು ಯದ್ದತ್ತಂ ಪುಣ್ಯಮಾಷಾಢಸಂಭವಮ್ ।
ತದ್ವಿಭಜ್ಯ ಯಥಾದತ್ತಂ ತೇನ ತಸ್ಮೈ ಸ್ವಪುಣ್ಯತಃ ॥೧೧೧॥

ಖರಕ್ರೀತೋ ಯಥಾ ಹೃಷ್ಟಃ ಪಶುಕ್ರೀತಸ್ಯ ತಾಂ ಸ್ತ್ರಿಯಮ್ ।
ತುಷ್ಟಾವ ಪರಮಪ್ರೀತ್ಯಾ ಹರ್ಷಯುಕ್ತೇನ ಚೇತಸಾ ॥೧೧೨॥

ಅಹೋ ಧನ್ಯಾಃ ಸ್ತ್ರಿಯಸ್ತಾಶ್ಚ ತಾರಯಂತಿ ನಿಜಂ ಪತಿಮ್ ।
ಯಾಃ ಕಷ್ಟೇಭ್ಯಃ ಸಮಸ್ತೇಭ್ಯೋ ವಿಹೀನೇಭ್ಯೋಽಪಿ ಮೋಚಕಾಃ ॥೧೧೩॥

ವಿಫಲವಾಗುವದಿಲ್ಲವಷ್ಟೇ!' ಈ ಪ್ರಕಾರಪಾಗಿ ಪಶುಕ್ರೀತನು ನುಡಿಯಲು ಅವನ ಮಾತುಗಳನ್ನು ಕೇಳಿದ ದೇವದೂತನು ॥೧೦೭॥ 'ಅಯ್ಯಾ, ನೀನು ನಿನ್ನ ಮಿತ್ರನನ್ನು ಸ್ವರ್ಗಕ್ಕೆ ಕರೆದೊಯ್ಯಲು ಬಯಸುವಿಯಾದರೆ ಆಷಾಢಸ್ನಾನ ಫಲದ ಅರ್ಧಭಾಗವನ್ನು ಖರಕ್ರೀತನಿಗೆ ಸಂಕಲ್ಪಪೂರ್ವಕ ಸಮರ್ಪಿಸುವವನಾಗು. ಹಾಗೆ ಮಾಡಿದೆಯಾದರೆ ಅವನೂ ನರಕದಿಂದ ಉದ್ಧೃತನಾಗುವನು' ಎಂದು ತಿಳಿಸಿದನು. ॥೧೦೮॥ ದೇವದೂತನ ಮಾತಿನಂತೆ ಪಶುಕ್ರೀತನು ಕೂಡಲೇ ದೃಢಮನಸ್ಸಿನಿಂದ ತನ್ನ ಪುಣ್ಯದ ಅರ್ಧಭಾಗವನ್ನು ಆದರದಿಂದ ಖರಕ್ರೀತನಿಗೆ ಸಮರ್ಪಿಸಿದನು. ಆಗ ದೇವದೂತನು ಪಶುಕ್ರೀತನನ್ನು ಮಾರ್ಗಮಧ್ಯದಲ್ಲಿ ಬಿಟ್ಟು ॥೧೦೯॥ ಅವನಿಂದ ಕೊಡಲ್ಪಟ್ಟ ಪುಣ್ಯವನ್ನು ತೆಗೆದುಕೊಂಡು ಖರಕ್ರೀತನಿದ್ದಲ್ಲಿ ಬಂದನು ಮತ್ತು ಯಮನ ಆಜ್ಞಾನುಸಾರವಾಗಿ ಖರಕ್ರೀತನನ್ನೂ ಮುಕ್ತಗೊಳಿಸಿ ಅವನನ್ನು ಪಶುಕ್ರೀತನಿದ್ದಲ್ಲಿ ತಂದುಬಿಟ್ಟನು. ಆಗ ಪಶುಕ್ರೀತನು ಬಹು ಹರ್ಷಿತನಾದನು. ॥೧೧೦॥ ಪಶುಕ್ರೀತನ ಹೆಂಡತಿಯು ಆಷಾಢಸ್ನಾನದ ಪುಣ್ಯವನ್ನು ಗಂಡನಿಗೆ ಸಮರ್ಪಿಸಿದ್ದು, ಪಶುಕ್ರೀತನು ಆ ಪುಣ್ಯವನ್ನು ವಿಭಾಗಿಸಿ ಅದರರ್ಧವನ್ನು ತನಗೆ ಕೊಟ್ಟದ್ದು ॥೧೧೧॥ ಎಲ್ಲವನ್ನೂ ಪ್ರಶಂಸಿಸುತ್ತ ಖರಕ್ರೀತನು ಪರಮ ಹರ್ಷಯುತನಾಗಿ ಪಶುಕ್ರೀತನ ಹೆಂಡತಿಯನ್ನು ಬಹಳವಾಗಿ ಸ್ತುತಿಸಿದನು. ॥೧೧೨॥ ಅಹೋ! ಯಾವ ಸ್ತ್ರೀಯರು ತಾವು ಸುಖಿಗಳಾಗಿದ್ದರೂ, ತಮ್ಮ

ಯದಾ ಪಿತಾ ಸಂತ್ಯಜತಿ ಯದಾ ಮಾತಾ ಚ ಬಾಂಧವಃ ।
ತದಾಪಿ ನೈವ ತ್ಯಜತಿ ಸಾಧ್ವೀ ಸ್ತ್ರೀ ಸ್ವಪತಿಂ ಪುನಃ ॥೧೧೪॥

ನಿವರ್ತಂತೇ ಸ್ಮಶಾನಾಚ್ಚ ಮಾತಾ ಭ್ರಾತಾ ಪಿತಾ ಸ್ವಸಾ ।
ಮಿತ್ರಾಣಿ ಬಾಂಧವಾಶ್ಚೈವ ಸಾಧ್ವೀ ಸ್ತ್ರೀ ನ ನಿವರ್ತತೇ ॥೧೧೫॥

ಪ್ರಿಯಂ ಕುರ್ವಂತಿ ಸತತಂ ಸ್ವಭರ್ತುಃ ಕುಲಜಾಃ ಸ್ತ್ರಿಯಃ ।
ಕಾಯೇನ ಮನಸಾ ವಾಚಾ ಪ್ರಾಣೈರಪಿ ವಿಶೇಷತಃ ॥೧೧೬॥

ಮೃತಾ ಭರ್ತ್ರಾ ಸ್ವಯಂ ಸಾಧ್ವೀ ನ ಮೃತಾ ವಾ ಕಥಂಚನ ।
ಮೃತಾದ್ಧರತಿ ಭರ್ತಾರಂ ತತ್ಕಿಮಸ್ತಿ ತತೋಽಧಿಕಮ್ ॥೧೧೭॥

ಯಾ ದೃಷ್ಟ್ವಾಸ್ಯಥವಾ ಸ್ಪೃಷ್ಟ್ವಾ ಭರ್ತುಃ ಸೌಖ್ಯಪ್ರದಾಯಿನೀ ।
ಮಂತ್ರೀವ ಮಂತ್ರಂ ದಿಶತಿ ದಾಸೀವಾರಾಧಯತ್ಯಪಿ ॥೧೧೮॥

ತಸ್ಯಾಪಿ ಧರ್ಮೀ ಕ್ರಿಯತೇ ಗುಣಾನ್ಸರ್ವಗುಣಾಧಿಕಾನ್ ।
ಸುಖಹೇತುಃ ತ್ರಿವರ್ಗಸ್ಯ ಯಾ ಪ್ರಕೃಷ್ಟಂ ಹಿ ಕಾರಣಮ್ ॥೧೧೯॥

ಪತಿಯನ್ನು ಘೋರ ದುಃಖ ಹಾಗೂ ಸಕಲ ಕಷ್ಟಗಳಿಂದ ಮೋಚನಗೊಳಿಸುವರೋ ಅವರೇ ಧನ್ಯರು. ॥೧೧೩॥ ತಂದೆ, ತಾಯಿ, ಬಾಂಧವರೆಲ್ಲರೂ ಬಿಟ್ಟರೂ ಸಾಧ್ವಿ ಸ್ತ್ರೀಯು ಮಾತ್ರ ತನ್ನ ಗಂಡನನ್ನು ಎಂದಿಗೂ ಬಿಡುವದಿಲ್ಲ. ॥೧೧೪॥ ಗಂಡನ ತಂದೆ, ತಾಯಿ, ಅಣ್ಣತಮ್ಮಂದಿರು, ಅಕ್ಕತಂಗಿಯರು, ಮಿತ್ರರು, ಬಂಧು ಬಾಂಧವರು ಎಲ್ಲರೂ ಸ್ಮಶಾನದಿಂದ ಹೊರಟು ಹೋದರೂ ಸಾಧ್ವೀಮಣಿಯು ಮೃತನಾದ ಗಂಡನನ್ನು ಬಿಟ್ಟು ಸ್ಮಶಾನದಿಂದ ಹೊರಟು ಹೋಗುವದಿಲ್ಲ. ॥೧೧೫॥ ಶ್ರೇಷ್ಠ ಕುಲದಲ್ಲಿ ಜನ್ಮತಾಳಿದ ಸ್ತ್ರೀಯರು ಕಾಯಾ ವಾಚಾ ಮನಸಾ ಮತ್ತು ತಮ್ಮ ಜೀವವನ್ನು ಕೊಟ್ಟಾದರೂ ತಮ್ಮ ಗಂಡನಿಗೆ ಸತತ ಹಿತವಾಗುವದನ್ನೇ ಮಾಡುವರು. ॥೧೧೬॥ ಸಾಧ್ವೀಸ್ತ್ರೀಯು ತನ್ನ ಗಂಡನು ಮೃತನಾದಾಗ ಸತೀ ಹೋಗದೇ ಸತ್ಕರ್ಮಗಳನ್ನು ಮಾಡಿ ತನ್ನ ಗಂಡನನ್ನು ಯಮಪಾಶದಿಂದ ಬಿಡಿಸುವಳು. ಇದಕ್ಕಿಂತಲೂ ಅಧಿಕವಾದುದೇನಿದೆ? ॥೧೧೭॥ ತನ್ನ ನೋಟದಿಂದಲೂ, ಸ್ಪರ್ಶದಿಂದಲೂ ಗಂಡನಿಗೆ ಸುಖವನ್ನುಂಟುಮಾಡುವ ಪತಿವ್ರತೆಯು ರಾಜನಿಗೆ ಮಂತ್ರಿಯಂತೆ ಗಂಡನಿಗೆ ಹಿತವಾದುದನ್ನೇ ತಿಳಿಸುವಳು ಹಾಗೂ ದಾಸಿಯಂತೆ ಅವನನ್ನು ಸದಾ ಸೇವಿಸುವಳು. ॥೧೧೮॥ ಗಂಡನು ಅಧರ್ಮಿಯಾಗಿದ್ದರೂ ಪತಿವ್ರತೆಯು ತನ್ನ ಸತ್ಕಾರ್ಯಗಳಿಂದ ಅವನನ್ನು ಧರ್ಮಿಷ್ಠನಾಗುವಂತೆ ಮಾಡುವಳು. ಅವನಲ್ಲಿರುವ ಅಲ್ಪಗುಣಗಳನ್ನು ಎಲ್ಲರಿಗಿಂತಲೂ ಶ್ರೇಷ್ಠವಾದ ಗುಣಗಳಿರುವಂತೆ ಪ್ರಕಟಿಸುವಳು (ಗಂಡನಲ್ಲಿರುವ ಅಲ್ಪಗುಣಗಳನ್ನೇ ದೊಡ್ಡದನ್ನಾಗಿ ಮಾಡಿ

ತೇ ಧನ್ಯಾ ಮಾನವಾ ಲೋಕೇ ಯೇಷಾಂ ಭಾರ್ಯಾ ಪತಿವ್ರತಾ ।
ಅಪಿ ಪಾತಕಕರ್ಮಾಣಃ ಕಿಂ ಪುನಃ ಶ್ರೇಯಸಿ ಸ್ಥಿತಾಃ ॥೧೨೦॥

ಸಾಧ್ವೀಭಾರ್ಯಾಸಮಂ ನಾಸ್ತಿ ಹಿತಂ ಲೋಕೇಷು ಕಿಂಚನ ।
ತಸ್ಯಾಃ ಪ್ರಭಾವಾತ್ ಪ್ರಾಪ್ಯಂತೇ ಸೌಖ್ಯಾನೀಹ ಪರತ್ರ ಚ ॥೧೨೧॥

ತ್ವಾ ತಯಾ ಉದ್ಧೃತೋಽಸಿ ಭಾರ್ಯಯಾ ಸಹಿತೋ ಮಯಾ ।
ಅಪಿ ಲಕ್ಷೈಶ್ಚ ವರ್ಷೈಶ್ಚ ನಾನ್ಯಥೋದ್ಧರಣಂ ಭವೇತ್ ॥೧೨೨॥

ಇಹ ಸರ್ವೇಷು ಕಾರ್ಯೇಷು ಸ್ತ್ರೀಭ್ಯೋಽನ್ಯತ್ಸಾಧನಂ ನ ಹಿ ।
ತಸ್ಮಾತ್ಕೇನಾಪಿ ಕಾರ್ಯೇಣ ನೈವ ಸಾಧ್ವೀಂ ಸ್ತ್ರಿಯಂ ತ್ಯಜೇತ್ ॥೧೨೩॥

ಇತಿ ಸ್ತುತ್ವಾ ತತೋ ಮಿತ್ರಂ ಪಶುಕ್ರೀತಮುವಾಚ ಹ ।
ಪಾತಕ್ಯಪಿ ತ್ವಹಂ ಧನ್ಯೋ ಯಸ್ಯಾಪಿ ತ್ವದ್ವಿಧಃ ಸಖಾ ॥೧೨೪॥

ಯೇನೋದ್ಧೃತೋಽಹಂ ನರಕಾನ್ನಿತಾಂತಂ ದಾರುಣಾದಪಿ ।
ನ ಕರೋತಿ ಚ ಯದ್‌ಭ್ರಾತಾ ನ ಪುತ್ರೋ ನ ಚ ಬಾಂಧವಃ ॥೧೨೫॥

ಹೇಳಿಕೊಳ್ಳುವಳು). ಪತಿವ್ರತೆಯು ಗಂಡನ ಸುಖಕ್ಕೆ ಕಾರಣಳಾಗುವಳಲ್ಲದೇ, ಧರ್ಮ, ಅರ್ಥ, ಕಾಮಗಳೆಂಬ ತ್ರಿವರ್ಗಕ್ಕೂ ಮುಖ್ಯ ಕಾರಣಳಾಗುವಳು. ॥೧೧೯॥ ಲೋಕದಲ್ಲಿ ಯಾರ ಪತ್ನಿಯರು ಪತಿವ್ರತೆಯಾಗಿರುವರೋ ಆ ಪುರುಷರೇ ಧನ್ಯರು. ಪಾಪಕರ್ಮಗಳನ್ನು ಮಾಡಿದ ಪುರುಷರೂ ಇಂಥ ಸಾಧ್ವೀಶಿರೋಮಣಿಗಳಿಂದ ಉದ್ಧೃತರಾಗುವರೆಂದ ಮೇಲೆ ಸತ್ಕರ್ಮಗಳನ್ನು ಮಾಡುವವರು ಸದ್ಗತಿಯನ್ನು ಹೊಂದುವರೆಂದು ಹೇಳುವದೇನಿದೆ! ॥೧೨೦॥ ಲೋಕದಲ್ಲಿ ಸಾಧ್ವೀಪತ್ನಿಗೆ ಸಮಳಾದ ಹಿತೈಷಿಯು ಬೇರೊಬ್ಬಳಿಲ್ಲ. ಅಂಥವಳ ಪುಣ್ಯಪ್ರಭಾವದಿಂದ ಇಹದಲ್ಲಿಯೂ ಹಾಗೂ ಪರದಲ್ಲಿಯೂ ಸುಖಗಳು ಪ್ರಾಪ್ತವಾಗುವವು. ॥೧೨೧॥ ಪತಿವ್ರತೆಯಾದ ನಿನ್ನ ಹೆಂಡತಿಯಿಂದ ನೀನೂ ಹಾಗೂ ನಾನೂ ಇಬ್ಬರೂ ಉದ್ಧರಿಸಲ್ಪಟ್ಟದ್ದೇವೆ. ನಿನ್ನ ಹೆಂಡತಿಯು ನಮ್ಮನ್ನು ಉದ್ಧರಿಸದೇ ಇದ್ದಿದ್ದರೆ ಲಕ್ಷ ವರ್ಷಗಳಾದರೂ ಈ ನರಕದಿಂದ ನಮ್ಮ ಬಿಡುಗಡೆಯಾಗುತ್ತಿರಲಿಲ್ಲ. ॥೧೨೨॥ ಈ ಲೋಕದಲ್ಲಿ ಸಕಲ ಕಾರ್ಯಗಳಲ್ಲಿ ಸ್ತ್ರೀಯರನ್ನು ಬಿಟ್ಟು ಬೇರೆ ಸಾಧನಗಳಿಲ್ಲ. ಆದ್ದರಿಂದ ಯಾವ ಕೆಲಸದಲ್ಲಿಯೂ ಸಾಧ್ವೀ ಸ್ತ್ರೀಯರನ್ನು ದೂರವಿಡಬಾರದು.' ॥೧೨೩॥ ಈ ಪ್ರಕಾರವಾಗಿ ಖರಕ್ರೀತನು ತನ್ನ ಮಿತ್ರನ ಪತ್ನಿಯನ್ನು ಸ್ತುತಿಸಿ ನಂತರ ಮಿತ್ರನಾದ ಪಶುಕ್ರೀತನನ್ನು ಕುರಿತು ಹೇಳಿದನು- ಅಯ್ಯಾ! ನಾನು ಪಾತಕಿಯಾಗಿದ್ದರೂ ನಿನ್ನಂಥ ಮಿತ್ರನಿರುವುದರಿಂದಲೇ ಧನ್ಯನಾಗಿದ್ದೇನೆ. ॥೧೨೪॥ ನಿನ್ನಂಥವನ ಸಹವಾಸದಿಂದಲೇ ನಾನು ಬಹುದಾರುಣವಾದ

ಯದೃಚ್ಛಯಾವಿಷ್ಟಮನಸಾ ಯತ್ತ್ವಯಾ ಹೇಲನಂ ಕೃತಮ್ ।
ಅನ್ಯೇ ಪುಮಾಂಸೋ ಬಹುಶಃ ಸದಾರಾಶ್ಚಾತಿ ದುರ್ಲಭಾಃ ॥೧೨೬॥

ಯದ್ಯಕ್ಷರಿಷ್ಯಥಾಃ ತ್ವಂ ಹಿ ನರಕಾದತಿದುಃಖದಾತ್ ।
ಕಲ್ಪಾಂತಂ ಪತಿತೋ ಯಾವದವಸ್ಥಾಂ ಹ್ಯನಪತ್ಯಕಃ ॥೧೨೭॥

ಸಸೂನುಃ ಪಾಪಕರ್ಮಾಪಿ ಪಾಲ್ಯಮಾನೋ ನ ಶೋಚ್ಯತಿ ।
ಕಲ್ಪೇ ವಾಪ್ಯದ್ಯ ವಾ ಪುತ್ರೋ ಮೋಚಯಿಷ್ಯತಿ ಮಾಂ ಧ್ರುವಮ್ ॥೧೨೮॥

ನ ಕಶ್ಚಿತ್ಪಿಂಡದಾ ಯಸ್ಯ ಮಹಾಪಾತಕಕರ್ಮಣಃ ।
ನಿರ್ಗಮೇತಿ ನಿರಾಶಶ್ಚ ತದ್ದುಃಖಂ ವೇದ್ಮಿ ನಾಪರಃ ॥೧೨೯॥

ಭ್ರಾತ್ರಾ ವಾ ಸೂನುನಾ ವಾ ಕಿಂ ಕಾರ್ಯಂ ತ್ವನುಪಕಾರಿಣಾ ।
ಪರೋಪಹಿತಕರ್ತಾ ಯಃ ಸ ಬಂಧುರಿತಿ ನಿಶ್ಚಯಃ ॥೧೩೦॥

ಈ ನರಕದಿಂದ ಉದ್ಧೃತನಾದೆನು. ಇಂಥ ಪರಮೋಪಕಾರವನ್ನು ಅನುಜನಾಗಲೀ, ಮಗನಾಗಲೀ, ಬಾಂಧವರಾಗಲೀ ಯಾರೂ ಮಾಡಲಾರರು. ॥೧೨೫॥ ನಿನ್ನಿಂದ ನಿನ್ನ ಪತ್ನಿಯು ಮನಬಂದಂತೆ ನಿಂದಿತಳಾಗಿದ್ದರೂ ನೀನಿಂದು ಅವಳಿಂದಲೇ ಉದ್ಧೃತ-ನಾಗಿರುವಿ. ಜಗತ್ತಿನಲ್ಲಿ ನಿಮ್ಮಂಥ ಸತಿ-ಪತಿಯರು ಸಿಗುವದು ದುರ್ಲಭವು. ॥೧೨೬॥ ಮಕ್ಕಳಿಲ್ಲದ ಪುರುಷನು ಕಲ್ಪಾಂತದವರೆಗೆ ನರಕದಲ್ಲಿ ಬಿದ್ದು ಅಲ್ಲಿಯ ದಾರುಣವಾದ ಶೋಕದಿಂದ ಮುಕ್ತಿಯನ್ನು ಕಾಣದಿರುವಾಗ ನಿನ್ನ ಹೆಂಡತಿಯಂಥ ಸಾಧ್ವೀಶಿರೋಮಣಿಯಿಂದ ನರಕದಿಂದ ಉದ್ಧೃತನಾದರೆ ಆ ಪುರುಷನೇ ಧನ್ಯನು. ಅವನ ಪತ್ನಿಯು ಲೋಕಮಾನ್ಯಳು. ॥೧೨೭॥ ಇನ್ನು ಪುತ್ರಸಂತಾನವುಳ್ಳ ಪುರುಷನು ಪಾಪಕರ್ಮಗಳನ್ನು ಮಾಡಿದರೂ ಮಕ್ಕಳಿಂದ ಪೋಷಿಸಲ್ಪಟ್ಟರೆ ಅವನು ಶೋಕಿಸುವದಿಲ್ಲ. ಏಕೆಂದರೆ "ಈ ಕಲ್ಪದಲ್ಲಿ ಯಾವುದೊಂದು ಸಮಯದಲ್ಲಾಗಲೀ (ಅಥವಾ ಈಗಲೇ ಆಗಲೀ) ನನ್ನ ಮಗನು ಪಿಂಡಪ್ರದಾನ ಮಾಡಿ ಮುಂದಾಗುವ ನರಕದಿಂದ ನನ್ನನ್ನು ನಿಶ್ಚಿತವಾಗಿ ಉದ್ಧರಿಸುವನು" ಎಂಬ ಭರವಸೆ ಆ ಪುರುಷನಿಗೆ ಇರುವದು. ॥೧೨೮॥ ಮಹಾಪಾತಕ ಕರ್ಮಗಳನ್ನು ಮಾಡುವ ಪುರುಷನಿಗೆ ಅವನ ಮರಣಾನಂತರ ಪಿಂಡಪ್ರದಾನ ಮಾಡುವಂಥ ಮಗ ಅಥವಾ ಹೆಂಡತಿ ಇಲ್ಲದಿದ್ದರೆ ಅವನಿಗಾಗುವ ದುರ್ಗತಿ, ನಿರಾಶೆ, ದುಃಖಗಳನ್ನು ನಾನು ತಿಳಿಯಬಲ್ಲೆನೇ ಹೊರತು ಬೇರಾರಿಗೂ ಗೊತ್ತಾಗಲಾರದು. (ಏಕೆಂದರೆ ಪಿಂಡ ಪ್ರದಾನ ಮಾಡಲು ನನಗೆ ಹೆಂಡತಿಯೂ ಇಲ್ಲ ಪುತ್ರನೂ ಇಲ್ಲ). ॥೧೨೯॥ ಪರೋಪಕಾರ ಮಾಡದಿರುವ ಸಹೋದರ, ಅಥವಾ

ಅಹಂ ತು ರೌರವೇ ಮಗ್ನೋ ನಿರಾಶಶ್ಚ ನಿಜೋದ್ಧೃತೌ ।
ಉದ್ಧೃತಃ ಸ ತ್ವಯೋದಾರನಿಜಪುಣ್ಯಾರ್ಧದಾನತಃ ॥೧೩೧॥

ದಾತುಂ ನೈವಾಸ್ಯ ಪುಣ್ಯಾರ್ಧಮುತ್ಸಹೇತ ಪರೋ ನರಃ ।
ತ್ವದೃತೇ ಪುರುಷವ್ಯಾಘ್ರ ಪರದುಃಖೇನ ದುಃಖಿತಃ ॥೧೩೨॥

ಇತ್ಯುಕ್ತ್ವಾ ತಂ ನಿಜಂ ಮಿತ್ರಂ ದೇವದೂತಸ್ಯ ಸನ್ನಿಧೌ ।
ದಿವಂ ಪ್ರತಿ ತತೋ ಯಾತಸ್ತಾಭ್ಯಾಂ ಸಹ ಮುದಾನ್ವಿತಃ ॥೧೩೩॥

ದೇವದೂತಂ ಪುರಸ್ಕೃತ್ಯ ಸ್ವರ್ಗಮಾರ್ಗಸ್ಯ ದರ್ಶಕಮ್ ।
ಗಚ್ಛಂತೌ ತೌ ಪರಂ ಹೃಷ್ಟಾವಿತ್ಯೂಚತುಃ ಪರಸ್ಪರಮ್ ॥೧೩೪॥

ದೃಷ್ಟ್ವಾ ರೌರವಮಾಸಾದ್ಯ ತಸ್ಮಾತ್ಕಷ್ಟಾದ್ವಿನಿರ್ಗತೌ ।
ದಿಷ್ಟ್ಯಾ ಪ್ರಾಪ್ತಂ ಶುಚಿಸ್ನಾನಂ ಪುಣ್ಯಂ ದತ್ತಂ ತಯಾ ಮಹತ್ ॥೧೩೫॥

ಜನ್ಮ ಮಾನುಷ್ಯಕಂ ಲಬ್ಧ್ವಾ ಯೇನ ವಾಂಛಿತಮಾಪ್ಯತೇ ।
ವ್ಯರ್ಥೀಕೃತಂ ತದಾವಾಭ್ಯಾಂ ನಾಸ್ತಿಕತ್ವೇನ ವರ್ತನಾತ್ ॥೧೩೬॥

ಪುತ್ರನಿಂದೇನು ಪ್ರಯೋಜನ? ಯಾವನು ಪರೋಪಕಾರ ಹಾಗು ಪರರಿಗೆ ಹಿತವನ್ನುಂಟು ಮಾಡುವನೋ ಅವನೇ ನಿಜವಾದ ಬಂಧು ಎಂಬುದು ನಿಶ್ಚಯವು. ॥೧೩೦॥ ರೌರವನರಕದಲ್ಲಿ ಮುಳುಗಿದ ನಾನಂತೂ ಅಲ್ಲಿಂದ ನನ್ನ ಉದ್ಧಾರವಾಗುವ ವಿಷಯದಲ್ಲಿ ಎಳ್ಳಷ್ಟೂ ಆಶೆಯನ್ನು ಹೊಂದಿರಲಿಲ್ಲ. ಆದರೆ ಉದಾರಿಯಾದ ನೀನು ಸ್ವಪುಣ್ಯದ ಅರ್ಧಭಾಗವನ್ನು ನನಗೆ ಕೊಟ್ಟು ಉದ್ಧರಿಸಿರುವಿ. ॥೧೩೧॥ ಹೇ ಪುರುಷಶ್ರೇಷ್ಠನೇ, ಪರರ ದುಃಖವನ್ನು ಕಂಡು ದುಃಖಿತನಾಗುವ ನಿನ್ನಂಥವನನ್ನು ಬಿಟ್ಟರೆ ಬೇರಿನ್ನಾರು ತನ್ನ ಪುಣ್ಯದ ಅರ್ಧ ಭಾಗವನ್ನು ನನ್ನಂಥ ಪಾಪಿಗೆ ಕೊಡಲು ಬಯಸುವರು?' ॥೧೩೨॥ ಈ ಪ್ರಕಾರ ದೇವದೂತನೊಂದಿಗಿರುವ ತನ್ನ ಮಿತ್ರನಾದ ಪಶುಕ್ರೀತನನ್ನು ಸ್ತುತಿಸುತ್ತ ಖರಕ್ರೀತನು ಅವರಿಬ್ಬರೊಟ್ಟಿಗೆ (ದೇವದೂತ ಮತ್ತು ಪಶುಕ್ರೀತ) ಮುದದಿಂದ ಸ್ವರ್ಗಲೋಕಕ್ಕೆ ನಡೆದನು. ॥೧೩೩॥ ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೇವದೂತನನ್ನು ಹಿಂಬಾಲಿಸಿರುವ ಅವರಿಬ್ಬರೂ ತಮ್ಮ ತಮ್ಮೊಳಗೆ ಈ ರೀತಿ ಮಾತನಾಡಿಕೊಂಡರು. ॥೧೩೪॥ 'ರೌರವನರಕದಲ್ಲಿ ಬಿದ್ದು ಅಲ್ಲಿಯ ಕಷ್ಟಗಳನ್ನು ಅನುಭೋಗಿಸಿದ ನಮಗೆ ಈಗ ಆಷಾಢಸ್ನಾನಜ ಮಹಾ ಪುಣ್ಯವನ್ನು ಆ ಪುಣ್ಯಾತ್ಮಳು ಕೊಟ್ಟದ್ದರಿಂದ ನಾವು ಅಲ್ಲಿಂದ ಉದ್ಧೃತರಾದೆವು. ॥೧೩೫॥ ಮನುಷ್ಯ ಜನ್ಮವನ್ನು ಹೊಂದಿದ ಜೀವನು ಸಾಧನ ಮಾಡಿಕೊಂಡು ಜನ್ಮವನ್ನು

ನ ಕೋಽಪಿ ವೇದ ಸನ್ಮಾರ್ಗಂ ಕಲ್ಪವೃಕ್ಷಮಿವ ಸ್ಥಿತಮ್ ।
ತಸ್ಮಾದಧರ್ಮಾಚರಣಾದಕೇಶೀಪರಿಸೇವಯಾ ॥೧೩೭॥

ಅಹೋ ಅಹೋ ಮನುಷ್ಯಾಣಾಂ ಶ್ರುತಿಧರ್ಮಪರಾಯಣಮ್ ।
ಪರಿತ್ಯಜ್ಯ ಚ ನಾಸ್ತಿಕ್ಯಂ ಮೃಗತೃಷ್ಣಾಜಲಾರ್ಥಿನಾ ॥೧೩೮॥

ಆವಾಭ್ಯಾಂ ಯಾನಿ ಪಾಪಾನಿ ಕೃತಾನಿ ಸುಮಹಾಂತ್ಯಪಿ ।
ಕಲ್ಪಾಂತೇ ನಾಪಿ ತೈಃ ಪ್ರಾಪ್ತಾನ್ನರಕಾನ್ನೈವ ತೀರ್ಯತೇ ॥೧೩೯॥

ಅಹೋ ಕೋಽಯಂ ಮನುಷ್ಯಾಣಾಮವಿಚಾರೋ ಮಹಾನಸೌ ।
ಯತ್ಕ್ಷಣಾರ್ಧಸುಖಸ್ಯಾರ್ಥೇ ಸಹ್ಯತೇ ನರಕಶ್ಚಿರಮ್ ॥೧೪೦॥

ಧಿಕ್ ನಾಸ್ತಿಕಾನ್ ದುರಾಚಾರನ್ಪಾಖಂಡನಿರತಾನ್ ಜನಾನ್ ।
ಸಂತ್ಯಜ್ಯ ಪುರುಷಶ್ರೇಷ್ಠಾನ್ಪಾಪಂ ಕುರ್ವಂತಿ ಮಾನವಾಃ ॥೧೪೧॥

ಭೂಯಿಷ್ಠಂ ಮಾನವಾಃ ಪಾಪಂ ಯದ್ವಾ ತದ್ವಾ ಪ್ರಕುರ್ವತೇ ।
ಕ್ರಿಯತೇ ವಾ ತದಾ ಛನ್ನಂ ಪಾಪಂ ಕಷ್ಟಪರಂ ತ್ವಿಹ ॥೧೪೨॥

ಸಾರ್ಥಕಪಡಿಸಿಕೊಳ್ಳಬೇಕು. ಹೀಗಿರುವಾಗ ನಾವಿಬ್ಬರೂ ನಾಸ್ತಿಕರಾಗಿದ್ದುಕೊಂಡು ನಮ್ಮ ಜನ್ಮವನ್ನು ಹಾಳುಮಾಡಿಕೊಂಡೆವು. ॥೧೩೬॥ ಕಲ್ಪವೃಕ್ಷದಂತೆ ಇಷ್ಟಾರ್ಥಗಳನ್ನು ಕೊಡುವ ವೇದಮಾರ್ಗವನ್ನು ನಮ್ಮಿಬ್ಬರಲ್ಲಿ ಒಬ್ಬನೂ ತಿಳಿಯಲಿಲ್ಲ. ಹೀಗಾಗಿ ಅಧರ್ಮಾಚರಣೆಯಿಂದ ಮತ್ತು ಅಕೇಶೀ ಸ್ತ್ರೀಯರನ್ನು ಬೆನ್ನುಹತ್ತಿ ಜೀವನವನ್ನು ವ್ಯರ್ಥಮಾಡಿಕೊಂಡೆವು. ॥೧೩೭॥ ಹಾ ಹಾ ! ಮನುಷ್ಯರಿಗೆ ವಿಹಿತವಾಗಿರುವ ಶ್ರುತ್ಯುಕ್ತಧರ್ಮ ಮಾರ್ಗವನ್ನು ಬಿಟ್ಟು ಬಿಟ್ಟು ನೀರಡಿಸಿದವನು ಜಲಮರೀಚಿಕೆಯನ್ನು ಬೆನ್ನು ಹತ್ತಿಹೋಗುವಂತೆ ನಾವಿಬ್ಬರೂ ನಾಸ್ತಿಕ್ಯಮಾರ್ಗವನ್ನು ಅನುಸರಿಸಿದೆವು. ॥೧೩೮॥ ನಾವಿಬ್ಬರೂ ಮಹಾಮಹಾಪಾಪಗಳನ್ನು ಮಾಡಿದೆವು. ನರಕದಲ್ಲಿ ಬಿದ್ದು, ಕಲ್ಪ ಮುಗಿಯುವವರೆಗೂ ಆ ನರಕಗಳಿಂದ ಉದ್ಧೃತಿ ಆಗದಷ್ಟು ಪಾಪಗಳನ್ನು ಮಾಡಿದ್ದೇವೆ. ॥೧೩೯॥ ಕ್ಷಣಿಕ ಸುಖಕ್ಕಾಗಿ ಚಿರಕಾಲದ ನರಕವನ್ನು ಸಹಿಸುವಂಥ ನಮ್ಮಂಥ ಮಹಾ ಅವಿವೇಕಿಗಳು ಮನುಷ್ಯರೊಳಗೆ ಬೇರಿನ್ನಾರು ಇರುವರು ? ॥೧೪೦॥ ದುರಾಚಾರಿಗಳಾದ, ಪಾಖಂಡ ರತರಾದ ನಾಸ್ತಿಕ ಜನರಿಗೆ ಧಿಕ್ಕಾರವಿರಲಿ. ಮನುಷ್ಯರು ಶ್ರೇಷ್ಠಪುರುಷರ ಅಥವಾ ಮಹಾತ್ಮರ ಸಂಗವನ್ನು ಪರಿತ್ಯಜಿಸಿ ಪಾಪಕರ್ಮಗಳನ್ನು ಮಾಡುವರು. ॥೧೪೧॥ ಉಪದೇಶಕರಿಲ್ಲದವರಾಗಿ ಮನುಷ್ಯರು ಮನಬಂದಂತೆ ಬಹುವಿಧವಾದ ಪಾಪಗಳನ್ನು ಮಾಡುವರು. ಆಗ ನಾವು ರಹಸ್ಯವಾಗಿ ಮಾಡಿದ

ಅತಿಗುಪ್ತಂ ನೃಭಿಃ ಪಾಪಂ ಪಾಪಿಭಿರ್ಯದ್ವಿಧೀಯತೇ ।
ತದ್ಯೈವ ತದ್ಯಮೋ ವೇತ್ತಿ ದ್ರಷ್ಟಾ ಯತ್ಪುಣ್ಯಪಾಪಯೋಃ ॥೧೪೩॥

ಪಾಪಂ ಮಹತ್ ಪ್ರಕುರ್ವಂತೋ ವೇದಬಾಹ್ಯಕ್ರಿಯಾಪರಾಃ ।
ಯಮೇನ ಪರಿಪೀಡ್ಯಂತೇ ದಾರುಣಂ ನಿರಯಂ ಗತಾಃ ॥೧೪೪॥

ವೈದಿಕೋ ಯಃ ಸದಾಚಾರಃ ಸ ಶ್ರೇಷ್ಠಃ ಸರ್ವಕಾಮದಃ ।
ಪೂರ್ವೈಃ ಪೂರ್ವತರೈರ್ಜುಷ್ಟಃ ಸ ಕಥಂ ತ್ಯಜ್ಯತೇ ಬುಧೈಃ ॥೧೪೫॥

ಯೇ ಪುಣ್ಯಕರ್ಮ ಕುರ್ವಂತಿ ವೇದೋಕ್ತಂ ನಿಯಮಾದೃತಃ ।
ಲೋಕದ್ವಯೇ ತೇ ಪೂಜ್ಯಂತೇ ಲಭಂತೇ ವಾಂಛಿತಂ ಸುಖಮ್ ॥೧೪೬॥

ವೇದೋಕ್ತಕರ್ಮ ಕರ್ತವ್ಯಂ ಪೂಜ್ಯೋ ವಿಷ್ಣುಃ ಸನಾತನಃ ।
ತ್ಯಕ್ತ್ವಾ ವಿಷಯಾಸಕ್ತಿರ್ಜಯೇತ್ಕಾಮಾದಿಕಾನ್ ರಿಪೂನ್ ॥೧೪೭॥

ಏಷ ಏವ ಪರೋ ಧರ್ಮೋ ಏತದಾಶ್ರಯಣಂ ನೃಣಾಮ್ ।
ಇಹಲೋಕೇ ಪರಸ್ಮಿನ್ವಾ ಪೀಡಾಪಿ ಹಿ ನ ಜಾಯತೇ ॥೧೪೮॥

ಪಾಪಗಳಿಗೆ ಈಗ ಬಹು ಕಷ್ಟವನ್ನು ಅನುಭೋಗಿಸಬೇಕಾಯಿತು. ॥೧೪೨॥ ಅಜ್ಞಾನಿಗಳು ಯಾರಿಗೂ ತಿಳಿಯದಂತೆ ಪಾಪಗಳನ್ನು ಮಾಡಿದರೂ ಅದೆಲ್ಲವನ್ನೂ ಮನುಷ್ಯರ ಪುಣ್ಯಪಾಪಗಳನ್ನು ತಿಳಿದಿರುವ ಯಮರಾಜನು ಅರಿತಿರುವನು. ॥೧೪೩॥ ವೇದಬಾಹ್ಯವಾದ ಕರ್ಮಗಳನ್ನು ಮಾಡುವವರು ಬಹು ಪಾಪಗಳನ್ನು ಮಾಡುತ್ತ ಮರಣಾನಂತರ ದಾರುಣವಾದ ನಿರಯವನ್ನು ಹೊಂದಿ ಅಲ್ಲಿ ಯಮನಿಂದ ಬಹಳವಾಗಿ ಪೀಡಿಸಲ್ಪಡುತ್ತಾರೆ. ॥೧೪೪॥ ಆದ್ದರಿಂದಲೇ ವೈದಿಕ ಸನ್ಮಾರ್ಗಗಳೇನಿವೆಯೋ ಅದುವೇ ಸರ್ವಕಾಮನೆಗಳನ್ನು ಕೊಡುವಂಥದೂ ಸರ್ವ ಶ್ರೇಷ್ಠವೂ ಆಗಿದೆ. ಪೂರ್ವಜರಿಂದ ಅನೂಚಾನವಾಗಿ ನಡೆದು ಬಂದ ಮಾರ್ಗವನ್ನು ಜ್ಞಾನಿಗಳು ಅದೆಂತು ತ್ಯಜಿಸಲು ಬಯಸುವರು? ॥೧೪೫॥ ಯಾರು ವೇದೋಕ್ತವಾದ ಪುಣ್ಯ ಕರ್ಮಗಳನ್ನು ಮಾಡುವರೋ ಅವರು ಇಹದಲ್ಲಿಯೂ ಪರದಲ್ಲಿಯೂ ಮಾನ್ಯರಾಗಿ ಸುಖವನ್ನು ಪಡೆಯುವರು. ॥೧೪೬॥ ವೇದೋಕ್ತವಾದ ಕರ್ಮಗಳನ್ನು ತಪ್ಪದೇ ಆಚರಿಸಬೇಕು. ಸನಾತನವಾದ ವಿಷ್ಣುವನ್ನು ಪೂಜಿಸಬೇಕು. ವಿಷಯವಾಸನೆಯನ್ನು ತ್ಯಜಿಸಬೇಕು ಕಾಮಾದಿಶತ್ರುಗಳನ್ನು ಜಯಿಸಬೇಕು. ॥೧೪೭॥ ಇದೇ ಶ್ರೇಷ್ಠವಾದ ಧರ್ಮವಾಗಿದೆ. ಮನುಷ್ಯರು ವೇದಮಾರ್ಗವನ್ನೇ ಆಶ್ರಯಿಸಬೇಕು. ಹೀಗೆ ಮಾಡುವದರಿಂದ ಇಹಲೋಕದಲ್ಲಿಯಾಗಲೀ ಪರಲೋಕದಲ್ಲಿಯಾಗಲೀ ಮನುಷ್ಯನಿಗೆ ಯಾವ ತರಹದ

ದೇಹಸಂಬಂಧಿನಃ ಸರ್ವೇ ಭ್ರಾತೃಪುತ್ರಾದಯಸ್ತ್ವಿಹ ।
ಅಸ್ತಂಗತೇಷ್ವಪ್ಯೇತೇಷು ಪಶ್ಚಾತ್ಕೋಽಪಿ ನ ವಿದ್ಯತೇ ॥೧೪೯॥

ಪುತ್ರಾದಯಃ ಪ್ರಿಯಾಃ ಸರ್ವೇ ಆತ್ಮಕಾಮಾಯ ಕೇವಲಮ್ ।
ಆತ್ಮಕಾಮೋ ನ ಯತ್ರಾಸ್ತಿ ಪ್ರೇಮಸ್ತತ್ರ ನ ವಿದ್ಯತೇ ॥೧೫೦॥

ಕಸ್ಯಾರ್ಥೇ ಕ್ರಿಯತೇ ಪಾಪಂ ಯೇನಾತ್ಮಾ ಬಾಧ್ಯತೇ ದೃಢಮ್ ।
ನರಕೇ ಪಚ್ಯತೇ ತಾವದ್ಯಾವದಾಭೂತಸಂಪ್ಲವಮ್ ॥೧೫೧॥

ಭಾರತಂ ವರ್ಷಮಾಸಾದ್ಯ ಹಿತ್ವಾ ಸುಕೃತಿಕರ್ಮ ಯಃ ।
ಕುರುತೇ ಪಾತಕಂ ಕರ್ಮ ನಿಜಕ್ಲೇಶಾಯ ಕೇವಲಮ್ ॥೧೫೨॥

ಯದಾಪ್ಯಧಿಗತೋ ಭೂಮಿಂ ತದೈವೋಪಾರ್ಜನದ್ವಯಮ್ ।
ಪಾಪಂ ಪುಣ್ಯಂ ಚ ನಾಸ್ತ್ಯನ್ಯತ್ತತ್ರ ಕಿಂ ಪಾಪಮರ್ಜತೇ ॥೧೫೩॥

ರೋಹಣಂ ಸಮುಪಾಗಮ್ಯ ರತ್ನರಾಶಿಮಮೂಲ್ಯಕಮ್ ।
ತ್ಯಕ್ತ್ವಾ ಪಾಷಾಣಶಕಲಮಾದತ್ತೇ ಸ ಮೂಢಧೀಃ ॥೧೫೪॥

ಅಹೋ ಮೋಹೋ ಮನುಷ್ಯಾಣಾಂ ಕೋಽಯಂ ಸಂಸಾರವರ್ತಿನಾಮ್ ।
ಯೇನಾಮೃತಂ ಪರಿತ್ಯಜ್ಯಂ ಭುಜ್ಯತೇ ವಿಷಮಾದರಾತ್ ॥೧೫೫॥

ಪೀಡೆಯೂ ಆಗುವದಿಲ್ಲ. ॥೧೪೮॥ ಈ ಲೋಕದಲ್ಲಿ ಜೀವಂತ ಇರುವವರೆಗೆ ಭ್ರಾತೃ ಪುತ್ರಾದಿಗಳೆಲ್ಲರೂ ದೇಹಸಂಬಂಧಿಗಳಾಗಿರುವರು ಮರಣಾನಂತರ ಯಾರೂ ಯಾರಿಗಾಗುವದಿಲ್ಲ. ॥೧೪೯॥ ಪುತ್ರಾದಿಗಳೆಲ್ಲರೂ ಕೇವಲ ಆತ್ಮಕಾಮಕ್ಕಾಗಿ ಪ್ರಿಯರಾಗಿರುವರು. ಆತ್ಮಕಾಮವಿಲ್ಲದಿದ್ದರೆ ಅಲ್ಲಿ ಪ್ರೀತಿ ಎಂಬುದು ಉಳಿಯಲಾರದು. ॥೧೫೦॥ ಯಾವ ಪಾಪಕರ್ಮದಿಂದ ಆತ್ಮನಿಗೆ ಬಹಳವಾದ ಬಾಧೆಯುಂಟಾಗುವದೋ ಮತ್ತು ಪ್ರಲಯಕಾಲದವರೆಗೆ ನರಕದಲ್ಲಿ ಬಿದ್ದು ಒದ್ದಾಡಬೇಕಾಗುವದೋ ಅಂಥ ಪಾಪಕರ್ಮವನ್ನು ಯಾರಿಗೋಸ್ಕರವಾಗಿ ಮಾಡಬೇಕು? ॥೧೫೧॥ ಪುಣ್ಯಭೂಮಿಯಾದ ಭಾರತವರ್ಷದಲ್ಲಿ ಜನ್ಮತಾಳಿ ಯಾವನು ಸತ್ಕರ್ಮವನ್ನು ಮಾಡದೇ ಪಾಪಕರ್ಮವನ್ನು ಮಾಡುವನೋ ಅವನು ತನ್ನನ್ನು ಬಹುಕಷ್ಟಕ್ಕೆ ಒಳಪಡಿಸಿಕೊಳ್ಳುವನು. ॥೧೫೨॥ ಭೂಮಿಯಲ್ಲಿ ಹುಟ್ಟಿದ ಮೇಲೆಯೇ ಪಾಪ-ಪುಣ್ಯಗಳ ಸಂಗ್ರಹವಾಗುವದು. ಆಗ ಪುಣ್ಯವನ್ನು ಅಧಿಕವಾಗಿ ಸಂಗ್ರಹಿಸಬೇಕಲ್ಲದೇ ಪಾಪವನ್ನು ಸಂಗ್ರಹಿಸುವದೇ? ॥೧೫೩॥ ಅಮೂಲ್ಯವಾದ ರತ್ನರಾಶಿಯು ಸಿಕ್ಕಾಗ ರತ್ನಗಳನ್ನು ಸಂಗ್ರಹಿಸದೇ ಕಲ್ಲುಗಳನ್ನು ಆರಿಸುವವನು ಶತಮೂಢನೇ ಸರಿ. ॥೧೫೪॥ ಅಹೋ ! ಸಿಕ್ಕಿರುವ ಅಮೃತವನ್ನು ಬಿಟ್ಟು

ಅತಃ ಪಾಪಂ ನ ಕರ್ತವ್ಯಂ ಪಾಪಾನ್ನರಕಮಾಪ್ನುಯಾತ್ ।
ಆವಾಭ್ಯಾಂ ಚ ಕೃತಂ ಪಾಪಂ ಯೇನಾದ್ಯ ನಿರಯಂ ಗತೌ ॥೧೫೬॥

ಸ್ತ್ರೀಣಾಂ ಕೃತೇ ಮಹದ್ದುಃಖಂ ಮಹದ್ದುಃಖಂ ಚ ಜನ್ಮನಿ ।
ಬಾಲ್ಯತಾರುಣ್ಯವೃದ್ಧತ್ವೇ ಮಹದ್ದುಃಖಂ ತಥೈವ ತತ್ ॥೧೫೭॥

ತತ್ರ ರಾಗಾಚ್ಚ ಕುರುತೇ ಪಾತಕಂ ಯದಿ ಮಾನವಃ ।
ಕಲ್ಪಂ ಯಾವತ್ತತೋ ದುಃಖಂ ತತ್ಕುತೋ ಜನ್ಮಿನಾಂ ಸುಖಮ್ ॥೧೫೮॥

ಮೃತ್ಯೋರ್ಭಯಂ ಮೃತ್ಯುಲೋಕೇ ಸ್ವರ್ಗೇಽಪಿ ಪತನಾದ್ಭಯಮ್ ।
ತಸ್ಮಾತ್ ಸ್ವರ್ಗಂ ಪರಿತ್ಯಜ್ಯ ಮುಕ್ತಿಂ ವಾಂಛಂತಿ ಸೂರಯಃ ॥೧೫೯॥

ಭ್ರಂಶಿತಾವಿತರೇತರೈರ್ವಚೋಭಿಃ ನಿಗದಂತೌ ಸಹ ತೇನ ಜಗ್ಮತುಃ ।
ಸುರಸಪ್ರಪಂಚನಾತ್ ಸ್ವಮುಜ್ವಲತ್ತಪನಾದಾಹಿತಭೋಗಮುಕ್ತಯೇ ॥೧೬೦॥

ಪತ್ಯೌ ಸ್ವರ್ಗೇ ಯಾತಮಾತ್ರೇಽನು ತಸ್ಯ ಭಾರ್ಯಾಂ ಸ್ವಪ್ನೇ ಕೇಚಿದೇತ್ಯೈವಮಾಹುಃ ।
ಭದ್ರೇ ಭರ್ತಾ ರೌರವೇ ಪಚ್ಯಮಾನೋ ಲಬ್ಧ್ವಾ ಪುಣ್ಯಂ ಸ್ನಾನಜಂ ನಿರ್ಗತೋಽಸ್ತಿ ॥೧೬೧॥

ಆದರದಿಂದ ವಿಷವನ್ನು ಸೇವಿಸುವ ಸಂಸಾರದಲ್ಲಿರುವ ಮನುಷ್ಯರಿಗೆ ಸಂಸಾರದಲ್ಲಿ ಇದೆಂಥ ಮೋಹವು ! ॥೧೫೫॥ ಆದ್ದರಿಂದ ಪಾಪಕರ್ಮವನ್ನು ಮಾಡಬಾರದು. ಪಾಪದಿಂದ ನರಕಪ್ರಾಪ್ತಿಯಾಗುವದು. ನಾವಿಬ್ಬರೂ ಪಾಪಕರ್ಮಗಳನ್ನು ಮಾಡಿದ್ದರಿಂದಲೇ ನರಕವನ್ನು ಹೊಂದಿದೆವು. ॥೧೫೬॥ ಸ್ತ್ರೀಯರಿಗೋಸ್ಕರ ನಾವು ಮಹದ್ದುಃಖವನ್ನು ಹೊಂದಬೇಕಾಯಿತು. ಬಾಲ್ಯ, ತಾರುಣ್ಯ, ವೃದ್ಧಾವಸ್ಥೆಯಲ್ಲಿ ಮಹಾದುಃಖವುಂಟಾಗುವದು. ॥೧೫೭॥ ಸ್ತ್ರೀಲೋಲುಪನಾಗಿ ಮನುಷ್ಯನು ಪಾಪಕರ್ಮವನ್ನು ಮಾಡಿದರೆ ಕಲ್ಪಾಂತದವರೆಗೂ ಪ್ರತಿಜನ್ಮದಲ್ಲಿ ಒಂದಿಲ್ಲೊಂದು ದುಃಖವಿದ್ದೇ ಇರುವದು. ಸುಖವು ಬರುವದೆಂತು ? ॥೧೫೮॥ ಮರ್ತ್ಯಲೋಕದಲ್ಲಿರುವಾಗ ಮೃತ್ಯುವಿನ ಭಯವಿರುವದು. ಸ್ವರ್ಗದಲ್ಲಿರುವಾಗ ಅಲ್ಲಿಂದ ಯಾವಾಗ ಪತನವಾಗುವದೋ ಎಂಬ ಭಯವಿರುವದು. ಆದ್ದರಿಂದಲೇ ಜ್ಞಾನಿಗಳಾದವರು ಸ್ವರ್ಗವನ್ನು ಬಿಟ್ಟು ಸದಾ ಮುಕ್ತಿಯನ್ನೇ ಅಪೇಕ್ಷಿಸುವರು.'' ॥೧೫೯॥ ಈ ಪ್ರಕಾರದ ಮಾತುಗಳಿಂದ ಆ ಪಶುಕ್ರೀತ ಮತ್ತು ಖರಕ್ರೀತ ಇಬ್ಬರೂ ಪರಸ್ಪರ ಸಂಭಾಷಣೆ ಮಾಡುತ್ತ ದೇವದೂತನೊಂದಿಗೆ ಸ್ವರ್ಗಲೋಕದಲ್ಲಿ ಬಂದು ಸೇರಿದರು. ॥೧೬೦॥ ಪಶುಕ್ರೀತನು ಸ್ವರ್ಗಲೋಕವನ್ನು ಪ್ರವೇಶಿಸಿದಾಕ್ಷಣವೇ ಭೂಲೋಕದಲ್ಲಿರುವ

ತಾಪ್ಯಾಷಾಢೇ ಸ್ನಾನಪುಣ್ಯೇನ ತುಲ್ಯಂ ನಾಸ್ತೀಹಾನ್ಯದ್ಯೇನ
ಕಲ್ಪಾಂತಭೋಗ್ಯಮ್ ।
ಹಿತ್ವಾ ಸದ್ಯೋ ದಾರುಣಂ ರೌರವಾಂತಂ ಪ್ರಾಪ್ತಃ ಸ್ವರ್ಗಂ
ಪಶುಕ್ರೀತೋ ಮಿತ್ರಯುಕ್ತಃ ॥೧೬೨॥

ತ್ಯಕ್ತಯಾ ನಿಜಪತಿನಾ ಯಥಾ ತ್ವಯಾ ಸಾಧ್ವಿ ಸಾಧು ನರಕಾತ್ಸಮುದ್ಧೃತಃ ।
ಈದೃಶೀ ನ ಭವತಿ ಕ್ವಾಪಿ ಗೇಹಿನೀ ಚೇದ್ಭವತ್ಯಬಹುಲಾ ಕ್ವಚಿತ್
ಕ್ವಚಿತ್ ॥೧೬೩॥

ಇತ್ಥಂ ಶ್ರುತವತೀ ವಿನಿದ್ರಿತಾ ಪಶ್ಯತಿ ಸ್ಮ ಪುರತೋ ನ ಕಿಂಚನ ।
ಜಲ್ಪಕಾರಣಮಪೃಚ್ಛದಾಪ್ಲುತಾ ಬ್ರಾಹ್ಮಣಾನತಿವಿಶಾರದಾನ್ ಪ್ರತಿ ॥೧೬೪॥

ಸತ್ಯಮೇವಮವಬುಧ್ಯ ಮಹಿಮಾ ದೃಷ್ಟಃ ಸೂರ್ಯತನಯಾಪ್ರಭಾವಜಃ ।
ಸ್ನಾನಂ ಕರೋತಿ ಸ್ಮ ಸತತಂ ಯಾ ಶುಚೌ ವತ್ಸರಾನ್ದಶ ಚ ಸತೀ
ಚಾದರಾತ್ ॥೧೬೫॥

ಮಾಸಲಂಘನವಿಧೇಶ್ಚ ದಾನತಃ ಸ್ನಾನತೋಽಪಿ ಕೃತಪುಣ್ಯಸಂಚಯಾ ।
ಜೀವಿತಮತ್ಯಜತ್ತಪಸ್ವಿನೀ ಭರ್ತೃಲೋಕಮಥ ಸತ್ವರಂ ಯಯೌ ॥೧೬೬॥

ಅವನ ಹೆಂಡತಿಯ ಸ್ವಪ್ನದಲ್ಲಿ ದೇವತೆಯು ಬಂದು ಹೇಳಿದಳು- 'ಹೇ ಭದ್ರೇ, ರೌರವನರಕದಲ್ಲಿ ಬಿದ್ದು ಕಷ್ಟಪಡುತ್ತಿದ್ದ ನಿನ್ನ ಗಂಡನು ತಾಪೀಸ್ನಾನದಿಂದ ಪ್ರಾಪ್ತವಾದ ಪುಣ್ಯವನ್ನು ನಿನ್ನಿಂದ ಪಡೆದು ಅಲ್ಲಿಂದ ಮುಕ್ತನಾಗಿ ಸ್ವರ್ಗಲೋಕವನ್ನು ಸೇರಿದ್ದಾನೆ. ॥೧೬೧॥ ಆಷಾಢದಲ್ಲಿ ತಾಪೀಸ್ನಾನದಿಂದ ಬರುವ ಪುಣ್ಯಕ್ಕೆ ಸಮಾನವಾದ ಬೇರೊಂದು ಪುಣ್ಯವಿಲ್ಲ. ಈ ಪುಣ್ಯದಿಂದ ಕಲ್ಪಾಂತದವರೆಗೆ ಎಲ್ಲಿದ್ದರೂ ಸುಖ ಪ್ರಾಪ್ತಿಯಾಗುವದು. ॥೧೬೨॥ ಹೇ ಸಾಧ್ವೀಮಣಿಯೇ, ಗಂಡನಿಂದ ತ್ಯಕ್ತಳಾಗಿದ್ದರೂ ನೀನು ಅವನನ್ನು ಉದ್ಧರಿಸಿರುವಿ. ನಿನ್ನಂಥ ಗೃಹಿಣಿಯು ಇನ್ನೆಲ್ಲಿಯೂ ನೋಡಸಿಗಲಾರಳು. ಸಿಕ್ಕರೂ ಬಹು ಕ್ವಚಿತ್ತಾಗಿ ಸಿಗುವರು.' ॥೧೬೩॥ ಸ್ವಪ್ನದಲ್ಲಿ ಈ ವಾಕ್ಯಗಳನ್ನು ಕೇಳಿದ ಆ ಸ್ತ್ರೀಯು ಕೂಡಲೇ ಎಚ್ಚತ್ತು ನೋಡಿದರೂ ಎದುರು ಏನೊಂದನ್ನೂ ಕಾಣದಾದಳು. ಪ್ರಾತಃಕಾಲದಲ್ಲೆದ್ದು ಅವಳು ಸ್ವಪ್ನ ವಿಶಾರದರಾದ ಬ್ರಾಹ್ಮಣರನ್ನು ಕುರಿತು ತನ್ನ ಸ್ವಪ್ನದ ಬಗ್ಗೆ ವಿಚಾರಿಸಿದಳು. ॥೧೬೪॥ ಆಗ ಬ್ರಾಹ್ಮಣರು- "ಹೇ ಸಾಧ್ವೀ ! ತಾಪೀಸ್ನಾನದ ಮಹಿಮೆಯು ಇಂದು ನಿನ್ನ ಅನುಭವಕ್ಕೆ ಬಂದಿದೆ. ಸ್ವಪ್ನವೃತ್ತಾಂತವು ಸತ್ಯವಾಗಿದೆ" ಎಂದು ಹೇಳಿದರು. ಆ ಸ್ತ್ರೀಯು ಹತ್ತು ವರ್ಷಗಳವರೆಗೆ ಸತತವಾಗಿ ಬಿಟ್ಟೂಬಿಡದೇ ಆಷಾಢದಲ್ಲಿ ಆದರದಿಂದ ತಾಪೀ ಸ್ನಾನವನ್ನು ಮಾಡಿ ॥೧೬೫॥ ಮಾಸವ್ರತ, ದಾನ,

ಆಸಾದ್ಯ ಸ್ವಪತಿನಾ ಯದ್ಭೂರಿಪುಣ್ಯಪ್ರಭಾವಾ ಸ್ವರ್ಗಾಲ್ಲೋಕಾದ-
ಪಗತಭಯಂ ವೈಷ್ಣವಂ ಧಾಮ ಯತ್ರ ।
ತತ್ರಾಸಾಕಲ್ಪಂ ಸ್ವಪತಿಸಹಿತಾ ಸ್ವಾರ್ಜಿತಾನಕ್ಷಯಾನ್ಸಾ ಭೋಗಾನ್
ಭೋಕ್ಷ್ಯನ್ ಭುವನಪತಿನಾ ಪ್ರೀತಿದತ್ತಾನ್ ಅಭುಂಕ್ತ ॥೧೬೭॥

ಇತಿ ದುರಿತವಿನಾಶಿ ಸ್ನಾನಮಾಹಾತ್ಮ್ಯಮುಕ್ತಂ ದಿನಮಣಿತನಯಾಯಾ
ಮಾಸಿ ಚಾಷಾಢಸಂಜ್ಞೇ ।
ಶ್ರವಣಕರಣಬುದ್ಧಿರ್ಮಾನವೋ ಯಃ ಶೃಣೋತಿ ಪ್ರತಿದಿನಮಥ
ಸೋಽಪಿ ಸ್ನಾನಷಷ್ಠಾಂಶಭಾಕ್ ಸ್ಯಾತ್ ॥೧೬೮॥

॥ ಇತಿ ಶ್ರೀಸ್ಕಂದಪುರಾಣೇ ಆಷಾಢಮಾಹಾತ್ಮ್ಯೇ ತೃತೀಯೋಽಧ್ಯಾಯಃ ॥೩॥

ಸ್ನಾನಾದಿಗಳಿಂದ ಬಹು ಪುಣ್ಯವನ್ನು ಸಂಪಾದಿಸಿ ನಂತರ ಆ ತಪಸ್ವಿನಿಯು ಇಹಲೋಕವನ್ನು ತ್ಯಜಿಸಿದಳು. ಮುಂದೆ ಅವಳು ಕೂಡಲೇ ತನ್ನ ಗಂಡನಿರುವ ಲೋಕವನ್ನೇ ಸೇರಿದಳು. ॥೧೬೬॥ ಭೂರಿಪುಣ್ಯವನ್ನು ಸಂಪಾದಿಸಿದ ಆ ಸಾಧ್ವೀಮಣಿಯು ಸ್ವರ್ಗಲೋಕದಲ್ಲಿ ತನ್ನ ಪತಿಯೊಂದಿಗೆ ಕೆಲದಿನವಿದ್ದು ಅಲ್ಲಿಂದ ಮುಂದೆ ಭಯರಹಿತವಾದ ವೈಷ್ಣವಲೋಕಕ್ಕೆ ಬಂದಳು. ಅಲ್ಲಿ ಭುವನಪತಿಯಾದ ವಿಷ್ಣುವಿನಿಂದ ಅನುಗ್ರಹಪೂರ್ವಕ ಕೊಡಲ್ಪಟ್ಟ ಅಕ್ಷಯವಾದ ಭೋಗಗಳನ್ನು ಪತಿಪತ್ನಿಯರಿಬ್ಬರೂ ಭೋಗಿಸುತ್ತ ಸುಖದಿಂದ ಇದ್ದರು. ॥೧೬೭॥ ರವಿಸುತೆಯಾದ ತಾಪೀನದಿಯಲ್ಲಿ ಆಷಾಢಮಾಸದಲ್ಲಿ ಮಾಡುವ ಸ್ನಾನವು ದುರಿತ ನಾಶಕವಾಗಿರುವ ಮಹಾತ್ಮೆಯನ್ನು ಇದುವರೆಗೆ ತಿಳಿಸಿದೆನು. ಈ ಮಹಾತ್ಮೆಯನ್ನು ಯಾವನು ಆದರದಿಂದ ಕೇಳುವನೋ ಅವನಾದರೂ ಆಷಾಢಸ್ನಾನದಿಂದ ಬರುವ ಪುಣ್ಯದ ಆರನೆಯ ಒಂದು ಭಾಗವನ್ನು ನಿಶ್ಚಿತವಾಗಿ ಪಡೆಯುವನು. ॥೧೬೮॥

॥ ಇಲ್ಲಿಗೆ ಶ್ರೀಸ್ಕಂದಪುರಾಣದಲ್ಲಿಯ ಆಷಾಢಮಾಸ ಮಹಾತ್ಮೆಯಲ್ಲಿ ೩ನೆಯ ಅಧ್ಯಾಯವು ಸಮಾಪ್ತವಾಯಿತು. ॥

॥ ಶ್ರೀಕೃಷ್ಣಾರ್ಪಣಮಸ್ತು ॥

❋

೪ನೆಯ ಅಧ್ಯಾಯ

❋

ಈಶ್ವರ ಉವಾಚ-

ಅಥಾಸೀದ್ ಬ್ರಾಹ್ಮಣಃ ಕಶ್ಚಿನ್ನಾಮ್ನಾ ಲಾಂಗಲವರ್ಧನಃ ।
ಧನವಾಂಶ್ಚ ವಿದೇಶೀಯೋ ಕೃಷಿಜೀವೀ ನಿರಂತರಮ್ ॥೧॥

ಸ ವೃದ್ಧತ್ವೇ ಹೃತಧನಃ ಪುತ್ರೈರ್ನಿಷ್ಕಾಸಿತೋ ಗೃಹಾತ್ ।
ಭೈಕ್ಷ್ಯವೃತ್ತಿಸ್ತತೋ ಜಾತೋ ಬ್ರಾಹ್ಮಣೋ ದುಃಖಪೀಡಿತಃ ॥೨॥

ಸ ಗತ್ವಾ ತಪತೀತೀರಂ ತತ್ರ ಕೃತ್ವಾ ಮಠೀಂ ಶುಭಾಮ್ ।
ಉವಾಸ ತತ್ರ ಭೈಕ್ಷಂ ಚ ಧರ್ಮೇಣೈವ ಕರೋತಿ ಸಃ ॥೩॥

ಕಣಾನಾದಾಯ ಭೈಕ್ಷ್ಯಸ್ಯ ಸ್ನಾನಂ ಕೃತ್ವಾ ಪಚತ್ಯಸೌ ।
ದೇವತಾಪಿತೃಭೂತೇಭ್ಯೋ ದತ್ವಾ ಭುಂಕ್ತೇ ಚ ನಿತ್ಯಶಃ ॥೪॥

ಏವಂಸ್ಥಿತೇನ ಚಾಷಾಢಾಃ ತೇನ ಸ್ನಾತಾಸ್ತು ವಿಂಶತಿಃ ।
ಏಕದಾ ತಸ್ಯ ವಿಪ್ರಸ್ಯ ಸ್ನಾನಾರ್ಥೀ ಕೋಽಪಿ ವಾಡವಃ ॥೫॥

ಈಶ್ವರನು ಹೇಳುತ್ತಾನೆ-ಹಿಂದಕ್ಕೆ ಲಾಂಗಲವರ್ಧನ ಎಂಬ ಹೆಸರಿನ ಒಬ್ಬ ಬ್ರಾಹ್ಮಣನಿದ್ದನು. ಅವನು ಧನವಂತನೂ, ಸದಾ ಕೃಷಿಕರ್ಮದಲ್ಲಿ ಆಸಕ್ತನೂ ಆಗಿದ್ದನು. ॥೧॥ ಅವನ ವೃದ್ಧಾಪ್ಯದಲ್ಲಿ ಮಕ್ಕಳು ಅವನ ಧನವನ್ನೆಲ್ಲ ಕಳೆದುಕೊಂಡು ತಂದೆಯನ್ನು ಮನೆಯಿಂದ ಹೊರಹಾಕಿದರು. ಆಗ ಲಾಂಗಲವರ್ಧನ ಬ್ರಾಹ್ಮಣನು ಭಿಕ್ಷಾಟನೆ ಮಾಡಿ ಹೊಟ್ಟೆ ತುಂಬಿಕೊಳ್ಳುತ್ತ ಬಹು ದುಃಖಿತನಾಗಿ ಕಾಲ ಕಳೆಯತೊಡಗಿದನು. ॥೨॥ ಮುಂದೆ ಅವನು ತಾಪೀ ನದೀ ತೀರಕ್ಕೆ ಹೋಗಿ ಅಲ್ಲೊಂದು ಶುಭಕರವಾದ ಮಠವನ್ನು ಕಟ್ಟಿಕೊಂಡು ಆ ಮಠದಲ್ಲಿ ಭಿಕ್ಷಾಸ್ವೀಕಾರ ಮಾಡಿ ಧರ್ಮದಿಂದ ಜೀವನ ನಡೆಸಿದನು. ॥೩॥ ನಿತ್ಯವೂ ಭೋಜನಕ್ಕೆಂದು ತಿನ್ನುವ ಕಾಳುಗಳನ್ನು ಭಿಕ್ಷೆಯಿಂದ ತಂದು ಅವುಗಳಿಂದ ಹಿಟ್ಟು ಮಾಡಿ ಸ್ನಾನಾನಂತರ ಆ ಹಿಟ್ಟನ್ನು ಬೇಯಿಸುತ್ತಿದ್ದನು. ನಂತರ ಅದನ್ನು ದೇವ, ಪಿತೃ ಹಾಗೂ ಭೂತಗಳಿಗೆ ಸಮರ್ಪಿಸಿ ಅನಂತರ ತಾನು ಬೇಯಿಸಿದ ಆ ಪದಾರ್ಥವನ್ನು ಸೇವಿಸುತ್ತಿದ್ದನು. ॥೪॥ ಈ ಕ್ರಮದಲ್ಲಿ ಜೀವನ ಸಾಗಿಸಿದ ಆ ಲಾಂಗಲವರ್ಧನನು ಇಪ್ಪತ್ತು ವರ್ಷ ಆಷಾಢಮಾಸದಲ್ಲಿ ನಿತ್ಯ ತಾಪೀನದಿಯಲ್ಲಿ ಪ್ರಾತಃಸ್ನಾನ ಮಾಡಿದನು. ಒಮ್ಮೆ ಒಬ್ಬ ಬ್ರಾಹ್ಮಣನು ಇವನ ಆಶ್ರಮಕ್ಕೆ ಬಂದು ಅಲ್ಲಿರುವ ನದಿಯಲ್ಲಿ ಆಷಾಢಸ್ನಾನ ಮಾಡಲು ॥೫॥ ನದಿಯಲ್ಲಿ ಇಳಿದಾಗ ಆ ಬ್ರಾಹ್ಮಣನು ಪಿತೃತರ್ಪಣಕ್ಕೆಂದು ತಂದಿದ್ದ

ತಸ್ಯ ನದ್ಯಾಮುತ್ತರಿತಸ್ತೀರ್ಥೇಷು ಸ್ನಾನಮಾಚರತ್ ।
ತತ್ತಿಲಾನನನುಜ್ಞಾಪ್ಯ ಗೃಹೀತ್ವಾ ಲಾಂಗಲವರ್ಧನಃ ॥೬॥

ತರ್ಪಣಾರ್ಥಂ ನ ಲೋಭೇನ ತಾಂಶ್ಚ ಪ್ರಸೃತಿಮಾತ್ರಕಾನ್ ।
ತೀರ್ಥೇ ತಿಲಾಪಹರಣಾತ್ ಪಾತಕಂ ಯತ್ತ್ವಜಾಯತ ॥೭॥

ತತ್ಪಾತಕಂ ವಜ್ರಲೇಪಂ ನ ಕೇನಾಪಿ ವಿನಶ್ಯತಿ ।
ತತಃ ಸ ನಿರ್ಯಯೌ ವಿಪ್ರಃ ಕುರ್ವಂಸ್ತಾಪ್ಯಾಃ ಪ್ರದಕ್ಷಿಣಾಮ್ ॥೮॥

ತತಃ ಕಾಲೇನ ಮಹತಾ ಮೃತೋ ಲಾಂಗಲವರ್ಧನಃ ।
ತಾಪೀತಟೇ ಗೃಹೀತ್ವಾ ತು ಯಮದೂತೈರ್ಯಮಾಂತಿಕಮ್ ॥೯॥

ನೀಯತೇ ಸ್ಮ ತತೋ ಧರ್ಮರಾಜಾ ಪಪ್ರಚ್ಛ ಲೇಖಕಾನ್ ।
ಕಿಯಚ್ಚ ಪುಣ್ಯಮಸ್ಯಾಸ್ತಿ ಕಿಯದಸ್ಯಾಸ್ತಿ ಪಾತಕಮ್ ॥೧೦॥

ವಿಲೋಕ್ಯ ಕಥ್ಯತಾಂ ಸರ್ವಮೇತನ್ಮಮ ತ್ವರಾನ್ವಿತಾಃ ।
ಧರ್ಮರಾಜವಚಃ ಶ್ರುತ್ವಾ ಪ್ರತ್ಯಭಾಷಂತ ಲೇಖಕಾಃ ॥೧೧॥

ಅನೇನ ಪ್ರಥಮಂ ಪಾಪಂ ಯತ್ಕೃತಂ ಕೃಷಿಕರ್ಮಣಾ ।
ತತ್ಸರ್ವಂ ವಿಲಯಂ ಯಾತಂ ತಾಪೀಸ್ನಾನಪ್ರಭಾವತಃ ॥೧೨॥

ತಿಲಗಳನ್ನು ಲಾಂಗಲವರ್ಧನನು ಅವನನ್ನು ವಿಚಾರಿಸದೇ ತನ್ನ ಪಿತೃತರ್ಪಣಕ್ಕೆಂದು ತೆಗೆದುಕೊಂಡನು. ॥೬॥ ಲಾಂಗಲವರ್ಧನನಾದರೋ ತನ್ನ ಪಿತೃತರ್ಪಣಕ್ಕಾಗಿ ಎರಡು ಪಲ ಎಂಟು ತೊಲೆ (ಪ್ರಸೃತಿಃ) ತೂಕದಷ್ಟು ಎಳ್ಳನ್ನು ತೆಗೆದುಕೊಂಡಿದ್ದನಲ್ಲದೇ ಲೋಭದಿಂದಲ್ಲ. ಹಾಗಿದ್ದರೂ ಅವನಿಗೆ ಬಹಳವಾದ ಪಾಪವು ಘಟಿಸಿ ॥೭॥ ಆ ಪಾಪವು ಯಾವನೊಬ್ಬನಿಂದಲೂ ನಿವಾರಿಸಲ್ಪಡಲು ಸಾಧ್ಯವಾಗದಂತೆ ವಜ್ರಲೇಪವಾಯಿತು. ಆಗಂತುಕ ಬ್ರಾಹ್ಮಣನು ಸ್ನಾನಾನಂತರ ಆಹ್ನಿಕಕರ್ಮಗಳನ್ನು ಮುಗಿಸಿ ತಾಪೀ ನದಿಗೆ ನಮಸ್ಕರಿಸುತ್ತ ಮುಂದಕ್ಕೆ ಹೊರಟುಹೋದನು. ॥೮॥ ಮುಂದೆ ಬಹುಕಾಲದ ನಂತರ ಲಾಂಗಲವರ್ಧನನು ತಾಪೀತೀರದಲ್ಲಿ ಮೃತನಾದಾಗ ಯಮಭಟರು ಇವನನ್ನು ಯಮಧರ್ಮನ ಸನ್ನಿಧಾನಕ್ಕೆ ಕರೆದೊಯ್ದರು. ॥೯॥ ಯಮಧರ್ಮನು ಆಗ ಚಿತ್ರಗುಪ್ತರನ್ನು ಕುರಿತು ಇವನ ಪಾಪ-ಪುಣ್ಯಗಳ ಲೆಖ್ಖವನ್ನು ನೋಡಿ ಒಪ್ಪಿಸುವಂತೆ ತಿಳಿಸಲು ಚಿತ್ರಗುಪ್ತರು ಹೇಳಿದರು- ॥೧೦॥೧೧॥ 'ಮಹಾಪ್ರಭೋ, ಕೃಷಿಕರ್ಮ ಮಾಡುವದರಿಂದ ಇವನೇನು ಮೊದಲು ಪಾಪವನ್ನು ಸಂಗ್ರಹಿಸಿದ್ದನೋ ಅದೆಲ್ಲವೂ ಮುಂದೆ ತಾಪೀಸ್ನಾನದ ಪ್ರಭಾವದಿಂದ ನಾಶವಾಗಿ

ಯಚ್ಚ ತಾಪೀತಟೇ ತೇನ ಪಾತಕಂ ತಿಲಚೌರ್ಯತಃ ।
ಕ್ರೀಯತೇ ಸ್ಮ ತದೇವಾಸ್ತಿ ನಾನ್ಯತ್ಕಿಂಚನ ವಿದ್ಯತೇ ॥೧೩॥

ತಚ್ಚಾಸ್ಯಾಪ್ಯಲ್ಪಮೇವಾಸ್ತಿ ಯನ್ನ ಲೋಭಾತ್ ಕೃತಂ ಯತಃ ।
ತತೋ ವಿಮೃಶ್ಯ ತೈಃ ಸಾರ್ಧಂ ಧರ್ಮರಾಜೋಽಥ ಬುದ್ಧಿಮಾನ್ ॥೧೪॥

ತತ್ಪಾಪಸ್ಯ ವಿಶುದ್ಧ್ಯರ್ಥಂ ನರಕಸ್ಯ ಚ ದರ್ಶನಮ್ ।
ತಸ್ಯ ಚಾಜ್ಞಾಪಯಾಮಾಸ ದೇವದೂತಂ ತದಾ ಯಮಃ ॥೧೫॥

ತತೋಽಸೌ ದೇವದೂತೇನ ಪಾತಿತೋ ನರಕೇ ಕ್ಷಣಮ್ ।
ತತಶ್ಚ ಭ್ರಾಮಿತಃ ಸರ್ವಾನ್ನರಕಾನತಿದಾರುಣಾನ್ ॥೧೬॥

ಹನ್ಯಂತೇ ಯತ್ರ ತೇ ಜೀವಾ ಪಾತ್ಯೈರ್ಬಹುವಿಧೈರಪಿ ।
ನಿಂದಂತಃ ಸ್ವಕೃತಂ ಕರ್ಮ ಕ್ರಂದಂತಶ್ಚ ಪುನಃ ಪುನಃ ॥೧೭॥

ಸ ತಾಂಸ್ತಥಾವಿಧಾನ್ ದೃಷ್ಟ್ವಾ ಮಾರ್ಯಮಾಣಾನ್ಮುಹುರ್ಮುಹುಃ ।
ಯಮದೂತಮಥೋವಾಚ ಕೃಪಯಾ ಪರಯಾನ್ವಿತಃ ॥೧೮॥

ಹೋಗಿದೆ. ॥೧೨॥ ಆದರೆ ತಾಪೀತಟದಲ್ಲಿರುವಾಗ ಬ್ರಾಹ್ಮಣನ ತಿಲವನ್ನು ಚೌರ್ಯ ಮಾಡಿದ್ದರಿಂದ ಪ್ರಾಪ್ತವಾಗಿರುವ ಪಾಪವೇನಿದೆಯೋ ಆದಷ್ಟು ಮಾತ್ರ ಉಳಿದಿದ್ದು ಇನ್ನಾವುದೂ ಇರುವದಿಲ್ಲ. ॥೧೩॥ ಲೋಭದಿಂದ ಚೌರ್ಯಮಾಡದಿರುವುದರಿಂದ ಆ ಪಾಪವಾದರೂ ಅತ್ಯಲ್ಪವಾಗಿದೆ.' ಈ ರೀತಿ ಚಿತ್ರಗುಪ್ತರಿಂದ ಬ್ರಾಹ್ಮಣನ ಪುಣ್ಯ-ಪಾಪಗಳ ಲೆಖ್ಖವನ್ನರಿತು ಬುದ್ಧಿವಂತನಾದ ಯಮಧರ್ಮನು ಅವರೊಂದಿಗೆ ಚೆನ್ನಾಗಿ ವಿಚಾರಿಸಿ ॥೧೪॥ ಬ್ರಾಹ್ಮಣನ ಪಾಪದ ನಾಶವಾಗಿ ಶುದ್ಧಿಯಾಗುವದಕ್ಕಾಗಿ ಅವನಿಗೆ ನರಕದರ್ಶನ ಮಾತ್ರ ಯೋಗ್ಯವಾಗಿದೆಯೆಂದು ನಿಶ್ಚಯಿಸಿದನು ಮತ್ತು ಆ ಬ್ರಾಹ್ಮಣನಿಗೆ ನರಕದರ್ಶನ ಮಾಡಿಸುವಂತೆ ತನ್ನ ದೂತರಿಗೆ ಆಜ್ಞಾಪಿಸಿದನು. ॥೧೫॥ ಯಮರಾಜನ ಆಜ್ಞಾನುಸಾರ ದೂತರು ಲಾಂಗಲವರ್ಧನನನ್ನು ಒಂದು ಕ್ಷಣ ನರಕದಲ್ಲಿ ಒಗೆದು ಮುಂದೆ ಅವನಿಗೆ ಅತಿ ದಾರುಣವಾದ ಸಕಲ ನರಕಗಳ ದರ್ಶನ ಮಾಡಿಸಿದರು. ॥೧೬॥ ಆ ನರಕಗಳಲ್ಲಿ ವಿವಿಧ ಜನರು ಬಹು ವಿಧವಾದ ಯಾತನೆಗಳಿಂದ ಹಿಂಸಿಸಲ್ಪಡುತ್ತಿದ್ದರು. ಈ ಯಾತನೆಗಳಿಂದ ಪೀಡಿತರಾದ ಜೀವರು ತಾವು ಮಾಡಿದ ಕರ್ಮಗಳನ್ನು ನಿಂದಿಸುತ್ತ ಪುನಃ ಪುನಃ ರೋದಿಸುತ್ತಿದ್ದರು. ॥೧೭॥ ಬ್ರಾಹ್ಮಣನು ಯಮಭಟರಿಂದ ಪುನಃ ಪುನಃ ಹೊಡೆಯಲ್ಪಡುತ್ತಿರುವ ಅವರೆಲ್ಲರನ್ನೂ ಕಂಡು ಬಹು

ಕಾನಿ ಕಾನಿ ಚ ಪಾಪಾನಿ ಕೃತಾನ್ಯೇತೈಃ ಮಹೀತಲೇ ।
ಯತ ಏವಂವಿಧೈರ್ಘೋರೈಃ ಹನ್ಯಂತೇ ಚ ಪುನಃ ಪುನಃ ॥೧೯॥

ಏತೇಷಾಂ ತಾನಿ ಪಾಪಾನಿ ಬ್ರೂಹಿ ಮೇ ಯಮಸೇವಕ ।
ಏತತ್ತಸ್ಯ ವಚಃ ಶ್ರುತ್ವಾ ಬಭಾಷೇ ಯಮಕಿಂಕರಃ ॥೨೦॥

ಮಾತಾಪಿತ್ರೋಶ್ಚ ಯೈರ್ಭೇದಃ ಕೃತೋ ವಾ ಪಿತೃಪುತ್ರಯೋಃ ।
ದಂಪತ್ಯೋರ್ಮಿತ್ರಯೋರ್ವಾಪಿ ತಥಾನ್ಯೇಷಾಂ ಭುವಿ ಸ್ಥಿತೈಃ ॥೨೧॥

ದೂತೈರ್ಯಮಸ್ಯ ಪೀಡ್ಯಂತೇ ಕಾಷ್ಠಾಭ್ಯಾಂ ಪಾರ್ಶ್ವಯೋರ್ದ್ವಯೋಃ ।
ಕ್ರಕಚೈಃ ಪೀಡ್ಯಮಾನಾಸ್ತೇ ದೃಶ್ಯಂತೇಽತ್ರ ಸುದಾರುಣಮ್ ॥೨೨॥

ಆಕೃಷ್ಟಾ ಯೈಃ ಪಿತಾ ಮಾತಾ ಗುರುರ್ವಾ ಬ್ರಾಹ್ಮಣಾಸ್ತಥಾ ।
ಅಸಂಖ್ಯಾತಾಃ ಕೃತಾ ದೋಷಾಃ ಸಾಧೂನಾಂ ಸಂಯತಾತ್ಮನಾಮ್ ॥೨೩॥

ನರಕೇಷು ಚ ಪಾತ್ಯಂತೇ ಹನ್ಯಂತೇ ಲೋಹಶಂಕುಭಿಃ ।
ಕರಾಭ್ಯಾಂ ಯೈಃ ಪರದ್ರವ್ಯಂ ಹೃತಂ ಸ್ಪೃಷ್ಟಾಃ ಪರಸ್ತ್ರಿಯಃ ॥೨೪॥

ಛಿನ್ನಾ ಜಾತಾಃ ಪುನಶ್ಛಿನ್ನಾಃ ಕ್ರಿಯಂತೇ ತತ್ಕರಾ ಇಮೇ ।
ಕಾಮಾತುರೈರ್ಮರ್ತ್ಯಲೋಕೈಃ ಯೈರಾಸ್ಪೃಷ್ಟಾಃ ಪರಸ್ತ್ರಿಯಃ ॥೨೫॥

ಕೃಪಾಪರವಶನಾಗಿ, ಯೊಮದೂತನನ್ನು ಕುರಿತು ಹೇಳಿದನು. ॥೧೮॥ ಭೋ, ಈ ರೀತಿ ಹೊಡೆತ ತಿನ್ನುತ್ತಿರುವ ಇವರು ಭೂಮಿಯಲ್ಲಿರುವಾಗ ಯಾವ ಯಾವ ಪಾಪಗಳನ್ನು ಮಾಡಿದರು? ॥೧೯॥ ಹೇ ಯಮದೂತನೇ, ಇವರ ಪಾಪಗಳ ವಿವರವನ್ನು ನನಗೆ ದಯಮಾಡಿ ತಿಳಿಸುವೆಯಾ?' ಆಗ ಬ್ರಾಹ್ಮಣನ ಪ್ರಾರ್ಥನೆಯಂತೆ ಯಮದೂತನು ಹೇಳಿದನು. ॥೨೦॥ 'ಯಾರು ತನ್ನ ಅಥವಾ ಇನ್ನೊಬ್ಬರ ತಂದೆ-ತಾಯಿಗಳ ನಡುವೆ ಅಥವಾ ತಂದೆ ಮಕ್ಕಳ ನಡುವೆ, ಗಂಡ-ಹೆಂಡಿರ ನಡುವೆ, ಮಿತ್ರರ ನಡುವೆ, ಅಥವಾ ಭೂಮಿಯೆಲ್ಲಿಯ ಇಬ್ಬರ ನಡುವೆ ಕಲಹವನ್ನುಂಟು ಮಾಡಿಸಿ ಭೇದ ಹೆಚ್ಚಿಸುವರೋ ॥೨೧॥ ಅಂಥವರನ್ನು ಇಲ್ಲಿ ಯಮದೂತರು ಉಭಯಪಾರ್ಶ್ವಗಳಲ್ಲಿ ನಿಂತು ಬಡಿಗೆಗಳಿಂದ ಬಡಿಯುತ್ತ ಕರಗಸಗಳಿಂದ ಕತ್ತರಿಸುತ್ತ ಹಿಂಸಿಸುತ್ತಾರೆ. ॥೨೨॥ ಯಾರು ತಂದೆಯನ್ನಾಗಲೀ, ತಾಯಿಯನ್ನಾಗಲೀ, ಗುರುವನ್ನಾಗಲೀ ಅಥವಾ ಬ್ರಾಹ್ಮಣರನ್ನಾಗಲೀ ಅಗಲಿಸುವರೋ ಮತ್ತು ಸಜ್ಜನರ ವಿಷಯದಲ್ಲಿ ಅಸಂಖ್ಯ ಪಾಪಕರ್ಮಗಳನ್ನು ಮಾಡಿರುವರೋ ॥೨೩॥ ಅಂಥವರನ್ನು ಅಗೋ ಅಲ್ಲಿ ಕಾಣುವ ನರಕಗಳಲ್ಲಿ ಒಗೆದು ಯಮಭಟರು ಕಬ್ಬಿಣದ ಸಲಾಕೆಗಳಿಂದ ಚುಚ್ಚಿ ಹಿಂಸಿಸುವರು. ಯಾರು ತಮ್ಮ ಕೈಗಳಿಂದ

ಆಲಿಂಗಯಂತಿ ತಾನ್ ದೂತಾ ಲೋಹಭೂಮಿಶಿಖಿದ್ರುಮಾನ್ ।
ಪುಣ್ಯಂ ನೈವ ಕೃತಂ ಯೈಸ್ತು ದೇವತಾಯತನೇ ಜಲೇ ॥೨೬॥

ಉಲ್ಮೂಕಾನಿ ಮುಖೇ ತೇಷಾಂ ಕ್ಷಿಪಂತ್ಯೇತೇ ಪುನಃ ಪುನಃ ।
ಯೇನಾಪಿ ಪಿತರೌ ವೃದ್ಧೌ ಬ್ರಾಹ್ಮಣಾ ಧೇನವಶ್ಚ ಯೈಃ ॥೨೭॥

ಪಾದಪ್ರಹಾರಾಭಿಹತಾಃ ಛಿದ್ಯಂತೇಽಲಂ ತದಂಘ್ರಯಃ ।
ಬ್ರಾಹ್ಮಣಾನಾಂ ಗುರೂಣಾಂ ಚ ಗವಾಂ ಕ್ರೋಧವಶಾನುಗಾಃ ॥೨೮॥

ಪ್ರಹರ್ತಾರೋ ಮುದ್ಗರೈಶ್ಚ ಹನ್ಯಂತೇ ಮಸ್ತಕೇಽಸಕೃತ್ ।
ಅಭೋಜ್ಯಾನಾಂ ಗೃಹೇ ಭುಕ್ತಂ ಬ್ರಾಹ್ಮಣೈರ್ಯಸ್ತು ಲೋಭತಃ ॥೨೯॥

ತೇಷಾಂ ಮುಖೇಷು ಕ್ಷಿಪ್ಯಂತೇ ಜ್ವಾಲಾಂತಾ ಲೋಹಗೋಲಕಾಃ ।
ಕೃತಂ ಪಾಪಮಮೇಯಂ ಚ ಅಭಕ್ಷಸ್ಯ ಚ ಭಕ್ಷಣಮ್ ॥೩೦॥

ವಮಂತ್ಯಂತ್ರಾಣಿ ಬಹವಸ್ತ ಏತೇ ಭೃಶಪೀಡಿತಾಃ ।
ಪುನಃ ಪುನಶ್ಚ ಹನ್ಯಂತೇ ಶಪಂತೇ ಚ ಪುನಃ ಪುನಃ ॥೩೧॥

ಇನ್ನೊಬ್ಬರ ದ್ರವ್ಯವನ್ನು ಅಪಹರಿಸುವರೋ, ಪರಸ್ತ್ರೀಯನ್ನು ಸ್ಪರ್ಶಿಸಿರುವರೋ ॥೨೪॥ ಅಂಥವರ ಕೈಗಳು ತುಂಡುತುಂಡಾಗಿ ಕತ್ತರಿಸಲ್ಪಡುವವು. ಕಾಮಾತುರರಾದ ಯಾವ ಜನರು ಪರಸ್ತ್ರೀಯರನ್ನು ಮುಟ್ಟುವವರೋ ॥೨೫॥ ಅಂಥವರನ್ನು ಯಮದೂತರು ಕಾದ ಲೋಹದ ಭೂಮಿಯ ಮೇಲಿರುವ ಉರಿಯುತ್ತಿರುವ ವೃಕ್ಷಗಳನ್ನು ಆಲಿಂಗಿಸುವಂತೆ ಮಾಡುವರು. ಭೂಲೋಕದಲ್ಲಿರುವಾಗ ತೀರ್ಥಕ್ಷೇತ್ರಗಳಲ್ಲಿ ಎಳ್ಳಷ್ಟೂ ಪುಣ್ಯಕರ್ಮವನ್ನು ಮಾಡದಿದ್ದವರ ॥೨೬॥ ಬಾಯಿಯಲ್ಲಿ ಯಮಭಟರು ಒಂದೇ ಸವನೇ ಬೆಂಕಿಯನ್ನು ಸುರಿಯುತ್ತಾರೆ. ವೃದ್ಧರಾದ ತಂದೆತಾಯಿಯರನ್ನು, ಬ್ರಾಹ್ಮಣರನ್ನು, ಗೋವುಗಳನ್ನು ॥೨೭॥ ಯಾರು ಕಾಲಿನಿಂದ ಒದ್ದಿರುವರೋ ಅಂಥವರ ಪಾದಗಳನ್ನು ಈ ನರಕಗಳಲ್ಲಿ ಕತ್ತರಿಸಲಾಗುತ್ತಿದೆ. ಬ್ರಾಹ್ಮಣರ, ಗುರುಗಳ ಮತ್ತು ಗೋವುಗಳ ಕ್ರೋಧಕ್ಕೆ ವಶರಾದವರನ್ನು ॥೨೮॥ ನರಕಗಳಲ್ಲಿ ಮುದ್ಗರಾಯುಧಗಳಿಂದ ಅವರ ತಲೆಗಳಿಗೆ ಚೆನ್ನಾಗಿ ಏಕಪ್ರಕಾರವಾಗಿ ಹೊಡೆಯಲಾಗುತ್ತಿದೆ. ಯಾವದೊಂದು ಲೋಭದಿಂದ ಯಾವ ಬ್ರಾಹ್ಮಣರು ಅಭೋಜ್ಯರಾದವರ ಮನೆಯಲ್ಲಿ ಭೋಜನ ಮಾಡುವರೋ ॥೨೯॥ ಅಂಥವರ ಬಾಯಿಯಲ್ಲಿ ಉರಿಯುತ್ತಿರುವ ಕಬ್ಬಿಣದ ಗುಂಡುಗಳನ್ನು ಒಗೆಯಲಾಗುತ್ತದೆ. ಯಾರು ಮಹಾಪಾಪವನ್ನು ಮಾಡಿರುವರೋ, ಅಭಕ್ಷ್ಯ ಪದಾರ್ಥಗಳನ್ನು ಸೇವಿಸಿರುವರೋ ॥೩೦॥ ಅಂಥವರನ್ನು ಈ ನರಕಗಳಲ್ಲಿ ಚೆನ್ನಾಗಿ ಬೈದು ಪುನಃ ಪುನಃ

ಬ್ರಾಹ್ಮಣಾನಾಂ ನಿಹಂತಾರೋ ವದಂತಃ ಕೃಪಣಾ ಗಿರಃ ।
ಸುವರ್ಣಸ್ತೇಯಿನಾಮೇಷಾಂ ಕಿಂಕರೈರತಿಘಾತಕೈಃ ॥೩೨॥

ಉತ್ತಮಾಂಗಾನಿ ಚೂರ್ಣ್ಯಂತೇ ಜಾಯಂತೇ ಭೂಯ ಏವ ಚ ।
ಬ್ರಾಹ್ಮಣೈರ್ಯೈಃ ಸುರಾ ಪೀತಾ ಕಾಮತೋ ವಾಪ್ಯಶಂಕಿತೈಃ ॥೩೩॥

ಜ್ವಲತ್ತಾಮ್ರರಸಂ ತೇಭ್ಯಃ ಪಾಯ್ಯತೇ ಯಮಕಿಂಕರೈಃ ।
ಪ್ರಸಭಂ ಪಾತಯಿತ್ವಾಥ ಲೋಹಸಂದಂಶಕೈರ್ಮುಖಮ್ ॥೩೪॥

ಏಪಾಟ್ಯ ನಿಗಡೈರ್ಬಧ್ವಾ ಹಸ್ತಯೋಃ ಪಾದಯೋರ್ಭೃಶಮ್ ।
ಗುರುಸ್ತ್ರೀಣಾಂ ತು ಭೋಕ್ತಾ ತಲ್ಲಿಂಗಂ ಛಿತ್ವಾ ಸಮುಷ್ಕಕಮ್ ॥೩೫॥

ಲಿಂಗಸ್ರೋತಸಿ ಹನ್ಯಂತೇ ಪ್ರಜ್ವಲಲ್ಲೋಹಶಂಕುನಾ ।
ಮಹಾಪಾತಕಿಭಿಃ ಸಾರ್ಧಂ ನರಾಃ ಸಂಸರ್ಗಕಾರಿಣಃ ॥೩೬॥

ಕ್ಷಿಪಂತಿ ಕ್ಷಾರಕುಂಡೇಷು ಕೃತ್ವಾ ಸರ್ಗವಿವಕ್ಷಿತಾನ್ ।
ಗವಾಂ ಚ ವಧಕರ್ತಾರಃ ಸಂಪೇಷ್ಯಂತಿ ಶಿಲಾತಲೇ ॥೩೭॥

ಸ್ಫುಟಂತ್ಯಸ್ಥಿವಸಾಮಾಂಸಾಃ ಕ್ರಂದಂತಶ್ಚ ದಿವಾನಿಶಮ್ ।
ಸ್ತ್ರೀಘಾತಕಾನಾಂ ಮಧ್ಯಾನಿ ಪಾಟಯಿತ್ವಾಥ ಕಿಂಕರೈಃ ॥೩೮॥

ಥಳಿಸಿ ಹಿಂಸಿಸಲಾಗುವದು. ॥೩೧॥ ಬ್ರಾಹ್ಮಣರನ್ನು ಹಿಂಸಿಸಿದ, ಅಸತ್ಯ ಮಾತುಗಳನ್ನಾಡಿದ ಅಥವಾ ನಿಂದ್ಯವಚನಗಳನ್ನಾಡಿದ, ಬಂಗಾರವನ್ನು ಕದ್ದ ಜನರ ಶಿರಸ್ಸುಗಳನ್ನು ಭಯಂಕರವಾದ ಯಮದೂತರು ॥೩೨॥ ನರಕಗಳಲ್ಲಿ ಕತ್ತರಿಸಿ ಹಾಕುವರು. ಸದಾಚಾರನಿಷ್ಠರಾದ ಬ್ರಾಹ್ಮಣರು ಮನದಲ್ಲಿ ಸುರಾಪಾನ ಮಾಡಿದರೂ ಕೂಡ ॥೩೩॥ ಅಂಥವರಿಗೆ ಯಮದೂತರು ಕಾದ ತಾಮ್ರ ರಸದ ಪಾನವನ್ನು ಮಾಡಿಸುವರು. ನಂತರ ಕೈಕಾಲುಗಳನ್ನು ಚೆನ್ನಾಗಿ ಕಟ್ಟಿ ನರಕದಲ್ಲಿ ಒಗೆದು ಲೋಹದ ಖಡ್ಗಗಳಿಂದ ಚುಚ್ಚುವರು. ॥೩೪॥ ಗುರುಪತ್ನಿ ಗಮನ ಮಾಡಿದವರ ಶಿಶ್ನವನ್ನು ವೃಷಣ (ಮುಷ್ಕರಃ=ತರಡು, ವೃಷಣ) ಸಹಿತ ಕತ್ತರಿಸಿ ॥೩೫॥ ಅವರನ್ನು ಲಿಂಗಗಳ ಪ್ರವಾಹದಲ್ಲಿ ಒಗೆದು ಅಲ್ಲಿ ಉರಿಯುತ್ತಿರುವ ಲೋಹದ ಭರ್ಚಿಗಳಿಂದ ಚುಚ್ಚಿ ಹಿಂಸಿಸುವರು. ಮಹಾಪಾತಕಿಗಳೊಂದಿಗೆ ಸಂಸರ್ಗ ಮಾಡುವವರನ್ನು ॥೩೬॥ ಕ್ಷಾರಕುಂಡಗಳಲ್ಲಿ ಒಗೆಯುತ್ತಾರೆ. ಗೋವಧೆ ಮಾಡಿದವರನ್ನು ಎತ್ತರದಿಂದ ಕೆಳಗೆ ಒಗೆದು ಅವರ ಭಿನ್ನವಾದ ದೇಹದ ಅಸ್ಥಿ, ಮಾಂಸಗಳನ್ನು ಹಿಂಸ್ರಪಶುಗಳು ತಿನ್ನುವಂತೆ

ಪಾಷಾಣೈಶ್ಚ ಪ್ರಪೂರ್ಯಂತೇ ಜ್ವಲದ್ಭಿರತಿದುಃಸಹೈಃ ।
ತೇ ಕಟಾಹೇಷು ಪಚ್ಯಂತೇ ಬಾಲಘಾತಕೃತಾಸ್ತು ಯೇ ॥೩೯॥

ತದ್ವ್ಯಥಯಾ ಮ್ರಿಯಂತೇ ಚ ಜೀವ್ಯಂತೇ ಚ ಪುನಸ್ತಥಾ ।
ಶೂಲಪ್ರೋತೇ ಚ ತಿಷ್ಠಂತಿ ಭ್ರೂಣಪ್ರಾಯೇ ನರಾಧಮಾಃ ॥೪೦॥

ಲೋಹತುಂಡೈಸ್ತುದ್ಯಮಾನಾ ವಾಯಸ್ಯೈರತಿದಾರುಣೈಃ ।
ಮಾರ್ಯಂತೇಽಥಚ ಜೀವ್ಯಂತೇ ಜೀವಾನಾಂ ಘಾತಕಾ ಮುಹುಃ ॥೪೧॥

ಲೋಹದಂತೈ ಶ್ವಭಿಶ್ಚೋಗ್ರೈರ್ಭಕ್ಷ್ಯಮಾಂಸಾಸ್ಥಿಮೇದಸಃ ।
ಜಘ್ನುಃ ಕೇವಲಮಾತ್ಮಾರ್ಥಂ ಯೇ ಪಶೂನ್ನಿರ್ದಯಾ ನರಾಃ ॥೪೨॥

ಜೀವತಾಮೇವ ಮಾಂಸಾನಿ ತೇಷಾಂ ಖಾದಂತಿ ರಾಕ್ಷಸಾಃ ।
ಯೇ ವಿಪ್ರನಾರೀಂ ಗೃಹ್ಣಂತಿ ಪರದ್ರವ್ಯಂ ನರಾಧಮಾಃ ॥೪೩॥

ಅಭಕ್ಷ್ಯಭೋಜನೇನೈವ ಮುಖೇ ವಹ್ನಿಂ ಕ್ಷಿಪಂತಿ ಚ ।
ಜಿಹ್ವಾಂ ತಾಲುಗಲೇ ದಗ್ಧ್ವಾ ವೇದನಾಭೃಶಮೂರ್ಛಿತಾಃ ॥೪೪॥

ಮಾಡುವರು. ಸ್ತ್ರೀಹಂತಕರ ಮಧ್ಯಭಾಗವನ್ನು ಯಮಕಿಂಕರರು ಮುರಿದು ॥೩೭॥೩೮॥ ಉರಿಯುತ್ತಿರುವ ಅತಿದುಃಸಹವಾದ ಕಲ್ಲುಗಳಿಂದ ತುಂಬಿ ಹಿಂಸಿಸುವರು. ಬಾಲಹಂತಕರನ್ನು ಕಡಾವಿಯಲ್ಲಿ ಹಾಕಿ ಬೇಯಿಸುವರು. ॥೩೯॥ ಈ ಎಲ್ಲ ಯಾತನೆಗಳಿಂದ ಜೀವಿಗಳು ನರಕಗಳಲ್ಲಿ ಕೊಲ್ಲಲ್ಪಡುವರು ಮತ್ತೆ ಜೀವಿಸಲ್ಪಡುವರು. ನರಾಧಮರು ಭ್ರೂಣಪ್ರಾಯವಾದ ಶೂಲದಲ್ಲಿ ಜೋತಾಡುವರು. ॥೪೦॥ ಹರಿತವಾದ ಕಬ್ಬಿಣದಂತಿರುವ ಚುಂಚುಗಳುಳ್ಳ ಭಯಂಕರವಾದ ಕಾಗೆಗಳಿಂದ ಚುಚ್ಚಲ್ಪಟ್ಟು ಕೊಲೆಗಡುಕರು ಚಿತ್ರವಿಚಿತ್ರವಾಗಿ ಹಿಂಸಿಸಲ್ಪಡುವರು. ಸ್ವಾರ್ಥಕ್ಕಾಗಿ ಪಶುಗಳನ್ನು ಕೊಂದ ನಿರ್ದಯಿ ಜನರನ್ನು ಕಬ್ಬಿಣದ ಹಲ್ಲುಗಳಿರುವ ಉಗ್ರವಾದ ನಾಯಿಗಳು ಕಚ್ಚಿ ಅವರ ಮಾಂಸ, ಅಸ್ಥಿ, ಮೇದಸ್ಸುಗಳನ್ನು ಹರಿದು ತಿನ್ನುವವು. ॥೪೧॥೪೨॥ ಯಾರು ಬ್ರಾಹ್ಮಣ ಸ್ತ್ರೀಯ ಸಂಗವನ್ನು ಮಾಡುವರೋ ಮತ್ತು ಪರದ್ರವ್ಯವನ್ನು ಅಪಹರಿಸುವರೋ ಅಂಥ ನರಾಧಮರು ಜೀವಂತವಿರುವಾಗಲೇ ರಾಕ್ಷಸರು ಅವರ ಮಾಂಸಗಳನ್ನು ತಿನ್ನುವರು. ॥೪೩॥ ಅಭಕ್ಷ್ಯ ಪದಾರ್ಥಗಳನ್ನು ತಿನ್ನುವವರ ಬಾಯಿಯಲ್ಲಿ ಬೆಂಕಿಯನ್ನು ಸುರಿಯಲಾಗುತ್ತದೆ. ಅಂಥವರ ನಾಲಿಗೆ, ಕಿರುನಾಲಿಗೆ ಹಾಗೂ ಗುತ್ತಿಗೆಗಳನ್ನು ಸುಡಲಾಗುತ್ತದೆ. ಆಗ ಅವರು ಬಹಳವಾದ ವೇದನೆಯಿಂದ ಮೂರ್ಛಿತರಾಗಿ

ನರಕಾ ದರ್ಶಿತಾಸ್ಸರ್ವೇ ಧರ್ಮರಾಜಸ್ಯ ಶಾಸನಾತ್ ।
ವ್ರಜಾಮೋ ಧರ್ಮರಾಜಸ್ಯ ಸಕಾಶಂ ತಸ್ಯ ಚಾಜ್ಞಯಾ ॥೫೭॥

ಇತ್ಯುಕ್ತಃ ಸ ತತೋ ಯಾತೋ ಧರ್ಮರಾಜನಿವೇಶನಮ್ ।
ದೇವದೂತೇನ ಸಾರ್ಧಂ ಸ ಆಗಚ್ಛನ್ನಥ ವೀಕ್ಷಿತಃ ॥೫೮॥

ಧರ್ಮರಾಜೇನ ತೇಜಸ್ವೀ ದೀಪ್ಯಮಾನೋ ಯಥಾ ರವಿಃ ।
ಅಭ್ಯುತ್ಥಾಯ ದ್ವಿಜಂ ತಂ ತು ಬಹುಮಾನಪುರಃಸರಮ್ ॥೫೯॥

ತತೋಽಪವೇಶಮಾಮಾಸ ಧರ್ಮರಾಜೋ ನಿಜಾಸನೇ ।
ತಪತ್ಯಾಷಾಢಜನಿತಂ ತಸ್ಯ ಪುಣ್ಯಮನಂತಕಮ್ ॥೬೦॥

ಜ್ಞಾತ್ವಾ ವಿಮಾನಮಾನೀಯ ಪ್ರಾಹ ಲಾಂಗಲವರ್ಧನಮ್ ।
ತ್ವಯಾರ್ಜಿತೋ ವಿಷ್ಣುಲೋಕಃ ಕಾಲಸಂಖ್ಯಾ ನಿಗದ್ಯತೇ ॥೬೧॥

ತತ್ರ ಲೋಕೇಽಸ್ತಿ ತೇ ವಾಸಃ ಪಾರ್ಶ್ವೇ ಭಗವತೋಽಕ್ಷಯಃ ।
ಕೃತಂ ಚ ಪಾತಕಂ ಸ್ವಲ್ಪಂ ಇಹಾನೀತೋಽಸಿ ಸತ್ಕೃತೇ ॥೬೨॥

ಮನಸ್ಸಿನ ದುಃಖಕ್ಕೆ ಕಾರಣವಾಗುವ (ನರಕಕ್ಕೆ ಕಾರಣವಾಗುವ) ಪಾಪಗಳ ಬಗ್ಗೆ ನಿನಗೆ ಇದುವರೆಗೆ ತಿಳಿಸಿದ್ದೇನೆ. ॥೫೬॥ ಮತ್ತು ಯಮಧರ್ಮರಾಜನ ಆಜ್ಞಾನುಸಾರವಾಗಿ ನಿನಗೆ ಎಲ್ಲ ನರಕಗಳ ದರ್ಶನವನ್ನೂ ಮಾಡಿಸಿದ್ದೇನೆ. ಇನ್ನು ನಮ್ಮ ರಾಜನು ಆಜ್ಞಾಪಿಸಿದಂತೆ ರಾಜನ ಸನ್ನಿಧಾನಕ್ಕೆ ನಾವಿಬ್ಬರೂ ಹೊರಟು ಹೋಗೋಣ.' ॥೫೭॥ ಈ ಪ್ರಕಾರವಾಗಿ ಯಮದೂತನು ತಿಳಿಸಲು ಲಾಂಗಲವರ್ಧನ ಬ್ರಾಹ್ಮಣನು ಆ ದೇವದೂತನನ್ನು ಅನುಸರಿಸಿ ಧರ್ಮರಾಜನ ನಿವೇಶನಕ್ಕೆ ಹಿಂತಿರುಗಿ ಬಂದನು. ॥೫೮॥ ಆಗ ಅಲ್ಲಿ ಸೂರ್ಯನಂತೆ ದೇದೀಪ್ಯಮಾನನಾದ ತೇಜಸ್ವಿಯಾದ ಆ ಬ್ರಾಹ್ಮಣನನ್ನು ಕಂಡಾಕ್ಷಣವೇ ಯಮಧರ್ಮನು ಚಟ್ಟನೇ ಮೇಲೆದ್ದು ಅವನನ್ನು ಆದರಪೂರ್ವಕ ಬರಮಾಡಿಕೊಂಡು ॥೫೯॥ ತನ್ನ ಆಸನದಲ್ಲಿ ಕುಳ್ಳಿರಿಸಿಕೊಂಡನು. ಆಷಾಢಮಾಸದಲ್ಲಿ ತಾಪೀನದಿಯಲ್ಲಿ ಸ್ನಾನ ಮಾಡಿದುದರಿಂದ ಅವನು ಅನಂತವಾದ ಪುಣ್ಯವನ್ನು ಸಂಪಾದಿಸಿರುವದನ್ನು ತಿಳಿದ ॥೬೦॥ ಯಮರಾಯನು ಒಂದು ದೇವವಿಮಾನವನ್ನು ತರಿಸಿ ಆ ಬ್ರಾಹ್ಮಣನನ್ನು ಕುರಿತು ಹೇಳಿದನು- ಭೋ ಬ್ರಾಹ್ಮಣನೇ ! ಆಷಾಢಸ್ನಾನ ಪುಣ್ಯದಿಂದ ನೀನು ವಿಷ್ಣುಲೋಕವನ್ನು ಸಂಪಾದಿಸಿರುವಿ. ಅಲ್ಲಿ ಎಷ್ಟು ಕಾಲ ಇರುವಿ ಎಂಬುದನ್ನು ತಿಳಿಸುವೆನು. ॥೬೧॥ ಆ ವಿಷ್ಣುಲೋಕದಲ್ಲಿ ಇನ್ನು ಮುಂದೆ ನೀನು ವಾಸಮಾಡುವಿ. ನೀನು ಸ್ವಲ್ಪ ಪಾಪಕರ್ಮವನ್ನು ಮಾಡಿದ್ದರಿಂದ ॥೬೨॥ ನಿನಗೆ ಎಲ್ಲ

ದರ್ಶಿತಾ ನರಕಾಸ್ತಸ್ಮಾತ್ತೇನ ತದ್ವಿಲಯಂ ಗತಮ್ ।
ಪ್ರಥಮಂ ಭುಜ್ಯತೇ ಹ್ಯತ್ರ ಹ್ಯಲ್ಪೋಽಂಶಃ ಪುಣ್ಯಪಾಪಯೋಃ ॥೬೩॥

ತತ್ತ್ವಯಾ ಸ್ವಲ್ಪಕಂ ಪಾಪಂ ಭುಕ್ತಂ ದುರ್ಗತಿದರ್ಶನಾತ್ ।
ಅತಃ ಶುದ್ಧಶರೀರಸ್ತ್ವಂ ವಿಮಾನವರಮಾರುಹ ॥೬೪॥

ಯಾತಾ ವೈಕುಂಠಭವನಂ ಭೋಗಾನ್ಭುಂಕ್ಷ್ವ ಯಥೇಪ್ಸಿತಾನ್ ।
ಅರ್ಜಿತಂ ಯತ್ತ್ವಯಾ ಮರ್ತ್ಯೇ ವಿಂಶತ್ಯಾಷಾಢಸಂಭವಮ್ ॥೬೫॥

ತದನ್ನಂ ತತ್ಫಲಂ ಪುಣ್ಯಂ ಕ್ಷೀಯತೇ ನ ಕದಾಚನ ।
ಧರ್ಮರಾಜವಚಃ ಶ್ರುತ್ವಾ ಬಭಾಷೇ ಬ್ರಾಹ್ಮಣಸ್ತದಾ ॥೬೬॥

ಯದ್ಯಾನಂತ್ಯಂ ಮಮಾಸ್ತ್ಯತ್ರ ಪುಣ್ಯಂ ಭಾಸ್ಕರನಂದನ ।
ತೇನ ಪುಣ್ಯೇನ ಸರ್ವೇ ತೇ ನಿರ್ಗಚ್ಛಂತು ಸುದುರ್ಗತೇಃ ॥೬೭॥

ಏತದ್ಯಾಚೇ ಧರ್ಮರಾಜ ಕೃಪಾಂ ಕುರು ಮಮೋಪರಿ ।
ಮಮ ಸರ್ವೇಣ ಪುಣ್ಯೇನ ವಿಂಶತ್ಯಾಷಾಢಜೇನ ತು ॥೬೮॥

ಯೇ ದೃಷ್ಟಾ ದುರ್ಗತಿಂ ಪ್ರಾಪ್ತಾ ಮಯಾ ತಾನಾಶು ಮೋಚಯ ।
ತಂ ಪ್ರತ್ಯುವಾಚ ರವಿಜಃ ಕಿಂ ತೇಷಾಂ ತ್ವಂ ಕರಿಷ್ಯಸಿ ॥೬೯॥

ನರಕಗಳ ದರ್ಶನ ಮಾತ್ರವನ್ನು ಮಾಡಿಸಲಾಯಿತು. ನರಕದರ್ಶನದಿಂದ ಈಗ ನಿನ್ನ ಪಾಪವು ನಾಶವಾಗಿದೆ. ನಿನ್ನ ಪುಣ್ಯ-ಪಾಪಗಳಲ್ಲಿಯ ಅಲ್ಪಭಾಗವಾದ ಪಾಪದ ಫಲವು ಮೊದಲು ಇಲ್ಲಿ ಭೋಗಿಸಲ್ಪಡಬೇಕಾದ್ದರಿಂದ ॥೬೩॥ ನರಕದರ್ಶನ ಮಾಡುವುದರಿಂದ ಆ ಅಲ್ಪಪಾಪವು ಭೋಗಿಸಲ್ಪಟ್ಟಿದೆ. ಈಗ ನೀನು ಶುದ್ಧನಾಗಿರುವಿಯಾದ್ದರಿಂದ ಈ ಶ್ರೇಷ್ಠವಾದ ವಿಮಾನವನ್ನೇರು. ॥೬೪॥ ವೈಕುಂಠಕ್ಕೆ ಹೋಗುವವನಾಗಿ ಅಲ್ಲಿ ಯಥೇಷ್ಟವಾದ ಭೋಗಗಳನ್ನು ಭೋಗಿಸು. ಮರ್ತ್ಯಲೋಕದಲ್ಲಿರುವಾಗ ಇಪ್ಪತ್ತು ಆಷಾಢಗಳಲ್ಲಿ ತಾಪೀ ಸ್ನಾನದಿಂದ ಸಂಪಾದಿಸಿದ ನಿನ್ನ ಪುಣ್ಯವೇನಿದೆಯೋ ಅದು ॥೬೫॥ ಎಂದಿಗೂ ಕ್ಷೀಣಿಸುವದಿಲ್ಲ. ಮತ್ತು ಪುಣ್ಯಫಲವು ಎಂದಿಗೂ ಹ್ರಾಸವಾಗುವದಿಲ್ಲ.' ಯಮಧರ್ಮನ ಈ ಮಾತುಗಳನ್ನು ಕೇಳಿದ ಲಾಂಗಲವರ್ಧನನು ಆಗ ಹೇಳಿದನು. ॥೬೬॥ ಸ್ವಾಮಿನ್ ಯಮರಾಯನೇ, ನಾನು ಸಂಪಾದಿಸಿದ ಪುಣ್ಯವು ಅನಂತವಾಗಿದ್ದರೆ, ಆ ಪುಣ್ಯ ಪ್ರಭಾವದಿಂದ ನರಕವಾಸಿಗಳೆಲ್ಲರೂ ದುರ್ಗತಿಯಿಂದ ಮುಕ್ತರಾಗಲಿ. ॥೬೭॥ ಹೇ ಧರ್ಮರಾಜ ಮಹಾರಾಯನೇ, ನಾನು ಇಷ್ಟು ಮಾತ್ರ ನಿನ್ನಲ್ಲಿ ಪ್ರಾರ್ಥಿಸುವೆನು. ನನ್ನ ಮೇಲೆ ದಯೆದೋರಿ ಇಷ್ಟನ್ನು ಮಾತ್ರ ನಡೆಸಿಕೊಡು. ಇಪ್ಪತ್ತು ಆಷಾಢಗಳಲ್ಲಿ ಸಂಪಾದಿಸಿದ ನನ್ನ ಪುಣ್ಯದಿಂದ ॥೬೮॥ ದುರ್ಗತಿಯನ್ನು ಹೊಂದಿದ ದುಷ್ಟರನ್ನು ನರಕದಿಂದ ಮುಕ್ತಗೊಳಿಸು.' ಬ್ರಾಹ್ಮಣನ ಈ ಪ್ರಾರ್ಥನೆಯಿಂದ

ನಿಜಂ ತ್ವಂ ಭುಂಕ್ಷ್ವ ಸುಕೃತಂ ತೇ ಚಿರಂ ಸಂತು ನಾರಕಾಃ ।
ಸ್ವಕೃತಂ ಭುಜ್ಯತೇ ಕರ್ಮ ಪಾಪಂ ವಾ ಯದಿ ವಾ ಶುಭಮ್ ॥೭೦॥

ಇಹ ಲೋಕೇ ಪರಸ್ಮಿನ್ವಾ ನಾನ್ಯೋ ಭೋಕ್ತಾಸ್ತಿ ಕಶ್ಚನ ।
ಇತಿ ಮತ್ವಾ ವ್ರಜ ಕ್ಷಿಪ್ರಂ ವಿಲಂಬೋ ನಾತ್ರ ದೃಶ್ಯತೇ ॥೭೧॥

ತತೋಽಸಾವಂಜಲಿಂ ಬಧ್ವಾ ಧರ್ಮರಾಜಾನಮಥಾಬ್ರವೀತ್ ।
ಕಥಂ ಗಚ್ಛಾಮಿ ದೇವೇಶ ಮುಕ್ತ್ವಾ ತಾನತಿಪೀಡಿತಾನ್ ॥೭೨॥

ಯದಿ ಪುಣ್ಯಂ ಮಾಮಾಸ್ತೀತಿ ದೀಯತಾಂ ಹ್ಯವಿಚಾರತಃ ।
ಏತಾನಾಪದ್ಗತಾನ್ ದೃಷ್ಟ್ವಾ ಕಿಂ ಪುಣ್ಯೇನ ಭವೇನ್ಮಮ ॥೭೩॥

ಕ್ಷಣಂ ವಾಥ ಕ್ಷಣಾರ್ಧಂ ವಾ ಮಮ ಪುಣ್ಯಾನುಸಾರತಃ ।
ಭವಂತು ಸುಖಿನಃ ಸರ್ವೇ ಜಂತವೋ ನಾರಕಾ ಅಮೀ ॥೭೪॥

ಏವಂ ಪ್ರಸಾದಂ ಕುರು ಮೇ ಕೃಪಾಂ ಕೃತ್ವಾ ಮಮೋಪರಿ ।
ಏತಾವತಾ ಮಯಾ ಪ್ರಾಪ್ತಂ ಸರ್ವಂ ಹಿ ವಾಂಛಿತಂ ಫಲಮ್ ॥೭೫॥

ವಿಸ್ಮಿತನಾದ ಯಮಧರ್ಮನು ಅಂದನು- ಅಯ್ಯಾ, ಅವರಿಂದ ನಿನಗೇನಾಗಬೇಕಾಗಿದೆ? ॥೬೯॥ ನೀನು ನಿಶ್ಚಿಂತನಾಗಿ ನಿನ್ನ ಸುಕೃತವನ್ನು ಭೋಗಿಸು. ನರಕದಲ್ಲಿ ಬಿದ್ದಿರುವ ಆ ಪಾಪಿಗಳು ಅವರಪಕ್ಕೆ ಅವರು ಇರಲಿ. ತಾನು ಮಾಡಿದ ಸುಕೃತವನ್ನಾಗಲೀ, ದುಷ್ಕೃತವನ್ನಾಗಲೀ ಮನುಷ್ಯನು ತಾನೇ ಭೋಗಿಸಬೇಕಷ್ಟೇ! ॥೭೦॥ ಇಹಲೋಕದಲ್ಲಾಗಲೀ ಪರಲೋಕದಲ್ಲಾಗಲೀ ತಾನು ಮಾಡಿದ ಸುಕೃತ ಅಥವಾ ದುಷ್ಕೃತಗಳನ್ನು ಬೇರೆ ಯಾರೂ ಭೋಗಿಸಲಾರರು ಎಂಬುದನ್ನು ತಿಳಿದು ನೀನು ಬೇಗನೇ ವಿಮಾನದಲ್ಲಿ ಕುಳಿತು ಹೊರಡು. ತಡಮಾಡಬೇಡ.' ॥೭೧॥ ಆಗ ಲಾಂಗಲವರ್ಧನನು ಕೈಜೋಡಿಸಿಕೊಂಡು ಯಮಧರ್ಮರಾಜನಿಗೆ ಹೇಳಿದನು-ಹೇ ದೇವೇಶಾ ! ಅತ್ಯಂತ ಪೀಡಿತರಾದ ಆ ನರಕವಾಸಿಗಳನ್ನು ಬಿಟ್ಟು ಅದೆಂತು ನಾನು ಇಲ್ಲಿಂದ ಹೋಗಲಿ? ॥೭೨॥ ನನ್ನದೇನಾದರೂ ಪುಣ್ಯವಿದ್ದರೆ ಅದನ್ನು ಯಾವ ವಿಚಾರವಿಲ್ಲದೇ ಈ ನರಕವಾಸಿಗಳಿಗೆ ಕೊಟ್ಟುಬಿಡು. ಇವರು ಇಂಥ ಆಪತ್ತಿನಲ್ಲಿರುವಾಗ ಪುಣ್ಯವನ್ನು ತೆಗೆದುಕೊಂಡು ನಾನೇನು ಮಾಡುವುದಿದೆ? ॥೭೩॥ ನನ್ನ ಪುಣ್ಯಮಿತಿಯನ್ನು ಅನುಸರಿಸಿ ಈ ನರಕವಾಸಿಗಳೆಲ್ಲ ಒಂದು ಕ್ಷಣವಾಗಲೀ ಅಥವಾ ಅರ್ಧಕ್ಷಣವಾಗಲೀ ಸುಖವನ್ನು ಹೊಂದಲಿ. ॥೭೪॥ ಹೇ ದೇವೇಶಾ! ನನ್ನ ಮೇಲೆ ದಯೆದೋರಿ ಇಷ್ಟನ್ನು ಮಾತ್ರ ನಡೆಸಿಕೊಟ್ಟು ಅನುಗ್ರಹಿಸು. ಇದುವರೆಗೆ ಅಪೇಕ್ಷಿಸಿದುದೆಲ್ಲವನ್ನೂ ನಾನು ಪಡೆದಿದ್ದೇನೆ. ॥೭೫॥ ನಾನು ಎಲ್ಲರನ್ನೂ ಬಿಟ್ಟು ಹಾಗೇ ವಿಷ್ಣುಲೋಕಕ್ಕೆ ಹೋದರೆ ಅಲ್ಲಿ ಇದಕ್ಕೆ

ವಿಷ್ಣುಲೋಕೇಽಪಿ ಹರ್ಷಶ್ಚ ಈದೃಶೋ ನ ಭವಿಷ್ಯತಿ ।
ಯಾವದೇತಾನ್ಸಮಾಲೋಕ್ಯ ನರಕೇಭ್ಯೋ ವಿನಿರ್ಗತಾನ್ ॥೭೬॥

ತಸ್ಮಾದಿದಂ ಪ್ರಸಾದಂ ಮೇ ಕರ್ತುಮರ್ಹಸಿ ಸೂರ್ಯಜ ।
ನರಕೇಭ್ಯೋ ವಿಮುಚ್ಯೈತಾನ್ ದಾರುಣೇಭ್ಯೋಽಪಿ ಪೀಡಿತಾನ್ ॥೭೭॥

ಸ್ಥಾಸ್ಯಾಮಿ ಗತಪುಣ್ಯೋಽಹಂ ನರಕೇಷು ಯಥಾಕ್ರಮಮ್ ।
ತೇನ ಪುಣ್ಯಪ್ರಭಾವೇನ ಸಾತ್ವಿಕತ್ವಂ ಭವೇನ್ಮಮ ॥೭೮॥

ಇತಿ ಶ್ರುತ್ವಾಥ ತೇನೋಕ್ತಂ ಧರ್ಮರಾಜೋಽಬ್ರವೀದಿದಮ್ ।
ಅಹೋ ಮಹಾಸಾಹಸಂ ಕಿಂ ಕರೋಷಿ ತ್ವಂ ವಿಚಾರಯ ॥೭೯॥

ನರಕಾರ್ತಿಂ ಕ್ಷಣಮಪಿ ಪರಾರ್ಥೇಽತ್ರ ಸಹೇತ ಕಃ ।
ಅಮೃತಂ ಸಹಸಾ ಪ್ರಾಪ್ತಂ ದತ್ವಾ ತೇಭ್ಯಃ ಪ್ರಸಾದತಃ ॥೮೦॥

ಪ್ರಯತ್ನತಃ ಸಮಾನೀಯ ವಿಷಂ ಕೋಽತ್ರ ಜಿಘತ್ಸತಿ ।
ಅವಿಚಾರ್ಯ ನ ಕರ್ತವ್ಯಂ ಕಾರ್ಯಂ ಕಿಮಪಿ ಪಂಡಿತೈಃ ॥೮೧॥

ನರೋ ವಿಮೃಶ್ಯಕಾರೀ ಹಿ ಯಾವಜ್ಜೀವಂ ನ ಶೋಚ್ಯತಿ ।
ತದ್ಗಚ್ಛಸ್ವ ಸುಖಪ್ರಾಪ್ತ್ಯೈ ಕಿಂ ಕಾರ್ಯಂ ಪಾಪಿಭಿಸ್ತವ ॥೮೨॥

ಸಮನಾದ ಹರ್ಷವು ಉಂಟಾಗುವದಿಲ್ಲ. ಹೇ ಸೂರ್ಯಪುತ್ರಾ! ಇವರೆಲ್ಲರೂ ನರಕಗಳಿಂದ ಮುಕ್ತರಾಗುವವರೆಗೆ ನನಗೆ ಈ ಸ್ಥಳವನ್ನು ಬಿಡಲು ಮನಸ್ಸಾಗುತ್ತಿಲ್ಲ. ॥೭೬॥ ಆದ್ದರಿಂದ ದಯಮಾಡಿ ಇಷ್ಟನ್ನು ನಡೆಸಿಕೊಟ್ಟು ಅನುಗ್ರಹಿಸು. ಅತಿ ಪೀಡಿತರಾದ ಇವರೆಲ್ಲರನ್ನೂ ದಾರುಣವಾದ ನರಕಗಳಿಂದ ಮುಕ್ತಗೊಳಿಸಿ ಇವರಿಗೋಸ್ಕರ ನನ್ನೆಲ್ಲ ಪುಣ್ಯವನ್ನು ಕಳೆದುಕೊಂಡು ನರಕದಲ್ಲಿಯೇ ಉಳಿಯುವೆನು. ಪರೋಪಕಾರದ ಈ ಕಾರ್ಯದಿಂದ ಪ್ರಾಪ್ತವಾಗುವ ಪುಣ್ಯಪ್ರಭಾವದಿಂದ ನನ್ನ ಸಾತ್ವಿಕ ಸ್ವಭಾವವು ಹೆಚ್ಚುವದು.' ॥೭೭॥೭೮॥ ಬ್ರಾಹ್ಮಣನ ಈ ಪ್ರಕಾರದ ಮಾತುಗಳನ್ನು ಕೇಳಿ ಧರ್ಮರಾಜನು ಅಂದನು-ಅಹೋ ಬ್ರಾಹ್ಮಣಾ! ಅದೇಕೆ ಇಂಥ ಮಹಾಸಾಹಸಕ್ಕೆ ಕೈಹಾಕಿರುವಿ? ವಿಚಾರಮಾಡು. ॥೭೯॥ ನರಕದ ಈ ದುಃಖವನ್ನು ಪರರಿಗೋಸ್ಕರ ಅದಾರು ತಾನೇ ಸಹಿಸುವರು? ದೈವಾನುಗ್ರಹದಿಂದ ಸಹಸಾ ಪ್ರಾಪ್ತವಾದ ಅಮೃತವನ್ನು ಈ ನರಕ ವಾಸಿಗೆ ಕೊಟ್ಟು ॥೮೦॥ ಪ್ರಯಾಸಪಟ್ಟು ವಿಷವನ್ನು ತಂದು ಅದನ್ನು ಕುಡಿಯಲು ಯಾರಾದರೂ ಬಯಸುವರೇ? ಬುದ್ಧಿವಂತರಾದವರು ವಿಚಾರಿಸದೇ ಯಾವ ಕಾರ್ಯವನ್ನೂ ಮಾಡಬಾರದು. ॥೮೧॥ ಸಾರಾಸಾರ ವಿಚಾರಪೂರ್ವಕ ಕೆಲಸಮಾಡುವವನು ಜೀವನದಲ್ಲಿ ಎಂದಿಗೂ ದುಃಖವನ್ನು ಹೊಂದುವದಿಲ್ಲ. ಆದ್ದರಿಂದ

ಶ್ರುತ್ವೋವಾಚ ಪುನರ್ವಿಪ್ರೋ ಧರ್ಮರಾಜಮುಖಾದಿತಿ ।
ಸತ್ಯಮುಕ್ತಂ ತ್ವಯಾ ದೇವ ಧರ್ಮರಾಜ ಹಿತಂ ಮಮ ॥೮೩॥

ಪರೋಪಕಾರಣಂ ಬ್ರೂಯುರಹಿತಂ ನ ಭವಾದೃಶಾಃ ।
ಕಿಂ ತು ಲೋಕಾಭಿರುಚಿತಂ ಭಿನ್ನಮೇವಾಭಿದೃಶ್ಯತೇ ॥೮೪॥

ಸುಖಂ ವಾ ಯದಿ ವಾ ದುಃಖಂ ತತ್ರ ಹೇತುರ್ನ ದೇವತಾ ।
ಯದತ್ರ ರೋಚತೇ ಯಸ್ಯ ತಸ್ಯ ತತ್ತತ್ತತಂ ಹಿತಮ್ ॥೮೫॥

ವಿಷ್ಣುಲೋಕಂ ಪರಿತ್ಯಜ್ಯ ನರಕೇ ಗಮನಂ ಹಿತಮ್ ।
ಏಷಾಮರ್ಥೇ ಮಮಾಭೀಷ್ಟಂ ತತ್ಕಿಂ ಸ್ವಾಮಿನ್ನ ಪೂರ್ಯತೇ ॥೮೬॥

ಅಭೀಷ್ಟದಾನವರದಂ ದೇವಾನಾಮಿಹ ದೃಶ್ಯತೇ ।
ತಸ್ಮಾದೇತನ್ಮಮಾಭೀಷ್ಟಂ ಪ್ರಸೀದ ಕ್ರಿಯತಾಂ ಪ್ರಭೋ ॥೮೭॥

ಇತಿ ತದ್ವಚನಂ ಶ್ರುತ್ವಾ ಪ್ರಾಹ ವೈವಸ್ವತೋ ಯಮಃ ।
ಅದ್ಯೈವಮೇವ ತೇಽಭೀಷ್ಟಂ ವಿಲಂಬಃ ಕ್ರಿಯತೇ ಕಥಮ್ ॥೮೮॥

ವಿಭ್ಯೋ ದೇಹಿ ನಿಜಂ ಪುಣ್ಯಂ ವಿಂಶತ್ಯಾಷಾಢಸಂಭವಮ್ ।
ಇತಿ ಪ್ರೇತಪತೇರ್ವಾಕ್ಯಂ ಶ್ರುತ್ವಾ ಹೃಷ್ಟತನೂರುಹಃ ॥೮೯॥

ಸುಖವನ್ನು ಭೋಗಿಸಲು ವೈಕುಂಠಲೋಕಕ್ಕೆ ಹೊರಡುವವನಾಗು. ಆ ಪಾಪಿಗಳಿಂದ ನಿನಗೇನಾಗಬೇಕಾಗಿದೆ?' ॥೮೨॥ ಧರ್ಮರಾಜನ ಮುಖದಿಂದ ಈ ಮಾತುಗಳನ್ನು ಕೇಳಿ ಆ ಬ್ರಾಹ್ಮಣನು ಪುನಃ ಹೇಳಿದನು- 'ಹೇ ದೇವಾ ! ಧರ್ಮರಾಜಾ, ನೀನೇನೋ ನನಗೆ ಹಿತವಾಗುವ ಸತ್ಯವನ್ನೇ ಹೇಳಿರುವಿ. ॥೮೩॥ ಸುಖವಾಗಲೀ ದುಃಖವಾಗಲೀ ಇವೆರಡಕ್ಕೂ ದೇವತೆಯು ಕಾರಣವಾಗುವದಿಲ್ಲ. ಯಾವನಿಗೆ ಯಾವುದು ರುಚಿಸುವದೋ ಅವನಿಗೆ ಅದರಲ್ಲಿಯೇ ತನ್ನ ಹಿತವು ತೋರುವದು. ॥೮೫॥ ಆದ್ದರಿಂದ ವಿಷ್ಣುಲೋಕವನ್ನು ಬಿಟ್ಟು ನರಕದಲ್ಲಿರುವದೇ ನನಗೆ ಹಿತವಾಗಿದೆ. ಹೇ ಸ್ವಾಮಿನ್ ಧರ್ಮರಾಯಾ, ಈ ಕಲ್ಯಾಣಕ್ಕಾಗಿ ಅದೇಕೆ ನನ್ನ ಅಭೀಷ್ಟವನ್ನು ಪೂರೈಸಲು ಹಿಂದುಮುಂದೆ ನೋಡುತ್ತಿರುವಿ? ॥೮೬॥ ಅಭೀಷ್ಟವಾದುದನ್ನು ಕೊಡುವದೇ ಇಲ್ಲಿನ ದೇವತೆಗಳ ಸ್ವಭಾವವಾಗಿದೆಯಲ್ಲವೇ ? ಆದ್ದರಿಂದ ಹೇ ಪ್ರಭೋ, ಪ್ರಸನ್ನನಾಗಿ ನನ್ನ ಈ ಅಭೀಷ್ಟವನ್ನು ಪೂರೈಸಿ ಅನುಗ್ರಹಿಸು.' ॥೮೭॥ ಲಾಂಗಲವರ್ಧನನು ಹೇಳಿದುದನ್ನು ಕೇಳಿ ಯಮಧರ್ಮರಾಯನು-''ಅಯ್ಯಾ ಆಗಲಿ, ಇಂದೇ ನಿನ್ನ ಅಭೀಷ್ಟವನ್ನು ಪೂರೈಸುವೆನು' ವಿಲಂಬವೇಕೆ? ॥೮೮॥ ನೀನು ಇಪ್ಪತ್ತು ಆಷಾಢಮಾಸಗಳಲ್ಲಿ

ದದೌ ಪುಣ್ಯಂ ತದಾ ತೇಭ್ಯೋ ವಿಂಶತ್ಯಾಷಾಢಸಂಭವಮ್ ।
ತತಸ್ತೇ ನರಕೇಭ್ಯಶ್ಚ ಸರ್ವೇ ಚಾಪಿ ವಿನಿರ್ಗತಾಃ ॥೫೦॥

ತಸ್ಯ ಪುಣ್ಯಪ್ರಭಾವೇನ ತತ್ಸಮೀಪಮುಪಾಗತಾಃ ।
ನರಕೋದ್ಧಾರಕಂ ಜ್ಞಾತ್ವಾ ತುಷ್ಟುವುಸ್ತಂ ಮುದಾನ್ವಿತಾಃ ॥೫೧॥

ಕೃಪಾನಿಧೇ ವರ್ಣ್ಯತೇ ಕಿಂ ತಾವಕೋ ಗುಣಸಾಗರಃ ।
ಕ್ವಾಪಿ ದೃಷ್ಟಾ ಶ್ರುತಾ ವಾ ನ ದಯಾವಂತೋ ನರಾ ಇಹ ॥೫೨॥

ತ್ವಾದೃಶೋ ನ ಶ್ರುತೋ ದೃಷ್ಟೋ ದಯಾವಾನ್ ಭುವನತ್ರಯೇ ।
ಅಂಗೀಕೃತ್ಯ ಪರಾರ್ಥಂ ಯೇ ತ್ವಾದೃಶಾ ಬಹವೋ ಜನಾಃ ॥೫೩॥

ಪಾಪಾನ್ನರಾನುದ್ಧರಂತಿ ಸತ್ಯಮೇವ ನ ಚಾಪರಃ ।
ಕಾರುಣ್ಯಾದುಪಕುರ್ವಂತಿ ಸರ್ವೇಽಪಿ ಪುರುಷಾ ಇಹ ॥೫೪॥

ವಿನೈವ ಕಾರಣಂ ದೃಷ್ಟಂ ಉಪಕಾರ್ಯೈಃ ಪರಂಗತಾಃ ।
ತ್ವತ್ತೋ ದುಃಖವಿನಿರ್ಮುಕ್ತಸ್ತ್ವದನ್ಯೋ ವಿದಧಾತಿ ಕಃ ॥೫೫॥

ಕಲ್ಪಾಂತನರಕಾವಾಸಾತ್ತಾರಿತಾ ಭವತಾ ವಯಮ್ ।
ಅಸ್ಮಾಕಂ ತ್ವಂ ಪಿತಾ ನೂನಮಿಹ ಜನ್ಮಸು ಸದ್ಗತಿಃ ॥೫೬॥

ಪ್ರಾತಃಸ್ನಾನದಿಂದ ಸಂಪಾದಿಸಿದ ಪುಣ್ಯವನ್ನು ಈ ನರಕವಾಸಿಗಳಿಗೆ ಸಮರ್ಪಿಸು'' ಎಂದು ನುಡಿಯಲು ಅದನ್ನು ಕೇಳಿ ರೋಮಾಂಚಿತನಾದ ಬ್ರಾಹ್ಮಣನು ॥೪೯॥ ಆಗ ಇಪ್ಪತ್ತು ಆಷಾಢಗಳಲ್ಲಿ ಸಂಪಾದಿಸಿದ ಪುಣ್ಯವನ್ನು ಆ ಎಲ್ಲ ನರಕವಾಸಿಗಳಿಗೆ ಸಂಕಲ್ಪಪೂರ್ವಕ ಸಮರ್ಪಿಸಿದನು. ಆ ಕ್ಷಣವೇ ಎಲ್ಲ ನರಕವಾಸಿಗಳು ನರಕಗಳಿಂದ ಮುಕ್ತರಾಗಿ ಬ್ರಾಹ್ಮಣನ ಹತ್ತಿರ ಬಂದು-ಅವನೇ ತಮ್ಮನ್ನು ನರಕದಿಂದ ಉದ್ಧರಿಸಿರುವನೆಂಬುದನ್ನು ಅರಿತು ಅವನನ್ನು ಸಂತೋಷದಿಂದ ಸ್ತುತಿಸಿದರು. ॥೫೧॥ 'ಹೇ ಕೃಪಾನಿಧೇ, ನಿನ್ನ ಗುಣಸಾಗರವನ್ನು ವರ್ಣಿಸಲು ನಮಗೆ ಸಾಧ್ಯವೇ ! ಈ ಸ್ಥಳದಲ್ಲಿ ದಯಾವಂತರಾದವರು ಇರುವದನ್ನು ನೋಡಿಯೂ ಇಲ್ಲ ಕೇಳಿಯೂ ಇಲ್ಲ. ॥೫೨॥ ನಿನ್ನಂಥ ದಯಾಮಯಿಯು ಭುವನತ್ರಯದಲ್ಲಿಯೂ ಸಿಗಲಾರರು. ಪರೋಪಕಾರ ಮಾಡುವಂಥವರು ಬಹು ಜನರು ಸಿಗಬಹುದು. ॥೫೩॥ ಆದರೆ ಪಾಪಿಗಳಾದ ಜನರನ್ನು ಉದ್ಧರಿಸುವಂಥವರು ನಿನ್ನನ್ನು ಬಿಟ್ಟು ಬೇರಿನ್ನಾರೂ ಇರುವದಿಲ್ಲ. ಲೋಕದಲ್ಲಿ ಯಾವುದೊಂದು ಕಾರಣದಿಂದ ಎಲ್ಲರೂ ಒಬ್ಬರಿಗೊಬ್ಬರು ಉಪಕಾರ ಮಾಡುವರು. ॥೫೪॥ ಯಾವ ಕಾರಣವಿಲ್ಲದೇ ಪರೋಪಕಾರ ಮಾಡುವವರು ನಿನ್ನನ್ನು ಬಿಟ್ಟರೆ ಬೇರಿನ್ನಾರು ಇರುವರು? ವೈಕುಂಠ ಲೋಕ ಪ್ರಾಪ್ತಿಯಿಂದ ಸಕಲದುಃಖಗಳಿಂದ ಮುಕ್ತನಾಗಿದ್ದರೂ ಬೇರೊಬ್ಬರ ದುಃಖ ನಿವಾರಣೆ ಮಾಡಿದ ನಿನ್ನನ್ನು ಬಿಟ್ಟರೆ ಬೇರಿನ್ನಾರು ಇರುವರು? ॥೫೫॥ ಘೋ

ಪಿತಾಪ್ಯೇವಂ ಚ ನ ಸ್ನೇಹಂ ಧತ್ತೇ ಯಸ್ತು ತ್ವಯಾ ಧೃತಃ ।
ಸುಖೀ ಭವ ನರಶ್ರೇಷ್ಠ ಕುರು ಪುಣ್ಯಮಹರ್ನಿಶಮ್ ॥೯೭॥

ದುರ್ಗತಾನುದ್ಧರ ಸದಾ ಧರ್ಮೇ ತೇಽಸ್ತು ಸದಾ ಮತಿಃ ।
ಅತ್ಯಂತಪುಣ್ಯವಾನ್ ಭೂಯ ಆಪನ್ನಾರ್ತಿಹರಃ ಸದಾ ॥೯೮॥

ಸತಾಂ ಹಿ ವಿಭವೋ ಲೋಕೇ ಸರ್ವಸಾಧಾರಣೋ ಮತಃ ।
ಇತಿ ತಸ್ಯಾಶಿಷಂ ದತ್ವಾ ಗತಾಸ್ತೇ ಪರಮಾಂ ಗತಿಮ್ ॥೯೯॥

ತಾಪೀಸ್ನಾನಸ್ಯ ಪುಣ್ಯೇನ ವಿಮುಕ್ತಾಃ ಸರ್ವಪಾತಕೈಃ ।
ತತೋಽಸೌ ಬ್ರಾಹ್ಮಣಃ ಪ್ರಾಹ ಯಮಂ ಲಾಂಗಲವರ್ಧನಃ ॥೧೦೦॥

ಪ್ರಣಮ್ಯ ಪರಯಾ ವಾಚಾ ಹರ್ಷಬಾಷ್ಪಸಮನ್ವಿತಃ ।
ಭಗವಂಸ್ತ್ವತ್ಪ್ರಸಾದೇನ ಪ್ರಾಪ್ತಂ ಸಮಭಿವಾಂಛಿತಮ್ ॥೧೦೧॥

ದೇವತಾಸಂಗಮಾತ್ಕಿಂ ಕಿಂ ನಾಪ್ಯತೇ ಚಾಪಿ ದುರ್ಲಭಮ್ ।
ಜಗದ್ದಂಡಧರಃ ಕಸ್ತ್ವಂ ಕೋಽಹಂ ಕೃಷಿಕರೋ ದ್ವಿಜಃ ॥೧೦೨॥

ಮಹಾತ್ಮಾ! ಕಲ್ಪಾಂತದ ನರಕವಾಸದಿಂದ ಇಂದು ನೀನು ನಮ್ಮನ್ನು ಪಾರು ಮಾಡಿರುವಿ. ನೀನೇ ನಿಜವಾಗಿಯೂ ನಮ್ಮ ಜನ್ಮದಾತನಾದ ತಂದೆಯಾಗಿರುವಿ, ಸದ್ಗತಿಯಾಗಿರುವಿ. ॥೯೬॥ ಹಡೆದ ತಂದೆಯೂ ಕೂಡ ನಿನ್ನಷ್ಟು ಅಂತಃಕರಣರೂಪವಾದ ಸ್ನೇಹವನ್ನು ಹೊಂದಿರಲಾರನು. ಹೇ ಪುರುಷಶ್ರೇಷ್ಠನೇ, ಸುಖಿಯಾಗಿರು. ಹಗಲು-ರಾತ್ರಿ ಇದೇ ರೀತಿ ಪುಣ್ಯಕರ್ಮವನ್ನು ಮಾಡುತ್ತಿರು. ॥೯೭॥ ದುರ್ಗತಿ ಹೊಂದಿದವರನ್ನು ಸದಾ ಉದ್ಧರಿಸುತ್ತಿರು. ಸದಾಕಾಲದಲ್ಲಿ ನಿನ್ನ ಬುದ್ಧಿಯು ಧರ್ಮದಲ್ಲಿರಲಿ. ಆಪನ್ನರ ದುಃಖವನ್ನು ದೂರ ಮಾಡುತ್ತ ಸದಾ ಅತ್ಯಂತ ಪುಣ್ಯವಂತನಾಗು. ॥೯೮॥ ಲೋಕದಲ್ಲಿ ಸಜ್ಜನರ ಸಂಪತ್ತುಗಳೇನಿವೆಯೋ ಅವು ಎಲ್ಲರಿಗೂ ಸಾಧಾರಣವಾಗಿರುವವು (ಯಾರು ಬೇಕಾದರೂ ಅವುಗಳನ್ನು ಪಡೆಯಬಹುದು) ಎಂಬ ಮಾತು ಸತ್ಯವಾಗಿದೆ.' ಈ ರೀತಿಯಾಗಿ ಅವರೆಲ್ಲರೂ ಲಾಂಗಲವರ್ಧನ ಬ್ರಾಹ್ಮಣನನ್ನು ಅಭಿನಂದಿಸಿ ಉತ್ತಮವಾದ ಗತಿಯನ್ನು ಹೊಂದಿದರು. ॥೯೯॥ ತಾಪೀಸ್ನಾನದ ಪುಣ್ಯಪ್ರಭಾವದಿಂದ ಅವರೆಲ್ಲರೂ ಸರ್ವಪಾತಕಗಳಿಂದ ಮುಕ್ತರಾಗಿ ಪರಮಗತಿಯನ್ನು ಹೊಂದಿದ ನಂತರ 'ಲಾಂಗಲವರ್ಧನ ಬ್ರಾಹ್ಮಣನು ಯಮರಾಯನಿಗೆ ॥೧೦೦॥ ಭಕ್ತಿಯಿಂದ ನಮಿಸಿ ಹರ್ಷಬಾಷ್ಪದ ಕಂಠಿತನಾಗಿ ಹೇಳಿದನು- 'ಭಗವನ್, ನಿನ್ನ ಅನುಗ್ರಹದಿಂದ ನನ್ನ ಅಪೇಕ್ಷೆಯು ಈಡೇರಿದೆ. ॥೧೦೧॥ ದೇವತಾಸಂಗಮವಾದಾಗ ದುರ್ಲಭವಾಗಿದ್ದರೂ ಯಾವುದು ತಾನೇ ಈಡೇರಲಿಕ್ಕಿಲ್ಲ! ಜಗತ್ತನ್ನೇ ರಕ್ಷಿಸುವ ನೀನೆಲ್ಲಿ! ಸಾಮಾನ್ಯ ಒಬ್ಬ

ಮಯಿ ಕೋಽಪಿ ಪ್ರಸಾದಸ್ತೇ ಯೇನ ತ್ವಾಂ ದೃಷ್ಟವಾನಹಮ್ ।
ಮನೋರಥಾದಪಿ ಪರಾ ತಾಪೀಯಂ ತಾವಕೀ ಕೃತಾ ॥೧೦೩॥

ಅದ್ಯ ತೇ ಮಮ ವಾಕ್ಯೇನ ನರಕೇಭ್ಯೋ ವಿಮೋಚಿತಾಃ ।
ಪ್ರಸಾದೇನಾನುಜ್ಞಾತೇನ ನರಕಂ ಹಿ ವ್ರಜಾಮ್ಯಹಮ್ ॥೧೦೪॥

ಮಯಾ ಹಿ ದತ್ತಂ ಸ್ವಂ ಪುಣ್ಯಂ ಗತಪುಣ್ಯೋಽಸ್ಮಿ ಸಾಂಪ್ರತಮ್ ।
ಅಥವಾ ಉದರಂ ಕಸ್ಯಾ ಮಾತುರ್ಯಾಮಿ ಪ್ರಸಾದ್ಯತಾಮ್ ॥೧೦೫॥

ಇತಿ ತಸ್ಯ ವಚಃ ಶ್ರುತ್ವಾ ಧರ್ಮರಾಜೋಽಬ್ರವೀತ್ಪುನಃ ।
ಗತಃಪುಣ್ಯಮಹೋ ಕಸ್ಮಾತ್ತ್ವಯಾ ಪುಣ್ಯಂ ಬಹೂಕೃತಮ್ ॥೧೦೬॥

ಪ್ರೇತಾನಿಮಾನ್ಮೋಚಯಿತ್ವಾ ಸ್ವಪುಣ್ಯಸ್ಯ ವ್ಯಯೇನ ತು ।
ಸ್ವಯಂ ಸ್ವೀಕೃತ್ಯ ನರಕಾನ್ಯ ಯೇತೇ ಮೋಚಿತಾಸ್ತ್ವಯಾ ॥೧೦೭॥

ತ್ವದನ್ಯಃ ಕೋಽಪಿ ಶಕ್ನೋತಿ ಕರ್ಮೈತತ್ಕರ್ತುಮೀದೃಶಮ್ ।
ಆತ್ಮನಃ ಸುಖಮಿಚ್ಛಂತಿ ಸರ್ವೇಽಪಿ ಪರಪೀಡಯಾ ॥೧೦೮॥

ಅಂಗೀಕೃತ್ವಾತ್ಮನೋ ದುಃಖಂ ತ್ವಯಾನ್ಯೇಷಾಂ ಸುಖಂ ಕೃತಮ್ ।
ತೇನ ತೇ ಪರಮಾ ಭಕ್ತಿರ್ಗತಂ ಪುಣ್ಯಂ ತದಕ್ಷಯಮ್ ॥೧೦೯॥

ಕೃಷಿಕನಾದ ನಾನೆಲ್ಲಿ ! ॥೧೦೨॥ ನನ್ನಲ್ಲಿ ಮಾಡಿರುವ ಅನುಗ್ರಹದಿಂದ ನಾನು ನಿನ್ನನ್ನು ನೋಡಲು ಸಮರ್ಥನಾಗಿದ್ದೇನೆ. ತಾಪೀಸ್ನಾನದ ಪುಣ್ಯಪ್ರಭಾವವನ್ನು ಅನುಸರಿಸಿ ನನ್ನ ಮನೋರಥಕ್ಕಿಂತಲೂ ಅಧಿಕವಾದ ಫಲವು ಕೊಡಲ್ಪಟ್ಟದೆ. ॥೧೦೩॥ ನನ್ನ ಒಂದು ಬೇಡಿಕೆಯನ್ನು ಮನ್ನಿಸಿ ನೀನು ಅವರೆಲ್ಲರನ್ನೂ ನರಕಗಳಿಂದ ಮುಕ್ತಗೊಳಿಸಿರುವಿ. ಇನ್ನು ನೀನು ಅನುಜ್ಞೆಯನ್ನು ಕೊಟ್ಟರೆ ನಾನು ಯಾವುದೊಂದು ನರಕದಲ್ಲಿ ಬೀಳುವೆನು. ॥೧೦೪॥ ನಾನಂತೂ ಸಂಪಾದಿಸಿದ ಎಲ್ಲ ಪುಣ್ಯವನ್ನು ಕೊಟ್ಟುಬಿಟ್ಟಿರುವುದರಿಂದ ಈಗ ನನ್ನಲ್ಲಿ ಎಳ್ಳಷ್ಟೂ ಪುಣ್ಯವು ಉಳಿದಿರುವದಿಲ್ಲ. ನರಕವು ಬೇಡವೆಂದರೆ ಯಾವ ತಾಯಿಯ ಉದರವನ್ನು ಪ್ರವೇಶಿಸಲಿ? ಅಪ್ಪಣೆ ಕೊಡುವವನಾಗು.' ॥೧೦೫॥ ಬ್ರಾಹ್ಮಣನ ಈ ಮಾತುಗಳನ್ನು ಕೇಳಿದ ಧರ್ಮರಾಯನು ಹೇಳಿದನು- ಅಯ್ಯಾ ಪುಣ್ಯವು ಮುಗಿದುಹೋಯಿತೆಂದು ಏಕೆ ಅನ್ನುವಿ? ನೀನು ಈಗ ಇನ್ನೂ ಅಧಿಕವಾದ ಪುಣ್ಯವನ್ನು ಸಂಪಾದಿಸಿರುವಿ. ॥೧೦೬॥ ನಿನ್ನ ಪುಣ್ಯವನ್ನು ಖರ್ಚು ಮಾಡುವದರಿಂದ ನೀನು ಸ್ವಯಂ ನರಕವನ್ನು ಸ್ವೀಕರಿಸಿ ಈ ಎಲ್ಲ ಪ್ರೇತಗಳನ್ನು ನರಕಗಳಿಂದ ಮುಕ್ತಗೊಳಿಸಿರುವಿ. ॥೧೦೭॥ ಇಂಥ ಪುಣ್ಯಕಾರ್ಯವನ್ನು ನಿನ್ನ ಹೊರತಾಗಿ ಬೇರಿನ್ಯಾರಿಗೆ ಮಾಡಲು ಸಾಧ್ಯ ! ಸಾಮಾನ್ಯವಾಗಿ ಲೋಕದಲ್ಲಿ ಎಲ್ಲರೂ ಇನ್ನೊಬ್ಬರಿಗೆ ಪೀಡೆಯನ್ನು ಕೊಟ್ಟು ತಮಗೆ

ವ್ರಜ ವಿಷ್ಣುಪದಂ ನಿತ್ಯಂ ದೇವೈರಪಿ ಸುದುರ್ಲಭಮ್ ।
ಯತ್ಪದಂ ಯೋಗಿಭಿರ್ಗಮ್ಯಂ ವಿಷ್ಣುಧ್ಯಾನಪರಾಯಣೈಃ ॥೧೧೦॥

ಯತ್ರ ಗತ್ವಾ ನ ಶೋಚಂತಿ ನ ನಿವೃತ್ತಿಃ ಕದಾಚನ ।
ತತ್ಪದಂ ಪ್ರಾಪ್ಯ ಪರಮಂ ಮೋದಸ್ವ ವಿಷ್ಣುಸನ್ನಿಧೌ ॥೧೧೧॥

ಅಕ್ಷಯ್ಯೋ ವಿಷ್ಣುಲೋಕಸ್ತೇ ಜಾತೋ ಬ್ರಾಹ್ಮಣಸತ್ತಮ ।
ತಪತ್ಯಾಷಾಢಮಾಸಸ್ಯ ಸ್ನಾನಪುಣ್ಯಪ್ರಭಾವತಃ ॥೧೧೨॥

ಯೇನ ಪುಣ್ಯೇನ ತೇ ಸರ್ವೇ ಮೋಚಿತಾಃ ಪಾಪಕರ್ಮಣಃ ।
ಸ್ವಯಂ ವಿಷ್ಣುಪದಂ ಪ್ರಾಪ್ತೋ ಯಲ್ಲಬ್ಧ್ವಾ ನ ನಿವರ್ತತೇ ॥೧೧೩॥

ಅಹೋಽತೀವಪ್ರಭಾವೋಽಯಮಾಷಾಢಸ್ನಾನಸಂಭವಃ ।
ಇತ್ಯುಕ್ತೋ ಧರ್ಮರಾಜೇನ ವಿಪ್ರಃ ಪರಮಹರ್ಷಭಾಕ್ ॥೧೧೪॥

ತಮಾಪೃಚ್ಛ್ಯ ನಮಸ್ಕೃತ್ಯ ತತೋ ಗಂತುಂ ಪ್ರಚಕ್ರಮೇ ।
ಯಾವದ್ ವ್ರಜತ್ಯಸೌ ವಿಪ್ರೋ ವಿಮಾನಂ ತಾವದಾವ್ರಜತ್ ॥೧೧೫॥

ಮಾತ್ರ ಸುಖವಾಗುವದನ್ನು ಬಯಸುತ್ತಾರೆ. ॥೧೦೮॥ ಆದರೆ ನೀನಾದರೋ ಸ್ವಂತಕ್ಕೆ ದುಃಖವನ್ನು ಸ್ವೀಕರಿಸಿ ಇನ್ನೊಬ್ಬರಿಗೆ ಸುಖವನ್ನುಂಟು ಮಾಡಿರುವಿ. ಇದರಿಂದ ಈ ನಿನ್ನ ಪರೋಪಕಾರದಿಂದ ಪ್ರಾಪ್ತವಾದ ಪುಣ್ಯವು ಅಕ್ಷಯವಾಗಿದೆ. ॥೧೦೯॥ ಅಯ್ಯಾ, ನೀನಿನ್ನು ದೇವತೆಗಳಿಗೂ ದುರ್ಲಭವಾದ, ವಿಷ್ಣುಧ್ಯಾನಪರಾಯಣರಾದ ಯೋಗಿಗಳಿಂದ ಗಮ್ಯವಾದ ವಿಷ್ಣುಲೋಕವನ್ನು ಕುರಿತು ಹೊರಡುವವನಾಗು. ॥೧೧೦॥ ಆ ಲೋಕಕ್ಕೆ ಹೋದವರು ಮುಂದೆ ಎಂದಿಗೂ ದುಃಖವನ್ನು ಹೊಂದುವದಿಲ್ಲ ಮತ್ತು ಅವರಿಗೆ ಅಲ್ಲಿಂದ ಬಿಡುಗಡೆ ಎಂಬುದಿಲ್ಲ. ಅಂಥ ಪರಮಪದವನ್ನು ಹೊಂದಿ ನೀನು ವಿಷ್ಣುಸನ್ನಿಧಿಯಲ್ಲಿ ಮುದದಿಂದ ಇರುವವನಾಗು. ॥೧೧೧॥ ಹೇ ಬ್ರಾಹ್ಮಣೋತ್ತಮಾ, ತಾಪೀನದಿಯಲ್ಲಿ ಆಷಾಢಸ್ನಾನದ ಪುಣ್ಯಪ್ರಭಾವದಿಂದ. ನಿನಗೆ ಅಕ್ಷಯವಾದ ವಿಷ್ಣುಲೋಕವು ಪ್ರಾಪ್ತವಾಗಿದೆ. ॥೧೧೨॥ ನಿನ್ನ ಆ ಪುಣ್ಯಪ್ರಭಾವದಿಂದಲೇ ನರಕವಾಸಿಗಳೆಲ್ಲ ಪಾಪಕರ್ಮದಿಂದ ಮುಕ್ತಗೊಳಿಸಲ್ಪಟ್ಟಿದ್ದಾರೆ. ಈ ಬ್ರಾಹ್ಮಣನೂ ಪುನರಾವರ್ತಿ ಇಲ್ಲದ ವಿಷ್ಣುಲೋಕವನ್ನು ಹೊಂದಿದ್ದಾನೆ. ॥೧೧೩॥ ಅಹೋ ! ಆಷಾಢಸ್ನಾನದ ಪ್ರಭಾವವು ಅದೆಷ್ಟು ಇರುವದು !' ಈ ರೀತಿ ಯಮಧರ್ಮರಾಯನು ಹೇಳಲು ಬ್ರಾಹ್ಮಣನು ಬಹು ಹರ್ಷಭರಿತನಾದನು. ॥೧೧೪॥ ಮತ್ತು ಯಮಧರ್ಮ ರಾಯನಿಗೆ ನಮಸ್ಕರಿಸಿ ಅವನ ಅನುಜ್ಞೆಯನ್ನು ಪಡೆದು ವಿಷ್ಣುಲೋಕಕ್ಕೆ ಹೊರಡಲು ಸಿದ್ಧನಾದನು. ಅಷ್ಟರಲ್ಲಿ ಅಲ್ಲೊಂದು ದೇವಲೋಕದ ವಿಮಾನವು ಬಂದು ನಿಂತಿತು.

ವಿಷ್ಣುನಾ ಪ್ರೇಷಿತಂ ತತ್ರ ಸಮಾನೀತಂ ಚ ವೈಷ್ಣವೈಃ ।
ತೇ ತಂ ವಿಮಾನಮಾರೋಪ್ಯ ಶಂಖಚಕ್ರಗದಾಧರಮ್ ॥೧೧೬॥

ಪೀತಾಂಬರಧರಂ ಕೃತ್ವಾ ವನಮಾಲಾವಿರಾಜಿತಮ್ ।
ಪ್ರತಸ್ಥೇ ವಿಷ್ಣುಲೋಕಂ ಸ ಮಾನವೈರತಿದುರ್ಲಭಮ್ ॥೧೧೭॥

ತತ್ಪುರೋ ದೇವಗಂಧರ್ವಾ ಗಾಯನಂ ಪರಮಂ ಜಗುಃ ।
ತತ್ರಾಪ್ಸರಸೋಽಪ್ಯನೃತ್ಯಂತ ಗಣಾಸ್ತೂರ್ಯಾಣ್ಯವಾದಯನ್ ॥೧೧೮॥

ಶಂಖಭೇರೀಸ್ವನಾಸ್ತತ್ರ ಜಜ್ಞಿರೇ ಮನಹಾರಕಾಃ ।
ತತಸ್ತಂ ವಿಷ್ಣುಭವನಂ ನಿನ್ಯುಸ್ತೇ ವೈಷ್ಣವಾಃ ಗಣಾಃ ॥೧೧೯॥

ಯತ್ರ ದೇವೋಽಸ್ತಿ ಭಗವಾನ್ಪುರಾಣಪುರುಷೋಽವ್ಯಯಃ ।
ತಂ ದೃಷ್ಟ್ವಾ ದೇವದೇವೇಶಮಾನಂದಂ ಪರಮಂ ಯಯೌ ॥೧೨೦॥

ಪ್ರಣಮ್ಯ ಪರಯಾ ಭಕ್ತ್ಯಾ ಸ್ತೋತ್ರಮೇತಜ್ಜಗಾದ ಚ ।
ಲಾಂಗಲವರ್ಧನ ಉವಾಚ-
ತ್ವಮಾತ್ಮಾ ಸರ್ವಭೂತಾನಾಮೇಕ ಏವ ಪೃಥಕ್ ನ ಚ ॥೧೨೧॥

॥೧೧೫॥ ವಿಷ್ಣುವಿನಿಂದ ಕಳುಹಿಸಲ್ಪಟ್ಟ ಮತ್ತು ವಿಷ್ಣುದೂತರಿಂದ ತರಲ್ಪಟ್ಟ ಆ ವಿಮಾನದಲ್ಲಿ ವಿಷ್ಣುದೂತರು ಶಂಖ ಚಕ್ರ ಗದಾಧಾರಿಯಾದ, ಪೀತಾಂಬರ ಧಾರಿಯಾದ ಹಾಗೂ ವನಮಾಲಾ ಭೂಷಿತನಾದ ಲಾಂಗಲಬ್ರಾಹ್ಮಣನನ್ನು ಕುಳ್ಳಿರಿಸಿ ಮಾನವರಿಗೆ ದುರ್ಲಭವಾದ ವಿಷ್ಣುಲೋಕಕ್ಕೆ ಕರೆದೊಯ್ದರು. ॥೧೧೬॥೧೧೭॥ ಆ ವಿಮಾನದ ಎದುರಿನಲ್ಲಿ ದೇವತೆಗಳು, ಗಂಧರ್ವರು, ಸುಸ್ವರದಿಂದ ಗಾಯನವನ್ನು ಮಾಡುತ್ತಲಿದ್ದರು. ಒಳಗೆ ಅಪ್ಸರಾಸ್ತ್ರೀಯರು ನರ್ತನ ಮಾಡುತ್ತಲಿದ್ದರು. ಇತರರು ತೂರ್ಯವಾದ್ಯಗಳನ್ನು ಬಾರಿಸುತ್ತಲಿದ್ದರು. ॥೧೧೮॥ ಮೊಳಗುತ್ತಿರುವ ಶಂಖ, ಭೇರಿ ಮುಂತಾದ ವಾದ್ಯಗಳ ಧ್ವನಿಗಳು ಮನೋಹಾರಕಗಳಾಗಿದ್ದವು. ಹೀಗೆ ಆ ವಿಷ್ಣುಗಣಗಳು ಬ್ರಾಹ್ಮಣನನ್ನು ವೈಭವದಿಂದ ವಿಷ್ಣುಲೋಕಕ್ಕೆ ಕರೆದೊಯ್ದರು. ॥೧೧೯॥ ಪುರಾಣಪುರುಷನಾದ, ಅವ್ಯಯನಾದ ಭಗವಂತನಿರುವ ಆ ವಿಷ್ಣುಮಂದಿರಕ್ಕೆ ಹೋದಾಕ್ಷಣ ಅಲ್ಲಿರುವ ದೇವದೇವೋತ್ತಮನನ್ನು ಸಂದರ್ಶಿಸಿ ಆ ಬ್ರಾಹ್ಮಣನು ಪರಮಾನಂದಭರಿತನಾದನು. ॥೧೨೦॥ ಶ್ರೀಹರಿಗೆ ಪರಮಭಕ್ತಿಯಿಂದ ನಮಿಸಿ ಸ್ತುತಿಸಲು ಪ್ರಾರಂಭಿಸಿದನು- ಹೇ ದೇವಾ! ನೀನೇ ಸಕಲ ಭೂತಗಳ (ಜೀವಿಗಳ) ಮುಖ್ಯ ಆತ್ಮನಾಗಿರುವಿ. ನಿನ್ನನ್ನು ಬಿಟ್ಟು ಬೇರೊಬ್ಬ ಮುಖ್ಯಾತ್ಮನಿಲ್ಲ. ॥೧೨೧॥ ಉಪಾಧಿಭೇದದಿಂದ ಆಕಾಶದಲ್ಲಿ ಘಟಾಕಾಶ, ಮಠಾಕಾಶಗಳೆಂದು ಭೇದ

ಆಕಾಶಸ್ಯೇವ ತೇ ದೃಷ್ಟಮನೇಕತ್ವಮುಪಾಧಿನಾ ।
ಇಂದ್ರಿಯಾಣಾಮಧೀಶತ್ವಂ ತ್ವಂ ಚೈತನ್ಯಂ ಚ ದೇಹಿನಾಮ್ ॥೧೨೨॥

ಸರ್ವಚೇಷ್ಟಾನಿಮಿತ್ತಸ್ತ್ವಂ ರವಿವತ್ತ್ವಂ ನ ಕರ್ಮಭಾಕ್ ।
ತ್ವಮೀಶೋ ವಿಶ್ವಕರ್ತಾ ತ್ವಂ ಮಹೇಶಸ್ತ್ವಂ ಚ ನಿಃಸ್ಪೃಹಃ ॥೧೨೩॥

ಅತರ್ಕ್ಯಂ ಹಿ ತವೈಶ್ವರ್ಯಂ ಶ್ರುತಾ ಯಾ ಭವತೋ ಗಿರಃ ।
ಸ್ವರ್ಗದಂ ಮೋಕ್ಷದಂ ಕರ್ಮ ತಚ್ಚ ವೇದೇ ಪ್ರತಿಷ್ಠಿತಮ್ ॥೧೨೪॥

ಸ ಚ ವೇದಸ್ತ್ವದನ್ಯೋ ನ ತಸ್ಮಾತ್ಸರ್ವಂ ತ್ವಯಿ ಸ್ಥಿತಮ್ ।
ಚತುರ್ವಿಂಶತಿ ತತ್ತ್ವಾನಿ ಪುರುಷಃ ಪಂಚವಿಂಶಕಃ ॥೧೨೫॥

ಉದಾಸೀನಶ್ಚ ಭವಿತಾ ಸ ತ್ವಮೇವ ನ ಚಾನ್ಯಥಾ ।
ತ್ವಯಿ ದೇವ ನಿಗದ್ಯಂತೇ ಭುವನಾನಿ ಚತುರ್ದಶ ॥೧೨೬॥

ನಿವಸಂತಿ ಚ ಯೇ ತತ್ರ ತೇ ಸರ್ವೇ ತ್ವದ್ವಿಭೂತಯಃ ।
ಭಗವನ್ನೇಕ ಏವ ತ್ವಂ ನ ದ್ವಿತೀಯೋಽಸ್ತಿ ಕಶ್ಚನ ॥೧೨೭॥

ಇತಿ ತೇನ ಸ್ತುತೋ ದೇವಸ್ತದ್ಭಕ್ತ್ಯಾ ಚ ತುತೋಷ ಸಃ ।
ದದೌ ಗಣತ್ವಮತುಲಂ ತಸ್ಮೈ ನಿತ್ಯಾತ್ಮಸಂನಿಧೌ ॥೧೨೮॥

ಉಂಟಾಗುವಂತೆ ಉಪಾಧಿಯಿಂದಲೇ ಸತ್ಯಭೂತವಾದ ನಿತ್ಯವಾದ ಅನೇಕ ಆತ್ಮರು ಪ್ರಕಟವಾಗುವರು. ಸಕಲರ ಇಂದ್ರಿಯಗಳ ನಿಯಾಮಕನಾಗಿರುವಿ. ಎಲ್ಲ ದೇಹಿಗಳಿಗೆ ಚೈತನ್ಯಪ್ರದನಾಗಿರುವಿ. ಸರ್ವರ ವ್ಯಾಪಾರಗಳಿಗೆ ಸೂರ್ಯನಂತೆ ನಿಮಿತ್ತನಾಗಿದ್ದರೂ ಆ ಜೀವಿಗಳ ಕರ್ಮಲೇಪವಿಲ್ಲದವನಾಗಿರುವಿ. ನೀನು ಈಶನಾಗಿರುವಿ, ವಿಶ್ವಕರ್ತೃನಾಗಿರುವಿ, ಮಹೇಶನಾಗಿರುವಿ, ನಿಸ್ಪೃಹನಾಗಿರುವಿ (ಸ್ವಪ್ರಯೋಜನ ಶೂನ್ಯನಾಗಿರುವಿ). ॥೧೨೨॥೧೨೩॥ ನಿನ್ನ ಮಹದೈಶ್ವರ್ಯದ ಮಿತಿಯು ಕಲ್ಪನಾತೀತ ವಾಗಿದೆ. ವೇದಗಳಲ್ಲಿ ನಿನ್ನ ವಚನಗಳಿವೆ. ಸ್ವರ್ಗ ಹಾಗೂ ಮೋಕ್ಷದಾಯಕಗಳಾದ ಕರ್ಮಗಳೂ ವೇದಗಳಲ್ಲಿ ಅಪ್ರಧಾನತಯಾ ಪ್ರತಿಪಾದಿತವಾಗಿವೆ. ॥೧೨೪॥ ಇಂಥ ವೇದವು ನಿನ್ನಿಂದ ಹೊರತಾಗಿಲ್ಲ. ಆದ್ದರಿಂದ ನಿನ್ನಲ್ಲಿ ಎಲ್ಲವೂ ಸ್ಥಿತವಾಗಿದೆ. ಇಪ್ಪತ್ತಾಲ್ಕು ತತ್ತ್ವಗಳು, ಇಪ್ಪತ್ತೈದು ತನ್ಮಾತ್ರಗಳು ನಿನ್ನ ಅಧೀನವಾಗಿವೆ. ॥೧೨೫॥ ನೀನಿಲ್ಲದೇ ಇವು ಕಾರ್ಯಪ್ರವೃತ್ತವಾಗಲಾರವು. ಹೇ ದೇವಾ, ನಿನ್ನಲ್ಲಿ ಚತುರ್ದಶಲೋಕಗಳಿವೆ ಎಂದು ವೇದಗಳಲ್ಲಿ ಪ್ರತಿಪಾದಿತವಾಗಿದೆ. ॥೧೨೬॥ ನಿನ್ನನ್ನು ಆಶ್ರಯಿಸಿಕೊಂಡಿರುವುದೆಲ್ಲವೂ ನಿನ್ನ ವಿಭೂತಿರೂಪಗಳಾಗಿವೆ. ಭಗವನ್ ನೀನೊಬ್ಬನೇ ಸರ್ವೋತ್ತಮನಾಗಿರುವಿ,

ದ್ವಿಜ ಇತಿ ಪರಂ ಪದಂ ಪ್ರಯಾತೋ ಯದಗಮನೀಯ-
ಮಹೋ ತಪೋಭಿರುಚ್ಚೈಃ ।
ಶುಚಿಸೇವನಮಘಾಪಹಂ ವಿಧಾಯ ದ್ಯುಮಣಿಸುತಾ-
ಸಲಿಲೈರ್ಮಹೇಂದ್ರಜುಷ್ಟೈಃ ॥೧೨೯॥

ಇತಿ ಸಕಲಮಲಾಪಹರಣಾರ್ಥಂ ನರ ಇತಿಹಾಸಮಿಮಂ ಶೃಣೋತಿ ।
ಪಠತಿ ಚಾಘಾಪಹಂ ಸ್ನಾನಂ ಕುರ್ವನ್ ಶುಚೌ ತಪತ್ಯಾಂ ಪರಮಾ-
ಮಸೌ ಲಭತೇಽಷ್ಟಸಿದ್ಧಿಮ್ ಇತಿ ॥೧೩೦॥

॥ ಇತಿ ಶ್ರೀಸ್ಕಂದಪುರಾಣೇ ಆಷಾಢಮಾಹಾತ್ಮ್ಯೇ ಚತುರ್ಥೋಽಧ್ಯಾಯಃ ॥೪॥ ಶ್ರೀಕೃಷ್ಣಾರ್ಪಣಮಸ್ತು ॥

ನಿನ್ನಂತೆ ಬೇರಾರೂ ಇರುವದಿಲ್ಲ.' ॥೧೨೭॥ ಈ ಪ್ರಕಾರವಾಗಿ ಬ್ರಾಹ್ಮಣನಿಂದ ಸ್ತುತನಾದ ಶ್ರೀಹರಿಯು ಆವನ ಭಕ್ತಿಯಿಂದ ಪ್ರಸನ್ನನಾದನು, ಮತ್ತು ಆವನಿಗೆ ತನ್ನ ಸನ್ನಿಧಿಯಲ್ಲಿ ಇರುವ ಒಂದು ವಿಷ್ಣುಗಣದಲ್ಲಿ ಸ್ಥಾನವನ್ನು ಕೊಟ್ಟನು. ॥೧೨೮॥ ಈ ರೀತಿ ಮಹೇಂದ್ರಾದಿಗಳಿಂದ ಸೇವಿತವಾದ ತಾಪೀ ಜಲದಲ್ಲಿ ಆಷಾಢಮಾಸದೊಳಗೆ ಸ್ನಾನ ಮಾಡಿ ಎಲ್ಲ ಪಾಪಗಳನ್ನು ಕಳೆದುಕೊಂಡು, ಉಗ್ರವಾದ ತಪಸ್ಸು ಮಾಡಿದರೂ ದೊರೆಯದ ವಿಷ್ಣುಸನ್ನಿಧಿಯಲ್ಲಿ ಪರಮಪದವನ್ನು ಲಾಂಗಲಬ್ರಾಹ್ಮಣನು ಹೊಂದಿದನು. ॥೧೨೯॥ ಈ ಪ್ರಕಾರವಾಗಿ ಮಹಿಮೋಪೇತವಾದ ಸಕಲಪಾಪಪರಿಹಾರಕವಾದ ಈ ಮಾಸ ಮಹಾತ್ಮೆಯ ಇತಿಹಾಸವನ್ನು ಯಾವ ಮನುಷ್ಯನು ಆಷಾಢದಲ್ಲಿ ತಾಪೀಸ್ನಾನವನ್ನು ಮಾಡಿ ಭಕ್ತಿಯಿಂದ ಕೇಳುವನೋ ಮತ್ತು ಇದನ್ನು ಹೇಳುವನೋ ಆವನು ತನ್ನ ಪರಮ ಇಷ್ಟಸಿದ್ಧಿಯನ್ನು (ಮೋಕ್ಷವನ್ನು) ಹೊಂದುವನು. ॥೧೩೦॥

॥ ಇಲ್ಲಿಗೆ ಶ್ರೀಸ್ಕಂದ ಪುರಾಣದಲ್ಲಿಯ ಆಷಾಢಮಾಸ ಮಹಾತ್ಮೆಯು ಸಮಾಪ್ತವಾಯಿತು. ॥

॥ ಶ್ರೀಕೃಷ್ಣಾರ್ಪಣಮಸ್ತು ॥